ಶನಿವಾರ, ಜನವರಿ 6, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 6 | ಪುಟ 22
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭೂಮಿಕಾ
ಸಂಕೀರ್ಣತೆಯ ಸುಳಿಯಲ್ಲಿ ಮಹಿಳೆಯ ಉದ್ಯೋಗದ ಆಯ್ಕೆಗಳು

ಚರ್ಚೆ 'ಕರಸೇವಕ'ನ ಬಂಧನವು ರಾಜಕೀಯ ದ್ವೇಷ ಸಾಧನೆಯ ಕ್ರಮವೇ?
ಬಾರಾಮತಿ ಆಗ್ರೊ ಕಚೇರಿ ಮೇಲೆ ಇ.ಡಿ ದಾಳಿ 13
ತೊಗರಿ ಖರೀದಿಗೆ ಪೋರ್ಟಲ್ ಆರಂಭ 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,026 ▲	21,710 ▲	₹64,700 (ಬೆಂಗಳೂರು) ▼	₹73,800 (ಬೆಂಗಳೂರು) ▼	83.15 ▲

ಸಂಕ್ಷಿಪ್ತ ಸುದ್ದಿ

ಶೇ 7.3ರಷ್ಟು ಜಿಡಿಪಿ ಪ್ರಗತಿ ನಿರೀಕ್ಷೆ: ಎನ್‌ಎಸ್‌ಒ

ನವದೆಹಲಿ (ಪಿಟಿಐ): ಭಾರತದ ಆರ್ಥಿಕ ಬೆಳವಣಿಗೆ ದರವು (ಜಿಡಿಪಿ) 2023–24ರ ಹಣಕಾಸು ವರ್ಷದಲ್ಲಿ ಶೇ 7.3ರಷ್ಟು ಆಗಬಹುದು ಎಂಬ ನಿರೀಕ್ಷೆ ಇದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ತಿಳಿಸಿದೆ.



ಎನ್‌ಎಸ್‌ಒ ಶುಕ್ರವಾರ ಬಿಡುಗಡೆಗೊಳಿಸಿರುವ ವರದಿಯಲ್ಲಿರುವ ಅಂದಾಜಿನ ಪ್ರಕಾರ, ಹಿಂದಿನ ಹಣಕಾಸು ವರ್ಷದ ಮಟ್ಟವನ್ನು (ಶೇ 7.2) ಮೀರಲಿದೆ. ಗಣಿಗಾರಿಕೆ, ತಯಾರಿಕಾ ವಲಯ ಸೇರಿದಂತೆ ಪ್ರಮುಖ ವಲಯಗಳ ಬೆಳವಣಿಗೆಯಲ್ಲಿ ಸುಧಾರಣೆ ಕಂಡುಬಂದಿದೆ. ಹಾಗಾಗಿ, ಈ ಪ್ರಮಾಣದ ಬೆಳವಣಿಗೆಯನ್ನು ನಿರೀಕ್ಷಿಸಲಾಗಿದೆ ಎಂದು ವಿವರಿಸಿದೆ.

ಮತ್ತೊಂದೆಡೆ ದೇಶೀಯ ಬೇಡಿಕೆ ಹೆಚ್ಚಳ ಸೇರಿದಂತೆ ತಯಾರಿಕೆ ಮತ್ತು ಸೇವಾ ವಲಯದಲ್ಲಿನ ಸದೃಢ ಬೆಳವಣಿಗೆಯಿಂದಾಗಿ 2024ರಲ್ಲಿ ಭಾರತದ ಜಿಡಿಪಿಯು ಶೇ 6.2ರಷ್ಟು ಬೆಳವಣಿಗೆ ಕಾಣಲಿದೆ ಎಂದು ವಿಶ್ವಸಂಸ್ಥೆ ಹೇಳಿದೆ.

ಆದಿತ್ಯ-ಎಲ್1 ಅಂತಿಮ ಕಕ್ಷೆಗೆ ಇಂದು

ಬೆಂಗಳೂರು (ಪಿಟಿಐ): ಆದಿತ್ಯ-ಎಲ್1 ಉಪಗ್ರಹವನ್ನು ಅಂತಿಮ ಕಕ್ಷೆಗೆ ಸೇರಿಸಲು ಬೇಕಿರುವ



ಮಹತ್ವದ ಕಾರ್ಯಾಚರಣೆಯನ್ನು ಶನಿವಾರ ನಡೆಸಲು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಸಜ್ಜಾಗಿದೆ.

ಉಪಗ್ರಹವನ್ನು ಭೂಮಿಯಿಂದ 15 ಲಕ್ಷ ಕಿ.ಮೀ. ದೂರದ ಕಕ್ಷೆಯಲ್ಲಿ ಇರಿಸಲಾಗುವುದು ಎಂದು ಇಸ್ರೊ ಅಧಿಕಾರಿಗಳು ತಿಳಿಸಿದ್ದಾರೆ. ಇಲ್ಲಿ (ಎಲ್1 ಪಾಯಿಂಟ್) ನೆಲೆಯಾಗುವ ಉಪಗ್ರಹಕ್ಕೆ ಯಾವುದೇ ಅಡ್ಡಿಗಳು ಇಲ್ಲದೆ ಸೂರ್ಯನನ್ನು ವೀಕ್ಷಿಸಲು ಅವಕಾಶ ಸಿಗುತ್ತದೆ. ಇದರಿಂದಾಗಿ ಸೂರ್ಯನ ಚಟುವಟಿಕೆಗಳನ್ನು ಗಮನಿಸುವಲ್ಲಿ ಹೆಚ್ಚಿನ ಪ್ರಯೋಜನಗಳು ಲಭಿಸಲಿವೆ ಎಂದಿದ್ದಾರೆ.

'ಐಎಲ್‌ಐ, ಸಾರಿ: ಕೋವಿಡ್ ಪರೀಕ್ಷೆ ಕಡ್ಡಾಯ'

ಬೆಂಗಳೂರು: ವಿಷಮಶೀತ ಜ್ವರ (ಐಎಲ್‌ಐ ಮತ್ತು ತೀವ್ರ ಉಸಿರಾಟದ ಸಮಸ್ಯೆ (ಸಾರಿ) ಕಾಣಿಸಿಕೊಳ್ಳುವ ಎಲ್ಲ ರೋಗಿಗಳಿಗೂ ಕೋವಿಡ್ ಪರೀಕ್ಷೆಯನ್ನು ಕಡ್ಡಾಯವಾಗಿ ನಡೆಸುವಂತೆ ಸೂಚಿಸಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿದ ಅವರು, 'ಈವರೆಗೆ ಐಎಲ್‌ಐ ಮತ್ತು ಸಾರಿ ರೋಗಿಗಳಲ್ಲಿ ಪ್ರತಿ 20 ಪ್ರಕರಣಗಳಲ್ಲಿ ಒಬ್ಬರಿಗೆ ಕೋವಿಡ್ ಪರೀಕ್ಷೆ ನಡೆಸಲಾಗುತ್ತಿತ್ತು. ಇನ್ನು ಮುಂದೆ ಎಲ್ಲರಿಗೂ ಪರೀಕ್ಷೆ ನಡೆಸುವಂತೆ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ಸೂಚಿಸಲಾಗಿದೆ' ಎಂದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಶೇ 60ರಷ್ಟು ನಾಡ ಭಾಷೆ ಕಡ್ಡಾಯಕ್ಕೆ ಸುಗ್ರೀವಾಜ್ಞೆ; ಸಚಿವ ಸಂಪುಟ ಸಭೆ ಒಪ್ಪಿಗೆ

ಕನ್ನಡ ಫಲಕ: ಸರ್ಕಾರದ ಕಂಕಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗಡಿ, ಹೋಟೆಲ್, ವಾಣಿಜ್ಯ ಸಂಕೀರ್ಣ, ಕೈಗಾರಿಕೋದ್ಯಮಗಳ ನಾಮಫಲಕಗಳಲ್ಲಿ ಕನ್ನಡವನ್ನು ಶೇ 60ರಷ್ಟು ಬಳಸುವುದನ್ನು ಕಡ್ಡಾಯ ಮಾಡಿ ಸುಗ್ರೀವಾಜ್ಞೆ ಹೊರಡಿಸಲು ಶುಕ್ರವಾರ ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಇದಕ್ಕಾಗಿ 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆ'ಗೆ ತಿದ್ದುಪಡಿ ಮಾಡಲು ತೀರ್ಮಾನಿಸಲಾಯಿತು. ಈ ಹಿಂದೆ ಶೇ 50ರಷ್ಟು ಕಡ್ಡಾಯ ಇತ್ತು ಎಂದು ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಸಚಿವ ಎಚ್‌.ಕೆ.ಪಾಟೀಲ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



'ನಾಮಫಲಕಗಳಲ್ಲಿ ಕನ್ನಡ ಭಾಷೆಗೆ ಹೆಚ್ಚಿನ ಪ್ರಾಧಾನ್ಯ ನೀಡಬೇಕಾಗಿರುವುದರಿಂದ ಮೇಲಿನ ಅರ್ಧ ಭಾಗ ಎಂಬುದರ ಬದಲಾಗಿ, ಶೇ 60ರಷ್ಟು ಭಾಗ ಕನ್ನಡ ಬಳಕೆ ಮಾಡಬೇಕು ಮತ್ತು ಕನ್ನಡ ಭಾಷೆಯು ನಾಮಫಲಕದ ಮೇಲ್ಭಾಗದಲ್ಲೇ ಇರಬೇಕು. ಕನ್ನಡ ಸಂಸ್ಕೃತಿ ನಿರ್ದೇಶಕರ ಬದಲಿಗೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದವರನ್ನು ಸಂಚಾಲಕರನ್ನಾಗಿ ಮತ್ತು ಕನ್ನಡ ಸಂಸ್ಕೃತಿ ಇಲಾಖೆಯವರನ್ನು ಸದಸ್ಯರನ್ನಾಗಿ ಮಾಡಲಾಗುವುದು. ಈ ಅಂಶವು ತಿದ್ದುಪಡಿಯಲ್ಲಿ ಒಳಗೊಂಡಿದೆ' ಎಂದು ಪಾಟೀಲ ವಿವರಿಸಿದರು.

7ನೇ ಪುಟ ನೋಡಿ

ತೆರಿಗೆ ಪಾಲು: ತಾಂತ್ರಿಕ ಕೋಶ ರಚನೆ

16ನೇ ಹಣಕಾಸು ಆಯೋಗಕ್ಕೆ ಜ್ಞಾಪನಾ ಪತ್ರವನ್ನು ತಯಾರಿಸಲು ಮೂವರು ಸದಸ್ಯರನ್ನು ಒಳಗೊಂಡ ತಾಂತ್ರಿಕ ಕೋಶವನ್ನು ರಚಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ತೆರಿಗೆ ಪಾಲಿನ ಹಂಚಿಕೆ, ಅನುದಾನದ ವಿಷಯದಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ಸಮರ್ಥವಾಗಿ ವಾದ ಮಂಡಿಸಲು ತಾಂತ್ರಿಕ ಕೋಶವು ದಾಖಲೆ ಸಿದ್ಧಪಡಿಸಲಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ದೇಶದಲ್ಲೇ ಎರಡನೇ ಅತಿ ಹೆಚ್ಚು ತೆರಿಗೆ ಪಾವತಿ ಮಾಡುವ ರಾಜ್ಯ ಕರ್ನಾಟಕವಾಗಿದ್ದು, ವರ್ಷಕ್ಕೆ ಸುಮಾರು ₹4 ಲಕ್ಷ ಕೋಟಿಯನ್ನು ಪಾವತಿಸುತ್ತಿದೆ. ಆದರೆ, ರಾಜ್ಯಕ್ಕೆ ₹60 ಸಾವಿರ ಕೋಟಿಯಿಂದ ₹70 ಸಾವಿರ ಕೋಟಿಯಷ್ಟೇ ಬರುತ್ತಿದೆ. ಈ ಎಲ್ಲ ಅಂಶಗಳನ್ನು ಆಯೋಗಕ್ಕೆ ವಿವರಿಸಲಾಗುವುದು ಎಂದರು.

ಕೇಂದ್ರದ ಬೊಕ್ಕಸಕ್ಕೆ ಹೆಚ್ಚಿನ ಪಾಲು ನೀಡುತ್ತಿರುವ ಅಭಿವೃದ್ಧಿ ಹೊಂದಿದ ರಾಜ್ಯಗಳಿಗೆ ಆಗುತ್ತಿರುವ ಅನ್ಯಾಯವನ್ನು 16ನೇ ಹಣಕಾಸು ಆಯೋಗಕ್ಕೆ ಮನವರಿಕೆ ಮಾಡಿಕೊಡಲು ರಾಜ್ಯವೊಂದೇ ಮುಂದಾದರೆ ಸಾಲದು. ಅಭಿವೃದ್ಧಿ ಹೊಂದಿದ ರಾಜ್ಯಗಳ ಪಟ್ಟಿಯಲ್ಲಿರುವ ದಕ್ಷಿಣ ಹಾಗೂ ಉತ್ತರದ ರಾಜ್ಯಗಳ ನೆರವನ್ನೂ ಪಡೆಯಬೇಕೆಂದು ಮುಖ್ಯಮಂತ್ರಿಯವರ ಅಪೇಕ್ಷೆಯಾಗಿದೆ ಎಂದೂ ಅವರು ಹೇಳಿದರು.

ವನ್ಯಜೀವಿ ಅಂಗಾಂಗ ವಾಪಸ್‌ಗೆ 3 ತಿಂಗಳ ಗಡುವು

ಹುಲಿ ಉಗುರು, ಆನೆ ದಂತ, ಜಿಂಕೆಕೊಂಬು ಸೇರಿದಂತೆ ಅಕ್ರಮವಾಗಿಟ್ಟುಕೊಂಡಿರುವ ಯಾವುದೇ ವನ್ಯ ಜೀವಿಯ ಅಂಗಾಂಗ, ಟ್ರೋಫಿಯನ್ನು ಸರ್ಕಾರಕ್ಕೆ ಹಿಂತಿರುಗಿಸಲು ಒಂದು ಬಾರಿ ಕಾಲಾವಕಾಶ ನೀಡಲು ಸರ್ಕಾರ ನಿರ್ಧರಿಸಿದೆ.

ವನ್ಯಜೀವಿ ಅಂಗಾಂಗಗಳ ಮಾಲೀಕತ್ವದ ಪ್ರಮಾಣ ಪತ್ರ ಇರುವವರು ಮುಂದೆಯೂ ಇಟ್ಟುಕೊಳ್ಳಬಹುದು. ಪ್ರಮಾಣ ಪತ್ರ ಇಲ್ಲದವರು ಅವುಗಳನ್ನು ಸರ್ಕಾರಕ್ಕೆ ಹಿಂತಿರುಗಿಸಲು ಮೂರು ತಿಂಗಳು ಅವಕಾಶ ನೀಡುವ ಬಗ್ಗೆ ಅರಣ್ಯ ಇಲಾಖೆ ಮಂಡಿಸಿದ್ದ ಪ್ರಸ್ತಾವನೆಗೆ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ. ಈ ಪ್ರಕ್ರಿಯೆಯ ಬಗ್ಗೆ ಸದ್ಯದಲ್ಲೇ ಮಾರ್ಗಸೂಚಿ ಹೊರಡಿಸಲು ಸಭೆ ಒಪ್ಪಿಗೆ ಸೂಚಿಸಿದೆ.

ವಯೋಮಿತಿ ಸಡಿಲಿಕೆ

2023–24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳನ್ನು ಭರ್ತಿ ಮಾಡಲು ಕೆಪಿಎಸ್‌ಸಿ ಅಧಿಸೂಚನೆ ಹೊರಡಿಸಲಿದ್ದು, ಎಲ್ಲ ಅಭ್ಯರ್ಥಿಗಳಿಗೆ ಒಂದು ಬಾರಿ ಗರಿಷ್ಠ ವಯೋಮಿತಿ ಸಡಿಲಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಸಾಮಾನ್ಯ ವರ್ಗಕ್ಕೆ 35ರಿಂದ 38, ಪ್ರವರ್ಗ 2ಎ, 2ಬಿ, 3ಎ ಮತ್ತು 3ಬಿಗೆ 38ರಿಂದ 41, ಪರಿಶಿಷ್ಟ ಪಂಗಡ ಪ್ರವರ್ಗ 1ಕ್ಕೆ 40ರಿಂದ 43ಕ್ಕೆ ವಯೋಮಿತಿ ವಿಸ್ತರಿಸಲು ಒಪ್ಪಿಗೆ ನೀಡಲಾಗಿದೆ. ಕೋವಿಡ್ ಮತ್ತು ನೇಮಕಾತಿ ವಿಳಂಬ ಆದ ಕಾರಣ ಈ ಸಡಿಲಿಕೆ ಒಂದು ಬಾರಿಗೆ ಮಾತ್ರ ಅನ್ವಯವಾಗಲಿದೆ ಎಂದು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.



ದಾಳಿಯಲ್ಲಿ ಜಖಂಗೊಂಡಿರುವ ವಾಹನ –ಪಿಟಿಐ ಚಿತ್ರ

ಪಶ್ಚಿಮ ಬಂಗಾಳ: ಇ.ಡಿ ಅಧಿಕಾರಿಗಳ ಮೇಲೆ ಹಲ್ಲೆ

ಕೋಲ್ಕತ್ತ/ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಮುಖಂಡನ ಮನೆಗೆ ಹಗರಣವೊಂದಕ್ಕೆ ಸಂಬಂಧಿಸಿದಂತೆ ಶೋಧ ನಡೆಸಲು ಬಂದ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ಮೇಲೆ ಹಲ್ಲೆ ನಡೆದಿದ್ದು, ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಆರೋಪಿಸಲಾಗಿದೆ.

ಟಿಎಂಸಿ ಬೆಂಬಲಿಗರು ಕೃತ್ಯ ಎಸಗಿರುವ ಆರೋಪ ಕೇಳಿಬಂದಿದೆ. ಶುಕ್ರವಾರ ಬೆಳಿಗ್ಗೆ ನಡೆದ ಈ ಘಟನೆ, ಬಂಗಾಳದ ರಾಜಕೀಯದಲ್ಲಿ ಕೋಲಾಹಲ ಎಬ್ಬಿಸಿದೆ. ರಾಜ್ಯದಲ್ಲಿ ಆಡಳಿತ ಯಂತ್ರ ಸಂಪೂರ್ಣ ಹದಗೆಟ್ಟಿರುವುದಾಗಿ ಆರೋಪಿಸಿರುವ ವಿಪಕ್ಷಗಳು, ರಾಷ್ಟ್ರಪತಿ ಆಳ್ವಿಕೆ ಜಾರಿಗೆ ಆಗ್ರಹಿಸಿವೆ.

ರಾಜ್ಯಪಾಲ ಸಿ.ವಿ.ಆನಂದ್ ಬೋಸ್ ಅವರು ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ 'ಎಲ್ಲ ಸಾಂವಿಧಾನಿಕ ಆಯ್ಕೆ'ಗಳನ್ನು ಪರಿಶೀಲಿಸುವುದಾಗಿ ಹೇಳಿದ್ದಾರೆ. ಆರೋಪಗಳನ್ನು ತಳ್ಳಿ ಹಾಕಿರುವ ಟಿಎಂಸಿ, 'ಇ.ಡಿ ಅಧಿಕಾರಿಗಳು ಜನರನ್ನು ಪ್ರಚೋದಿಸಿದ್ದಾರೆ' ಎಂದು ದೂರಿದೆ.

11 ನೇ ಪುಟ ನೋಡಿ

ಡಿಕೆಶಿ, ಸಿಬಿಐಗೆ ನೋಟಿಸ್

ಯತ್ನಾಳ ಅರ್ಜಿ: ವಿಸ್ತೃತ ಪೀಠಕ್ಕೆ ಹೈಕೋರ್ಟ್ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿ.ಕೆ. ಶಿವಕುಮಾರ್ ಅವರು ಘೋಷಿತ ಆದಾಯ ಮೀರಿ ಆಸ್ತಿ ಗಳಿಸಿದ್ದಾರೆ ಎಂಬ ಪ್ರಕರಣಕ್ಕೆ ಸಂಬಂಧಿಸಿ ಸಿಬಿಐ ತನಿಖೆಗೆ ನೀಡಿದ್ದ ಅನುಮತಿ ಹಿಂಪಡೆದಿರುವ ರಾಜ್ಯ ಸಚಿವ ಸಂಪುಟದ ತೀರ್ಮಾನವನ್ನು ಪ್ರಶ್ನಿಸಿರುವ ರಿಟ್ ಅರ್ಜಿ ವಿಚಾರಣೆಯನ್ನು ವಿಸ್ತೃತ ನ್ಯಾಯಪೀಠಕ್ಕೆ ವಹಿಸಲಾಗಿದೆ.

ವಿಚಾರಣೆ ನಡೆಸಿದ ಹೈಕೋರ್ಟ್‌ನ ಏಕಸದಸ್ಯ ನ್ಯಾಯಪೀಠವು ಶಿವಕುಮಾರ್, ಸಿಬಿಐ, ಲೋಕಾಯುಕ್ತಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಸಿಬಿಐಗೆ ನೀಡಿದ್ದ ಅನುಮತಿ ಹಿಂಪಡೆದಿರುವುದನ್ನು ಪ್ರಶ್ನಿಸಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹಾಗೂ ಸಿಬಿಐ ಸಲ್ಲಿಸಿರುವ ರಿಟ್ ಅರ್ಜಿಗಳ ವಿಚಾರಣೆಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರು ಶುಕ್ರವಾರ ವಿಚಾರಣೆ ನಡೆಸಿದರು. ಈ ಪ್ರಕರಣವನ್ನು ಲೋಕಾಯುಕ್ತ ತನಿಖೆಗೆ ವಹಿಸಬಾರದು ಎಂದು ಕೂಡ ಸಿಬಿಐ ಕೋರಿದೆ.

ಬಸನಗೌಡ ಪಾಟೀಲ ಯತ್ನಾಳ ಪರ ವಕೀಲ ವೆಂಕಟೇಶ್ ಪಿ.ದಳವಾಯಿ, ಸಿಬಿಐ ಪರ ವಕೀಲ ಪಿ.ಪ್ರಸನ್ನಕುಮಾರ್ ಮತ್ತು ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರ ವಾದವನ್ನು ನ್ಯಾಯಪೀಠ 1 ಗಂಟೆ 20 ನಿಮಿಷಕ್ಕೂ ಹೆಚ್ಚು ಕಾಲ ಆಲಿಸಿತು.

> **ನನಗೆ ಕಿರುಕುಳ ನೀಡುವ ಉದ್ದೇಶದಿಂದಲೇ ದ್ವೇಷ ರಾಜಕಾರಣ ಮಾಡಲಾಗುತ್ತಿದೆ. ಬಿಜೆಪಿ ಸೇರುವ ಎಲ್ಲ ನಾಯಕರ ಮೇಲಿನ ಕಳಂಕ ನಿವಾರಣೆಯಾಗಿ ಬಿಡುತ್ತದೆ. ಇದೆಲ್ಲದರ ಹಿಂದೆ ಯಾರಿದ್ದಾರೆ ಎಂಬುದು ಗೊತ್ತಿದೆ**
> **ಡಿ.ಕೆ. ಶಿವಕುಮಾರ್,** ಉಪಮುಖ್ಯಮಂತ್ರಿ



'ಕರ್ನಾಟಕ ಹೈಕೋರ್ಟ್ ಕಾಯ್ದೆ-1961ರ ಕಲಂ 8ರ ಪ್ರಕಾರ ಬಲಿಷ್ಠವಾದ ನ್ಯಾಯಪೀಠ ರಚಿಸುವ ನಿಟ್ಟಿನಲ್ಲಿ ಪ್ರಕರಣದ ದಾಖಲೆಗಳನ್ನು ಮುಖ್ಯ ನ್ಯಾಯಮೂರ್ತಿಗಳ ಮುಂದೆ ಮಂಡಿಸಬೇಕು. ಮುಖ್ಯ ನ್ಯಾಯಮೂರ್ತಿಗಳು ರಚಿಸುವ ನ್ಯಾಯಪೀಠವು ಯುದ್ಧೋಪಾದಿಯಲ್ಲಿ ಪ್ರಕರಣವನ್ನು ವಿಲೇವಾರಿ ಮಾಡಬೇಕು ಎಂಬುದಕ್ಕೆ ಉಭಯ ಪಕ್ಷಗಾರರ ಸಹಮತ ಇದೆ. ಈ ನ್ಯಾಯಪೀಠವೂ ಇದೇ ಅಭಿಪ್ರಾಯವನ್ನು ಹೊಂದಿದೆ' ಎಂದು ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಆದೇಶಿಸಿದರು.

'ವಿಸ್ತೃತ ಪೀಠವು ಪ್ರಕರಣವನ್ನು ತೀರ್ಮಾನಿಸುವತನಕ ಲೋಕಾಯುಕ್ತ ಪೊಲೀಸರು ಯಾವುದೇ ಕ್ರಮಕ್ಕೆ ಮುಂದಾಗಬಾರದು' ಎಂದು ಸಿಬಿಐ ವಕೀಲರು ಕೋರಿದ್ದಾರೆ; 'ಸಿಬಿಐ ಕೂಡಾ ಯಾವುದೇ ಕ್ರಮಕ್ಕೆ ಮುಂದಾಗುವಂತಿಲ್ಲ' ಎಂದು ಅಡ್ವೊಕೇಟ್ ಜನರಲ್ ಅವರು ಮನವಿ ಮಾಡಿದರು. ಈ ಎರಡೂ ವಿನಂತಿಗಳನ್ನು ನ್ಯಾಯಮೂರ್ತಿಯವರು ತಮ್ಮ ಆದೇಶದಲ್ಲಿ ಯಥಾವತ್ ದಾಖಲಿಸಿದರು.


ಇದಕ್ಕೂ ಮುನ್ನ, ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು ಎರಡೂ ಅರ್ಜಿಗಳನ್ನು ವಿರೋಧಿಸಿದರು. ಈ ಎರಡೂ ಅರ್ಜಿಗಳ ಅರ್ಜಿದಾರರಿಗೆ ಅರ್ಜಿ ಸಲ್ಲಿಸುವ ಅಧಿಕಾರ ವ್ಯಾಪ್ತಿ ಇಲ್ಲ. 2013ರ ಸುಪ್ರೀಂ ಕೋರ್ಟ್ ತೀರ್ಪಿನ ಅನುಸಾರ ಕ್ರಿಮಿನಲ್ ಪ್ರಕರಣದಲ್ಲಿ ಮೂರನೇ ವ್ಯಕ್ತಿ ನ್ಯಾಯಿಕ ಪ್ರಕ್ರಿಯೆಯಲ್ಲಿ ಮೂಗು ತೂರಿಸುವಂತಿಲ್ಲ ಎಂದು ಆಕ್ಷೇಪಿಸಿದರು.

ವೆಂಕಟೇಶ್ ದಳವಾಯಿ ಮತ್ತು ಪ್ರಸನ್ನ ಕುಮಾರ್, 'ದೆಹಲಿ ವಿಶೇಷ ಪೊಲೀಸ್ ಕಾಯ್ದೆ-1946ರ ಕಲಂ 6ರ ಅಡಿಯಲ್ಲಿ, ರಾಜ್ಯ ಸರ್ಕಾರವು ಒಮ್ಮೆ ಸಿಬಿಐ ತನಿಖೆಗೆ ಅನುಮತಿಸಿದ ಮೇಲೆ, ಅದನ್ನು ಹಿಂಪಡೆಯಲಾಗದು. ಯಾವುದೇ ಸಂದರ್ಭದಲ್ಲೂ ಈ ಆದೇಶವನ್ನು ಪೂರ್ವಾನ್ವಯವಾಗುವಂತೆ ಹಿಂಪಡೆಯಲಾಗದು' ಎಂದರು.

ಶ್ರೀಕಾಂತ ಪೂಜಾರಿಗೆ ಜಾಮೀನು; ಬಿಡುಗಡೆ ಇಂದು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 1992ರ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತನಾದ ಆರೋಪಿ ಶ್ರೀಕಾಂತ ಪೂಜಾರಿಗೆ ಇಲ್ಲಿನ ಒಂದನೇ ಹೆಚ್ಚುವರಿ ಜಿಲ್ಲಾ ಸೆಷನ್ಸ್ ಕೋರ್ಟ್ ಶುಕ್ರವಾರ ಷ ರ ತ್ತು ಬ ದ್ಧ ಜಾಮೀನು ನೀಡಿದೆ.



ಶ್ರೀಕಾಂತ ಪೂಜಾರಿ

ಆರೋಪಿ ಪರ ವಕೀಲ ಅಶೋಕ ಅಣ್ವೇಕರ್ ಜನವರಿ 3ರಂದು ಜಾಮೀನು ಅರ್ಜಿ ಸಲ್ಲಿಸಿದ್ದರು. ಶಹರ ಠಾಣೆ ಪೊಲೀಸರು ತಕರಾರು ಸರ್ಜಿ ಸಲ್ಲಿಸಿ ಆರೋಪಿಗೆ ಜಾಮೀನು ನೀಡಬಾರದು ಎಂದು ಕೋರಿದ್ದರು. ನ್ಯಾಯಾಧೀಶ ಪರಮೇಶ್ವರ ಪ್ರಸನ್ನ ಅವರು ಎರಡೂ ಕಡೆಯ ವಾದ ಆಲಿಸಿ ಆದೇಶವನ್ನು ಗುರುವಾರ ಕಾಯ್ದಿರಿಸಿದ್ದರು. ಶುಕ್ರವಾರ ಆದೇಶ ಪ್ರಕಟಿಸಿದರು. ಸರ್ಕಾರದ ಪರ ಬಿ.ಎನ್. ಅಮರಾವತಿ ಹಾಗೂ ಆರೋಪಿ ಪರ ಅಣ್ವೇಕರ್ ಅವರಲ್ಲದೆ ಸಂಜೀವ ಬಡಸ್ಕರ್ ಸಹ ವಾದ ಮಂಡಿಸಿದರು.

'ಪ್ರಕರಣಕ್ಕೆ ಸಂಬಂಧಿಸಿ ಎಫ್‌ಐಆರ್ ಇಲ್ಲದಿರುವುದನ್ನು ಗಮನಿಸಿದ ಕೋರ್ಟ್ ಜಾಮೀನು ಮಂಜೂರು ಮಾಡಿದೆ. ಶ್ರೀಕಾಂತ ಪೂಜಾರಿ ಹುಬ್ಬಳ್ಳಿಯ ಉಪಕಾರಾಗೃಹದಿಂದ ಶನಿವಾರ ಬಿಡುಗಡೆಯಾಗುವ ಸಾಧ್ಯತೆಯಿದೆ' ಎಂದು ವಕೀಲ ಸಂಜೀವ ಬಡಸ್ಕರ್ ತಿಳಿಸಿದರು.

ನೌಕಾಪಡೆ ಕಮಾಂಡೊಗಳಿಂದ ಕ್ಷಿಪ್ರ ಕಾರ್ಯಾಚರಣೆ

ಅಪಹೃತ ಹಡಗಿನಲ್ಲಿದ್ದ 21 ಮಂದಿ ರಕ್ಷಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಪಹರಣಗೊಂಡಿದ್ದ 'ಎಂವಿ ಲಿಲಾ ನಾರ್ಫೋಕ್' ಹೆಸರಿನ ಹಡಗಿನಲ್ಲಿದ್ದ ಭಾರತದ 15 ಮಂದಿ ಸಿಬ್ಬಂದಿ ಸೇರಿ 21 ಜನರನ್ನು ನೌಕಾಪಡೆಯ ಕಮಾಂಡೊಗಳು ಕ್ಷಿಪ್ರ ಕಾರ್ಯಾಚರಣೆ ನಡೆಸಿ ರಕ್ಷಿಸಿದ್ದಾರೆ. ಆದರೆ ಕಾರ್ಯಾಚರಣೆಯ ಕಠಿಣ ಎಚ್ಚರಿಕೆಯಿಂದ ಬೆದರಿದ ಅಪಹರಣಕಾರರು ಪರಾರಿಯಾಗಿರಬೇಕು ಎಂದು ನೌಕಾಪಡೆ ವಕ್ತಾರರು ತಿಳಿಸಿದ್ದಾರೆ.



'ಎಂವಿ ಲಿಲಾ ನಾರ್ಫೋಕ್' ಹಡಗು

ಅರಬ್ಬಿ ಸಮುದ್ರದಲ್ಲಿ ಸೊಮಾಲಿಯಾದ ಕರಾವಳಿಯಲ್ಲಿ ಗುರುವಾರ ಸಂಜೆ ಹಡಗನ್ನು ಅಪಹರಿಸಲಾಗಿತ್ತು.

ಮಾಹಿತಿ ಲಭಿಸಿದ ಕೂಡಲೇ ಐಎನ್‌ಎಸ್ ಚೆನ್ನೈ ಯುದ್ಧನೌಕೆಯನ್ನು ನೌಕಾಪಡೆಯು ರಕ್ಷಣಾ ಕಾರ್ಯಕ್ಕೆ ಕಳುಹಿಸಿತ್ತು. ಶುಕ್ರವಾರ ಅಪಹೃತ ಹಡಗು ಏರಿದ್ದ ಕಮಾಂಡೊಗಳು ಯಶಸ್ವಿಯಾಗಿ ರಕ್ಷಣಾ ಕಾರ್ಯ ನಡೆಸಿದರು.

11ನೇ ಪುಟ ನೋಡಿ

ಮೈಲಿಗೆ ಭಯ: ಬರಿಗಾಲಿನಲ್ಲೇ ಬರುವ ವಿದ್ಯಾರ್ಥಿಗಳು

ದಂಡ ಭೀತಿ: ಶೂ ಧರಿಸದ ಮಕ್ಕಳು

• ವಿಜಯಕುಮಾರ್ ಎಸ್‌.ಕೆ.

ಚಿಕ್ಕಮಗಳೂರು: ಸರ್ಕಾರ ಶೂ ಭಾಗ್ಯ ಒದಗಿಸಿದ್ದರೂ ಅದನ್ನು ಧರಿಸಿ ಶಾಲೆಗೆ ಬರುವ ಭಾಗ್ಯವು ತರೀಕೆರೆ ತಾಲ್ಲೂಕಿನ ಗೇರುಮರಡಿಯ ಗೊಲ್ಲರಹಟ್ಟಿ ಮಕ್ಕಳಿಗೆ ಇಲ್ಲ.

ಗೊಲ್ಲರಹಟ್ಟಿಯ ಮಕ್ಕಳಲ್ಲಿ ಒಬ್ಬರಿಗೆ ಮತ್ತೊಬ್ಬರ ಶೂ ತಾಕಿದರೆ ಮೈಲಿಗೆ ಆಗುತ್ತದೆ ಎಂಬ ನಂಬಿಕೆ ಇದೆ. ಮೈಲಿಗೆ ಆದರೆ, ಮೈಲಿಗೆ ತೊಳೆಯುವ ಪೂಜೆಗಾಗಿ ಪಾವತಿಸಬೇಕಾದ ದೊಡ್ಡ ಮೊತ್ತದ ಖರ್ಚಿಗೆ ಹೆದರಿ ಶೂ ಧರಿಸುವುದನ್ನೇ ಮಕ್ಕಳು ಬಿಟ್ಟಿದ್ದಾರೆ. ಬರಿಗಾಲಿನಲ್ಲೇ ಶಾಲೆಗೆ ಬರುತ್ತಿದ್ದಾರೆ. ಗೇರುಮರಡಿಯ ಗೊಲ್ಲರಹಟ್ಟಿಯಲ್ಲಿ ಕೂಡ ಇದೇ ಸಂಪ್ರದಾಯ ಇದೆ.

ಇಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 80 ವಿದ್ಯಾರ್ಥಿಗಳಿದ್ದು, ಗೊಲ್ಲ ಸಮುದಾಯದ ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಭೋವಿ ಸಮುದಾಯದವರು ಊರಿನಲ್ಲಿದ್ದು, ಆ ಮಕ್ಕಳೂ ಶಾಲೆಗೆ ಬರುತ್ತಾರೆ.



ಗೇರುಮರಡಿ ಗ್ರಾಮದ ಗೊಲ್ಲರಹಟ್ಟಿ

ಸರ್ಕಾರದಿಂದ ನೀಡುವ ಶೂಗಳನ್ನು ಎಲ್ಲಾ ವಿದ್ಯಾರ್ಥಿಗಳಿಗೂ ಶಿಕ್ಷಕರು ವಿತರಿಸಿದ್ದಾರೆ. ಆದರೆ, ಗೊಲ್ಲರಹಟ್ಟಿಯ ಮಕ್ಕಳಲ್ಲಿ ಹೆಚ್ಚಿನವರು ಧರಿಸಿ ಶಾಲೆಗೆ ಬರುವುದಿಲ್ಲ. ಶಾಲೆಯಲ್ಲಿ ಕುಳಿತಾಗಲೋ, ಆಟವಾಡುವಾಗಲೋ ಮತ್ತೊಬ್ಬರ ಶೂ ತಾಕಿದರೆ ಮೈಲಿಗೆ ಆಯಿತೆಂದೇ ಅರ್ಥ.

ಮೈಲಿಗೆ ಆಗಿರುವ ಬಾಲಕನಿಗೆ ಹಟ್ಟಿಯೊಳಗೆ ಪ್ರವೇಶ ಇರುವುದಿಲ್ಲ.

7ನೇ ಪುಟ ನೋಡಿ

ಮತ್ತೆ ಮೂವರ ಬಂಧನ

ಗೊಲ್ಲರಹಟ್ಟಿಗೆ ಬಂದ ದಲಿತ ಯುವಕನ ಮೇಲೆ ಹಲ್ಲೆ ನಡೆಸಿದ ಆರೋಪದಲ್ಲಿ ಶಿವರಾಮ್, ಮಂಜುನಾಥ್, ತಮ್ಮಯ್ಯ ಎಂಬವರನ್ನು ತರೀಕೆರೆ ಪೊಲೀಸರು ಬಂಧಿಸಿದ್ದಾರೆ.

ಶಂಕರಪ್ಪ ಎಂಬವರನ್ನು ಎರಡು ದಿನಗಳ ಹಿಂದೆಯೇ ಬಂಧಿಸಲಾಗಿತ್ತು. ಉಳಿದ 11 ಜನರ ಬಂಧನಕ್ಕೆ ಡಿವೈಎಸ್‌ಪಿ ನೇತೃತ್ವದಲ್ಲಿ ತಂಡ ರಚನೆ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಜೆಸಿಬಿ ಆಪರೇಟರ್ ಆಗಿರುವ ಎಂ.ಸಿ.ಹಳ್ಳಿಯ ಮಾರುತಿ ಎಂಬ ಯುವಕ ಗೇರುಮರಡಿ ಗ್ರಾಮದ ರವಿ ಎಂಬವರ ಹಳೇ ಮನೆಯ ಮಣ್ಣು ತುಂಬಿಸುವ ಕೆಲಸಕ್ಕೆ ಜ.1ರಂದು ಹೋಗಿದ್ದರು. ಜೆಸಿಬಿ ಹೋಗುವಾಗ ಡಿಷ್ ಕೇಬಲ್ ತುಂಡಾಗಿದ್ದರಿಂದ ಗೊಲ್ಲರಹಟ್ಟಿಯ ಶಂಕರಪ್ಪ ಮತ್ತು ಮಾರುತಿ ನಡುವೆ ಜಗಳ ಆಗಿತ್ತು. 'ನಾನು ಮಾದಿಗ ಸಮುದಾಯಕ್ಕೆ ಸೇರಿದವನು ಎಂಬುದು ಗೊತ್ತಾದ ಬಳಿಕ 30–40 ಜನ ಜೆಸಿಬಿಯಿಂದ ಎಳೆದು ಹಲ್ಲೆ ನಡೆಸಿದರು' ಎಂದು ಮಾರುತಿ ದೂರು ನೀಡಿದ್ದರು. ಪರಿಶಿಷ್ಟ ಜಾತಿ ಮತ್ತು ಪಂಗಡದವರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ 15 ಜನರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಊರಿನ ಹೊರಗೇ ಚಪ್ಪಲಿ

ವರ್ಷಕ್ಕೊಮ್ಮೆ ಕಾರ್ತಿಕ ಪೂಜೆ ಸಂದರ್ಭದಲ್ಲಿ ಊರಿನ ಹೊರಗೇ ಚಪ್ಪಲಿ ಬಿಟ್ಟು ಹೋಗುವ ಅಭ್ಯಾಸ ಇದೆ. 'ಕಂಬದ ರಂಗನಾಥಸ್ವಾಮಿ ದೇಗುಲದಲ್ಲಿ ಪೂಜೆಗಳು ವಿಶೇಷವಾಗಿ ನಡೆಯಲಿವೆ. ವ್ಯಾಪಾರಸ್ಥರು ಬಂದರೂ ಅವರಿಗೆ ತಿಳಿವಳಿಕೆ ನೀಡಲು ಊರಿನ ದಾರಿಯಲ್ಲೇ ನಮ್ಮವರು ಕಾದಿರುತ್ತಾರೆ' ಎಂದು ಗೊಲ್ಲರಹಟ್ಟಿಯ ಮಹಿಳೆಯರು ಹೇಳುತ್ತಾರೆ.

'ವಿ.ವಿ ಭೂಮಿ ಅತಿಕ್ರಮ ತೆರವುಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜಮೀನಿನಲ್ಲಿ ಆರ್‌ಟಿಸಿ ಹೊಂದಿರುವ ಖಾಸಗಿ ವ್ಯಕ್ತಿಗಳ ಸರ್ವೆ ನಡೆಸಿ, ಅತಿಕ್ರಮ ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಅಧಿಕಾರಿಗಳಿಗೆ ಸೂಚಿಸಿದರು.

ವಿಶ್ವವಿದ್ಯಾಲಯ ವ್ಯಾಪ್ತಿಗೆ ಒಳಪಡುವ ಒಟ್ಟು 1,201 ಎಕರೆ ಭೂಪ್ರದೇಶದಲ್ಲಿ ಗುತ್ತಿಗೆ ಆಧಾರದ ಮೇಲೆ ನೀಡಿರುವ ಭೂ ಪ್ರದೇಶವು ಸೇರಿದಂತೆ ಬಳಕೆಯಾಗುತ್ತಿರುವ ಪ್ರದೇಶದ ವಿವರಣೆ ಕುರಿತಂತೆ ಸಚಿವರು ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಕೈಬರಹದ ದಾಖಲೆ ಹಾಗೂ ಈಗಿನ ಕಂಪ್ಯೂಟರ್ ದಾಖಲೆಗಳನ್ನು ಸಂಗ್ರಹಿಸಿ, ಮೂಲ ಟಿಪ್ಪಣಿ, ಆಕಾರ್‌ಬಂದಿ ಸೇರಿದಂತೆ ಎಲ್ಲ ದಾಖಲೆಗಳನ್ನು ಭೂಮಾಪನ ಇಲಾಖೆಯ ಸಹಕಾರದೊಂದಿಗೆ ಸಂಗ್ರಹಿಸುವಂತೆ ಸೂಚಿಸಿದರು.

ಸರ್ವೇ ಮಾಡಿದಾಗ 1184.16 ಎಕರೆ ವಿಸ್ತೀರ್ಣ ದೊರೆತಿದೆ. 278 ಎಕರೆ ಭೂಪ್ರದೇಶವನ್ನು 26 ಶಿಕ್ಷಣ ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದೆ. ಆದರೆ, ಈ ಗುತ್ತಿಗೆ ಶಿಕ್ಷಣ ಸಂಸ್ಥೆಗಳಲ್ಲಿ 313 ಎಕರೆ ಸ್ವಾಧೀನದಲ್ಲಿರುವುದು ಕಂಡುಬಂದಿದೆ.

ದಾಖಲೆಯ ಪ್ರಕಾರ 34.4 ಎಕರೆ ಅತಿಕ್ರಮ ಪ್ರದೇಶವಾಗಿದ್ದು, ಒಟ್ಟು 43.24 ಎಕರೆ ಒತ್ತುವರಿದಾರರ ಸ್ವಾಧೀನದಲ್ಲಿರುವುದು ಕಂಡುಬಂದಿದೆ. ಅದರಲ್ಲಿ 19 ಎಕರೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀಕರ್, ಭೂಮಾಪನ ಇಲಾಖೆಯ ಆಯುಕ್ತ ಮಂಜುನಾಥ, ಬೆಂಗಳೂರು ವಿ.ವಿ ಕುಲಸಚಿವ ಲತೀಫ್, ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.



ಯಶವಂತಪುರದಲ್ಲಿರುವ ಕೆಎಸ್‌ಡಿಎಲ್ ಕಾರ್ಖಾನೆಗೆ ಶುಕ್ರವಾರ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಭೇಟಿ ನೀಡಿ ಸಾಬೂನು ಉತ್ಪಾದನೆಯನ್ನು ಪರಿಶೀಲಿಸಿದರು.

ಕೆಎಸ್‌ಡಿಎಲ್ ಆವರಣದಲ್ಲಿ ಸರ್ಕಾರಿ ಕಚೇರಿ ಸಂಕೀರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ (ಕೆಎಸ್‌ಡಿಎಲ್) ಆವರಣದಲ್ಲಿ ಸರ್ಕಾರಿ ಕಚೇರಿಗಳಿಗಾಗಿ ಸುಸಜ್ಜಿತ ಸಂಕೀರ್ಣ ನಿರ್ಮಿಸಲಾಗುವುದು ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಕೆಎಸ್‌ಡಿಎಲ್ ಸಿಬ್ಬಂದಿಗೆ ಶುಕ್ರವಾರ ಏರ್ಪಡಿಸಿದ್ದ ಆರೋಗ್ಯ ತಪಾಸಣೆ ಶಿಬಿರ ಮತ್ತು ₹ 5 ಲಕ್ಷದವರೆಗೆ ವೆಚ್ಚ ಭರಿಸುವ ಆರೋಗ್ಯ ಕಾರ್ಡ್ ವಿತರಿಸಿ ಅವರು ಮಾತನಾಡಿದರು.

ನಗರದ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಖನಿಜ ಭವನದ ಆವರಣದಲ್ಲಿ ಹಲವು ಸರ್ಕಾರಿ ಮತ್ತು ಖಾಸಗಿ ಕಂಪನಿಗಳ ಕಚೇರಿಗಳಿಗೆ ಸ್ಥಳಾವಕಾಶ ನೀಡಲಾಗಿದೆ. ಅದೇ ಮಾದರಿಯನ್ನು ಇಲ್ಲೂ ಅನುಸರಿಸ ಲಾಗುವುದು. 100 ವರ್ಷಗಳ ಅವಧಿಯಲ್ಲಿ ಕಾರ್ಖಾನೆಯ ವಿಸ್ತರಣೆಗೆ ಜಾಗವನ್ನು ಮೀಸಲಿಟ್ಟು, ಉಳಿದ ಜಮೀನಿನಲ್ಲಿ ಹಂತ ಹಂತವಾಗಿ ಸಂಕೀರ್ಣ ನಿರ್ಮಿಸಲಾಗುವುದು ಎಂದರು.

ಕೆಎಸ್‌ಡಿಎಲ್ ವಾರ್ಷಿಕ ₹ 1,200 ಕೋಟಿಗಿಂತ ಹೆಚ್ಚಿನ ವಹಿವಾಟು ನಡೆಸುತ್ತಿದ್ದು, ಲಾಭದ ಹಾದಿಯಲ್ಲಿದೆ. ಇದು 2025ರ ವೇಳೆಗೆ ₹ 2,500 ಕೋಟಿ ಹಾಗೂ 2030ರ ಹೊತ್ತಿಗೆ ₹ 5,000 ಕೋಟಿಗೆ ತಲುಪುವ ನಿರೀಕ್ಷೆ ಇದೆ ಎಂದು ಹೇಳಿದರು.

ಎಂಎಸ್‌ಐಎಲ್‌ಗೆ ಬಲ: ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ನಡೆಸುವ ವಹಿವಾಟನ್ನು ವಿಸ್ತರಿಸಲಾಗುವುದು. ಎಂಎಸ್‌ಐಎಲ್ ಮದ್ಯ ಮಾರಾಟದ 200 ಪ್ರೀಮಿಯಂ ಬೋಟಿಕ್‌ಗಳನ್ನು ಆರಂಭಿಸಲಾಗುತ್ತಿದೆ. ಲೇಖಕ್ ನೋಟ್ ಪುಸ್ತಕಗಳ ಗುಣಮಟ್ಟವನ್ನೂ ಹೆಚ್ಚಿಸಲಾಗುವುದು. ಸರ್ಕಾರಿ ಉದ್ದಿಮೆ ಗಳಿಗೆ ಕಾರ್ಪೊರೇಟ್ ಸ್ಪರ್ಶ ನೀಡಿ, ಲಾಭದ ಹಳಿಗೆ ತರಲಾಗುವುದು ಎಂದರು.

ಕೆಎಸ್‌ಡಿಎಲ್ ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್, ಪ್ರಧಾನ ವ್ಯವಸ್ಥಾಪಕ (ಆಡಳಿತ) ಗಂಗಪ್ಪ, ಮಲ್ಲಿಗೆ ಆಸ್ಪತ್ರೆ ಸಿಇಒ ಡಾ.ಶ್ರೀನಿವಾಸ, ಕೈಗಾರಿಕಾ ಇಲಾಖೆಯ ಮಹಾಂತೇಶ ಬಿರಾದಾರ ಇದ್ದರು.

ಮೌಂಟ್ ಕಾರ್ಮೆಲ್‌ನಲ್ಲಿ ಹುಡುಗರಿಗೂ ಪ್ರವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ (ಎಂಸಿಸಿ) ಎಲ್ಲ ಕೋರ್ಸ್‌ಗಳಿಗೆ ಹುಡುಗರಿಗೂ ಪ್ರವೇಶ ನೀಡಲು ಕಾಲೇಜು ಆಡಳಿತ ಮಂಡಳಿ ನಿರ್ಧರಿಸಿದೆ.

75 ವರ್ಷಗಳನ್ನು ಪೂರೈಸುತ್ತಿರುವ ಕಾಲೇಜು ವಜ್ರಮಹೋತ್ಸವದ ಸಂಭ್ರಮದ ಪ್ರಯುಕ್ತ ಈ ನಿರ್ಧಾರ ಕೈಗೊಂಡಿದೆ.

2015-16ರಲ್ಲಿ ಸ್ನಾತಕೋತ್ತರ ವಿಭಾಗದ ಕೆಲವು ಕೋರ್ಸ್‌ಗಳಿಗೆ ಮೊದಲ ಬಾರಿ ಹುಡುಗರಿಗೆ ಅವಕಾಶ ನೀಡಲಾಗಿತ್ತು. ಈಗ ಎಲ್ಲ ಕೋರ್ಸ್‌ಗಳಿಗೆ ಅಂದರೆ 45 ಪದವಿ ಹಾಗೂ 21 ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಬಾಲಕರಿಗೆ ಅವಕಾಶ ನೀಡಿ ಅರ್ಜಿ ಅಹ್ವಾನಿಸಿದೆ.

2024–25ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಲು ಬಯಸುವವರು mccblr.edu.in ಪೋರ್ಟಲ್‌ಗೆ ಭೇಟಿ ನೀಡಬಹುದು ಎಂದು ಕಾಲೇಜು ಆಡಳಿತ ಮಂಡಳಿ ತಿಳಿಸಿದೆ.

‘ವಿಶ್ವವಿದ್ಯಾಲಯವನ್ನಾಗಿ ಮಾಡಲು ಹೆಜ್ಜೆ ಇಟ್ಟಿದ್ದೇವೆ. ಕೇವಲ ಮಹಿಳಾ ವಿಶ್ವವಿದ್ಯಾಲಯವಾಗುವುದು ನಮ್ಮ ಗುರಿಯಲ್ಲ. ಹಲವು ಬದಲಾವಣೆಗಳನ್ನು ತರಲಾಗುತ್ತಿದೆ. ಅದರಲ್ಲಿ ಹುಡುಗರಿಗೆ ಎಲ್ಲ ಕೋರ್ಸ್‌ಗಳಿಗೆ ಅವಕಾಶ ನೀಡುವುದೂ ಒಂದು’ ಎಂದು ಎಂಸಿಸಿ ಪ್ರಾಂಶುಪಾಲರಾದ ಜಾರ್ಜ್ ಲೇಖಾ ತಿಳಿಸಿದ್ದಾರೆ.

‘ಯಾವುದೇ ಬದಲಾವಣೆ ರಾತ್ರೋ ರಾತ್ರಿ ಆಗುವುದಿಲ್ಲ. ಕ್ರಮೇಣ ಬದಲಾಗುತ್ತಾ ಹೋಗುತ್ತದೆ. ಜನರ ಮನಸ್ಸು ಕೂಡ ಅದಕ್ಕೆ ಅನುಗುಣವಾಗಿ ಬದಲಾಗಬೇಕು’ ಎಂದು ಹೇಳಿದ್ದಾರೆ.

ಅಸಮಾಧಾನ: ‘ಕಾಲೇಜಿನಲ್ಲಿ ಇಲ್ಲಿವರೆಗೆ ಯಾವುದೇ ಸಮಸ್ಯೆ ಇರಲಿಲ್ಲ. ನಮಗೆ ಭದ್ರತೆಯ ಭಾವನೆ ಇತ್ತು. ಬೇರೆ ಕಾಲೇಜುಗಳು ಅಸುರಕ್ಷಿತ ಎಂದಲ್ಲ. ಹೆತ್ತವರು ಬಹಳ ಮಂದಿ ತಮ್ಮ ಹೆಣ್ಣುಮಕ್ಕಳನ್ನು ಮಹಿಳಾ ಕಾಲೇಜು ಎಂಬ ಕಾರಣಕ್ಕಾಗಿಯೇ ಕಳುಹಿಸಿಕೊಡುತ್ತಿದ್ದರು. ಕಾಲೇಜು ಆಡಳಿತ ಮಂಡಳಿಯ ತೀರ್ಮಾನ ಇಂಥ ವಿದ್ಯಾರ್ಥಿನಿಯರ ಮೇಲೆ ಪರಿಣಾಮ ಬೀರಬಹುದು’ ಎಂದು ಸ್ನಾತಕೋತ್ತರ ವಿದ್ಯಾರ್ಥಿನಿಯೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

75 ವರ್ಷಗಳಿಂದ ಇಲ್ಲಿ ಓದಿದವರು ಕಾಲೇಜಿನ ಪರಂಪರೆಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಈಗ ಈ ಬದಲಾವಣೆ ಮಾಡುವ ಅವಶ್ಯಕತೆ ಏನಿತ್ತು ಎಂದು ಹಳೇ ವಿದ್ಯಾರ್ಥಿನಿಯೊಬ್ಬರು ಸಾಮಾಜಿಕ ಜಾಲತಾಣದಲ್ಲಿ ಪ್ರಶ್ನಿಸಿದ್ದಾರೆ.

ಪರಿಸರ ಅಧಿಕಾರಿಗಳ ಅಮಾನತು

ಪ್ಲಾಸ್ಟಿಕ್ ಸಂಸ್ಕರಣೆ ಘಟಕ ಸ್ಥಾಪನೆಗೆ ಅಕ್ರಮವಾಗಿ ಪ್ರಮಾಣ ಪತ್ರ ವಿತರಣೆ

ಪ್ರಜಾವಾಣಿ ವಾರ್ತೆ


ಎಸ್.ಕೆ. ವಾಸುದೇವ್


ಸಿ.ಆರ್. ಮಂಜುನಾಥ್

ಬೆಂಗಳೂರು: ಪ್ಲಾಸ್ಟಿಕ್ ಸಂಸ್ಕರಣೆ ಘಟಕದ ಸ್ಥಾಪನಾ ಮತ್ತು ಚಾಲನಾ ಸಮ್ಮತಿಗೆ ಅಕ್ರಮವಾಗಿ ಪ್ರಮಾಣಪತ್ರ ನೀಡಿದ್ದ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಇಬ್ಬರು ಪರಿಸರ ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಬೆಂಗಳೂರು ದಕ್ಷಿಣ ವಲಯ ಮತ್ತು ರಾಮನಗರ ವಲಯ ಕಚೇರಿಯಲ್ಲಿ ಹಿರಿಯ ಪರಿಸರ ಅಧಿಕಾರಿಯಾಗಿದ್ದ ಎಸ್.ಕೆ. ವಾಸುದೇವ್ ಹಾಗೂ ರಾಮನಗರ ಪ್ರಾದೇಶಿಕ ಕಚೇರಿಯಲ್ಲಿ ಪರಿಸರ ಅಧಿಕಾರಿಯಾಗಿರುವ ಸಿ.ಆರ್. ಮಂಜುನಾಥ್ ಅವರನ್ನು ಅಮಾನತುಗೊಳಿಸಿ ಮಂಡಳಿ ಅಧ್ಯಕ್ಷ ಶಾಂತ್ ಎ. ತಿಮ್ಮಯ್ಯ ಆದೇಶಿಸಿದ್ದಾರೆ.

ರಾಮನಗರದ ಹಾರೋಹಳ್ಳಿಯಲ್ಲಿ ಎನ್ವಿರೋ ರಿಸೈಕ್ಲೀನ್ ಸಂಸ್ಥೆಯ ಪ್ಲಾಸ್ಟಿಕ್ ತ್ಯಾಜ್ಯ ಸಂಸ್ಕರಣೆ ಘಟಕಕ್ಕೆ ಅಕ್ರಮವಾಗಿ ಪ್ರಮಾಣಪತ್ರಗಳನ್ನು ನೀಡಲಾಗಿದೆ. ಈ ಬಗ್ಗೆ ಸಂಬಂಧಿಸಿದ ಅಧಿಕಾರಿ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರಿಗೆ 2023ರ ಅಕ್ಟೋಬರ್ 26ರಂದು ನಿರ್ದೇಶನ ನೀಡಿದ್ದರು.

ಈ ಬಗ್ಗೆ ವರದಿ ನೀಡಲು ಮುಖ್ಯ ಪರಿಸರ ಅಧಿಕಾರಿ–3 ಅವರಿಗೆ ಸದಸ್ಯ ಕಾರ್ಯದರ್ಶಿಯವರು ಸೂಚಿಸಿದ್ದರು. 2023ರ ನವೆಂಬರ್ 10ರಂದು ವರದಿ ನೀಡಲಾಗಿತ್ತು.

‘ಎಸ್.ಕೆ. ವಾಸುದೇವ್, ಸಿ.ಆರ್. ಮಂಜುನಾಥ್ ಅವರು ಅಕ್ರಮ ಪ್ರಕರಣಕ್ಕೆ ನೇರವಾಗಿ ಹೊಣೆಗಾರರು. ಇವರ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಮಂಡಳಿ ನೌಕರರಿಗೆ ತಕ್ಕುದ್ದಲ್ಲದ ರೀತಿಯಲ್ಲಿ ವರ್ತಿಸಿ, ಕರ್ತವ್ಯ ನಿರ್ಲಕ್ಷ್ಯ ತೋರಿಸಿದ್ದೀರಿ. ಇದರಿಂದ ನಿಮ್ಮ ವಿರುದ್ಧ ಶಿಸ್ತು ಕ್ರಮ ಜರುಗಿಸುವುದು ಸೂಕ್ತ ಎಂದು ಪರಿಗಣಿಸಲಾಗಿದೆ. ನಿಮ್ಮನ್ನು ಕರ್ತವ್ಯದಲ್ಲಿ ಮುಂದುವರಿಸಿದರೆ ಸಾಕ್ಷಿ, ದಾಖಲೆಗಳನ್ನು ನಾಶಪಡಿಸುವ ಅವಕಾಶವಿರುವುದರಿಂದ ಅಮಾನತಿನಲ್ಲಿಡಲಾಗುತ್ತಿದೆ. ನಿಮ್ಮ ಕೇಂದ್ರ ಸ್ಥಾನವನ್ನು ಬೆಂಗಳೂರಿಗೆ ಬದಲಾಯಿಸಲಾಗಿದೆ. ಇಲಾಖಾ ವಿಚಾರಣೆ ನಡೆಸಲಾಗುತ್ತದೆ’ ಎಂದು ಜ.3ರಂದು ನೀಡಿರುವ ಆದೇಶ ದಲ್ಲಿ ಮಂಡಳಿ ಅಧ್ಯಕ್ಷರು ವಿವರಿಸಿದ್ದಾರೆ.



ಕೇಪ್ ಟೌನ್ ನಲ್ಲಿ ನಡೆದ ಪಂದ್ಯದಲ್ಲಿ ಬಾರತ ದಕ್ಷಿಣ ಆಫ್ರಿಕಾವನ್ನು ಹಿಂದೆಂದಿಗಿಂತ ಅತ್ಯಂತ ಕಡಿಮೆ ಅವಧಿಯಲ್ಲಿ ಸೋಲಿಸಿದೆ!

ಕಟ್ಟಡಗಳಿಗೆ ಬೀಗ: ಪೊಲೀಸ್ ರಕ್ಷಣೆಗೆ ಮನವಿ

ಬೆಂಗಳೂರು: ತೆರಿಗೆ ಪಾವತಿಸದ ವಾಣಿಜ್ಯ ಹಾಗೂ ವಸತಿ ಕಟ್ಟಡಗಳಿಗೆ ಬೀಗ ಹಾಕುವ ಸಂದರ್ಭದಲ್ಲಿ ಕಂದಾಯ ವಿಭಾಗದ ಸಿಬ್ಬಂದಿಗೆ ಪೊಲೀಸ್ ರಕ್ಷಣೆ ಒದಗಿಸಬೇಕು ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಮನವಿ ಸಲ್ಲಿಸಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಮನವಿ ಸಲ್ಲಿಸಿದ್ದು, ‘ಮುಟ್ಟುಗೋಲು ಹಾಕುವ ಸಂದರ್ಭದಲ್ಲಿ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು, ಜಪ್ತಿ ಅಥವಾ ಸೀಲಿಂಗ್ ಮಾಡುವ ಸಾಮಗ್ರಿಗಳನ್ನು ಪಾಲಿಕೆಯಿಂದ ಒದಗಿಸುವಂತೆ’ ಕೋರಿದ್ದಾರೆ.

'ಮಕ್ಕಳಿಂದ ಶೌಚಾಲಯ ಸ್ವಚ್ಛತೆ ತಪ್ಪಲ್ಲ'

ಮೂಡುಬಿದಿರೆ (ದಕ್ಷಿಣ ಕನ್ನಡ): 'ಶಾಲೆಗಳಲ್ಲಿ ಮಕ್ಕಳಿಗಾಗಿ ಇರುವ ಶೌಚಾಲಯವನ್ನು ಸೂಕ್ತ ಸ್ವಚ್ಛತಾ ಪರಿಕರ ಉಪಯೋಗಿಸಿಕೊಂಡು ಮಕ್ಕಳೇ ಸ್ವಚ್ಛಗೊಳಿಸುವುದರಲ್ಲಿ, ಶಾಲಾ ಆವರಣದ ಕಸ ಗುಡಿಸುವುದರಲ್ಲಿ ತಪ್ಪಿಲ್ಲ. ಇಂತಹ ಸಣ್ಣ ಪುಟ್ಟ ಕೆಲಸಗಳನ್ನು ಮಕ್ಕಳು ಚಿಕ್ಕಂದಿನಲ್ಲೇ ಕಲಿತರೆ ಒಳ್ಳೆಯದು. ಇದು ಕೂಡ ಶಿಕ್ಷಣದ ಒಂದು ಭಾಗ' ಎಂದು ವಿಧಾನಸಭೆಯ ಅಧ್ಯಕ್ಷ ಯು.ಟಿ ಖಾದರ್ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರಿ ಶಾಲೆಯೊಂದರಲ್ಲಿ ಮಕ್ಕಳಿಂದ ಶೌಚಾಲಯ ಸ್ವಚ್ಛಗೊಳಿಸಿದ ಶಾಲಾ ಮುಖ್ಯಶಿಕ್ಷಕರ ವಿರುದ್ಧ ಸರ್ಕಾರ ಶಿಸ್ತುಕ್ರಮ ಕ್ರಮ ಕೈಗೊಂಡಿರುವ ಬಗ್ಗೆ ಮತ್ತು ಈ ವಿಚಾರದಲ್ಲಿ ಹೊಸ ನಿಯಮ ರೂಪಿಸಿದ ಬಗ್ಗೆ ಪರೋಕ್ಷವಾಗಿ ಅಸಮಾಧಾನ ವ್ಯಕ್ತಪಡಿಸಿದರು.

'ಚಿಕ್ಕವನಿದ್ದಾಗ ನಾನೂ ಶಾಲೆಯಲ್ಲಿ ಕಸ ಗುಡಿಸಿದ್ದೆ' ಎಂದು ಹೇಳಿದರು.

ಹಣ ಪಾವತಿಗೆ ಸೂಚಿಸುವಂತೆ ಸಿಎಸ್‌ಗೆ ಪತ್ರ ಬರೆದ ಬಿಎಸ್‌ಎನ್‌ಎಲ್ ಸಿಜಿಎಂ

ಸರ್ಕಾರದ ಬಾಕಿ ₹36.29 ಕೋಟಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಬಿಎಸ್‌ಎನ್‌ಎಲ್‌ಗೆ ಒಟ್ಟು ₹ 36.29 ಕೋಟಿ ಮೊತ್ತದ ಬಿಲ್ ಪಾವತಿಗೆ ಬಾಕಿ ಉಳಿಸಿಕೊಂಡಿದೆ.

ಈ ಪೈಕಿ, ₹ 21.74 ಕೋಟಿ 2023ರ ಮಾರ್ಚ್‌ವರೆಗಿನ ಬಾಕಿ. ₹ 14.55 ಕೋಟಿ ಪ್ರಸಕ್ತ ಸಾಲಿನ ಏಪ್ರಿಲ್‌ನಿಂದ ಅಕ್ಟೋಬರ್ ಅಂತ್ಯದವರೆಗಿನ ಅವಧಿಯ ಮೊತ್ತ.

ಬಾಕಿ ಬಿಲ್ ಪಾವತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಡಿ. 26ರಂದು ಪತ್ರ ಬರೆದಿರುವ ಬಿಎಸ್‌ಎನ್‌ಎಲ್ ಕರ್ನಾಟಕ ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕ (ಸಿಜಿಎಂ) ಜಿ.ಆರ್. ರವಿ, 'ಬಾಕಿ ಉಳಿಸಿಕೊಂಡಿರುವ ಬಿಲ್‌ಗಳನ್ನು ಆದ್ಯತೆಯ ಮೇಲೆ ಪರಿಗಣಿಸಿ, ಹಣ ಪಾವತಿಸುವಂತೆ ಎಲ್ಲ ಇಲಾಖೆ, ಸಂಸ್ಥೆ, ನಿಗಮ – ಮಂಡಳಿಗಳಿಗೆ ನಿರ್ದೇಶನ ನೀಡಬೇಕು' ಎಂದು ಮನವಿ ಮಾಡಿದ್ದಾರೆ.

ಪ್ರಜಾವಾಣಿ ವಿಶೇಷ

ರಾಜ್ಯದಾದ್ಯಂತ ಸರ್ಕಾರದ ವಿವಿಧ ಇಲಾಖೆಗಳು ಬಿಎಸ್‌ಎನ್‌ಎಲ್‌ನಿಂದ ಸ್ಥಿರ ದೂರವಾಣಿ, ಬ್ರಾಂಡ್ ಬ್ಯಾಂಡ್, ಅಂತರ್ಜಾಲ ಸಂಪರ್ಕ ಕಲ್ಪಿಸುವ ಎಫ್‌ಟಿಟಿಎಚ್ (ಫೈಬರ್ ಟು ದಿ ಹೋಂ), ವಿಪಿಎನ್ (ವರ್ಚುವಲ್ ಪ್ರೈವೆಟ್ ನೆಟ್‌ವರ್ಕ್) ಮತ್ತು ಮೊಬೈಲ್ ಸಂಪರ್ಕ ಸೇವೆಯನ್ನು ಪಡೆಯುತ್ತಿವೆ.


'ಡಿಜಿಟಲ್ ಇಂಡಿಯಾ' ಯೋಜನೆಯಡಿ ಜನರಿಗೆ ಸೇವೆಗಳು ಮತ್ತು ಆನ್‌ಲೈನ್ ದೂರುಗಳನ್ನು ಸಲ್ಲಿಸಲು ಗ್ರಾಮ ಪಂಚಾಯಿತಿಗಳಲ್ಲಿ ಎಫ್‌ಟಿಟಿಎಚ್ ಮೂಲಕ ಇಂಟರ್‌ನೆಟ್ ಸಂಪರ್ಕ ಕಲ್ಪಿಸಲಾಗಿದೆ. ನಾಡಕಚೇರಿ, ಕೆ–ಸ್ವಾನ್ (ಕರ್ನಾಟಕ ರಾಜ್ಯ ವಿಸ್ತೃತ ಜಾಲ ಯೋಜನೆ), ಪೊಲೀಸ್ ಇಲಾಖೆಯಲ್ಲಿ ಸಿಸಿಟಿಎನ್‌ಎಸ್ (ಅಪರಾಧ ಮತ್ತು ಅಪರಾಧಿಯ ಜಾಡಿನ ಮೇಲೆ ಕಣ್ಣಿಡುವ ವ್ಯವಸ್ಥೆ) ಯೋಜನೆಗಳು ಬ್ರಾಂಡ್ ಬ್ಯಾಂಡ್ ಆಧಾರಿತ ವಿಪಿಎನ್ ಸೇವೆ ಮತ್ತು ಎಫ್‌ಟಿಟಿಎಚ್ ಸಂಪರ್ಕವನ್ನು ಅವಲಂಬಿಸಿದೆ.

'ನಿರಂತರವಾಗಿ ಬಿಲ್ ಪಾವತಿ ಆಗದಿದ್ದರೂ, ಸರ್ಕಾರದ ವಿವಿಧ ಯೋಜನೆಗಳಿಗೆ ಡಿಜಿಟಲ್ ಸಂಪರ್ಕದ ಅಗತ್ಯ ಮತ್ತು ಅನಿವಾರ್ಯ ಮನಗಂಡು ತಡೆರಹಿತವಾಗಿ ಸೇವೆಯನ್ನು ನೀಡುತ್ತಲೇ ಬರಲಾಗಿದೆ. ಆದರೆ, ಬಿಲ್ ಪಾವತಿಗೆ ಉಳಿದಿರುವುದರಿಂದ ಗುಣಮಟ್ಟದ ಸೇವೆಯನ್ನು ನೀಡಲು ತುಂಬಾ ಕಷ್ಟವಾಗುತ್ತಿದೆ. ಕೆಲವು ಇಲಾಖೆಗಳು ದೊಡ್ಡ ಮೊತ್ತದ ಬಿಲ್ ಪಾವತಿಗೆ ಉಳಿಸಿಕೊಂಡಿವೆ. ಹಳೆ ಬಾಕಿ ಬಿಲ್‌ಗಳನ್ನು ತಕ್ಷಣ ಪಾವತಿಸಬೇಕು' ಎಂದು ರವಿ ಮನವಿ ಮಾಡಿದ್ದಾರೆ.

ಬಿಎಸ್‌ಎನ್‌ಎಲ್ ಬಿಲ್ ಪಾವತಿಗೆ ಬಾಕಿ (₹ ಕೋಟಿಗಳಲ್ಲಿ)

ಯಾವುದು	ಮಾರ್ಚ್ 2023ರವರೆಗೆ	2023ರ ಏಪ್ರಿಲ್‌ನಿಂದ ಅಕ್ಟೋಬರ್	ಒಟ್ಟು ಬಾಕಿ
ಸ್ಥಿರ ದೂರವಾಣಿ	19.77	12.25	32.03
ಮೊಬೈಲ್ ನೆಟ್‌ವರ್ಕ್	1.96	2.30	4.26
ಒಟ್ಟು	21.74	14.55	36.29

ಅತೀ ಹೆಚ್ಚು ಮೊತ್ತದ ಬಾಕಿ ಉಳಿಸಿಕೊಂಡ ಇಲಾಖೆಗಳು



'7,506 ಚದರ ಕಿ.ಮೀ ಅರಣ್ಯ ಒತ್ತುವರಿ'

ನವದೆಹಲಿ (ಪಿಟಿಐ): 'ದೇಶದಲ್ಲಿ ಒಟ್ಟು 7,506.33 ಚದರ ಕಿ.ಮೀ ಅರಣ್ಯಪ್ರದೇಶವನ್ನು ಅತಿಕ್ರಮಣ ಮಾಡಲಾಗಿದೆ. ಈ ಪ್ರಮಾಣ ದೆಹಲಿಯ ಭೌಗೋಳಿಕ ಪ್ರದೇಶಕ್ಕಿಂತ ಐದು ಪಟ್ಟು ಹೆಚ್ಚಿದೆ' ಎಂದು ಕೇಂದ್ರ ಸರ್ಕಾರ ಮಾಹಿತಿ ನೀಡಿದೆ.

'ಅಸ್ಸಾಂವೊಂದರಲ್ಲೇ 3,407.48 ಚದರ ಕಿ.ಮೀ (ಅಸ್ಸಾಂ ಭೌಗೋಳಿಕ ಪ್ರದೇಶದ ಶೇಕಡ 12.69ರಷ್ಟು) ಅರಣ್ಯವನ್ನು ಅತಿಕ್ರಮಿಸಲಾಗಿದೆ. ಇದು ಒಟ್ಟು ಅತಿಕ್ರಮಿತ ಅರಣ್ಯಪ್ರದೇಶದ ಶೇಕಡ 45ರಷ್ಟಿದೆ ಎಂದು ತಿಳಿಸಿದೆ.

ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಕ್ಕೆ 'ಸುಪ್ರೀಂ' ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ 13,352 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಮುಂದುವರಿಸಲು ಹೈಕೋರ್ಟ್ ವಿಭಾಗೀಯ ಪೀಠ ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ.

ಹೈಕೋರ್ಟ್ ಆದೇಶ ಪ್ರಶ್ನಿಸಿ ಚಿಕ್ಕಬಳ್ಳಾಪುರದ ಜಿ.ವಿ.ನರೇಂದ್ರಬಾಬು ಹಾಗೂ ಇತರರು ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಹಾಗೂ ಅಹಸಾನುದ್ದೀನ್ ಅಮಾನುಲ್ಲಾ ಅವರ ಪೀಠವು ಈ ಆದೇಶ ನೀಡಿದೆ.

ವಾದ ಆಲಿಸದೆ ಮಧ್ಯಂತರ ಆದೇಶ ಹೊರಡಿಸಬಾರದು ಎಂದು ಕರ್ನಾಟಕ ಸರ್ಕಾರ ಕೇವಿಯೆಟ್ ಸಲ್ಲಿಸಿತ್ತು. ಈ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿರುವ ಪೀಠವು, ನಾಲ್ಕು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿದೆ. ಹೈಕೋರ್ಟ್ ವಿಭಾಗೀಯ ಪೀಠ ನೀಡಿರುವ ಆದೇಶದ 45ರಿಂದ 47ರ ವರೆಗಿನ ಪ್ಯಾರಾಗಳನ್ನು ಜಾರಿಗೊಳಿಸಬಾರದು ಎಂದು ಸರ್ಕಾರಕ್ಕೆ ಪೀಠ ನಿರ್ದೇಶನ ನೀಡಿದೆ. 2023ರಲ್ಲಿ ಪ್ರಕಟಿಸಿರುವ ಆಯ್ಕೆಪಟ್ಟಿ ಪ್ರಕಾರ, ಅಭ್ಯರ್ಥಿಗಳಿಗೆ ಆಯ್ಕೆಪಟ್ಟಿ ವಿತರಿಸುತ್ತಿದ್ದರೆ ಅದನ್ನು ಅಮಾನತಿನಲ್ಲಿಡಬೇಕು ಎಂದೂ ಸೂಚಿಸಿದೆ.

ರಾಜ್ಯ ಸರ್ಕಾರ ಶಿಕ್ಷಕರ ನೇಮಕಾತಿಯ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸುವಾಗ ವಿವಾಹಿತ ಮಹಿಳೆಯ ಪತಿಯ ಆದಾಯ ಪ್ರಮಾಣ ಪತ್ರವನ್ನು ಪರಿಗಣಿಸಿತ್ತು. 'ಮದುವೆಯಾದ ಮಹಿಳೆಯರು ಪತಿಯ ಆದಾಯ ಪ್ರಮಾಣಪತ್ರವನ್ನೇ ಸಲ್ಲಿಸಬೇಕು ಎನ್ನುವ ಕುರಿತು ನೇಮಕಾತಿ ಅಧಿ ಸೂಚನೆಯಲ್ಲಿ ಸ್ಪಷ್ಟ ನಿರ್ದೇಶನ ಇರಲಿಲ್ಲ. ಮೆರಿಟ್ ಇದ್ದರೂ ನಮ್ಮನ್ನು ನೇಮಕಾತಿ ಪಟ್ಟಿಯಿಂದ ಕೈಬಿಡಲಾಗಿದೆ' ಎಂದು ಆರೋಪಿಸಿ ಅವಕಾಶವಂಚಿತರು ಹೈಕೋರ್ಟ್‌ನ ಮೆಟ್ಟಿಲೇರಿದ್ದರು.

ಹೈಕೋರ್ಟ್‌ನ ಏಕಸದಸ್ಯ ಪೀಠ 'ವಿವಾಹಿತ ಮಹಿಳೆಯ ತಂದೆಯ ಆದಾಯ ಪ್ರಮಾಣಪತ್ರವನ್ನೂ ಪರಿಗಣಿಸಬೇಕು' ಎಂದು ಆದೇಶಿಸಿ, ತಾತ್ಕಾಲಿಕ ಆಯ್ಕೆಪಟ್ಟಿಯನ್ನು ರದ್ದುಗೊಳಿಸಿತ್ತು. ಕೋರ್ಟ್ ಆದೇಶದಂತೆ ಆಯ್ಕೆಪಟ್ಟಿಯನ್ನು ಪರಿಷ್ಕರಿಸಿದ ಸರ್ಕಾರ, ಹೊಸ ಪಟ್ಟಿ ಪ್ರಕಟಿಸಿದಾಗ ಮೊದಲಿದ್ದ ಪಟ್ಟಿಯಿಂದ 451 ಅಭ್ಯರ್ಥಿಗಳು ಹೊರಗುಳಿದರು. ಪ್ರಕರಣ ಮತ್ತೆ ಕೋರ್ಟ್ ಮೆಟ್ಟಿಲೇರಿತ್ತು.

2023ರ ಅಕ್ಟೋಬರ್ 13ರಂದು ಏಕಸದಸ್ಯ ಪೀಠದ ಆದೇಶವನ್ನು ರದ್ದುಪಡಿಸಿದ್ದ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ದ್ವಿಸದಸ್ಯ ಪೀಠ, 'ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಹೊರಗಿಡಲಾಗಿರುವ ಅಭ್ಯರ್ಥಿಗಳು ತಮ್ಮ ತಕರಾರನ್ನು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ ಮುಂದೆ ಮಂಡಿಸಿ ಸೂಕ್ತ ನ್ಯಾಯ ಪಡೆಯಬಹುದು' ಎಂದೂ ಸ್ಪಷ್ಟಪಡಿಸಿತ್ತು.


ಬಿ.ಕೆ ಹರಿಪ್ರಸಾದ್ ಬಹಿಷ್ಕಾರಕ್ಕೆ ಆಗ್ರಹ

ಕೊಪ್ಪಳ: 'ಅಯೋಧ್ಯೆ ರಾಮಮಂದಿರ ಕಾರ್ಯಕ್ರಮದ ವೇಳೆ ಗೋಧ್ರಾ ಮಾದರಿ ಘಟನೆ ಸಂಭವಿಸಬಹುದು ಎಂಬ ಹೇಳಿಕೆ ನೀಡಿರುವ ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರನ್ನು ರಾಜ್ಯದಿಂದ ಬಹಿಷ್ಕರಿಸಬೇಕು' ಎಂದು ಬಿಜೆಪಿ ಮುಖಂಡ ಬಿ. ಶ್ರೀರಾಮುಲು ಆಗ್ರಹಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹರಿಪ್ರಸಾದ್ ಹೇಳಿಕೆಯ ಸತ್ಯಾಸತ್ಯತೆ ತಿಳಿಯಲು ಕೇಂದ್ರ ತನಿಖಾ ಸಂಸ್ಥೆಗಳು ಅವರನ್ನು ವಶಕ್ಕೆ ಪಡೆದು ತನಿಖೆ ನಡೆಸಬೇಕು' ಎಂದು ಆಗ್ರಹಿಸಿದರು.

ಬಿಜೆಪಿ ಮುಖಂಡ ಸಿ.ಟಿ. ರವಿ, 'ಕಾಂಗ್ರೆಸ್ ಡಿಎನ್‌ಎಯಲ್ಲಿಯೇ ಹಿಂದೂ ವಿರೋಧಿ ನಡೆ ಇದೆ. ರಾಷ್ಟ್ರ ಕಟ್ಟುವ ಕನಸು ಉಳ್ಳವರಿಗೆ ರಾಮ ಪ್ರೇರಣೆಯಾಗಿದೆ. ಬಿನ್‌ಲಾಡೆನ್ ಹಾಗೂ ಟಿಪ್ಪು ಸುಲ್ತಾನ್ ಪ್ರೇರಣೆಯಾದರೆ ದೇಶ ಕಟ್ಟಲು ಸಾಧ್ಯವಿಲ್ಲ. ಹರಿಪ್ರಸಾದ್ ಹೇಳಿಕೆ ಗಮನಿಸಿದರೆ ಅವರಿಗೆ ಎಲ್ಲ ಒಳಸುಳಿ ತಿಳಿದಂತಿದೆ' ಎಂದು ಕುಟುಕಿದರು.

ವಿಜಯಪುರದ ನವೀನ್ ಅಮೆರಿಕದ ಕೌನ್ಸಿಲರ್



ವಿಜಯಪುರ: ವಿಜಯಪುರ ಮೂಲದ ನವೀನ್ ಹಾವಣ್ಣನವರ ಅಮೆರಿಕದ ನ್ಯೂಯಾರ್ಕ್ ರಾಜ್ಯದ ರೋಚಸ್ಟರ್ ಜಿಲ್ಲೆಯ ಪಿಟ್ಸ್‌ಫೋರ್ಡ್ ನಗರದ ಕೌನ್ಸಿಲರ್ ಆಗಿ ಡೆಮಾಕ್ರಟಿಕ್ ಪಕ್ಷದಿಂದ ಜಯಗಳಿಸಿದ್ದಾರೆ.

ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಎದುರು ನವೀನ್ 33 ಮತಗಳ ಅಂತರದಿಂದ ಗೆಲುವು ಸಾಧಿಸಿದರು. ಶುಕ್ರವಾರ ಕೌನ್ಸಿಲರ್ ಆಗಿ ಪ್ರಮಾಣ ವಚನ ಸ್ವೀಕರಿಸಿದರು. ನವೀನ್ ಹಾವಣ್ಣವರ ಅವರು ಪತ್ನಿ ಕ್ಯಾಥರಿನ್(ನಿವೇದಿತಾ) ಹಾಗೂ ನೀಲ್ ಮತ್ತು ಲೀಲಾ ಎಂಬ ಇಬ್ಬರು ಮಕ್ಕಳೊಂದಿಗೆ 14 ವರ್ಷಗಳಿಂದ ಅಮೆರಿಕದಲ್ಲಿ ನೆಲೆಸಿದ್ದಾರೆ.

'ನವೀನ್ ಇಂಡಿಯನ್ ಕಮ್ಯುನಿಟಿ ಸೆಂಟರ್ ಅಧ್ಯಕ್ಷರಾಗಿದ್ದಾರೆ. ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಭಾರತ ಮೂಲದವರ ಬೆಂಬಲ ಸಿಕ್ಕಿದೆ' ಎಂದು ನವೀನ್ ತಂದೆ, ಇಲ್ಲಿನ ಟ್ರಝರಿ ಕಾಲೊನಿ ನಿವಾಸಿ ಪರಪ್ಪ ಹಾವಣ್ಣವರ ಪ್ರತಿಕ್ರಿಯಿಸಿದರು. ನವೀನ್ ವಿಜಯಪುರದಲ್ಲಿ ಪ್ರಾಥಮಿಕ, ಪ್ರೌಢ ಮತ್ತು ಕಲಬುರಗಿಯಲ್ಲಿ ಪದವಿ ಶಿಕ್ಷಣ ಪೂರೈಸಿದರು.

ವಿಶ್ವೇಶ್ವರಯ್ಯ ಮ್ಯೂಸಿಯಂಗೆ ಬಾಂಬ್ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕಸ್ತೂರಿ ಬಾ ರಸ್ತೆಯಲ್ಲಿರುವ ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯಕ್ಕೆ ಶುಕ್ರವಾರ ಬಾಂಬ್ ಬೆದರಿಕೆಯ ಇ–ಮೇಲ್ ಬಂದಿದ್ದು, ಆತಂಕಕ್ಕೆ ಕಾರಣವಾಗಿತ್ತು.

ಸ್ಥಳಕ್ಕೆ ಬಂದ ಪೊಲೀಸರು ಇಡೀ ಮ್ಯೂಸಿಯಂ ಅನ್ನು ತಪಾಸಣೆ ನಡೆಸಿ, 'ಇದು ಹುಸಿ ಬಾಂಬ್ ಬೆದರಿಕೆ' ಎಂದು ಖಚಿತ ಪಡಿಸಿದ ಮೇಲೆ ಸುತ್ತಮುತ್ತಲ ಜನರು ಹಾಗೂ ವಸ್ತು ಸಂಗ್ರಹಾಲಯದ ಸಿಬ್ಬಂದಿ ನಿಟ್ಟುಸಿರು ಬಿಟ್ಟರು.

ಸಂಗ್ರಹಾಲಯದ ಅಧಿಕಾರಿಯೊಬ್ಬರ ವಿಳಾಸಕ್ಕೆ ಶುಕ್ರವಾರ ಬೆಳಿಗ್ಗೆ 4.40ರ ಸುಮಾರಿಗೆ ಬೆದರಿಕೆಯ ಇ–ಮೇಲ್ ಬಂದಿತ್ತು. 'ವಸ್ತು ಸಂಗ್ರಹಾಲಯದ ಕಟ್ಟಡದಲ್ಲಿ ಬಾಂಬ್ ಇಡಲಾಗಿದೆ. ಕಟ್ಟಡದಲ್ಲಿದ್ದವರಿಗೆ ಅಪಾಯವಿದೆಯೆಂದು ಬರೆಯಲಾಗಿತ್ತು' ಎಂದು ಪೊಲೀಸರು ಹೇಳಿದರು.



ವಿಶ್ವೇಶ್ವರಯ್ಯ ವಸ್ತು ಸಂಗ್ರಹಾಲಯ

'ಬೆಳಿಗ್ಗೆ 10 ಗಂಟೆಗೆ ಮ್ಯೂಸಿಯಂಗೆ ಬಂದ ಸಿಬ್ಬಂದಿ ಪರಿಶೀಲಿಸಿದಾಗ ಇ–ಮೇಲ್‌ಗೆ ಬೆದರಿಕೆ ಬಂದಿರುವುದು ಗೊತ್ತಾಯಿತು. ತಕ್ಷಣವೇ ಅವರು ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಗೆ ಕರೆ ಮಾಡಿ ಮಾಹಿತಿ ನೀಡಿದ್ದರು. ಬಾಂಬ್ ನಿಷ್ಕ್ರಿಯ ದಳ ಹಾಗೂ ಬಾಂಬ್ ಪತ್ತೆ ದಳದ ಸಿಬ್ಬಂದಿ, ಸ್ಥಳಕ್ಕೆ ಬಂದು ಎರಡು ಗಂಟೆಗಳ ಕಾಲ ತಪಾಸಣೆ ನಡೆಸಿದರು. ಬಳಿಕ ಹುಸಿ ಬೆದರಿಕೆ' ಎಂದು ತಿಳಿಯಿತು.

'ಕಟ್ಟಡದಲ್ಲಿ ಯಾವುದೇ ಸ್ಫೋಟಕದ ವಸ್ತುಗಳು ಪತ್ತೆಯಾಗಿಲ್ಲ. ತಪಾಸಣೆ ನಂತರ ಮಧ್ಯಾಹ್ನ 1.30ರಿಂದ ಪ್ರೇಕ್ಷಕರಿಗೆ ಪ್ರವೇಶ ಕಲ್ಪಿಸಲಾಯಿತು. ಇ–ಮೇಲ್ ಎಲ್ಲಿಂದ ಬಂದಿದೆ ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದರು. ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪದೇ ಪದೇ ಕರೆ

ಡಿಸೆಂಬರ್ ಮೊದಲ ವಾರ ನಗರದ 70 ಶಾಲೆಗಳಿಗೆ ಇದೇ ರೀತಿಯ ಬಾಂಬ್ ಬೆದರಿಕೆ ಇ–ಮೇಲ್ ಬಂದಿತ್ತು. ಶಾಲೆಗಳ ಆವರಣದಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿಯಾಗಿತ್ತು. ಶಾಲೆಗಳಿಗೆ ರಜೆ ನೀಡಲಾಗಿತ್ತು. ಮಕ್ಕಳು ಆತಂಕಗೊಂಡಿದ್ದರು. ಕಾರ್ಯ ಪ್ರವೃತ್ತರಾದ ಪೊಲೀಸರು, ಶಾಲೆಗಳ ಆವರಣಗಳಲ್ಲಿ ಶೋಧ ನಡೆಸಿ ಹುಸಿ ಇ–ಮೇಲ್ ಎಂಬುದನ್ನು ಪತ್ತೆ ಹಚ್ಚಿದ್ದರು.

ಅಲ್ಲದೇ ರಾಜಭವನಕ್ಕೆ ಬಾಂಬ್ ಇರಿಸಿರುವುದಾಗಿ ಕೋಲಾರದ ಯುವಕ ಭಾಸ್ಕರ್ ಎಂಬಾತ ಬೆದರಿಕೆ ಕರೆ ಮಾಡಿದ್ದ. ಆತನನ್ನು ಪೊಲೀಸರು ಬಂಧಿಸಿದ್ದರು.

ವ್ಯಕ್ತಿ ತಲೆಗೆ ಇಟ್ಟಿಗೆಯಿಂದ ಹಲ್ಲೆ

ಅಪರಾಧ ಸುದ್ದಿ

ಬೆಂಗಳೂರು: ಮದ್ಯಪಾನ ಮಾಡಲು ಹಣ ನೀಡಲಿಲ್ಲವೆಂದು ಯುವಕನೊಬ್ಬ ವ್ಯಕ್ತಿ ತಲೆಗೆ ಇಟ್ಟಿಗೆಯಿಂದ ಹಲ್ಲೆ ನಡೆಸಿದ್ದಾನೆ. ಈ ಸಂಬಂಧ ಗಿರಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಿರಿನಗರದ ನಿವಾಸಿ ಧರ್ಮ ಹಲ್ಲೆ ನಡೆಸಿದ ಆರೋಪಿ. ಸಿಂಗಾರ ವೇಲು (58) ಹಲ್ಲೆಗೆ ಒಳಗಾಗಿದ್ದಾರೆ.

'ಡಿ.29ರಂದು ರಾತ್ರಿ ಸಿಂಗಾರ ವೇಲು ಅವರು ಮೂಕಾಂಬಿಕಾ ನಗರದಲ್ಲಿರುವ ಫುಟ್‌ಪಾತ್ ಹೋಟೆಲ್‌ನಲ್ಲಿ ಊಟ ಮಾಡಿ ಮನೆಯತ್ತ ತೆರಳುತ್ತಿದ್ದರು. ಆಗ ಅಲ್ಲಿಗೆ ಬಂದ ಆರೋಪಿ ಮದ್ಯಪಾನಕ್ಕೆ ದುಡ್ಡು ಕೊಡುವಂತೆ ಬೇಡಿಕೆಯಿಟ್ಟಿದ್ದ. ನನ್ನ ಬಳಿ ಹಣವಿಲ್ಲ, ಮನೆಗೆ ಹೋಗಲು ಬಿಡು ಎಂದು ಸಿಂಗಾರ ವೇಲು ಅಲ್ಲಿಂದ ತೆರಳಲು ಮುಂದಾಗಿದ್ದರು. ಇದರಿಂದ ಕುಪಿತಗೊಂಡ ಆರೋಪಿ, ಸ್ಥಳದಲ್ಲಿದ್ದ ಇಟ್ಟಿಗೆಯಿಂದ ವೇಲು ತಲೆಗೆ ಹಲ್ಲೆ ಮಾಡಿದ್ದಾನೆ. ಗಂಭೀರವಾಗಿ ಗಾಯಗೊಂಡಿರುವ ವೇಲು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪೊಲೀಸರು ಹೇಳಿದರು.

'ಸಿಸಿ ಟಿ.ವಿ ಕ್ಯಾಮೆರಾ ಪರಿಶೀಲನೆ ನಡೆಸಿ, ಆರೋಪಿ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ಊಟದಲ್ಲಿ ಜಿರಳೆ: ಹೋಟೆಲ್ ಸಿಬ್ಬಂದಿ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಭವನ ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ನೀಡಿದ ಆಹಾರದಲ್ಲಿ ಜಿರಳೆ ಪತ್ತೆಯಾಗಿದ್ದು ಅದನ್ನು ಪ್ರಶ್ನಿಸಿದ್ದಕ್ಕೆ ವಕೀಲರೊಬ್ಬರ ಮೇಲೆ ಹೋಟೆಲ್ ಸಿಬ್ಬಂದಿ ಹಲ್ಲೆ ನಡೆಸಿದ್ದಾರೆ.

ಮಲ್ಲೇಶ್ವರದ ವಕೀಲೆ ಶೀಲಾ ದೀಪಕ್ ಅವರ ದೂರು ಆಧರಿಸಿ ಹೋಟೆಲ್‌ನ ಇಬ್ಬರು ಸಿಬ್ಬಂದಿ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಶೀಲಾ ಅವರು ಗುರುವಾರ ತಮ್ಮ ಸಹೋದ್ಯೋಗಿಗಳ ಜತೆಗೆ ಹೋಟೆಲ್‌ಗೆ ಊಟಕ್ಕೆ ತೆರಳಿದ್ದರು. ರೋಟಿ ಹಾಗೂ ಪನ್ನೀರ್ ಗ್ರೇವಿಗೆ ಆರ್ಡರ್ ಮಾಡಿದ್ದರು. ಪನ್ನೀರ್ ಗ್ರೇವಿಯಲ್ಲಿ ಜಿರಳೆ ಕಂಡು ಬಂದಿತ್ತು. ವಕೀಲೆ ಹಾಗೂ ಇತರೆ ಗ್ರಾಹಕರು ಹೋಟೆಲ್ ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡು, ಪ್ರಶ್ನಿಸಿದ್ದರು. ಅದಾದ ಮೇಲೆ ಬೇರೆ ಊಟ ಕೊಡುತ್ತೇವೆ ಎಂದು ಸಿಬ್ಬಂದಿ ಹೇಳಿ ಸಮಾಧಾನ ಮಾಡಲು ಪ್ರಯತ್ನಿಸಿದ್ದರು. ಬಳಿಕ, ಅಡುಗೆ ಕೋಣೆಯನ್ನು ಪರಿಶೀಲಿಸಿದಾಗ ಅಲ್ಲೂ ಸ್ವಚ್ಛತೆ ಇಲ್ಲದಿರುವುದು ಕಂಡುಬಂದಿತ್ತು.'

ಬಳಿಕ ತಮ್ಮ ಮೊಬೈಲ್‌ನಲ್ಲಿ ಹೋಟೆಲ್ ಅಡುಗೆ ಕೋಣೆಯ ಅವ್ಯವಸ್ಥೆಯನ್ನು ವಿಡಿಯೊ ಮೂಲಕ ರೆಕಾರ್ಡ್ ಮಾಡಿಕೊಂಡಿದ್ದಾರೆ. ಆಗ ಹೋಟೆಲ್‌ನ ಇಬ್ಬರು ಮಹಿಳಾ ಹಾಗೂ ಒಬ್ಬ ಪುರುಷ ಸಿಬ್ಬಂದಿ ವಕೀಲೆ ಮೇಲೆಯೇ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ. ಶೀಲಾ ಅವರು ಪೊಲೀಸ್ ಸಹಾಯವಾಣಿ 112ಕ್ಕೆ ಕರೆ ಮಾಡಿ ಮಾಹಿತಿ ನೀಡಿದ್ದರು. ಜೊತೆಗೆ ಆಹಾರ ಅಧಿಕಾರಿಗಳಿಗೂ ಕರೆ ಮಾಡಿ ವಿಚಾರ ತಿಳಿಸಿದ್ದರು. ನಂತರ, ಹೋಟೆಲ್ ಸಿಬ್ಬಂದಿ ವಿರುದ್ಧ ಶೀಲಾ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು.

ಬಿಎಂಟಿಸಿ ಬಸ್ ಡಿಕ್ಕಿ ಬೈಕ್ ಸವಾರ ಸಾವು

ಬೆಂಗಳೂರು: ಮಾರತ್ತಹಳ್ಳಿಯ ವರ್ತೂರು ಮುಖ್ಯರಸ್ತೆಯ ಸ್ಪೈಸ್ ಗಾರ್ಡನ್ ಬಳಿ, ಶುಕ್ರವಾರ ಬೆಳಿಗ್ಗೆ ಬಿಎಂಟಿಸಿ ವೋಲ್ವೊ ಬಸ್ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಮೃತಪಟ್ಟಿದ್ದಾರೆ.

ಎಳಂಗೋವನ್ ಸೆಂಕತ್ತವಲ್ (43) ಮೃತಪಟ್ಟ ಸವಾರ.

'ಶುಕ್ರವಾರ ಬೆಳಿಗ್ಗೆ 9.45ರ ಸುಮಾರಿಗೆ ಎಳಂಗೋವನ್ ಅವರು ಬೈಕ್‌ನಲ್ಲಿ ವರ್ತೂರು ಮುಖ್ಯರಸ್ತೆಯ ಕುಂದಲಹಳ್ಳಿ ಜಂಕ್ಷನ್ ಕಡೆಯಿಂದ ಬೆಳಂದೂರಿನಲ್ಲಿರುವ ತಮ್ಮ ಕಚೇರಿಗೆ ತೆರಳುತ್ತಿದ್ದರು. ಅದೇ ಮಾರ್ಗದಲ್ಲಿ ಬರುತ್ತಿದ್ದ ಬಿಎಂಟಿಸಿ ವೋಲ್ವೊ ಬಸ್, ಬೈಕ್‌ಗೆ ಡಿಕ್ಕಿಯಾಗಿ ಅಪಘಾತ ಸಂಭವಿಸಿದೆ. ಸವಾರನ ತಲೆ ಹಾಗೂ ಮುಖಕ್ಕೆ ಬಲವಾದ ಗಾಯವಾಗಿತ್ತು. ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯದಲ್ಲಿ ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಮಾಲತಿ ಪಿ. ಅವರು ದೂರು ನೀಡಿದ್ದು, ಬಸ್ ಚಾಲಕ ಅಮರೇಶ ಬಸವಂತಪ್ಪ ವಿರುದ್ಧ ಎಚ್‌ಎಎಲ್ ಏರ್‌ಪೋರ್ಟ್ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಿಳೆಯ ಚಿನ್ನಾಭರಣ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕಿತ್ಸೆಗೆ ದಾಖಲಾಗಿದ್ದ ಮಹಿಳೆಯೊಬ್ಬರ ಚಿನ್ನಾಭರಣಗಳನ್ನು ಆಸ್ಪತ್ರೆಯ ಸಿಬ್ಬಂದಿ ಕಳವು ಮಾಡಿದ್ದಾರೆ ಎಂಬ ಆರೋಪ ಕೇಳಿಬಂದಿದ್ದು, ಈ ಸಂಬಂಧ ಬೆಳ್ಳಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸರ್ಜಾಪುರ ರಸ್ತೆಯ ಖಾಸಗಿ ಆಸ್ಪತ್ರೆಯ ಸಿಬ್ಬಂದಿ ವಿರುದ್ಧ ಅನುಮಾನ ವ್ಯಕ್ತವಾಗಿದೆ.

ಸಾಫ್ಟ್‌ವೇರ್ ಎಂಜಿನಿಯರ್ ಕಿಶೋರ್ ಅವರ ಪತ್ನಿ ಡಿ.25ರಂದು ಚಿಕಿತ್ಸೆಗೆ ದಾಖಲಾಗಿದ್ದರು. ಡಿ.27ರಂದು ಶಸ್ತ್ರಚಿಕಿತ್ಸೆಗಾಗಿ ಕರೆದೊಯ್ಯುವಾಗ ಚಿನ್ನಾಭರಣಗಳು ಮೈಮೇಲಿದ್ದವು. ಆದರೆ, ಶಸ್ತ್ರಚಿಕಿತ್ಸೆ ಬಳಿಕ ಹೊರಬಂದಾಗ ಮಾಂಗಲ್ಯ, ಚಿನ್ನದ ಸರ ಸೇರಿದಂತೆ 72 ಗ್ರಾಂ ಚಿನ್ನಾಭರಣ ಇರಲಿಲ್ಲವೆಂದು ಆರೋಪಿಸಿ, ಕಿಶೋರ್ ಅವರು ದೂರು ನೀಡಿದ್ದಾರೆ' ಎಂದು ಪೊಲೀಸರು ಹೇಳಿದರು.

ಆಸ್ಪತ್ರೆ ಸಿಬ್ಬಂದಿಯ ವಿಚಾರಣೆ ನಡೆಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಚಿನ್ನ ಸಾಗಣೆ: 12 ಮಂದಿ ಬಂಧನ

ಬೆಂಗಳೂರು: ದಾಖಲೆಯಿಲ್ಲದೆ ವಿಮಾನಗಳ ಮೂಲಕ ತಂದಿದ್ದ ₹1.29 ಕೋಟಿ ಮೌಲ್ಯದ ಚಿನ್ನಾಭರಣವನ್ನು ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡಿದ್ದು 12 ಮಂದಿಯನ್ನು ಬಂಧಿಸಿದ್ದಾರೆ.

ವಿದೇಶದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿದ್ದ 12 ಮಂದಿ, 2 ಕೆ.ಜಿ 86 ಗ್ರಾಂ ಚಿನ್ನವನ್ನು ತಂದಿದ್ದರು. ಮಸ್ಕತ್ ಮತ್ತು ಮದೀನಾದಿಂದ ಬಂದಿದ್ದವರನ್ನು ಪರಿಶೀಲನೆ ನಡೆಸಲಾಯಿತು. 11 ಮಹಿಳೆಯರು ಹಾಗೂ ಒಬ್ಬ ಪುರುಷನನ್ನು ಬಂಧಿಸಲಾಗಿದೆ ಎಂದು ಕಸ್ಟಮ್ಸ್ ಅಧಿಕಾರಿಗಳು 'ಎಕ್ಸ್' ಖಾತೆಯಲ್ಲಿ ಟ್ವೀಟ್ ಮಾಡಿದ್ದಾರೆ.


ಉತ್ತಮ ಹೊಯ್ಸಳ ತಂಡಕ್ಕೆ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಪ್ರಶಂಸನಾ ಪತ್ರ ವಿತರಣೆ ಮಾಡಿದರು

ಹೊಯ್ಸಳ ತಂಡಕ್ಕೆ ಪ್ರಶಂಸನಾ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಿಎಆರ್ (ಉತ್ತರ) ಮೈದಾನದಲ್ಲಿ ಶುಕ್ರವಾರ ನಡೆದ ಕವಾಯತು ವೇಳೆ 'ಹೊಯ್ಸಳ ತಂಡ'ಕ್ಕೆ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಪ್ರಶಂಸನಾ ಪತ್ರ ವಿತರಣೆ ಮಾಡಿದರು.

'ಸಹಾಯವಾಣಿ 112'ಕ್ಕೆ ಕರೆ ಮಾಡಿದವರಿಂದ ಸ್ವೀಕರಿಸಿದ ಪ್ರತಿಕ್ರಿಯೆ ಹಾಗೂ ರೇಟಿಂಗ್ ಆಧರಿಸಿ, ಕಳೆದ ತಿಂಗಳು ಉತ್ತಮವಾಗಿ ಕಾರ್ಯ ನಿರ್ವಹಿಸಿದ ವಿವಿಧ ಶ್ರೇಣಿಯ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಪ್ರಶಂಸನಾ ಪತ್ರ ನೀಡಿ, ಅಭಿನಂದಿಸಲಾಯಿತು.

ಪೂರ್ವ ವಿಭಾಗ: ಚೈತನ್ಯ ಸಿ.ಜೆ. ಹಾಗೂ ಕೆ.ಅಶೋಕ್, ಪೊಲೀಸ್ ಕಾನ್‌ಸ್ಟೆಬಲ್, ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣೆ. ಈಶ್ವರ ಹಾನಗಲ್, ಪೊಲೀಸ್ ಕಾನ್‌ಸ್ಟೆಬಲ್, ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣೆ. ನಾಗೇಂದ್ರ, ಹೆಡ್ ಕಾನ್‌ಸ್ಟೆಬಲ್, ಎಚ್‌ಎಎಲ್ ಸಂಚಾರ ಪೊಲೀಸ್ ಠಾಣೆ.

ಪಶ್ಚಿಮ ವಿಭಾಗ: ನಟರಾಜ್ ಎಂ.ಆರ್., ಇನ್‌ಸ್ಪೆಕ್ಟರ್, ಕಬ್ಬನ್‌ಪಾರ್ಕ್ ಸಂಚಾರ ಪೊಲೀಸ್ ಠಾಣೆ. ಗವಿಯಪ್ಪ, ಹೆಡ್ ಕಾನ್‌ಸ್ಟೆಬಲ್, ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣೆ. ಎಸ್. ಕೃಷ್ಣಮೂರ್ತಿ, ಇನ್‌ಸ್ಪೆಕ್ಟರ್, ಉಪ್ಪಾರಪೇಟೆ ಸಂಚಾರ ಪೊಲೀಸ್ ಠಾಣೆ. ಲೋಕೇಶ್ (ಎಎಸ್‌ಐ) ಮತ್ತು ಸಿಬ್ಬಂದಿ, ಸದಾಶಿವನಗರ ಸಂಚಾರ ಪೊಲೀಸ್ ಠಾಣೆ. ರಾಮಚಂದ್ರ (ಎಎಸ್‌ಐ) ಹಾಗೂ ಸಿಬ್ಬಂದಿ, ಮಾಗಡಿ ರಸ್ತೆ ಸಂಚಾರ ಪೊಲೀಸ್ ಠಾಣೆ.

ಉತ್ತರ ವಿಭಾಗ: ಮಲ್ಲಪ್ಪ, ಪೊಲೀಸ್ ಕಾನ್‌ಸ್ಟೆಬಲ್, ಮಲ್ಲೇಶ್ವರ ಸಂಚಾರ ಪೊಲೀಸ್ ಠಾಣೆ. ಎಂ.ರಾಜೇಂದ್ರ, ಹೆಡ್ ಕಾನ್‌ಸ್ಟೆಬಲ್, ಜಾಲಹಳ್ಳಿ ಸಂಚಾರ ಪೊಲೀಸ್ ಠಾಣೆ.

ದಕ್ಷಿಣ ವಿಭಾಗ: ಸಿ.ಕೆ.ಸುರೇಶ್, ಹೆಡ್ ಕಾನ್‌ಸ್ಟೆಬಲ್, ಎಚ್‌ಎಸ್‌ಆರ್ ಲೇಔಟ್ ಸಂಚಾರ ಪೊಲೀಸ್ ಠಾಣೆ. ಎಲ್. ಟಿ.ಸಲೀಂ, ಹೆಡ್ ಕಾನ್‌ಸ್ಟೆಬಲ್, ಹುಳಿಮಾವು ಸಂಚಾರ ಪೊಲೀಸ್ ಠಾಣೆ. ಶರಣಬಸವ, ಹೆಡ್ ಕಾನ್‌ಸ್ಟೆಬಲ್, ವಿವಿ ಪುರಂ ಸಂಚಾರ ಪೊಲೀಸ್ ಠಾಣೆ.

ಕವಾಯತು ವೇಳೆ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಗೌರವ ವಂದನೆ ಸ್ವೀಕರಿಸಿದರು. ಪಶ್ಚಿಮ ವಿಭಾಗದ ಡಿಸಿಪಿ ಎಸ್. ಗಿರೀಶ್ ನೇತೃತ್ವದಲ್ಲಿ ನಡೆದ ಕವಾಯತಿನಲ್ಲಿ ವಿವಿಧ ಘಟಕಗಳ 10 ತುಕಡಿಗಳು ಪಾಲ್ಗೊಂಡಿದ್ದವು.

'ದುರುದ್ದೇಶದ ಹೋರಾಟ'

ರಾಮನಗರ (ಮಾಗಡಿ): 'ಶ್ರೀಕಾಂತ ಪೂಜಾರಿ 16 ಪ್ರಕರಣಗಳಲ್ಲಿ ಭಾಗಿಯಾಗಿದ್ದು, ಆ ಬಗ್ಗೆ ದಾಖಲೆ ಇದೆ. ಕೆಲ ಪ್ರಕರಣಗಳಲ್ಲಿ ಖುಲಾಸೆಯಾಗಿದ್ದಾನೆ. ಅಂತಹ ವ್ಯಕ್ತಿಗಾಗಿ ನೀವು ಹೋರಾಟ ಮಾಡುತ್ತಿದ್ದೀರಿ. ಅವನೊಬ್ಬನೇ ಹಿಂದೂನಾ? ಬೇರೆ ಹಿಂದೂಗಳೂ ಇದ್ದಾರೆ. ಅವರು ನಿಮ್ಮ ಕಣ್ಣಿಗೆ ಕಾಣುತ್ತಿಲ್ಲವೇ? ಪೂಜಾರಿ ಪರವಾಗಿ ನಡೆಯುತ್ತಿರುವ ಹೋರಾಟದ ಹಿಂದೆ ರಾಜಕೀಯ ದುರುದ್ದೇಶವಿದೆ' ಎಂದು ಬಿಜೆಪಿ ವಿರುದ್ಧ ಗೃಹ ಸಚಿವ ಜಿ.ಪರಮೇಶ್ವರ ವಾಗ್ದಾಳಿ ನಡೆಸಿದರು.

ಪಟ್ಟಣದಲ್ಲಿ ಶುಕ್ರವಾರ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಅನಾವರಣ ಹಾಗೂ ಅಂಬೇಡ್ಕರ್ ಹಬ್ಬ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

'ನಾವು ರಾಮಭಕ್ತರು. ನಮ್ಮನ್ನೂ ಬಂಧನ ಮಾಡಿ ಎನ್ನುತ್ತಿರುವ ಬಿಜೆಪಿ ನಾಯಕರ ಮೇಲೆ ಕೇಸ್ ಇದ್ದರೆ ಪೊಲೀಸರು ಅವರ ವಿರುದ್ಧವೂ ಕ್ರಮ ತೆಗೆದುಕೊಳ್ಳುತ್ತಾರೆ. ಅವರನ್ನೇನು ಬಿಟ್ಟು ಬಿಡೋದಿಲ್ಲ. ದೇಶದಲ್ಲಿ ಕಾನೂನು ಎಲ್ಲರಿಗೂ ಒಂದೇ. ಆರ್.ಅಶೋಕ ಅವರಿಗೂ ಒಂದೇ ಕಾನೂನು, ಪರಮೇಶ್ವರಗೂ ಒಂದೇ ಕಾನೂನು. ತಪ್ಪಿತಸ್ಥರ ವಿರುದ್ಧ ಕ್ರಮ ಜರುಗುತ್ತದೆ' ಎಂದರು.

22 ಬಾರಿ 'ಗ್ರೀನ್ ಕಾರಿಡಾರ್' ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುರ್ತು ಚಿಕಿತ್ಸೆಗೆ ಅವಶ್ಯವಿದ್ದ ರೋಗಿಗಳಿಗೆ ಅಂಗಾಂಗ ಜೋಡಣೆಗಾಗಿ ಅತ್ಯಂತ ಕಡಿಮೆ ಅವಧಿಯಲ್ಲಿ ಹೃದಯ ಸೇರಿದಂತೆ ವಿವಿಧ ಅಂಗಾಗಳನ್ನು ಸಾಗಿಸಲು ನಗರ ಸಂಚಾರ ವಿಭಾಗದ ಪೊಲೀಸರು, ಕಳೆದ ವರ್ಷ 22 ಬಾರಿ 'ಗ್ರೀನ್ ಕಾರಿಡಾರ್' ವ್ಯವಸ್ಥೆ ಕಲ್ಪಿಸಿದ್ದರು.

ಜಂಕ್ಷನ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಹಾಗೂ ಸಿಬ್ಬಂದಿ ಪ್ರತಿದಿನ ಸುಮಾರು 500ಕ್ಕೂ ಹೆಚ್ಚು ಆಂಬುಲೆನ್ಸ್‌ಗಳಿಗೆ ಆದ್ಯತೆ ಮೇರೆಗೆ ಸುಗಮ ಸಂಚಾರ ವ್ಯವಸ್ಥೆ ಮಾಡಿದ್ದಾರೆ ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.


ಗ್ರೀನ್ ಕಾರಿಡಾರ್ ಮೂಲಕ ಕರುಳು, ಹೃದಯ ಸೇರಿದಂತೆ ವಿವಿಧ ಅಂಗಾಂಗಳನ್ನು ರವಾನೆ ಮಾಡಲಾಗಿದೆ. ಬೇರೆ ಬೇರೆ ಆಸ್ಪತ್ರೆಗಳಿಂದ ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದ ಆಸ್ಪತ್ರೆಗೆ 11 ಕಿ.ಮೀ.ನಿಂದ 40 ಕಿ.ಮೀ. ವರೆಗೆ ಅಂಗಾಂಗ ಕೊಂಡೊಯ್ಯಲಾಗಿದೆ. 15ರಿಂದ 40 ನಿಮಿಷದ ಒಳಗೆ ಆಸ್ಪತ್ರೆಗೆ ಅಂಗಾಂಗ ತಲುಪಿಸಲು ಸಂಚಾರ ವಿಭಾಗದಿಂದ ವ್ಯವಸ್ಥೆ ಮಾಡಲಾಗಿತ್ತು ಎಂದು ಪೊಲೀಸರು ಹೇಳಿದರು.

ಕಳೆದ ವರ್ಷ ಜನವರಿ 12ರಂದು ಹೆಬ್ಬಾಳದ ಏಸ್ಟರ್ ಸಿಎಂ ಆಸ್ಪತ್ರೆಯಿಂದ ಓಲ್ಡ್ ಏರ್‌ಪೋರ್ಟ್ ರಸ್ತೆಯ ಮಣಿಪಾಲ ಆಸ್ಪತ್ರೆಗೆ (11 ಕಿ.ಮೀ. ದೂರ) 19 ನಿಮಿಷದಲ್ಲಿ ಕರುಳು ತಲುಪಿಸಲಾಗಿತ್ತು. ಮೇ 26ರಂದು ಕೆಂಪೇಗೌಡ ವಿಮಾನ ನಿಲ್ದಾಣದಿಂದ ಏರ್‌ಪೋರ್ಟ್ ರಸ್ತೆಯಲ್ಲಿರುವ ಮಣಿಪಾಲ ಆಸ್ಪತ್ರೆಗೆ ಹೃದಯವನ್ನು (40 ಕಿ.ಮೀ) 35 ನಿಮಿಷದಲ್ಲಿ ತಲುಪಿಸಲಾಗಿತ್ತು. ಬೇರೆ ಬೇರೆ ಜಿಲ್ಲೆಗಳಿಂದ ಹೆಲಿಕಾಪ್ಟರ್ ಮೂಲಕ ತರಲಾದ ಅಂಗಾಂಗಳನ್ನು ಅತ್ಯಂತ ಕಡಿಮೆ ಅವಧಿಗೆ ಗ್ರೀನ್ ಕಾರಿಡಾರ್ ಮೂಲಕ ತಲುಪಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಖಾತೆ ಬದಲಾವಣೆಗೆ ₹80 ಸಾವಿರ ಲಂಚ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ


ಬಾಲಕೃಷ್ಣ


ಸೋಮಶೇಖರ್

ಬೆಂಗಳೂರು: ಖಾತೆ ಬದಲಾವಣೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ವಿಲೇವಾರಿ ಮಾಡಲು ₹ 80,000 ಲಂಚ ಪಡೆಯುತ್ತಿದ್ದ ಬೆಂಗಳೂರು ದಕ್ಷಿಣ ಉಪ ವಿಭಾಗಾಧಿಕಾರಿ ಕಚೇರಿಯ ದ್ವಿತೀಯ ದರ್ಜೆ ಸಹಾಯಕ ಬಾಲಕೃಷ್ಣ ಮತ್ತು ಮಧ್ಯವರ್ತಿ ಸೋಮಶೇಖರ್ ಎಂಬುವವರನ್ನು ಲೋಕಾಯುಕ್ತ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಮೋಹನಕುಮಾರಿ ಎಂಬವರ ಹೆಸರಿನಲ್ಲಿದ್ದ ಜಮೀನಿನ ಖಾತೆಯನ್ನು ಅವರ ಮಗಳು ನಿಸರ್ಗ ಎಂಬವರ ಹೆಸರಿಗೆ ಬದಲಾವಣೆ ಮಾಡಲು ಉಪ ವಿಭಾಗಾಧಿಕಾರಿ ಕಚೇರಿಗೆ ಅರ್ಜಿ ಸಲ್ಲಿಸಲಾಗಿತ್ತು. ಪ್ರಕ್ರಿಯೆ ಪೂರ್ಣಗೊಳಿಸಲು ₹1.20 ಲಕ್ಷ ಲಂಚ ನೀಡುವಂತೆ ಬಾಲಕೃಷ್ಣ ಬೇಡಿಕೆ ಇಟ್ಟಿದ್ದರು. ಚೌಕಾಸಿ ನಡೆಸಿದಾಗ ₹ 80,000 ಕೊಡುವಂತೆ ಸೂಚಿಸಿದ್ದರು.

ಈ ಕುರಿತು ಬ್ಯಾಟರಾಜ ಅವರು ಲೋಕಾಯಕ್ತದ ಬೆಂಗಳೂರು ನಗರ ಪೊಲೀಸ್ ಘಟಕಕ್ಕೆ ದೂರು ಸಲ್ಲಿಸಿದ್ದರು.

ಬಾಲಕೃಷ್ಣ ಅವರ ಸೂಚನೆಯಂತೆ ದೂರುದಾರರು ಲಂಚದ ಹಣದೊಂದಿಗೆ ಬೆಂಗಳೂರು ದಕ್ಷಿಣ ಉಪ ವಿಭಾಗಾಧಿಕಾರಿ ಕಚೇರಿಗೆ ಶುಕ್ರವಾರ ಸಂಜೆ ಹೋಗಿದ್ದರು. ಮಧ್ಯವರ್ತಿ ಸೋಮಶೇಖರ್‌ಗೆ ಹಣ ತಲುಪಿಸುವಂತೆ ಮೊದಲನೇ ಆರೋಪಿ ಸೂಚಿಸಿದರು.

ಕಚೇರಿಯ ಸಮೀಪದಲ್ಲೇ ಮಧ್ಯವರ್ತಿ ಲಂಚದ ಹಣ ಪಡೆದುಕೊಂಡರು. ತಕ್ಷಣ ದಾಳಿಮಾಡಿದ ಲೋಕಾಯುಕ್ತ ಪೊಲೀಸರು ಇಬ್ಬರನ್ನೂ ಬಂಧಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಕಡತವನ್ನೂ ತನಿಖಾ ತಂಡ ವಶಕ್ಕೆ ಪಡೆದಿದೆ. ಲೋಕಾಯುಕ್ತದ ಬೆಂಗಳೂರು ನಗರ ಎಸ್‌ಪಿ–1 ಶ್ರೀನಾಥ್ ಜೋಶಿ ನೇತೃತ್ವದಲ್ಲಿ ಈ ಕಾರ್ಯಾಚರಣೆ ನಡೆದಿದೆ.

ಮಾಲ್ ಆಫ್ ಏಷ್ಯಾ: ಆದೇಶ ವಿಸ್ತರಣೆ

ಬೆಂಗಳೂರು: ಮಾಲ್ ಆಫ್ ಏಷ್ಯಾ ದಲ್ಲಿ ವಾಹನ ನಿಲುಗಡೆ ಕುರಿತಂತೆ ಎದುರಾಗಿದ್ದ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕೈಗೊಳ್ಳಲಾಗಿರುವ ಕ್ರಮಗಳ ಬಗ್ಗೆ ಹೈಕೋರ್ಟ್‌ಗೆ ಮಾಹಿತಿ ನೀಡಲಾಯಿತು.

2023ರ ಡಿಸೆಂಬರ್ 31ರಿಂದ 2024ರ ಜನವರಿ 15ರವರೆಗೆ ಸಾರ್ವಜನಿಕರಿಗೆ ಪ್ರವೇಶ ನಿರ್ಬಂಧಿಸಿ ನಗರ ಪೊಲೀಸ್ ಆಯುಕ್ತರು ಹೊರಡಿಸಿದ್ದ ಆದೇಶ ಪ್ರಶ್ನಿಸಿ ಸ್ಪಾರ್ಕಲ್ ಒನ್ ಮಾಲ್ ಡೆವಲಪರ್ಸ್ ಪ್ರೈವೆಟ್ ಲಿಮಿಟೆಡ್ ಕಂಪನಿ ಸಲ್ಲಿಸಿರುವ ಅರ್ಜಿಯನ್ನು ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ದ್ವಿಚಕ್ರ ವಾಹನಗಳ ಪ್ರವೇಶ ಶುಲ್ಕ ಕಡಿತಗೊಳಿಸಲು ಸೂಚಿಸ ಲಾಗಿದೆ. ಕ್ಯಾಬ್, ಆಟೊ ರಿಕ್ಷಾಗಳ ಪಿಕ್ ಅಪ್, ಡ್ರಾಪ್ ಪಾಯಿಂಟ್ ಬದ ಲಾವಣೆ ಮಾಡಲಾಗಿದೆ. ಮಾಲ್‌ನ ಉದ್ಯೋಗಿಗಳ ವಾಹನ ಪಾರ್ಕಿಂಗ್‌ಗೆ ರಿಯಾಯಿತಿ ದರದ ಪಾಸ್ ವ್ಯವಸ್ಥೆ ಮಾಡಲಾಗಿದೆ. ವಾಹನಗಳ ಭದ್ರತಾ ಚೆಕಿಂಗ್ ಪಾಯಿಂಟ್ ಬದಲಾವಣೆ ಮಾಡಿ ಪ್ರೀಪೇಯ್ಡ್ ಆಟೊ ರಿಕ್ಷಾ ನಿಲ್ದಾಣ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದರು. ಇದನ್ನು ಆಲಿಸಿದ ನ್ಯಾಯಪೀಠ, ಪರಿಹಾರ ಕ್ರಮಗಳ ಜಾರಿ ಬಗ್ಗೆ ಜ.30ಕ್ಕೆ ವಿವರವಾದ ವರದಿ ಸಲ್ಲಿಸು ವಂತೆ ಸೂಚಿಸಿ ವಿಚಾರಣೆ ಮುಂದೂಡಿತು. ಅಲ್ಲಿಯವರೆಗೂ ಮಾಲ್‌ಆಫ್‌ಏಷ್ಯಾ ವಿರುದ್ಧ ಬಲವಂತದ ಕ್ರಮ ಜರುಗಿಸದಂತೆ ನಗರ ಪೊಲೀಸ್ ಆಯುಕ್ತರಿಗೆ ನೀಡಿದ್ದ ನಿರ್ದೇಶನವನ್ನು ವಿಸ್ತರಿಸಿ ಆದೇಶಿಸಿತು.



ಮಾಜಿ ಸಚಿವ ವಿ. ಸೋಮಣ್ಣ ಅವರು ಶುಕ್ರವಾರ ಜೆಡಿಎಸ್ ವರಿಷ್ಠ ಎಚ್‌ಡಿ. ದೇವೇಗೌಡ ಮತ್ತು ರಾಜ್ಯ ಘಟಕದ ಅಧ್ಯಕ್ಷ ಎಚ್‌ಡಿ. ಕುಮಾರಸ್ವಾಮಿ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ಬಲವಂತದ ಕ್ರಮ ಬೇಡ: ಆದೇಶ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂದಿನ ವಿಚಾರಣೆವರೆಗೂ ಯಾವುದೇ ಬಲವಂತದ ಕ್ರಮಕ್ಕೆ ಮುಂದಾಗದಂತೆ ಸಿಬಿಐಗೆ ನೀಡಿದ್ದ ನಿರ್ದೇಶನವನ್ನು ಹೈಕೋರ್ಟ್ ವಿಸ್ತರಿಸಿ ಆದೇಶಿಸಿದೆ.

ವಿಚಾರಣಾ ನ್ಯಾಯಾಲಯದಲ್ಲಿನ ನ್ಯಾಯ ಪ್ರಕ್ರಿಯೆಯನ್ನು ರದ್ದುಗೊಳಿಸ ಬೇಕು' ಎಂದು ಕೋರಿ ಶಾಸಕ ವಿನಯ ಕುಲಕರ್ಣಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ಜನ ಪ್ರತಿನಿಧಿಗಳ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರು ಶುಕ್ರವಾರ ವಿಚಾರಣೆ ನಡೆಸಿದರು.



ವಿನಯ ಕುಲಕರ್ಣಿ

ವಿಚಾರಣೆ ವೇಳೆ ವಿನಯ ಕುಲಕರ್ಣಿ ಪರ ಹಾಜರಾಗಿದ್ದ ವಕೀಲ ಸಿ.ಎಚ್.ಹನುಮಂತರಾಯ ಅವರು, 'ಈ ಪ್ರಕರಣದ ನ್ಯಾಯಿಕ ವಿಚಾರಣೆಯಲ್ಲಿ ಸಿಬಿಐ ಪರವಾದ ವಿಶೇಷ ಪ್ರಾಸಿಕ್ಯೂಟರ್ ಆಗಿ ಹಾಜರಾಗಲು ಗಂಗಾಧರ ಶೆಟ್ಟಿ ಅವರನ್ನು ನೇಮಕ ಮಾಡಲಾಗಿದೆ' ಎಂದು ತಿಳಿಸಿದರು. ಅಂತೆಯೇ, ಈ ಸಂಬಂಧ ಸರ್ಕಾರ ಹೊರಡಿಸಿರುವ ಅಧಿಸೂಚನೆಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು. ಸಿಬಿಐ ಪರ ಹಾಜರಿದ್ದ ವಕೀಲ ಪಿ.ಪ್ರಸನ್ನ ಕುಮಾರ್, 'ನನಗೆ ಈ ವಿಷಯ ಈಗಲೇ ತಿಳಿದದ್ದು. ಹಾಗಾಗಿ, ಗಂಗಾಧರ ಶೆಟ್ಟಿ ಅವರನ್ನು ವಿಶೇಷ ಪ್ರಾಸಿಕ್ಯೂಟರ್ ಆಗಿ ನೇಮಕ ಮಾಡಿರುವ ಬಗ್ಗೆ ಸ್ಪಷ್ಟನೆ ಪಡೆಯಲು ಮತ್ತು ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ವಿಚಾರಣೆಯನ್ನು ಮುಂದೂಡಿತು.

ವೈಟ್‌ಟಾಪಿಂಗ್ ಯೋಜನೆ ₹800 ಕೋಟಿ ವೆಚ್ಚಕ್ಕೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ₹800 ಕೋಟಿ ವೆಚ್ಚದಲ್ಲಿ ರಸ್ತೆಗಳ ವೈಟ್‌ಟಾಪಿಂಗ್ ಕ್ರಿಯಾಯೋಜನೆಗೆ ಸಚಿವ ಸಂಪುಟ ಶುಕ್ರವಾರ ಅನುಮೋದನೆ ನೀಡಿದೆ.

ನಗರದ ರಸ್ತೆಗಳಲ್ಲಿ ಪದೇಪದೇ ದುರಸ್ತಿ ಮರುಕಳಿಸದಂತೆ ಯೋಜನೆ ರೂಪಿಸಲಾಗಿದ್ದು, ಮುಖ್ಯರಸ್ತೆ ಮತ್ತು ಉಪ ಮುಖ್ಯರಸ್ತೆಗಳಲ್ಲಿ ವೈಟ್‌ಟಾಪಿಂಗ್ ಮಾಡುವ 43 ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ ಎಂದು ಸಚಿವ ಎಚ್‌.ಕೆ. ಪಾಟೀಲ್ ಮಾಹಿತಿ ನೀಡಿದರು. ಒಟ್ಟು 1,345 ಕಿ.ಮೀ ಉದ್ದದ ಮುಖ್ಯರಸ್ತೆ ಮತ್ತು ಉಪ ಮುಖ್ಯ ರಸ್ತೆಗಳಲ್ಲಿದ್ದು, ಇದರಲ್ಲಿ 145 ಕಿ.ಮೀ ರಸ್ತೆಯನ್ನು ಈಗಾಗಲೇ ವೈಟ್‌ಟಾಪಿಂಗ್ ಮಾಡಲಾಗಿದೆ ಎಂದರು.

8	ಎಲ್.ಟಿ–7	ಜಾಹೀರಾತು ಫಲಕಗಳ ಖಾಯಂವಿದ್ಯುತ್ ಸರಬರಾಜು ಮತ್ತು ತಾತ್ಕಾಲಿಕ ವಿದ್ಯುತ್ ಸರಬರಾಜು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ: ಮಂಜೂರಾದ ವಿದ್ಯುತ್ ಪ್ರಮಾಣದ ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ	200	ಎಲ್.ಟಿ–7	ಜಾಹೀರಾತು ಫಲಕಗಳ ಖಾಯಂವಿದ್ಯುತ್ ಸರಬರಾಜು ಮತ್ತು ತಾತ್ಕಾಲಿಕ ವಿದ್ಯುತ್ ಸರಬರಾಜು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ: ಮಂಜೂರಾದ ವಿದ್ಯುತ್ ಪ್ರಮಾಣದ ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ	200.00
			ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	11.50			ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	11.99
	ಹೆಚ್.ಟಿ.ಸರಬರಾಜು – 11ಕೆವಿ ಮತ್ತು ಅದಕ್ಕೂ ಮೇಲ್ಪಟ್ಟು				ಹೆಚ್.ಟಿ.ಸರಬರಾಜು – 11ಕೆವಿ ಮತ್ತು ಅದಕ್ಕೂ ಮೇಲ್ಪಟ್ಟು			
9	ಹೆಚ್.ಟಿ–1	ಸಾರ್ವಜನಿಕ ನೀರು ಸರಬರಾಜು, ಒಳಚರಂಡಿ ಮತ್ತು ಮಲಿನ ನೀರು ಶುದ್ಧೀಕರಣ ಹಾಗೂ ಪಂಪ್ ಮಾಡುವ ಸ್ಥಾಪನಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡ್‌ನ ಪ್ರತಿ ಕೆ.ವಿ.ಎ.ಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	350	ಹೆಚ್.ಟಿ–1	ಸಾರ್ವಜನಿಕ ನೀರು ಸರಬರಾಜು, ಒಳಚರಂಡಿ ಮತ್ತು ಮಲಿನ ನೀರು ಶುದ್ಧೀಕರಣ ಹಾಗೂ ಪಂಪ್ ಮಾಡುವ ಸ್ಥಾಪನಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡ್‌ನ ಪ್ರತಿ ಕೆ.ವಿ.ಎ.ಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	350
			ಮತ್ತು				ಮತ್ತು	
			ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	6.00			ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	6.49
		ಸಮಯಾಧಾರಿತ ವಿದ್ಯುತ್ ದರ (ಐಚ್ಛಿಕ)–ಹೆಚ್.ಟಿ–1 ಗೆ ಅನ್ವಯಿಸುತ್ತದೆ				ಸಮಯಾಧಾರಿತ ವಿದ್ಯುತ್ ದರ (ಐಚ್ಛಿಕ)–ಹೆಚ್.ಟಿ–1 ಗೆ ಅನ್ವಯಿಸುತ್ತದೆ		
		ಅನ್ವಯವಾಗುವ ಸಾಮಾನ್ಯ ಸುಂಕಕ್ಕಿಂತ ದಿನದ ಸಮಯ ಹೆಚ್ಚಳ (+)/ಕಡಿತ(–)				ಅನ್ವಯವಾಗುವ ಸಾಮಾನ್ಯ ಸುಂಕಕ್ಕಿಂತ ದಿನದ ಸಮಯ ಹೆಚ್ಚಳ (+)/ಕಡಿತ(–)		
		ಸಮಯಾಧಾರಿತ ಅವಧಿ	ಜುಲೈ–ನವೆಂಬರ್(ಪೈಸೆ/ಯುನಿಟ್)	ಡಿಸೆಂಬರ್–ಜೂನ್ (ಪೈಸೆ/ಯುನಿಟ್)		ಸಮಯಾಧಾರಿತ ಅವಧಿ	ಜುಲೈ–ನವೆಂಬರ್(ಪೈಸೆ/ಯುನಿಟ್)	ಡಿಸೆಂಬರ್–ಜೂನ್ (ಪೈಸೆ/ಯುನಿಟ್)
		06.00 ರಿಂದ 10.00 ರವರೆಗೆ	0.00	0.00		06.00 ರಿಂದ 10.00 ರವರೆಗೆ	0.00	0.00
		10.00 ರಿಂದ 18.00 ರವರೆಗೆ	0.00	0.00		10.00 ರಿಂದ 18.00 ರವರೆಗೆ	0.00	0.00
		18.00 ರಿಂದ 22.00 ರವರೆಗೆ	0.00	(+)100		18.00 ರಿಂದ 22.00 ರವರೆಗೆ	0.00	(+)100
		22.00 ರಿಂದ 06.00 ರವರೆಗೆ	0.00	(–)100		22.00 ರಿಂದ 06.00 ರವರೆಗೆ	0.00	(–)100
10	ಹೆಚ್.ಟಿ–2(ಎ)	ಕೈಗಾರಿಕೆ, ಕೈಗಾರಿಕೇತರ, ವಾಣಿಜ್ಯೇತರ ಉದ್ದೇಶ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	350	ಹೆಚ್.ಟಿ–2(ಎ)	ಕೈಗಾರಿಕೆ, ಕೈಗಾರಿಕೇತರ, ವಾಣಿಜ್ಯೇತರ ಉದ್ದೇಶ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	365
			ಮತ್ತು				ಮತ್ತು	
			ವಿದ್ಯುತ್ ಬಳಕೆ ಶುಲ್ಕ :				ವಿದ್ಯುತ್ ಬಳಕೆ ಶುಲ್ಕ :	
			ಸಂಪೂರ್ಣ ಬಳಕೆಗಾಗಿ	7.40			ಸಂಪೂರ್ಣ ಬಳಕೆಗಾಗಿ	7.79
		ರೈಲ್ವೆ ಕರ್ಷಣ ಸ್ಥಾವರಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	350		ರೈಲ್ವೆ ಕರ್ಷಣ ಸ್ಥಾವರಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ: ಪ್ರತಿ ಸ್ಥಾಪನಕ್ಕೆ, ಪ್ರತಿ ತಿಂಗಳಿಗೆ ಮಂಜೂರಾದ ವಿದ್ಯುತ್‌ನ ಮೊದಲ ಒಂದು ಕಿ.ವಾಟ್‌ಗೆ	350
			ವಿದ್ಯುತ್ ಬಳಕೆ ಶುಲ್ಕ :ಸಂಪೂರ್ಣ ಬಳಕೆಗಾಗಿ	7.00			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	7.00
		ಮಲಿನ ನೀರು ಶುದ್ಧೀಕರಣ ಸ್ಥಾವರಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	350		ಮಲಿನ ನೀರು ಶುದ್ಧೀಕರಣ ಸ್ಥಾವರಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ: ಪ್ರತಿ ಸ್ಥಾಪನಕ್ಕೆ, ಪ್ರತಿ ತಿಂಗಳಿಗೆ ಮಂಜೂರಾದ ವಿದ್ಯುತ್‌ನ ಮೊದಲ ಒಂದು ಕಿ.ವಾಟ್‌ಗೆ	350
			ವಿದ್ಯುತ್ ಬಳಕೆ ಶುಲ್ಕ :ಸಂಪೂರ್ಣ ಬಳಕೆಗಾಗಿ	7.00			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	7.00
		ಬೆಂಗಳೂರು ಮೆಟ್ರೋ ಸ್ಥಾವರಗಳು	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	300		ಬೆಂಗಳೂರು ಮೆಟ್ರೋ ಸ್ಥಾವರಗಳು	ನಿಗದಿತ ಶುಲ್ಕ: ಪ್ರತಿ ಸ್ಥಾಪನಕ್ಕೆ, ಪ್ರತಿ ತಿಂಗಳಿಗೆ ಮಂಜೂರಾದ ವಿದ್ಯುತ್‌ನ ಮೊದಲ ಒಂದು ಕಿ.ವಾಟ್‌ಗೆ	300
			ಮತ್ತು				ಮತ್ತು	
			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	5.25			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	5.25
11	ಹೆಚ್.ಟಿ–2(ಬಿ):	ವಾಣಿಜ್ಯ ಸ್ಥಾಪನಗಳು, ಹೋಟೆಲ್‌ಗಳು, ಬ್ಯಾಂಕುಗಳು, ಮಾಹಿತಿ ತಂತ್ರಜ್ಞಾನ ಸೇವಾ ಸಂಸ್ಥೆಗಳು, ಪೆಟ್ರೋಲ್/ ಡೀಸೆಲ್ ಶೇಖರಣ ಸ್ಥಾವರಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	375	ಹೆಚ್.ಟಿ–2(ಬಿ):	ವಾಣಿಜ್ಯ ಸ್ಥಾಪನಗಳು, ಹೋಟೆಲ್‌ಗಳು, ಬ್ಯಾಂಕುಗಳು, ಮಾಹಿತಿ ತಂತ್ರಜ್ಞಾನ ಸೇವಾ ಸಂಸ್ಥೆಗಳು, ಪೆಟ್ರೋಲ್/ ಡೀಸೆಲ್ ಶೇಖರಣ ಸ್ಥಾವರಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ: ಪ್ರತಿ ಸ್ಥಾಪನಕ್ಕೆ, ಪ್ರತಿ ತಿಂಗಳಿಗೆ ಮಂಜೂರಾದ ವಿದ್ಯುತ್‌ನ ಮೊದಲ ಒಂದು ಕಿ.ವಾಟ್‌ಗೆ	385
			ಮತ್ತು				ಮತ್ತು	
			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	9.25			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	9.62
12	ಹೆಚ್.ಟಿ–2(ಸಿ)	ಹೆಚ್.ಟಿ–2(ಸಿ)(i): ಸರ್ಕಾರಿ ಆಸ್ಪತ್ರೆಗಳು, ಇಎಸ್ಐ, ವಿಶ್ವ ವಿದ್ಯಾಲಯಗಳೂ, ರಾಜ್ಯ ಸರ್ಕಾರದ, ರಾಜ್ಯ ಸರ್ಕಾರದ ಧನ ಸಹಾಯದಿಂದ ನಡೆಯುವ ವಿದ್ಯಾ ಸಂಸ್ಥೆಗಳನ್ನು ಹೊರತುಪಡಿಸಿದ ಆಸ್ಪತ್ರೆಗಳು, ವಿಶ್ವ ವಿದ್ಯಾಲಯಗಳೂ, ವಿದ್ಯಾಸಂಸ್ಥೆಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	300	ಹೆಚ್.ಟಿ–2(ಸಿ)	ಹೆಚ್.ಟಿ–2(ಸಿ)(i): ಸರ್ಕಾರಿ ಆಸ್ಪತ್ರೆಗಳು, ಇಎಸ್ಐ, ವಿಶ್ವ ವಿದ್ಯಾಲಯಗಳೂ, ರಾಜ್ಯ ಸರ್ಕಾರದ, ರಾಜ್ಯ ಸರ್ಕಾರದ ಧನ ಸಹಾಯದಿಂದ ನಡೆಯುವ ವಿದ್ಯಾ ಸಂಸ್ಥೆಗಳನ್ನು ಹೊರತುಪಡಿಸಿದ ಆಸ್ಪತ್ರೆಗಳು, ವಿಶ್ವ ವಿದ್ಯಾಲಯಗಳೂ, ವಿದ್ಯಾಸಂಸ್ಥೆಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	310
			ಮತ್ತು				ಮತ್ತು	
			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	7.50			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	7.93
		ಹೆಚ್.ಟಿ–2(ಸಿ) (ii): ಹೆಚ್.ಟಿ–2(ಸಿ) (1) ನ್ನು ಹೊರತುಪಡಿಸಿದ ಆಸ್ಪತ್ರೆಗಳು, ವಿಶ್ವ ವಿದ್ಯಾಲಯಗಳೂ, ವಿದ್ಯಾ ಸಂಸ್ಥೆಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	350		ಹೆಚ್.ಟಿ–2(ಸಿ) (ii): ಹೆಚ್.ಟಿ–2(ಸಿ) (1) ನ್ನು ಹೊರತುಪಡಿಸಿದ ಆಸ್ಪತ್ರೆಗಳು, ವಿಶ್ವ ವಿದ್ಯಾಲಯಗಳೂ, ವಿದ್ಯಾ ಸಂಸ್ಥೆಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	360
			ಮತ್ತು				ಮತ್ತು	
			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	8.50			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	8.92
		ಸಮಯಾಧಾರಿತ ವಿದ್ಯುತ್ ದರ (ಐಚ್ಛಿಕ)–) ಹೆಚ್.ಟಿ–2(ಎ), ಹೆಚ್.ಟಿ–2(ಬಿ), ಹೆಚ್.ಟಿ–2(ಸಿ)(i) ಮತ್ತು ಹೆಚ್.ಟಿ–2(ಸಿ)(ii) ಗೆ ಅನ್ವಯಿಸುತ್ತದೆ				ಸಮಯಾಧಾರಿತ ವಿದ್ಯುತ್ ದರ (ಐಚ್ಛಿಕ)–) ಹೆಚ್.ಟಿ–2(ಎ), ಹೆಚ್.ಟಿ–2(ಬಿ), ಹೆಚ್.ಟಿ–2(ಸಿ)(i) ಮತ್ತು ಹೆಚ್.ಟಿ–2(ಸಿ)(ii) ಗೆ ಅನ್ವಯಿಸುತ್ತದೆ		
		ಅನ್ವಯವಾಗುವ ಸಾಮಾನ್ಯ ಸುಂಕಕ್ಕಿಂತ ದಿನದ ಸಮಯ ಹೆಚ್ಚಳ (+)/ಕಡಿತ(–)				ಅನ್ವಯವಾಗುವ ಸಾಮಾನ್ಯ ಸುಂಕಕ್ಕಿಂತ ದಿನದ ಸಮಯ ಹೆಚ್ಚಳ (+)/ಕಡಿತ(–)		
		ಸಮಯಾಧಾರಿತ ಅವಧಿ	ಜುಲೈ–ನವೆಂಬರ್(ಪೈಸೆ/ಯುನಿಟ್)	ಡಿಸೆಂಬರ್–ಜೂನ್ (ಪೈಸೆ/ಯುನಿಟ್)		ಸಮಯಾಧಾರಿತ ಅವಧಿ	ಜುಲೈ–ನವೆಂಬರ್(ಪೈಸೆ/ಯುನಿಟ್)	ಡಿಸೆಂಬರ್–ಜೂನ್ (ಪೈಸೆ/ಯುನಿಟ್)
		06.00 ರಿಂದ 10.00 ರವರೆಗೆ	0.00	0.00		06.00 ರಿಂದ 10.00 ರವರೆಗೆ	0.00	0.00
		10.00 ರಿಂದ 18.00 ರವರೆಗೆ	0.00	0.00		10.00 ರಿಂದ 18.00 ರವರೆಗೆ	0.00	0.00
		18.00 ರಿಂದ 22.00 ರವರೆಗೆ	0.00	(+)100		18.00 ರಿಂದ 22.00 ರವರೆಗೆ	0.00	(+)100
		22.00 ರಿಂದ 06.00 ರವರೆಗೆ	0.00	(–)100		22.00 ರಿಂದ 06.00 ರವರೆಗೆ	0.00	(–)100
13	ಹೆಚ್.ಟಿ.3	ಖಾಸಗಿ ಏತ ನೀರಾವರಿ ಯೋಜನೆಗಳು ಹಾಗೂ ಏತ ನೀರಾವರಿ ಸಂಘಗಳಿಗೆ ಅನ್ವಯಿಸುತ್ತದೆ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ :ಮಂಜೂರಾದ ವಿದ್ಯುತ್‌ನ ಪ್ರತಿ ಹೆಚ್.ಪಿ ಗೆ, ಪ್ರತಿ ತಿಂಗಳಿಗೆ ರೂ.	150	ಹೆಚ್.ಟಿ.3	ಖಾಸಗಿ ಏತ ನೀರಾವರಿ ಯೋಜನೆಗಳು ಹಾಗೂ ಏತ ನೀರಾವರಿ ಸಂಘಗಳಿಗೆ ಅನ್ವಯಿಸುತ್ತದೆ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ :ಮಂಜೂರಾದ ವಿದ್ಯುತ್‌ನ ಪ್ರತಿ ಹೆಚ್.ಪಿ ಗೆ, ಪ್ರತಿ ತಿಂಗಳಿಗೆ ರೂ.	165
			ಮತ್ತು				ಮತ್ತು	
			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	3.50			ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	3.63
14	ಹೆಚ್.ಟಿ–4	ಸ್ವತಂತ್ರವಾಗಿ ವಿದ್ಯುತ್ ಪಡೆಯುತ್ತಿರುವ ನಿವಾಸಿ ಅಪಾರ್ಟ್‌ಮೆಂಟುಗಳು, ಕಾಲೋನಿಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಡಿಮ್ಯಾಂಡ್ ಶುಲ್ಕ: ಪ್ರತಿ ತಿಂಗಳಿಗೆ ಬಿಲ್ಲಿಂಗ್ ಡಿಮ್ಯಾಂಡಿನ, ಪ್ರತಿ ಹೆಚ್.ಪಿ ಗೆ		ಹೆಚ್.ಟಿ–4	ಸ್ವತಂತ್ರವಾಗಿ ವಿದ್ಯುತ್ ಪಡೆಯುತ್ತಿರುವ ನಿವಾಸಿ ಅಪಾರ್ಟ್‌ಮೆಂಟುಗಳು, ಕಾಲೋನಿಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಡಿಮ್ಯಾಂಡ್ ಶುಲ್ಕ: ಪ್ರತಿ ತಿಂಗಳಿಗೆ ಬಿಲ್ಲಿಂಗ್ ಡಿಮ್ಯಾಂಡಿನ, ಪ್ರತಿ ಹೆಚ್.ಪಿ ಗೆ	
			ಪ್ರತಿ ಕೆವಿಎಗೆ	300			ಪ್ರತಿ ಕೆವಿಎಗೆ	320
			ಮತ್ತು				ಮತ್ತು	
			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	7.25			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	7.63
15	ಹೆಚ್.ಟಿ–5	ತಾತ್ಕಾಲಿಕ ದೀಪ (67 ಹೆಚ್.ಪಿ ಗಿಂತ ಹೆಚ್ಚಿನ ಹೊರೆಯ ತಾತ್ಕಾಲಿಕ ಸ್ಥಾಪನಿಗಳಿಗೆ ಅನ್ವಯಿಸುತ್ತದೆ) (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಡಿಮ್ಯಾಂಡ್ ಶುಲ್ಕ: ಪ್ರತಿ ತಿಂಗಳಿಗೆ ಬಿಲ್ಲಿಂಗ್ ಡಿಮ್ಯಾಂಡಿನ, ಪ್ರತಿ ಹೆಚ್.ಪಿ ಗೆ	400	ಹೆಚ್.ಟಿ–5	ತಾತ್ಕಾಲಿಕ ದೀಪ (67 ಹೆಚ್.ಪಿ ಗಿಂತ ಹೆಚ್ಚಿನ ಹೊರೆಯ ತಾತ್ಕಾಲಿಕ ಸ್ಥಾಪನಿಗಳಿಗೆ ಅನ್ವಯಿಸುತ್ತದೆ) (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಡಿಮ್ಯಾಂಡ್ ಶುಲ್ಕ: ಪ್ರತಿ ತಿಂಗಳಿಗೆ ಬಿಲ್ಲಿಂಗ್ ಡಿಮ್ಯಾಂಡಿನ, ಪ್ರತಿ ಹೆಚ್.ಪಿ ಗೆ	415
			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	11.50			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	11.90
		ಬೆಂಗಳೂರು ಅಂತರಾಷ್ಟೀಯ ಪ್ರದರ್ಶನ ಕೇಂದ್ರ (67 ಹೆಚ್.ಪಿ ಗಿಂತ ಹೆಚ್ಚಿನ ಹೊರೆಯ ತಾತ್ಕಾಲಿಕ ಸ್ಥಾಪನಿಗಳಿಗೆ ಅನ್ವಯಿಸುತ್ತದೆ) (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ:	0.00		ಬೆಂಗಳೂರು ಅಂತರಾಷ್ಟೀಯ ಪ್ರದರ್ಶನ ಕೇಂದ್ರ (67 ಹೆಚ್.ಪಿ ಗಿಂತ ಹೆಚ್ಚಿನ ಹೊರೆಯ ತಾತ್ಕಾಲಿಕ ಸ್ಥಾಪನಿಗಳಿಗೆ ಅನ್ವಯಿಸುತ್ತದೆ) (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ:	0.00
			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	13.00			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	13.00
16	ಹೆಚ್.ಟಿ–6	ನೀರಾವರಿ ಮತ್ತು ಕೃಷಿ ಫಾರ್ಮ್‌ಗಳು, ಸರ್ಕಾರಿ ತೋಟಗಾರಿಕಾ ಫಾರ್ಮ್‌ಗಳು, ಖಾಸಗಿ ತೋಟಗಾರಿಕಾ ನರ್ಸರಿಗಳು, ಕಾಫಿ ಟೀ, ರಬ್ಬರ್, ತೆಂಗು ಮತ್ತು ಅಡಿಕೆ ತೋಟಗಳಿಗೆ ಅನ್ವಯಿಸುತ್ತದೆ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಡಿಮ್ಯಾಂಡ್ ಶುಲ್ಕ: ಪ್ರತಿ ತಿಂಗಳಿಗೆ ಬಿಲ್ಲಿಂಗ್ ಡಿಮ್ಯಾಂಡಿನ, ಪ್ರತಿ ಹೆಚ್.ಪಿ ಗೆ	150.00	ಹೆಚ್.ಟಿ–6	ನೀರಾವರಿ ಮತ್ತು ಕೃಷಿ ಫಾರ್ಮ್‌ಗಳು, ಸರ್ಕಾರಿ ತೋಟಗಾರಿಕಾ ಫಾರ್ಮ್‌ಗಳು, ಖಾಸಗಿ ತೋಟಗಾರಿಕಾ ನರ್ಸರಿಗಳು, ಕಾಫಿ ಟೀ, ರಬ್ಬರ್, ತೆಂಗು ಮತ್ತು ಅಡಿಕೆ ತೋಟಗಳಿಗೆ ಅನ್ವಯಿಸುತ್ತದೆ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಡಿಮ್ಯಾಂಡ್ ಶುಲ್ಕ: ಪ್ರತಿ ತಿಂಗಳಿಗೆ ಬಿಲ್ಲಿಂಗ್ ಡಿಮ್ಯಾಂಡಿನ, ಪ್ರತಿ ಹೆಚ್.ಪಿ ಗೆ	165.00
			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	5.50			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	5.91

ಮೇಲಿನ ಶುಲ್ಕಗಳ ಜೊತೆಗೆ, ರಾಜ್ಯ ಸರ್ಕಾರವು ವಿಧಿಸಿದ/ವಿಧಿಸಬಹುದಾದ ತೆರಿಗೆಗಳು ಅನ್ವಯಿಸುತ್ತವೆ.

ಸಿದ್ಧ ಮಾಹಿತಿ
ಅನುಬಂಧ–2

ಪ್ರವರ್ಗ	ಸ್ಥಾಪನದ ಮಾದರಿ	ಮಾಸಿಕ ಬಳಕೆ ಮಟ್ಟ (ಕೆ.ಡಬ್ಲ್ಯೂ.ಎಚ್) (ಯೂನಿಟ್)	ಹಾಲಿ ವಿದ್ಯುತ್ ದರದ ಪ್ರಕಾರ ಮಾಸಿಕ ಬಿಲ್(ರೂ.)	ಪ್ರಸ್ತಾಪಿತ ವಿದ್ಯುತ್ ದರದ ಪ್ರಕಾರ ಮಾಸಿಕ ಬಿಲ್ (ರೂ.)	ತೆರಿಗೆ ಹೊರತುಪಡಿಸಿ ಶೇ. ಹೆಚ್ಚಳ
ಎಲ್.ಟಿ–1	ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ (ರಾಜ್ಯ ಸರ್ಕಾರದ ಸಹಾಯ ಧನದಿಂದ ಭರಿಸಲಾಗುವುದು)				
	100 ವಾಟ್	20	192	197	2.60
		40	385	393	2.08
ಎಲ್.ಟಿ–2 ಎ	ಗೃಹ ಬಳಕೆ/ಎ.ಇ.ಎಚ್ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	1ಕಿ.ವಾಟ್ ವರೆಗೆ	50	348	372	6.90
		100	585	634	8.38
	3 ಕಿ.ವಾಟ್	200	1730	1828	5.66
		300	2430	2577	6.05
		400	3130	3326	6.26
ಎಲ್.ಟಿ–2 ಎ	ಗೃಹ ಬಳಕೆ/ಎ.ಇ.ಎಚ್ (ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿಯನ್ನು ಗ್ರಾಮ ಪಂಚಾಯತ್ ಪ್ರದೇಶಗಳ ಅಡಿಯಲ್ಲಿ ಬರುವ ಗ್ರಾಹಕರಿಗೆ)				
	1ಕಿ.ವಾಟ್ ವರೆಗೆ	50	333	357	7.21
		100	555	604	8.83
	3 ಕಿ.ವಾಟ್	200	1670	1768	5.87
		300	2340	2487	6.28
		400	3010	3206	6.51
ಎಲ್.ಟಿ–2 ಬಿ	ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಆಸ್ಪತ್ರೆಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	1ಕಿ.ವಾಟ್ ವರೆಗೆ	100	955	1004	5.13
	3 ಕಿ.ವಾಟ್	200	2090	2188	4.69
		300	2865	3012	5.13
		400	3640	3836	5.38
ಎಲ್.ಟಿ–2 ಬಿ	ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಆಸ್ಪತ್ರೆಗಳು (ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿಯನ್ನು ಗ್ರಾಮ ಪಂಚಾಯತ್ ಪ್ರದೇಶಗಳ ಅಡಿಯಲ್ಲಿ ಬರುವ ಗ್ರಾಹಕರಿಗೆ)				
	1ಕಿ.ವಾಟ್ ವರೆಗೆ	100	925	974	5.30
	3 ಕಿ.ವಾಟ್	200	2030	2128	4.83
		300	2775	2922	5.30
		400	3520	3716	5.57
ಎಲ್.ಟಿ–3ಎ	ವಾಣಿಜ್ಯ ದೀಪ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	1ಕಿ.ವಾಟ್ ವರೆಗೆ	50	625	650	4.00
		100	1050	1099	4.67
	5 ಕಿ.ವಾಟ್‌ಗೆ	100	1850	1899	2.65
		300	3550	3697	4.14
		500	5250	5495	4.67
	10 ಕಿ.ವಾಟ್‌ಗೆ	100	2850	2899	1.72
		300	4550	4697	3.23
		500	6250	6495	3.92
		1000	10500	10990	4.67
ಎಲ್.ಟಿ–3ಎ	ವಾಣಿಜ್ಯ ದೀಪ (ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿಯನ್ನು ಗ್ರಾಮ ಪಂಚಾಯತ್ ಪ್ರದೇಶಗಳ ಅಡಿಯಲ್ಲಿ ಬರುವ ಗ್ರಾಹಕರಿಗೆ)				
	1ಕಿ.ವಾಟ್ ವರೆಗೆ	50	610	635	4.10
		100	1020	1069	4.80
	5 ಕಿ.ವಾಟ್‌ಗೆ	100	1820	1869	2.69
		300	3460	3607	4.25
		500	5100	5345	4.80
	10 ಕಿ.ವಾಟ್‌ಗೆ	100	2820	2869	1.74
		300	4460	4607	3.30
		500	6100	6345	4.02
		1000	10200	10690	4.80
ಎಲ್.ಟಿ–4a	ನೀರಾವರಿ ಪಂಪುಸೆಟ್ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	10ಹೆಚ್.ಪಿ ವರೆಗಿನ	600	2856	3150	10.29
	(10ಹೆಚ್.ಪಿ ವರೆಗಿನ ನೀರಾವರಿ ಪಂಪುಸೆಟ್ ಗಳಿಗೆ ರಾಜ್ಯ ಸರ್ಕಾರದ ಸಹಾಯ ಧನದಿಂದ ಭರಿಸಲಾಗುವುದು)				
ಎಲ್.ಟಿ–4b	10 ಹೆಚ್.ಪಿ ಗಿಂತ ಹೆಚ್ಚಿನ ಸಾಮರ್ಥ್ಯ	375	3023	3206	6.05
ಎಲ್.ಟಿ–4c	10 ಹೆಚ್‌ಪಿ ವರೆಗಿನ	284	2557	2696	5.44

ಶಾಸಕರು, ಅಧಿಕಾರಿಗಳ ಹೆಸರಲ್ಲಿ ಹಣ ಕೇಳಿದರೆ ಕ್ರಮ: ಡಿ.ಕೆ. ಶಿವಕುಮಾರ್ ಎಚ್ಚರಿಕೆ

‘ಯಾರೇ ಲಂಚ ಕೇಳಿದರೆ ದೂರು ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಾರೇ ಲಂಚ ಕೇಳಿದರೂ ನಿರ್ದಾಕ್ಷಿಣ್ಯವಾಗಿ ದೂರು ನೀಡಿ. ನನ್ನ ಹೆಸರು, ಕೃಷ್ಣಬೈರೇಗೌಡ, ವಿಶ್ವನಾಥ್, ಪೊಲೀಸ್ ಅಧಿಕಾರಿಗಳು, ಕಂದಾಯ ಅಧಿಕಾರಿಗಳು ಸೇರಿದಂತೆ ಯಾರ ಹೆಸರಲ್ಲಿ ಹಣ ಕೇಳಿದರೂ ನಮ್ಮ ಗಮನಕ್ಕೆ ತನ್ನಿ.. ನಾವು ಮುಲಾಜಿಲ್ಲದೆ ಕ್ರಮ ಕೈಗೊಳ್ಳುತ್ತೇವೆ...’

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಮ್ಮ ಬಳಿ ದೂರು ನೀಡಲು ಬಂದ ಯಲಹಂಕ, ಬ್ಯಾಟರಾಯನಪುರ ಹಾಗೂ ದಾಸರಹಳ್ಳಿ ವಿಧಾನಸಭಾ ಕ್ಷೇತ್ರಗಳ ನಾಗರಿಕರಿಗೆ ಹೇಳಿದ ಮಾತುಗಳಿವು.

ಯಲಹಂಕದಲ್ಲಿ ಶುಕ್ರವಾರ ನಡೆದ ‘ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ’ ಕಾರ್ಯಕ್ರಮದಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ‘ಅಧಿಕಾರಿಗಳು ಗೌರವ ನೀಡದಿದ್ದಾಗ ಜನ ರಾಜಕಾರಣಿಗಳ ಬಳಿ ಬರುತ್ತಾರೆ. ಅಧಿಕಾರಿಗಳು ಲಂಚ ಕೇಳಿ ಹಿಂಸೆ ಕೊಡುವಂತಹ ದೂರುಗಳು ಹೆಚ್ಚುತ್ತಿವೆ. ಇವುಗಳನ್ನು ತಪ್ಪಿಸಬೇಕು’ ಎಂದರು.

‘ದೃಷ್ಟಿದೋಷವಿದ್ದರೂ ಬಿ.ಎ ಪದವಿ ಪೂರ್ಣಗೊಳಿಸಿದ್ದೇನೆ. ಮನೆ ಮತ್ತು ಕೆಲಸ ಬೇಕು’ ಎಂದು ದಾಸರಹಳ್ಳಿಯ ಹಿವ್ಯಾಂಜಲಿ ಮನವಿ ಸಲ್ಲಿಸಿದಾಗ, ಬಿಡಿಎ ಆಯುಕ್ತ ಜಯರಾಮ್ ಅವರಿಗೆ ‘ಅಂಗವಿಕಲರ ಕೋಟಾದ ಅಡಿಯಲ್ಲಿ ಫ್ಲಾಟ್ ವ್ಯವಸ್ಥೆ ಮಾಡಿ’ ಎಂದು, ಪಾಲಿಕೆಯಲ್ಲಿ ಕೆಲಸ ಕೊಡಿ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಡಿಸಿಎಂ ಸೂಚಿಸಿದರು.

‘ಬಿಪಿಎಲ್ ಕಾರ್ಡಿಲ್ಲ, ಕಿಡ್ನಿ ಹಾಳಾಗಿ ಜೀವನ ಸಾಕಾಗಿದೆ, ದಯಾಮರಣ ಕೊಡಿ’ ದಾಸರಹಳ್ಳಿ ರಾಧಮ್ಮ ಅಳಲು ತೋಡಿಕೊಂಡರು.

‘ಸಾರ್ ನಮ್ಮ ಮನೆ ನೀರಿನ ಮೀಟರ್ ಓಡುತ್ತದೆ, ಆದರೆ ನೀರೆ ಬರುತ್ತಿಲ್ಲ’ ಎಂದು ಗಂಗೇಗೌಡ ದೂರಿದರು. ‘ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ನೀಡಿದಂತೆ ಪುರುಷರಿಗೂ ನೀಡಿ’ ಎಂದು ಯಲಹಂಕ ಹಿರಿಯ ನಾಗರಿಕರ ವೇದಿಕೆಯವರು ಮನವಿ ಮಾಡಿದರು. ‘ಆಗಲ್ಲ’ ಎಂದು ಡಿಸಿಎಂ ಉತ್ತರಿಸಿದರು.

ವಿದ್ಯಾರಣ್ಯಪುರದ ಬೀದಿ ಬದಿ ಪಡ್ಡು ವ್ಯಾಪಾರಿ ವಲ್ಲಿಮಾ ಅವರು ‘ರಸ್ತೆ ಬದಿ ವ್ಯಾಪಾರ ಮಾಡಲು ಅವಕಾಶ ನೀಡಿ’ ಎಂದು ಮನವಿ ಮಾಡಿದರು. ‘450 ಅಡಿ ಜಾಗಕ್ಕೆ ₹1.90 ಲಕ್ಷ ತೆರಿಗೆ ಬಂದಿದೆ’ ಎಂದು ಹೆಬ್ಬಾಳ ಅಮಾನಿಕೆರೆ ನಿವಾಸಿ ರಾಮಚಂದ್ರ ದೂರಿದರು.

‘ಸಮಸ್ಯೆ ಬಗೆಹರಿಯಲಿಲ್ಲ ಎಂದರೆ ಡಿಸಿ ಮನೆಗೇ ಹೋಗು, ಅವರನ್ನು ಬಿಡ ಬೇಡ’ ಎಂದು ಜಮೀನು ವಿವಾದ ಬಗೆಹರಿಸಿ ಎಂದು ಮನವಿ ಸಲ್ಲಿಸಿದ ಅರಕೆರೆಯ ಓಬಣ್ಣ ಅವರಿಗೆ ಡಿಸಿಎಂ ಸೂಚಿಸಿದರು. ‘ಹಸಿರು ಪಡಿತರ ಚೀಟಿಯಲ್ಲಿ ಅಳಿಯನ ಹೆಸರು ಸೇರ್ಪಡೆಯಾಗಿದ್ದು, ಅವರು ತೆರಿಗೆ ವ್ಯಾಪ್ತಿಗೆ ಬರುವುದರಿಂದ ಪಡಿತರ ಚೀಟಿಯನ್ನು ರದ್ದುಪಡಿಸಲಾಗಿದೆ. ಮನೆಯಲ್ಲಿ ನಾನು ಮತ್ತು ನನ್ನ ಪತಿ ಇಬ್ಬರೇ ವಾಸಿಸುತ್ತಿದ್ದು, ಅವರಿಗೆ ಸರಿಯಾಗಿ ಕಿವಿ ಕೇಳಿಸುತ್ತಿಲ್ಲ. ನಮಗೆ ಸಹಾಯ ಮಾಡಿ ಪಡಿತರ ಚೀಟಿ ಕೊಡಿಸಿ’ ಎಂದು ದಾಸರಹಳ್ಳಿಯ ಬಾಗಲಗುಂಟೆ ನಿವಾಸಿ ರೇಣುಕಾ ಮನವಿ ಮಾಡಿದರು.

‘ದೊಡ್ಡಬೆಟ್ಟಹಳ್ಳಿ ಸರ್ವೆ ನಂ.1ರಲ್ಲಿ ಒಂದು ಎಕರೆ ವಿಸ್ತೀರ್ಣದಲ್ಲಿ ಆಶ್ರಯ ಯೋಜನೆಯಡಿ 49 ನಿವೇಶನಗಳನ್ನು ವಿಂಗಡಿಸಿದ್ದು, 31 ಫಲಾನುಭವಿಗಳಿಗೆ ಹಕ್ಕುಪತ್ರನೋಂದಣಿಯಾಗಿದೆ.ಈಬಡಾವಣೆಗೆ ಕನಿಷ್ಠ ಮೂಲಸೌಕರ್ಯಗಳನ್ನು ಒದಗಿಸಬೇಕು’ ಎಂದು ಸಾಮಾಜಿಕ ಕಾರ್ಯಕರ್ತ ಕೆ.ಎಸ್.ಚಂದ್ರಶೇಖರ್ ಆಜಾದ್ ಮನವಿಪತ್ರ ಸಲ್ಲಿಸಿದರು.

ಯಲಹಂಕದಲ್ಲಿ ಶುಕ್ರವಾರ ನಡೆದ ‘ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ’ ಕಾರ್ಯಕ್ರಮ ದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಾರ್ವಜನಿಕರ ಅಹವಾಲು ಸ್ವೀಕರಿಸಿದರು. ಶಾಸಕರಾದ ಮುನಿರಾಜು, ಎಸ್.ಆರ್. ವಿಶ್ವನಾಥ್ ಭಾಗವಹಿಸಿದ್ದರು.



ಯಲಹಂಕದಲ್ಲಿ ಶುಕ್ರವಾರ ನಡೆದ ‘ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ’ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಾರ್ವಜನಿಕರ ಅಹವಾಲು ಸ್ವೀಕರಿಸಿದರು. ಶಾಸಕರಾದ ಮುನಿರಾಜು, ಎಸ್.ಆರ್. ವಿಶ್ವನಾಥ್ ಭಾಗವಹಿಸಿದ್ದರು

‘ದೂರು ಬಗೆಹರಿಸಲು ಪ್ರತ್ಯೇಕ ತಂಡ’

‘3 ಸಾವಿರ ಅರ್ಜಿಗಳು ನೋಂದಣಿ ಆಗಿದ್ದು, ಅವುಗಳ ತ್ವರಿತ ವಿಲೇವಾರಿಗೆ ವಾರ್ಡ್ ಮಟ್ಟದ ಅಧಿಕಾರಿಗಳಿಗೆ ಸಮಯ ನಿಗದಿ ಮಾಡುತ್ತೇವೆ. ಎಲ್ಲಾ ದೂರುಗಳನ್ನು ಬಗೆಹರಿಸಲು ಪ್ರತ್ಯೇಕ ತಂಡ ಮಾಡುತ್ತೇವೆ. ಜನರ ಅರ್ಜಿ ಸರಿ ಇಲ್ಲದಿದ್ದರೆ, ಅವರನ್ನು ಸಂಪರ್ಕಿಸಿ ಮತ್ತೆ ಸರಿಯಾದ ಅರ್ಜಿ ಪಡೆಯುತ್ತೇವೆ’ ಎಂದು ಡಿಸಿಎಂ ಶಿವಕುಮಾರ್ ಅವರು ಸುದ್ದಿಗಾರರಿಗೆ ತಿಳಿಸಿದರು.

‘ಕಂದಾಯ ಇಲಾಖೆ, ಪಾಲಿಕೆಗೆ ಸಂಬಂಧಿಸಿದ ದೂರುಗಳು ಹೆಚ್ಚಾಗಿದ್ದು, ಖಾತೆ ವಿಚಾರವಾಗಿಯೂ ದೂರುಗಳು ಬಂದಿವೆ. ಮನೆಗಳು ಬೇಕು ಎಂಬ ಬೇಡಿಕೆ ಕೂಡ ಹೆಚ್ಚಾಗಿದ್ದು, ಉಚಿತವಾಗಿ ಮನೆ ನೀಡಲು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಕ್ಕೆ ಅವಕಾಶ ಇಲ್ಲ. ಇವರಿಗೆ ಕಡಿಮೆ ದರದಲ್ಲಿ ಮನೆ ನೀಡಲಾಗುತ್ತಿದ್ದು, ವಸತಿ ಇಲಾಖೆ ಜತೆ ಚರ್ಚೆ ಮಾಡಿ ಎಷ್ಟು ವಿನಾಯಿತಿ ನೀಡಬಹುದೋ ಅಷ್ಟು ನೀಡುತ್ತೇವೆ’ ಎಂದು ಹೇಳಿದರು.

ಬಿಜೆಪಿ ಶಾಸಕರಿಂದ ಡಿಕೆಶಿ ಹೊಗಳಿಕೆ

‘ಡಿ.ಕೆ. ಶಿವಕುಮಾರ್ ಅವರು ನಡೆಸುತ್ತಿರುವ ‘ಬಾಗಿಲಿಗೆ ಬಂತು ಸರ್ಕಾರ’ ವಿಶಿಷ್ಟವಾದ ಕಾರ್ಯಕ್ರಮ. ಇದಕ್ಕೆ ನಮ್ಮ ಬೆಂಬಲವಿದೆ. ಕೆಂಪೇಗೌಡರ ಪುತ್ರರಾಗಿರುವ ಅವರಿಗೆ ಬೆಂಗಳೂರು ಅಭಿವೃದ್ಧಿಯಲ್ಲಿ ದೂರದೃಷ್ಟಿ ಇದೆ’ ಎಂದು ಯಲಹಂಕ ವಿಧಾನಸಭೆ ಕ್ಷೇತ್ರದ ಶಾಸಕ ಎಸ್.ಆರ್. ವಿಶ್ವನಾಥ್ ಹೊಗಳಿದರು.

‘ಡಿಸಿಎಂ ಅವರು ಛಲ, ಆತ್ಮಸ್ಥೈರ್ಯ ಎದುರಿಸುವ ಗುಣ ಉಳ್ಳವರು. ಅವರ ಒಂದಷ್ಟು ಗುಣಗಳನ್ನು ನಾನು ಅಳವಡಿಸಿಕೊಂಡಿದ್ದೇನೆ’ ಎಂದರು.

‘ಬೆಂಗಳೂರನ್ನು ಅಭಿವೃದ್ಧಿ ಮಾಡುವ ಇಚ್ಛಾಶಕ್ತಿ, ಧೈರ್ಯ ಮತ್ತು ತಾಕತ್ತು ಎರಡೂ ಡಿ.ಕೆ.ಶಿವಕುಮಾರ್ ಅವರಿಗೆ ಇದೆ. ನಗರದ ಅಭಿವೃದ್ಧಿಗೆ ಮುಂದಿನ ಬಜೆಟ್ ನಲ್ಲಿ ಉತ್ತಮ ಅನುದಾನ ಕೊಡಬೇಕು’ ಎಂದು ದಾಸರ ಹಳ್ಳಿ ವಿಧಾನಸಭೆ ಕ್ಷೇತ್ರದ ಶಾಸಕ ಮುನಿರಾಜು ಹೇಳಿದರು.

ಕರವೇ ಕಾರ್ಯಕರ್ತರ ಬಿಡುಗಡೆಗೆ ಆಗ್ರಹಿಸಿ ಧರಣಿ

ಬೆಂಗಳೂರು: ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ.ನಾರಾಯಣ ಅವರ ಬಿಡುಗಡೆಗೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಕರವೇ ಕಾರ್ಯಕರ್ತರು ಶುಕ್ರವಾರದಿಂದ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದರು. ಪ್ರತಿಭಟನಕಾರರು, ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.

ಕನ್ನಡದಲ್ಲಿ ನಾಮಫಲಕ ಅಳವಡಿಕೆ ಮಾಡಬೇಕೆಂದು ಆಗ್ರಹಿಸಿ ನಾರಾಯಣ ಗೌಡ ನೇತೃತ್ವದಲ್ಲಿ ಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಇದು ಕನ್ನಡ ಉಳಿಸುವ ಕೆಲಸ. ಆದರೆ, ಅಧ್ಯಕ್ಷರು ಸೇರಿದಂತೆ ಕಾರ್ಯಕರ್ತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸಲಾಗಿದೆ. ತಕ್ಷಣವೇ ಎಲ್ಲರನ್ನೂ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

‘ಕರ್ನಾಟಕ ರಕ್ಷಣಾ ವೇದಿಕೆ ವಿವಿಧ ಘಟಕಗಳು ಹಾಗೂ ಶಾಖೆಗಳ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ’ ಎಂದು ಮಹಿಳಾ ಘಟಕದ ಅಧ್ಯಕ್ಷೆ ವೀಣಾ ಸುಬ್ರಹ್ಮಣಿ ತಿಳಿಸಿದರು.



ಟಿ.ಎ.ನಾರಾಯಣಗೌಡ ಸೇರಿದಂತೆ ವಿವಿಧ ಮುಖಂಡರ ಬಿಡುಗಡೆಗೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರು ಶುಕ್ರವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದರು. – ಪ್ರಜಾವಾಣಿ ಚಿತ್ರ

‘ಮೂಗಿಗೆ ತುಪ್ಪ ಸವರುವ ಕೆಲಸ’

ಬೆಂಗಳೂರು: ‘ರೈತರಿಗೆ ತಲಾ ₹ 2,000 ಪರಿಹಾರ ವಿತರಿಸಲು ಆರು ತಿಂಗಳು ಸತಾಯಿಸ ಬೇಕಿತ್ತೆ? ಜಿಲ್ಲಾಧಿಕಾರಿಗಳ ವೈಯಕ್ತಿಕ ಖಾತೆಗಳಲ್ಲಿ ಹಣವಿದ್ದರೂ, ಅದನ್ನು ಬಳಸಿಲ್ಲ. ಈಗ ಕೇವಲ ₹ 105 ಕೋಟಿ ಬಿಡುಗಡೆ ಮಾಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರೈತರ ಮೂಗಿಗೆ ತುಪ್ಪ ಸವರುವ ಕೆಲಸ ಮಾಡಿದ್ದಾರೆ’ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಟೀಕಿಸಿದ್ದಾರೆ.

‘ನಮ್ಮ ಸರ್ಕಾರದ ಅವಧಿಯಲ್ಲಿ ಪ್ರವಾಹದಿಂದ 13.09 ಲಕ್ಷ ಹೆಕ್ಟೇರ್ ಪ್ರದೇಶ ದಲ್ಲಿ ಬೆಳೆ ಹಾನಿಯಾಗಿತ್ತು. ಈ ವೇಳೆ, 14.63 ಲಕ್ಷ ರೈತರ ಖಾತೆಗೆ ನೇರವಾಗಿ ₹2,031 ಕೋಟಿಗಳನ್ನು 2 ತಿಂಗಳೊಳಗೆ ಜಮೆ ಮಾಡಲಾಗಿತ್ತು. ಕೇಂದ್ರದ ಅನುದಾನಕ್ಕಾಗಿ ಕಾದಿರಲಿಲ್ಲ. ಮಳೆಯಾಶ್ರಿತ ಪ್ರದೇಶದ ಬೆಳೆ ಹಾನಿಗೆ ಎಸ್‌ಡಿಆರ್‌ಎಫ್ ದರ ₹6,800 ಇದ್ದರೆ, ನಮ್ಮ ಸರ್ಕಾರ ₹13,600 ಪರಿಹಾರ ನೀಡಿತ್ತು. ನೀರಾವರಿ ಜಮೀನಿಗೆ ಎಸ್‌ಡಿಆರ್‌ಎಫ್ ಮಾರ್ಗಸೂಚಿ ದರ ₹13,500 ಇದ್ದರೆ, ನಮ್ಮ ಸರ್ಕಾರ ₹25,000 ಪರಿಹಾರ ನೀಡಿತ್ತು. ತೋಟಗಾರಿಕಾ ಬೆಳೆ ಹಾನಿಗೆ ಎಸ್‌ಡಿಆರ್‌ಎಫ್ ಮಾರ್ಗಸೂಚಿ ದರ ₹18,000 ಇದ್ದರೆ, ನಾವು ₹28,000 ಪರಿಹಾರ ಕೊಟ್ಟಿದ್ದೆವು’ ಎಂದಿದ್ದಾರೆ.

ಸುದ್ದಿ 2 ನಿಮಿಷ

ಬೊಮ್ಮಾಯಿ ಕೇಂದ್ರವನ್ನು ದೂರಬೇಕಿತ್ತು: ಮುಖ್ಯಮಂತ್ರಿ

ಬೆಂಗಳೂರು: ‘ಬರ ಪರಿಹಾರ ಬಿಡುಗಡೆ ವಿಳಂಬಕ್ಕೆ ಕೇಂದ್ರ ಸರ್ಕಾರದ ಆರ್ಥಿಕ ದುಃಸ್ಥಿತಿ ಕಾರಣ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಬೇಕಿತ್ತು. ಬಾಯಿ ತಪ್ಪಿ ರಾಜ್ಯ ಸರ್ಕಾರದ ಬಗ್ಗೆ ಹೇಳಿದ್ದಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಬರ ಪರಿಹಾರ ಬಿಡುಗಡೆ ವಿಳಂಬದ ಕುರಿತು ಬೊಮ್ಮಾಯಿ ಮಾಡಿದ್ದ ಟೀಕೆಗೆ ಸಾಮಾಜಿಕ ಮಾಧ್ಯಮಗಳಲ್ಲಿ ಶುಕ್ರವಾರ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ, ‘ಬರ ಪರಿಹಾರಕ್ಕಾಗಿ ₹18,177 ಕೋಟಿ ನೆರವು ಕೋರಿ ಮೂರು ತಿಂಗಳಿಂದ ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಲೇ ಇದ್ದೇವೆ. ಈವರೆಗೆ ನಯಾಪೈಸೆ ನೀಡಿಲ್ಲ. ಇದಕ್ಕೆ ಪ್ರಧಾನಿ ನರೇಂದ್ರ ಮೋದಿಯವರ ದ್ವೇಷದ ರಾಜಕಾರಣ ಅಥವಾ ಕೇಂದ್ರ ಸರ್ಕಾರದ ಆರ್ಥಿಕ ದುಃಸ್ಥಿತಿ ಕಾರಣ ಇರಬಹುದು’ ಎಂದು ಟೀಕಿಸಿದ್ದಾರೆ.

ಬರ ಪರಿಹಾರ ಮಾತ್ರವಲ್ಲ; ವಿವಿಧ ಯೋಜನೆಗಳ ಅನುದಾನ ವನ್ನೂ ಬಿಡುಗಡೆ ಮಾಡದೆ ಕೇಂದ್ರ ಸರ್ಕಾರ ಸತಾಯಿಸುತ್ತಿದೆ.

ಬೊಮ್ಮಾಯಿ ಅವರು ರಾಜಕೀಯ ಅಸ್ತಿತ್ವಕ್ಕಾಗಿ ಹುಸಿ ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ದೂರಿದ್ದಾರೆ.



ಬರ ಪರಿಹಾರ: ₹105 ಕೋಟಿ ಬಿಡುಗಡೆ

ಬೆಂಗಳೂರು: ಬರಗಾಲದಿಂದ ಬೆಳೆ ನಷ್ಟಕ್ಕೀಡಾಗಿರುವ ರೈತರಿಗೆ ಮೊದಲನೇ ಕಂತಿನಲ್ಲಿ ತಲಾ ₹2,000 ಪರಿಹಾರ ವಿತರಣೆಗಾಗಿ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ₹105 ಕೋಟಿ ಅನುದಾನವನ್ನು ಶುಕ್ರವಾರ ಬಿಡುಗಡೆ ಮಾಡಲಾಗಿದೆ.

ಕೇಂದ್ರ ಸರ್ಕಾರದ ಕೇಂದ್ರ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ನೆರವು ನಿರೀಕ್ಷಿಸಿ ಎಸ್‌ಡಿಆರ್‌ಎಫ್‌ನಿಂದ ಒಬ್ಬ ರೈತರಿಗೆ ಎರಡು ಹೆಕ್ಟೇರ್ ಜಮೀನಿಗೆ ಸೀಮಿತವಾಗಿ ಪರಿಹಾರ ವಿತರಿಸಲಾಗುತ್ತಿದೆ. ಶೇಕಡ 33ಕ್ಕಿಂತ ಹೆಚ್ಚಿನ ಬೆಳೆ ಹಾನಿಯಾಗಿರುವ ರೈತರಿಗೆ ಮಾತ್ರ ಪರಿಹಾರ ವಿತರಿಸಲಾಗುವುದು. ಕೇಂದ್ರ ಗೃಹ ಸಚಿವಾಲಯ ಪ್ರಕಟಿಸಿರುವ ಎಸ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ ‘ಇನ್‌ಪುಟ್ ಸಬ್ಸಿಡಿ’ ವಿತರಿಸಲಾಗುವುದು ಎಂದು ಕಂದಾಯ ಇಲಾಖೆ ಆದೇಶದಲ್ಲಿ ತಿಳಿಸಿದೆ.

ಪ್ರತಿ ಹೆಕ್ಟೇರ್ ಮಳೆಯಾಶ್ರಿತ ಬೆಳೆಗಳಿಗೆ ₹8,500, ನೀರಾವರಿ ಬೆಳೆಗಳಿಗೆ ₹17,000 ಮತ್ತು ಬಹುವಾರ್ಷಿಕ ಬೆಳೆಗಳಿಗೆ ₹22,500 ಪರಿಹಾರ ನಿಗದಿ ಪಡಿಸಲಾಗಿದೆ. ಅದರಲ್ಲಿ ಮೊದಲ ಕಂತಿನಲ್ಲಿ ₹2,000 ಪಾವತಿಸಲಾಗುತ್ತದೆ. ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಣಿ ಕಡ್ಡಾಯ ಸೇರಿದಂತೆ ಹಲವು ಷರತ್ತುಗಳನ್ನು ವಿಧಿಸಲಾಗಿದೆ.

ಎಲ್.ಟಿ–5	ಕೈಗಾರಿಕೆ, ಕೈಗಾರಿಕೇತರ ತಾಪನ, ದೀಪವನ್ನು ಒಳಗೊಂಡಂತೆ ಮೋಟೀವ್ ಪವರ್ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	5 ಎಚ್.ಪಿ	200	1920	2018	5.10
		300	2530	2677	5.81
		500	3750	3995	6.53
	10 ಎಚ್.ಪಿ	600	5160	5454	5.70
		800	6580	6972	5.96
		1000	8000	8490	6.13
	20 ಎಚ್.ಪಿ	1500	12950	13685	5.68
		2000	16500	17480	5.94
		3000	23600	25070	6.23
	50 ಎಚ್.ಪಿ	3000	27800	29270	5.29
		4000	34900	36860	5.62
		7000	56200	59630	6.10
	65 ಎಚ್.ಪಿ	4000	37000	38960	5.30
		5000	44100	46550	5.56
		10000	79600	84500	6.16
	75 ಎಚ್.ಪಿ	7000	59700	63130	5.75
		9000	73900	78310	5.97
		11000	88100	93490	6.12
ಎಲ್.ಟಿ–5	ಕೈಗಾರಿಕೆ, ಕೈಗಾರಿಕೇತರ ತಾಪನ, ದೀಪವನ್ನು ಒಳಗೊಂಡಂತೆ ಮೋಟೀವ್ ಪವರ್ (ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿಯನ್ನು ಗ್ರಾಮ ಪಂಚಾಯತ್ ಪ್ರದೇಶಗಳ ಅಡಿಯಲ್ಲಿ ಬರುವ ಗ್ರಾಹಕರಿಗೆ)				
	5 ಎಚ್.ಪಿ	200	1860	1958	5.27
		300	2440	2587	6.02
		500	3600	3845	6.81
	10 ಎಚ್.ಪಿ	600	4980	5274	5.90
		800	6340	6732	6.18
		1000	7700	8190	6.36
	20 ಎಚ್.ಪಿ	1500	12500	13235	5.88
		2000	15900	16880	6.16
		3000	22700	24170	6.48
	50 ಎಚ್.ಪಿ	3000	26900	28370	5.46
		4000	33700	35660	5.82
		7000	54100	57530	6.34
	65 ಎಚ್.ಪಿ	4000	35800	37760	5.47
		5000	42600	45050	5.75
		10000	76600	81500	6.40
	75 ಎಚ್.ಪಿ	7000	57600	61030	5.95
		9000	71200	75610	6.19
		11000	84800	90190	6.36
ಎಲ್.ಟಿ–6(a)	ಬೀದಿ ದೀಪ/ಸಾರ್ವಜನಿಕ ದೀಪ ಸ್ಥಾಪನಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	3 ಕಿ.ವಾಟ್	200	1925	2023	5.09
	5 ಕಿ.ವಾಟ್	300	2975	3122	4.94
	10 ಕಿ.ವಾಟ್	500	5250	5495	4.67
ಎಲ್.ಟಿ–6(b)	ನೀರು ಸರಬರಾಜು ಮತ್ತು ಒಳ ಚರಂಡಿ ಪಂಪಿಂಗ್ ಸ್ಥಾಪನಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	3 ಎಚ್.ಪಿ	500	3275	3520	7.48
	5 ಎಚ್.ಪಿ	1000	6375	6865	7.69
	10 ಎಚ್.ಪಿ	2000	12750	13730	7.69
ಎಲ್.ಟಿ–6(c)	ವಿದ್ಯುತ್ ಚಾಲಿತ ವಾಹನ –ಎಲ್.ಟಿ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	1ಕಿ.ವಾಟ್‌ಗೆ	50	295	320	8.47
		100	520	569	9.42
	5 ಕಿ.ವಾಟ್‌ಗೆ	100	800	849	6.13
		300	1700	1847	8.65
		500	2600	2845	9.42
ಎಲ್.ಟಿ–6(c)	ವಿದ್ಯುತ್ ಚಾಲಿತ ವಾಹನ –ಹೆಚ್.ಟಿ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	100 ಕೆವಿಎ	6000	47000	49940	6.26
		10000	65000	69900	7.54
		14000	83000	89860	8.27
	1000 ಕೆವಿಎ	60000	470000	499400	6.26
		100000	650000	699000	7.54
		210000	1145000	1247900	8.99
ಎಚ್.ಟಿ – 1	ನೀರು ಸರಬರಾಜು ಮತ್ತು ಒಳ ಚರಂಡಿ ಸ್ಥಾಪನಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	100 ಕೆವಿಎ	9000	89000	93410	4.96
		10000	95000	99900	5.16
		11000	101000	106390	5.34
	300 ಕೆವಿಎ	10000	165000	169900	2.97
		14000	189000	195860	3.63
		20000	225000	234800	4.36
	1000 ಕೆವಿಎ	110000	1010000	1063900	5.34
		130000	1130000	1193700	5.64
		150000	1250000	1323500	5.88
	6000 ಕೆವಿಎ	400000	4500000	4696000	4.36
		500000	5100000	5345000	4.80
		600000	5700000	5994000	5.16
ಎಚ್.ಟಿ–2(a)	ಕೈಗಾರಿಕೆ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	300 ಕೆವಿಎ	12000	193800	202980	4.74
		15000	216000	226350	4.79
		20000	253000	265300	4.86
		110000	919000	966400	5.16
	ರೈಲ್ವೆ ಕರ್ಷಣ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	9000 ಕೆವಿಎ	1000000	10150000	10150000	0.00
		2000000	17150000	17150000	0.00
	ಎಫ್ಲೂಯೆಂಟ್ ಟ್ರೀಟ್‌ಮೆಂಟ್ ಪ್ಲಾಂಟ್ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	9000 ಕೆವಿಎ	1000000	10150000	10150000	0.00
		2000000	17150000	17150000	0.00
	ಬಿ.ಎಂ.ಆರ್.ಸಿ.ಎಲ್				
	9000 ಕೆವಿಎ	1000000	7950000	7950000	0.00
		2000000	13200000	13200000	0.00
ಎಚ್.ಟಿ–2(b)	ವಾಣಿಜ್ಯ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	100 ಕೆವಿಎ	6000	93000	96220	3.46
		10000	130000	134700	3.62
		14000	167000	173180	3.70
	1000 ಕೆವಿಎ	60000	930000	962200	3.46
		100000	1300000	1347000	3.62
		210000	2317500	2405200	3.78
ಎಚ್.ಟಿ–2(c)(i)	ಸರ್ಕಾರಿ ಅಸ್ಪತ್ರೆಗಳು,ಇಎಸ್ಐ, ವಿಶ್ವ ವಿದ್ಯಾಲಯಗಳೂ, ರಾಜ್ಯ ಸರ್ಕಾರದ, ರಾಜ್ಯಸರ್ಕಾರದ ಧನ ಸಹಾಯದಿಂದ ನಡೆಯುವ ವಿದ್ಯಾಸಂಸ್ಥೆಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	100 ಕೆವಿಎ	6000	75000	78580	4.77
		10000	105000	110300	5.05
		14000	135000	142020	5.20
	1000 ಕೆವಿಎ	60000	750000	785800	4.77
		100000	1050000	1103000	5.05
		210000	1875000	1975300	5.35
ಎಚ್.ಟಿ–2(c)(ii)	ಎಚ್.ಟಿ–2(ಸಿ)(1) ನ್ನು ಹೊರತುಪಡಿಸಿದ ಅಸ್ಪತ್ರೆಗಳು, ವಿಶ್ವ ವಿದ್ಯಾಲಯಗಳೂ, ವಿದ್ಯಾಸಂಸ್ಥೆಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	100 ಕೆವಿಎ	6000	86000	89520	4.09
		10000	120000	125200	4.33
		14000	154000	160880	4.47
	1000 ಕೆವಿಎ	60000	860000	895200	4.09
		100000	1200000	1252000	4.33
		210000	2135000	2233200	4.60
ಎಚ್.ಟಿ–4	ಗೃಹ ನಿವಾಸಿ ಅಪಾರ್ಟ್‌ಮೆಂಟುಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	100 ಕೆವಿಎ	6000	73500	77780	5.82
		10000	102500	108300	5.66
		12000	117000	123560	5.61
	1000 ಕೆವಿಎ	60000	735000	777800	5.82
		100000	1025000	1083000	5.66
		120000	1170000	1235600	5.61

ಟಿಪ್ಪಣಿ: ಹೆಚ್.ಟಿ. ಗ್ರಾಹಕರು 22.00 ರಿಂದ 06.00 ರವರೆಗೆ 100 ಪೈಸೆ/ಯೂನಿಟ್‌ನ ಸಮಯಾಧಾರಿತ ಜಕಾತಿಯ ರಿಯಾಯಿತಿಯನ್ನು ಹೊಂದಿರುತ್ತಾರೆ.

ಹೆಚ್.ಟಿ. ಗ್ರಾಹಕರು 18.00 ರಿಂದ 22.00 ರವರೆಗೆ 100 ಪೈಸೆ/ಯೂನಿಟ್‌ನ ಸಮಯಾಧಾರಿತ ಜಕಾತಿಯ ದಂಡ ವಿಧಿಸುವುದು.

ಮೇಲಿನ ಶುಲ್ಕಗಳ ಜೊತೆಗೆ, ರಾಜ್ಯ ಸರ್ಕಾರವು ವಿಧಿಸಿದ /ವಿಧಿಸಬಹುದಾದ ತೆರಿಗೆಗಳು ಅನ್ವಯಿಸುತ್ತವೆ.

* ದಿನಾಂಕ: 05.01.2024ರಂದು ಪ್ರಕಟಗೊಂಡ ಅಧಿಸೂಚನೆಯಲ್ಲಿನ ಕ್ರ.ಸಂ.2, ಪ್ರವರ್ಗ ಎಲ್.ಟಿ–2(ಎ)ಯ ವಿವರಗಳಲ್ಲಿನ ಐದನೇ ಕಾಲಂನಲ್ಲಿ “100 ಯೂನಿಟ್ಟುಗಳನ್ನು ಮೀರಿ ಬಳಸಿದ ಪ್ರತಿ ಯೂನಿಟ್ಟಿಗೆ” ಎಂಬುದನ್ನು “100 ಯೂನಿಟ್ಟುಗಳನ್ನು ಮೀರಿ ಬಳಸಿದ ಪ್ರತಿ ಯೂನಿಟ್ಟಿಗೆ (0 ಯಿಂದ ಎಲ್ಲಾ ಯೂನಿಟ್ಟುಗಳಿಗೆ)” ಎಂದು ಓದಿಕೊಳ್ಳುವುದು.

ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳ • ಗಮನಸೆಳೆದ ತರಹೇವಾರಿ ತಿನಿಸುಗಳು

ಅರಮನೆ ಅಂಗಳದಲ್ಲಿ ಸಿರಿಧಾನ್ಯ ಲೋಕ

• ಖಲೀಲಅಹ್ಮದ ಶೇಖ




ಅರಮನೆ ಮೈದಾನದಲ್ಲಿ ಶುಕ್ರವಾರದಿಂದ ಆರಂಭವಾದ ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೃಷಿ ಸಚಿವ ಎನ್‌. ಚಲುವರಾಯಸ್ವಾಮಿ ಮೊರದಲ್ಲಿ ಸಿರಿಧಾನ್ಯಗಳನ್ನು ತೂರುವ ಮೂಲಕ ಉದ್ಘಾಟಿಸಿದರು (ಎಡ) ಮೇಳದಲ್ಲಿ ಕಣ್ಮನ ಸೆಳೆದ ತರಹೇವಾರಿ ಬೆಲ್ಲ

ಬೆಂಗಳೂರು: ಸಿರಿಧಾನ್ಯಗಳಿಂದ ತಯಾರಿಸಿದ ಪಿಜ್ಜಾ, ಚಾಕೊಲೇಟ್‌, ಪಾಸ್ತಾ, ಬರಗು ದೋಸೆ, ಊದಲು ಇಡ್ಲಿ, ಡೋನಟ್‌, ಫ್ಲೇಕ್ಸ್‌ …ಇಂಥ ತರಹೇವಾರಿ ತಿನಿಸುಗಳ ವೈವಿಧ್ಯಮಯ ಲೋಕವೇ ನಗರ ಅರಮನೆ ಆವರಣದಲ್ಲಿ ಅನಾವರಣಗೊಂಡಿತ್ತು…

ಅರಮನೆ ಆವರಣದ ತ್ರಿಪುರವಾಸಿನಿಯಲ್ಲಿ ಕೃಷಿ ಇಲಾಖೆ ಆಯೋಜಿಸಿರುವ ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳದಲ್ಲಿ ಕಂಡು ಬಂದ ಸಿರಿಧಾನ್ಯಗಳ ವೈವಿಧ್ಯಮಯ ತಿನಿಸುಗಳಿವು.

‘ಭವಿಷ್ಯದ ಪೀಳಿಗೆಯನ್ನು ಪೋಷಿಸುವ ಸಾಂಪ್ರದಾಯಿಕ ಪ್ರಜ್ಞಾವಂತ ಆಹಾರ’ ಎಂಬ ಶೀರ್ಷಿಕೆಯೊಂದಿಗೆ ಈ ಮೇಳವನ್ನು ಆಯೋಜಿಲಾಗಿದೆ. ರೈತ ಉತ್ಪಾದಕ ಸಂಸ್ಥೆಗಳು, ಸ್ವಸಹಾಯ ಸಂಘಗಳು, ಪ್ರಾಂತೀಯ ಒಕ್ಕೂಟಗಳು, ತಯಾರಿಸಿರುವ ಸಿರಿಧಾನ್ಯದ ಹಿಟ್ಟುಗಳು, ಸಿರಿಧಾನ್ಯದ ಬ್ರೆಡ್‌, ಬಿಸ್ಕತ್ತು, ನಿಪ್ಪಟ್ಟು, ಪಾಪಡ್‌, ರೆಡಿ ಟು ಕುಕ್‌ ಸಿರಿಧಾನ್ಯ ಮಿಶ್ರಣಗಳ ದೋಸೆ, ಇಡ್ಲಿ, ಉಪ್ಪಿಟ್ಟು, ಬಿಸಿಬೇಳೆ ಬಾತ್‌, ಪಾಯಸ, ಕಿಚಡಿ ಹಲವು ಬಗೆಯ ತಿನಿಸುಗಳು ಗಮನ ಸೆಳೆದವು.

ಗಮನಸೆಳೆಯುವ ಕರ್ನಾಟಕ: ಕೇರಳ, ಮಹಾರಾಷ್ಟ್ರ, ಆಂಧ್ರಪ್ರದೇಶ, ಮಣಿಪುರ, ಬಿಹಾರ ಸೇರಿದಂತೆ 17ಕ್ಕೂ ಹೆಚ್ಚು ರಾಜ್ಯಗಳ ಸಿರಿಧಾನ್ಯ ಕಂಪನಿಗಳು, ಸಂಸ್ಥೆಗಳು ತಮ್ಮ ಉತ್ಪನ್ನಗಳನ್ನು ಪ್ರದರ್ಶನಕ್ಕಿಟ್ಟಿದ್ದವು. ಕರ್ನಾಟಕ ಪೆವಿಲಿಯನ್ ವಿಶೇಷವಾಗಿ ಗಮನಸೆಳೆಯುತ್ತದೆ. 15 ರೈತ ಉತ್ಪಾದಕ ಪ್ರಾಂತೀಯ ಒಕ್ಕೂಟಗಳ ಮಳಿಗೆಗಳಿವೆ. ಪರಿಸರ ಸ್ನೇಹಿ ಉತ್ಪನ್ನಗಳು, ದೇಸೀಯ ಬಿತ್ತನೆ ಬೀಜಗಳ ಸಂರಕ್ಷಣೆ ಕುರಿತು ಮಾಹಿತಿ ತಿಳಿಸುವ ಮಳಿಗೆಗಳೂ ವಸ್ತು ಪ್ರದರ್ಶನದಲ್ಲಿವೆ.

ಮೇಳದಲ್ಲಿ 400ಕ್ಕೂ ಹೆಚ್ಚು ಮಳಿಗೆಗಳನ್ನು ಸ್ಥಾಪಿಸಲಾಗಿದೆ. ಸಿರಿಧಾನ್ಯ ಖಾದ್ಯಗಳದ್ದೇ ಪ್ರತ್ಯೇಕವಾದ ಫುಡ್‌ ಕೋರ್ಟ್ ಇದೆ.

ಅಂತರರಾಷ್ಟ್ರೀಯ ಉದ್ಯಮಿಗಳೊಂದಿಗೆ ಸಭೆ, ಗ್ರಾಹಕರ ಸಂಪರ್ಕಕ್ಕೆ ಪೆವಿಲಿಯನ್ ಸ್ಥಾಪಿಸಲಾಗಿದೆ. ಸಗಟು, ಚಿಲ್ಲರೆ ವ್ಯಾಪಾರಿಗಳು, ಸ್ವಸಹಾಯ ಗುಂಪುಗಳು, ಖರೀದಿದಾರರ ಮತ್ತು ಮಾರಾಟಗಾರರ ವೇದಿಕೆ ಕಲ್ಪಿಸಲಾಗಿದೆ.

ಮೈದಾ ರಹಿತ ಖಾದ್ಯ: ‘ಇಂದಿನ ಯುವಕರ ಆಹಾರ ಶೈಲಿಯನ್ನು ಗಮನದಲ್ಲಿರಿಸಿಕೊಂಡು ಸಿರಿಧಾನ್ಯಗಳಿಂದ ‘ಪಿಜ್ಜಾ ಬೇಸ್‌’ ಎಂಬ ಹಿಟ್ಟನ್ನು ತಯಾರಿಸಲಾಗಿದೆ. ಮೈದಾ ಬಳಸದೇ ಜೋಳ, ರಾಗಿ, ಗೋದಿ, ಬೇಕಿಂಗ್ ಪೌಡರ್ ಬಳಸಿಕೊಂಡು ಇದನ್ನು ತಯಾರಿಸಲಾಗಿದೆ. ಆರೋಗ್ಯದ ಹಿತದೃಷ್ಟಿಯಿಂದ ಇದು ಉತ್ತಮ. ಮೇಳದಲ್ಲಿ ಇದು ಎಲ್ಲರ ಆಕರ್ಷಣೆಯಾಗಿದೆ’ ಎಂದು ಮಲೆನಾಡು ರೈತ ಉತ್ಪಾದಕ ಸಂಘದ ಅನಿಲ್ ಕುಮಾರ್ ವಿವರಿಸಿದರು.

ಶುಕ್ರವಾರದಿಂದ ಆರಂಭವಾಗಿರುವ ಮೇಳ, ಭಾನುವಾರದವರೆಗೂ ನಡೆಯಲಿದ್ದು ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ.

₹5ಕ್ಕೆ ರಾಗಿ ಚಾಕೊಲೇಟ್

‘ಮೇಲೆ ಮತ್ತು ಕೆಳಗಿನ ಪದರ ರಾಗಿಯದ್ದು. ಮಧ್ಯದ ಪದರ ಹಣ್ಣಿನದ್ದು.. ತಿನ್ನಿ, ರುಚಿ ನೋಡಿ’– ಎನ್ನುತ್ತಾ ಚಿಲ್ಮಿಲ್ ಸಂಸ್ಥೆಯ ಪ್ರಸಾದ್ ಬಣ್ಣದ ತುಂಡೊಂದನ್ನು ಕೈಗಿಟ್ಟರು. ಅದನ್ನು ಬಾಯಿಗಿಟ್ಟರೆ, ಸ್ಟ್ರಾಬೆರಿ ಮತ್ತು ಕಿತ್ತಳೆಯ ಸ್ವಾದ.. ‘ಇದು ಚಾಕೊಲೇಟ್ ಸರ್. ಐದು ರೂಪಾಯಿಗೆ ಒಂದು’ ಎಂದು ಮಾತು ಮುಂದುವರಿಸಿದರು.

ಚಿಲ್ಮಿಲ್ ಎಂಬ ನವೋದ್ಯಮ ಸ್ಥಾಪಿಸಿರುವ ಬೆಂಗಳೂರಿನ ಈ ಯುವಕ ರಾಗಿಯಿಂದ ಚಾಕೊಲೇಟ್ ವೇಫರ್ಸ್‌ಗಳನ್ನು ತಯಾರಿಸಿ, ಮೇಳದಲ್ಲಿ ಪ್ರದರ್ಶನಕ್ಕಿಟ್ಟಿದ್ದರು. ಸ್ಟ್ರಾಬೆರಿ, ಆರೆಂಜ್, ಚಾಕೊಲೇಟ್ ಎಂಬ ಮೂರು ಫ್ಲೇವರ್‌ಗಳ್ ಚಾಕೊಲೇಟ್ ತಯಾರಿಸಿದ್ದಾರೆ. ಪ್ರತಿಯೊಂದು ಚಾಕೊಲೇಟ್ ₹ 5 ರಂತೆ ಮಾರಾಟ ಮಾಡುತ್ತಿದ್ದು, ಯುವಕರ ಹಾಗೂ ಮಕ್ಕಳ ಗಮನ ಸೆಳೆಯುತ್ತಿದೆ. ಸಾಮಾನ್ಯವಾಗಿ ಸಿರಿಧಾನ್ಯ ಉತ್ಪನ್ನಗಳಿಗೆ ಬೆಲೆ ಹೆಚ್ಚು ಎನ್ನುತ್ತಾರೆ. ಹಾಗಾಗಿ ಜನಸಾಮಾನ್ಯರಿಗೆ ಕೈಗೆಟಕುವ ದರದಲ್ಲಿ ವಿಭಿನ್ನ ರುಚಿಯಲ್ಲಿ ಸಿರಿಧಾನ್ಯಗಳ ಉತ್ಪನ್ನಗಳು ಸಿಗಬೇಕು. ಆ ಉದ್ದೇಶದಿಂದ ಚಾಕೊಲೇಟ್ ವೇಫರ್ಸ್‌ಗಳನ್ನು ತಯಾರಿಸಿದ್ದೇನೆ ಎಂದು ವಿವರಿಸಿದರು.

ರೈತರ ಮಾತು



ರೈತರು ಉತ್ಪಾದಿಸಿದ ಕೊಬ್ಬರಿ, ರಾಗಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ರೈತರ ಹೆಸರಿನಲ್ಲಿ ಇಂತಹ ದೊಡ್ಡ ಸಮಾವೇಶಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಇದರಿಂದ, ರೈತರಿಗೆ ಯಾವುದೇ ರೀತಿಯ ಪ್ರಯೋಜನ ವಾಗುತ್ತಿಲ್ಲ.

ಧನಂಜಯ್‌, ರೈತ ಅರಸೀಕೆರೆ, ಹಾಸನ



ರಾಗಿಯನ್ನು ಮೌಲ್ಯವರ್ಧನೆ ಮಾಡಿ ಇಷ್ಟೊಂದು ಉತ್ಪನ್ನಗಳನ್ನು ತಯಾರಿಸ ಬಹುದು ಎಂದು ಈ ಮೇಳಕ್ಕೆ ಬಂದಾಗಲೇ ಗೊತ್ತಾಗಿದ್ದು, ನಮ್ಮ ರಾಗಿ ಎಷ್ಟು ಬೆಲೆ, ಪೌಷ್ಟಿಕತೆ ಇದೆ ಎಂದು ತಿಳಿದು ಕೊಂಡಿದ್ದೇನೆ. ಮುಂದಿನ ದಿನಗಳಲ್ಲಿ ನಾನೇ ರಾಗಿಯ ಉತ್ಪನ್ನಗಳನ್ನು ಉತ್ಪಾದಿಸಿ ಮಾರಾಟ ಮಾಡುತ್ತೇನೆ.

ಶ್ರೀನಿವಾಸಮೂರ್ತಿ, ರೈತ ತುಮಕೂರು



ವಿದೇಶಾಂಗ ವ್ಯವಹಾರಗಳ ಸಚಿವ ಎಸ್‌. ಜೈಶಂಕರ್ ಅವರು ಬರೆದ ‘ವೈ ಭಾರತ್ ಮ್ಯಾಟರ್ಸ್’ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. (ಎಡದಿಂದ) ಪ್ರಧಾನ ಮಂತ್ರಿಯವರ ಆರ್ಥಿಕ ಸಲಹಾ ಮಂಡಳಿ ಸದಸ್ಯ ಸಂಜೀವ್ ಸನ್ಯಾಲ್‌, ಸಂಸದ ತೇಜಸ್ವಿ ಸೂರ್ಯ, ಪಿಇಎಸ್ ವಿ.ವಿ ಸಮಕುಲಾಧಿಪತಿ ಪ್ರೊ. ಜವಹರ್ ದೊರೆಸ್ವಾಮಿ ಮತ್ತು ಕುಲಾಧಿಪತಿ ಎಂ.ಆರ್‌. ದೊರೆಸ್ವಾಮಿ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

‘ಭಾರತ: ಯುವಕರ ಜವಾಬ್ದಾರಿ’

ಬೆಂಗಳೂರು: ‘2047ರ ವೇಳೆಗೆ ದೇಶವನ್ನು ‘ಭಾರತ’ ಆಗಿ ರೂಪಿಸುವ ಜವಾಬ್ದಾರಿ ಯುವ ಜನಾಂಗದ ಮೇಲಿದೆ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಹೇಳಿದರು.

ಪಿಇಎಸ್ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ ಅಂಗವಾಗಿ ಶುಕ್ರವಾರ ಆಯೋಜಿಸಿದ್ದ ಸಂವಾದದಲ್ಲಿ ‘ದೇಶವನ್ನು ‘ಭಾರತ’ ಆಗಿ ಜಾಗತಿಕ ಮಟ್ಟದಲ್ಲಿ ಹೇಗೆ ರೂಪಿಸಲಾಗುತ್ತದೆ’ ಎಂಬ ಪ್ರಶ್ನೆಗೆ ಉತ್ತರಿಸಿದರು.

ಅಕ್ರಮ ವಲಸೆ ಕುರಿತ ವಿದ್ಯಾರ್ಥಿನಿಯ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ನಮ್ಮ ದೇಶವನ್ನು ಕಟ್ಟಲು ಬಹಳಷ್ಟು ಪರಿಶ್ರಮ ಪಟ್ಟಿದ್ದೇವೆ. ಗಡಿ ದೇಶಗಳೊಂದಿಗೆ ಉತ್ತಮ ಬಾಂಧವ್ಯ ಇರಬೇಕು ನಿಜ. ಆದರೆ ನಮ್ಮ ಸಮುದಾಯ, ಸಮಾಜವರಿಗೆ ಮೊದಲ ಆದ್ಯತೆ ಇರುತ್ತದೆ. ಅತಿಕ್ರಮ ಪ್ರವೇಶ ಮಾಡಿದರೇ ಸುಮ್ಮನೆ ಬಿಡಲು ಸಾಧ್ಯವೇ’ ಎಂದು ಮರು ಪ್ರಶ್ನಿಸಿದರು.

‘ಮೀಸಲಾತಿ ದೇಶವನ್ನು ಮುಗಿಸುತ್ತಾ ಅಥವಾ ದೇಶವೇ ಮೀಸಲಾತಿ ಮುಗಿಸುತ್ತಾ’ ಎಂಬ ಪ್ರಶ್ನೆಯನ್ನು ಸಂವಾದ ನಡೆಸಿಕೊಟ್ಟ ಸಂಸದ ತೇಜಸ್ವಿ ಸೂರ್ಯ ಹಾಗೂ ಜೈಶಂಕರ್ ಅವರನ್ನು ವಿದ್ಯಾರ್ಥಿಯೊಬ್ಬರು ಕೇಳಿದರು.

ಇದಕ್ಕೆ ಉತ್ತರ ನೀಡಲು ಇಬ್ಬರೂ ಒಬ್ಬರ ಮೇಲೆ ಒಬ್ಬರು ಜವಾಬ್ದಾರಿ ವಹಿಸಿ ನುಣುಚಿಕೊಂಡರು.

ವರಿಷ್ಠರಿಗೆ ವರದಿ– ತೇಜಸ್ವಿಗೆ ಎಚ್ಚರಿಕೆ: ‘ಎಡಪಂಥೀಯರಿಗೆ ಅವಕಾಶ ನೀಡುತ್ತಿರುವ ನಿಮ್ಮ ಬಗ್ಗೆ ವರಿಷ್ಠರಿಗೆ ವರದಿ ನೀಡಬೇಕಾಗುತ್ತದೆ’ ಎಂದು ಸಂಸದ ತೇಜಸ್ವಿ ಸೂರ್ಯ ಅವರಿಗೆ ಸಚಿವ ಎಸ್. ಜೈಶಂಕರ್ ಎಚ್ಚರಿಸಿದರು.

ಸಂವಾದದ ಸಂದರ್ಭದಲ್ಲಿ ‘ನಾನು ಎಡಭಾಗದಲ್ಲಿ ಕುಳಿತವರಿಗೆ ಅವಕಾಶ ನೀಡುತ್ತಿದ್ದೇನೆ. ಯಾವಾಗಲೂ ಅವರಿಗೆ ಅವಕಾಶ ನೀಡೊಲ್ಲ ಎಂಬ ಆರೋಪ ಇರುತ್ತದೆ. ಅದು ಇಲ್ಲಾಗಬಾರದು’ ಎಂದು ತೇಜಸ್ವಿ ಸೂರ್ಯ ಹೇಳಿದಾಗ, ಜೈಶಂಕರ್ ಮೇಲಿನಂತೆ ಹಾಸ್ಯ ಮಾಡಿದರು. ‘ಹೇಗೋ ನಾವು ಎಡಪಂಥೀಯರಿಗೆ ಅವಕಾಶ ನೀಡುವ ಸ್ಥಾನದಲ್ಲಿದ್ದೇವಲ್ಲ, ಅದಕ್ಕೆ ಕೊಡಬಹುದೇನೋ’ ಎಂದು ತೇಜಸ್ವಿ ಹೇಳಿದರು.

ವಿಶ್ವದ ಚರಿತ್ರೆಯನ್ನು ಸಾರುತ್ತಿರುವ ಅಂಚೆ ಚೀಟಿ, ಅಂಚೆ ಲಕೋಟೆಗಳು

ಕರ್ನಾಪೆಕ್ಸ್‌: ಇತಿಹಾಸ ಅನಾವರಣ

ಪ್ರಜಾವಾಣಿ ವಾರ್ತೆ



‘ಕರ್ನಾಪೆಕ್ಸ್‌–2024’ ಅಂಚೆ ಚೀಟಿಗಳ ಹಬ್ಬದಲ್ಲಿ ಅಂಚೆ ಚೀಟಿ, ಅಂಚೆ ಲಕೋಟೆಗಳನ್ನು ವೀಕ್ಷಿಸುತ್ತಿರುವ ಮಹಿಳೆಯರು – ಪ್ರಜಾವಾಣಿ ಚಿತ್ರ

ಬೆಂಗಳೂರು: ನಮ್ಮನೆಲದ ಇತಿಹಾಸವೂ ಸೇರಿದಂತೆ ವಿಶ್ವದ ಚರಿತ್ರೆಯನ್ನು ನೆನಪಿಸುವ ಹೊಸಲೋಕವೊಂದು ತೆರೆದುಕೊಂಡಿತು. ಶಾಲಾ ವಿದ್ಯಾರ್ಥಿಗಳಿಂದ ಹಿಡಿದು ಹಿರಿಯರವರೆಗೆ ಬಂದವರೆಲ್ಲ ಕುತೂಹಲದಿಂದ ನೋಡಿ ಕಣ್ತುಂಬಿಕೊಂಡರು.

ನಗರದ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಅಂಚೆ ಇಲಾಖೆಯು ಆಯೋಜಿಸಿರುವ ‘ಕರ್ನಾಪೆಕ್ಸ್‌–2024’ ಅಂಚೆ ಚೀಟಿಗಳ ಹಬ್ಬ–13ನೇ ರಾಜ್ಯಮಟ್ಟದ ಅಂಚೆ ಚೀಟಿ ಪ್ರದರ್ಶನದ ನೋಟವಿದು.

ವಿಶ್ವದ ಭೂಪಟದಲ್ಲಿರುವ ದೇಶಗಳ ವಿವಿಧ ಕಾಲಘಟ್ಟಗಳ ಇತಿಹಾಸದ ಕುರುಹುಗಳನ್ನು ಅಂಚೆ ಚೀಟಿಗಳು ಕಟ್ಟಿಕೊಟ್ಟವು. 206 ಫಿಲಾಟರ್‌ಗಳು ಸ್ಪರ್ಧೆಯಲ್ಲಿ ಹಾಗೂ 6 ಫಿಲಾಟರ್‌ಗಳು ಆಹ್ವಾನಿತರಾಗಿ ತಮ್ಮ ಸಂಗ್ರಹಗಳನ್ನು ಪ್ರದರ್ಶಿಸಿದ್ದಾರೆ.

250 ಫಿಲಾಟರ್‌ಗಳು 689 ಚೌಕಟ್ಟುಗಳಲ್ಲಿ (ಫ್ರೇಮ್) 1 ಲಕ್ಷಕ್ಕೂ ಅಧಿಕ ಅಂಚೆ ಚೀಟಿಗಳು, ಅಂಚೆ ಲಕೋಟೆಗಳನ್ನು ಪ್ರದರ್ಶಿಸಿದರು. ಇತಿಹಾಸ, ಸಂಸ್ಕೃತಿ, ಕಲೆ ಪರಂಪರೆ, ವಿಜ್ಞಾನ, ತಂತ್ರಜ್ಞಾನ, ವನ್ಯಜೀವಿಗಳು, ಸಸ್ಯಸಂಪತ್ತು, ಸ್ವಾತಂತ್ರ್ಯ ಹೋರಾಟಗಾರರು, ವಿವಿಧ ದೇಶಗಳ ಸಾಧಕರು, ಆಡಳಿತಗಾರರು, ಮಹತ್ವದ ಘಟನೆಗಳು ಪ್ರವಾಸೋದ್ಯಮ ಸ್ಥಳಗಳು, ರಾಜರು. ಯೋಧರು, ಪ್ರಾಚೀನ ಕಟ್ಟಡಗಳು, ರಾಮಾಯಣ, ಮಹಾಭಾರತ ಹೀಗೆ ನಾನಾ ತರಹದ ಚೀಟಿ, ಲಕೋಟೆಗಳಿದ್ದವು.

ವಿವಿಧ ಮಳಿಗೆಗಳು ಪ್ರದರ್ಶನಕ್ಕೆ ಇನ್ನಷ್ಟು ಮೆರುಗು ಒದಗಿಸಿದವು. ಪ್ರವಾಸೋದ್ಯಮ ಇಲಾಖೆ, ಅರಣ್ಯ ಇಲಾಖೆ, ಕೆಎಂಎಫ್ ಮತ್ತು ಕೆಎಸ್‌ಡಿಎಲ್‌ನ ಮಳಿಗೆಗಳು ತಮ್ಮ ವಿಭಾಗಗಳಿಗೆ ಸಂಬಂಧಿಸಿದ ಪ್ರದರ್ಶನ ಮತ್ತು ಮಾಹಿತಿ ನೀಡಿದವು.

ಜೊತೆಗೆ 190 ದೇಶಗಳ ಹಳೆಯ ನಾಣ್ಯ, ನೋಟು, ಅಂಚೆ ಚೀಟಿಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳು ಸಾರ್ವಜನಿಕರನ್ನು ಆಕರ್ಷಿಸಿದವು.

ಸ್ಪರ್ಧೆ: ಚಾಂಪಿಯನ್ ಶಿಪ್ ಕ್ಲಾಸ್, ಯೂತ್ ಕ್ಲಾಸ್, ಸೀನಿಯರ್ ಕ್ಲಾಸ್, ಲಿಟರೇಚರ್ ಕ್ಲಾಸ್ ಹೀಗೆ ವಿವಿಧ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆದಿದ್ದು, ಅತ್ಯುತ್ತಮ ಪ್ರದರ್ಶನಗಳು ಬಹುಮಾನ ಪಡೆಯಲಿವೆ ಎಂದು ಫಿಲಾಟಲಿಸ್ಟ್ ಜಗನ್ನಾಥ ಬಾಗಿ ಮಾಹಿತಿ ನೀಡಿದರು.

ವಿಶೇಷ ಲಕೋಟೆ ಬಿಡುಗಡೆ: ಉದ್ಘಾಟನಾ ಕಾರ್ಯಕ್ರಮದಲ್ಲಿ ವಿಶೇಷ ಲಕೋಟೆಗಳನ್ನು ಬಿಡುಗಡೆ ಮಾಡಲಾಯಿತು. ಶುಭಕಾರ್ಯ ಲಕೋಟೆ, ಸುವರ್ಣ ಕರ್ನಾಟಕ ಸಂಭ್ರಮ, ಪುನೀತ್ ರಾಜಕುಮಾರ್, ಸರ್ ಎಂ.ವಿ. ವಿಶ್ವೇಶ್ವರಯ್ಯರ ಕೊಡುಗೆ, ಎಫ್‌ಕೆಸಿಸಿಐ, ಕಾವಿಕಲೆಗಳ ಲಕೋಟೆಗಳನ್ನು ಸಂಸದ ಪಿ.ಸಿ. ಮೋಹನ್, ಚಿತ್ರ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜಕುಮಾರ್, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ, ಎಫ್‌ಕೆಸಿಸಿಐ ಅಧ್ಯಕ್ಷ ರಮೇಶ್‌ಚಂದ್ರ ಲಹೋಟಿ, ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್‌. ರಾಜೇಂದ್ರ ಕುಮಾರ್, ಪೋಸ್ಟ್ ಮಾಸ್ಟರ್ ಜನರಲ್ ಎಲ್.ಕೆ. ಡ್ಯಾಶ್ ಬಿಡುಗಡೆ ಮಾಡಿದರು.

ಈ ಪ್ರದರ್ಶನದಲ್ಲಿ ನಾಲ್ಕು ದಿನ ನಾಲ್ಕು ವಿಷಯಗಳಿಗೆ ಒತ್ತು ನೀಡಲಾಗಿದೆ. ಮೊದಲ ದಿನವಾದ ಶುಕ್ರವಾರ ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿ, ಎರಡನೇ ದಿನ ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ, ಮೂರನೇ ದಿನ ಮಾನಸಿಕ ಆರೋಗ್ಯ ಮತ್ತು ಕ್ರೀಡಾ ದಿನ ಹಾಗೂ ಜ.8ರಂದು ಮಹಿಳಾ ಸಬಲೀಕರಣ ದಿನ ಎಂದು ಗುರುತಿಸಲಾಗಿದೆ. 30 ವಿಶೇಷ ಲಕೋಟೆ ಬಿಡುಗಡೆಯಾಗಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ರಾಮಾಯಣದ ಅಂಚೆ ಚೀಟಿಯ ಫೋಲ್ಡರ್!

ರಾಮಾಯಣಕ್ಕೆ ಸಂಬಂಧಿಸಿದ ಅಂಚೆ ಚೀಟಿಗಳ ಫೋಲ್ಡರ್ ಗಮನ ಸೆಳೆಯಿತು. ಇಂಡೋನೇಷ್ಯಾದ ಬಾಲಿಯ ಡೆನ್‌ಪಸಾರ್‌ನಲ್ಲಿ 2017ರಲ್ಲಿ ನಡೆದ ಅಂಚೆ ಚೀಟಿ ಮೇಳ ‘ಬಾಲಿಫೆಕ್ಸ್‌’ನಲ್ಲಿ ರಾಮಾಯಣದ ಈ ಮಿನಿಯೇಚರ್ (ಹಿನ್ನೆಲೆಯಲ್ಲಿ ವಿವರ ಹೊಂದಿರುವ ಅಂಚೆಚೀಟಿ) ಫೋಲ್ಡರ್ ಬಿಡುಗಡೆಯಾಗಿತ್ತು.

ಬರೇ 4,000 ಫೋಲ್ಡರ್‌ಗಳನ್ನಷ್ಟೇ ಬಿಡುಗಡೆ ಮಾಡಲಾಗಿತ್ತು ಎಂದು ಇದನ್ನು ಮಾರಾಟಕ್ಕಿಟ್ಟದ್ದ ಜೋಸೆಫ್ ಡಿ ಕೌಥೊ ತಿಳಿಸಿದರು. ಇಂಡೋನೇಷ್ಯಾ ದಲ್ಲಿ ಹಿಂದೂ ಸಂಸ್ಕೃತಿಗೆ ಸಂಬಂಧಿ ಸಿದ ಅಂಚೆಚೀಟಿಗಳು ಹೊಸದಲ್ಲ ಎಂದು ಮಾಹಿತಿ ನೀಡಿದರು.

2022ರ ನವೆಂಬರ್‌ನಲ್ಲಿ ಬಾಲಿಯಲ್ಲಿ ನಡೆದ ‘ಬಾಲಿ ಫೆಕ್ಸ್‌’ನಲ್ಲಿ ಬಿಡುಗಡೆಯಾಗಿದ್ದ ಮಹಾಭಾರತದಲ್ಲಿ ಗೀತೋಪದೇಶ ಮಾಡುತ್ತಿರುವ ಚಿತ್ರದ ಅಂಚೆ ಚೀಟಿಗಳು ಪಕ್ಕದ ಮಳಿಗೆಯಲ್ಲಿ ಮಾರಾಟಕ್ಕೆ ಇಡಲಾಗಿತ್ತು. ಮೊದಲ ದಿನ ಖರೀದಿಸುವವರ ಸಂಖ್ಯೆ ಕಡಿಮೆ ಇತ್ತು. ಸಂದರ್ಶಕರಿಗೆ ಉಚಿತವಾಗಿ ಕರ್ನಾಪೆಕ್ಸ್ ಮೊಹರಿನ ಕಾರ್ಡ್ ವಿತರಿಸಲಾಯಿತು.

ಚಿತ್ರಸಂತೆ: ವಾಹನ ಸಂಚಾರ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರಕಲಾ ಪರಿಷತ್, ಜ.7ರಂದು ಕುಮಾರ ಕೃಪಾ ರಸ್ತೆಯಲ್ಲಿ 21ನೇ ಚಿತ್ರಸಂತೆ ಆಯೋಜಿಸಿದ್ದು ಅಂದು ಬೆಳಿಗ್ಗೆ 6ರಿಂದ ರಾತ್ರಿ 9ರವರೆಗೆ ಕುಮಾರ ಕೃಪಾ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಕುಮಾರಕೃಪಾ ರಸ್ತೆ ಹಾಗೂ ಹರೇ ಕೃಷ್ಣ ರಸ್ತೆಯ ಉಕ್ಕಿನ ಕೆಳಸೇತುವೆ ಭಾಗದ ಶಿವಾನಂದ ವೃತ್ತದಿಂದ ಗುರುರಾಜ ಜಂಕ್ಷನ್ ಬಳಿಯ ನವಕರ್ನಾಟಕ ಪಬ್ಲಿಕೇಷನ್ ಕಟ್ಟಡದವರೆಗಿನ ಉತ್ತರ ಭಾಗದ ರಸ್ತೆಯಲ್ಲಿ ಎಲ್ಲ ಮಾದರಿಯ ವಾಹನಗಳ ಸಂಚಾರ ನಿಷೇಧಿಸಲಾಗಿದೆ. ವಾಹನಗಳಿಗೆ ಪರ್ಯಾಯ ಮಾರ್ಗ ಹಾಗೂ ವಾಹನ ನಿಲುಗಡೆಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದೆ.

ವಾಹನಗಳ ಮಾರ್ಗ ಬದಲಾವಣೆ: ಮೌರ್ಯ ವೃತ್ತ ಮತ್ತು ಆನಂದರಾವ್ ವೃತ್ತದ ಕಡೆಯಿಂದ ಬರುವ ವಾಹನ ಸಂಚಾರವನ್ನು ರೇಸ್ ವ್ಯೂ ಜಂಕ್ಷನ್ ಮೂಲಕ ಕೆ.ಕೆ.ರಸ್ತೆ ಪ್ರವೇಶಿಸುವುದನ್ನು ನಿರ್ಬಂಧಿಸಲಾಗಿದೆ.

ಈ ರಸ್ತೆಯಲ್ಲಿ ಸಂಚರಿಸುವ ವಾಹನಗಳು ಟ್ರಿಲೈಟ್ ಜಂಕ್ಷನ್ – ಬಸವೇಶ್ವರ ವೃತ್ತ ಹಳೇ ಹೈಗೌಂಡ್ಸ್ ಜಂಕ್ಷನ್ – ವಿಂಡ್ಸನ್ ಮ್ಯಾನರ್ ವೃತ್ತದ ಮೂಲಕ ಮುಂದಕ್ಕೆ ಸಾಗಬೇಕು.

ಟಿ.ಚೌಡಯ್ಯ ರಸ್ತೆಯಿಂದ ಬಂದು ವಿಂಡ್ಸನ್ ಮ್ಯಾನರ್ ವೃತ್ತದ ಮೂಲಕ ಕೆ.ಕೆ.ರಸ್ತೆ ಪ್ರವೇಶಿಸುವ ವಾಹನಗಳನ್ನು ವಿಂಡ್ಸರ್ ಮ್ಯಾನರ್ ಬಳಿ ನಿರ್ಬಂಧಿಸಲಾಗಿದೆ. ಈ ವಾಹನಗಳು ಟಿ.ಚೌಡಯ್ಯ ರಸ್ತೆ–ಹಳೇ ಹೈಗ್ರೌಂಡ್ಸ್ ಜಂಕ್ಷನ್‌-ಎಲ್‌ಆರ್‌ಡಿಇ ಬಸವೇಶ್ವರ ವೃತ್ತ ರೇಸ್ ಕೋರ್ಸ್ ರಸ್ತೆ ಮೂಲಕ ಮುಂದೆ ಸಾಗಬಹುದಾಗಿದೆ.

ಶೇಷಾದ್ರಿಪುರ ಕಡೆಯಿಂದ ನೆಹರೂ ವೃತ್ತದ ಮಾರ್ಗವಾಗಿ ಚಾಲುಕ್ಯ ಸರ್ಕಲ್ ಕಡೆ ಹೋಗುವವರು ಶಿವಾನಂದ ವೃತ್ತದ ಮೇಲ್ಸೇತುವೆ (ಸ್ಟೀಲ್ ಬ್ರಿಡ್ಜ್) ಮೂಲಕ ಮುಂದಕ್ಕೆ ತೆರಳಬಹುದಾಗಿದೆ.

ಜನಸ್ಪಂದನ: ಶಿವಾಜಿನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಆರ್‌ಬಿಎಎನ್‌ಎಂಎಸ್ ಮೈದಾನದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಜ.6ರಂದು ನಾಗರಿಕರ ಅಹವಾಲು ಸ್ವೀಕರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಕೆಲವು ರಸ್ತೆಯಲ್ಲಿ ವಾಹನ ನಿಲುಗಡೆ ನಿಷೇಧಿಸಲಾಗಿದೆ.

ಸೇಂಟ್ ಜಾನ್ಸ್ ರಸ್ತೆ, ಗಂಗಾಧರಚೆಟ್ಟಿ ರಸ್ತೆ, ಡಿಕನ್ಸನ್ ರಸ್ತೆಯ ಎರಡೂ ಬದಿಯಲ್ಲಿ ನಿರ್ಬಂಧಿಲಾಗಿದೆ.

ವಾಹನ ನಿಲುಗಡೆ ಸ್ಥಳಗಳು: ದ್ವಿಚಕ್ರ ವಾಹನ ಸವಾರರಿಗೆ ಅಣ್ಣಸ್ವಾಮಿ ಮೊದಲಿಯಾರ್ ರಸ್ತೆ ಮತ್ತು ಶ್ರೀಸರ್ಕಲ್‌ನಿಂದ ಆರ್‌ಬಿಐ ಸರ್ಕಲ್‌ವರೆಗೆ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ.

ನಾಲ್ಕು ಚಕ್ರದ ವಾಹನ ಸವಾರರಿಗೆ ಸೇಂಟ್ ಜಾನ್ಸ್ ರಸ್ತೆಯ ಸುಬ್ರಮಣ್ಯ ಸ್ವಾಮಿ ದೇವಸ್ಥಾನದ ಆವರಣ, ಡಿಕನ್ಸನ್ ರಸ್ತೆಯ ಹಸನತ್ ಕಾಲೇಜು ಮೈದಾನ, ಡಿಕನ್ಸನ್ ರಸ್ತೆಯ ಆರ್‌ಬಿಎಎನ್‌ಎಂಎಸ್ ಶಾಲೆಯ ಮೈದಾನ, ತಿರುವಳ್ಳುವರ್ ಪ್ರತಿಮೆಯ ಹಿಂಭಾಗದ ಆರ್‌ಬಿಎಎನ್‌ಎಂಎಸ್ ಸಂಜೆ ಕಾಲೇಜಿನ ಆವರಣದಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಚಿತ್ರಸಂತೆಗೆ ಮೆಟ್ರೊ ಫೀಡರ್ ಬಸ್

ಕುಮಾರಕೃಪಾ ರಸ್ತೆಯಲ್ಲಿರುವ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಜ.7ರಂದು ಆಯೋಜಿಸಲಾಗಿರುವ ಚಿತ್ರಸಂತೆ ಕಾರ್ಯಕ್ರಮಕ್ಕೆ ತೆರಳುವವರಿಗೆ ಅನುಕೂಲಕ್ಕಾಗಿ ಮೆಟ್ರೊ ಫೀಡರ್ ಬಸ್ ಕಾರ್ಯಾಚರಣೆ ಮಾಡಲು ಬಿಎಂಟಿಸಿ ನಿರ್ಧರಿಸಿದೆ.

ಜ.7ರಂದು ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಕೆಂಪೇಗೌಡ ಬಸ್ ನಿಲ್ದಾಣ–ಆನಂದರಾವ್ ಸರ್ಕಲ್–ಶಿವಾನಂದ ಸ್ಟೋರ್ಸ್ ರಸ್ತೆಯಲ್ಲಿ ನಾಲ್ಕು ಬಸ್‌ಗಳು ಮತ್ತು ಮಂತ್ರಿ ಮಾಲ್ ಮೆಟ್ರೊ ನಿಲ್ದಾಣ-ವಿಧಾನಸೌಧ ಸೆಂಟ್ರಲ್ ಟಾಕೀಸ್, ಲಿಂಕ್ ರಸ್ತೆ, ಶಿವಾನಂದ ಸ್ಟೋರ್ಸ್ ರಸ್ತೆಯಲ್ಲಿ ನಾಲ್ಕು ಬಸ್‌ಗಳು ಪ್ರತಿ 10 ನಿಮಿಷಕ್ಕೆ ಒಂದರಂತೆ ಟ್ರಿಪ್ ನಡೆಸಲಿವೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.



ಶವ ಹೊರ ತೆಗೆದು ಮತ್ತೊಮ್ಮೆ ಅಂತ್ಯಕ್ರಿಯೆ

ತುಮಕೂರು: ತಾಲ್ಲೂಕಿನ ದುರ್ಗದಹಳ್ಳಿ ಮುಖ್ಯರಸ್ತೆ ಬದಿ ಡಿ.17ರಂದು ಅಂತ್ಯ ಸಂಸ್ಕಾರ ನೆರವೇರಿಸಿದ್ದ ಶವವನ್ನು ಅಧಿಕಾರಿಗಳ ಸಮ್ಮುಖದಲ್ಲಿ ಶುಕ್ರವಾರ ಹೊರತೆಗೆದು ಬೇರೆಡೆ ಶವ ಸಂಸ್ಕಾರ ಮಾಡಲಾಗಿದೆ.

ದುರ್ಗದಹಳ್ಳಿ ಪೆದ್ದಯ್ಯ (65) ಮೃತಪಟ್ಟಿದ್ದರು. ಸ್ಮಶಾನಕ್ಕೆ ಮೃತದೇಹ ತೆಗೆದುಕೊಂಡು ಹೋಗಲು ಸೂಕ್ತ ದಾರಿ ಇಲ್ಲದೆ ಕುಟುಂಬದ ಸದಸ್ಯರು ಮುಖ್ಯ ರಸ್ತೆ ಪಕ್ಕದಲ್ಲೇ ಶವ ಸಂಸ್ಕಾರ ಮಾಡಿದ್ದರು. ರಸ್ತೆ ಬದಿ ಅಂತ್ಯ ಸಂಸ್ಕಾರ ಮಾಡಿದ್ದಕ್ಕೆ ಗ್ರಾಮಸ್ಥರು ವಿರೋಧ ವ್ಯಕ್ತಪಡಿಸಿ, ಶವವನ್ನು ಸ್ಥಳಾಂತರ ಮಾಡುವಂತೆ ಅಧಿಕಾರಿಗಳಿಗೆ ಮನವಿ ಮಾಡಿದ್ದರು. ಶುಕ್ರವಾರ ಸ್ಥಳಕ್ಕೆ ಭೇಟಿ ನೀಡಿದ ಅಧಿಕಾರಿಗಳು, ಶವ ಹೊರ ತೆಗೆಸಿದರು. ನಂತರ ದೇವರಾಯನದುರ್ಗದ ಬೆಟ್ಟದ ತಪ್ಪಲಿನಲ್ಲಿ ಗುರುತಿಸಿರುವ ಸ್ಮಶಾನದಲ್ಲಿ ಮತ್ತೊಮ್ಮೆ ಅಂತ್ಯಕ್ರಿಯೆ ನೆರವೇರಿಸಿದರು.



ಯಶವಂತಪುರದಿಂದ ನಾಗಸಂದ್ರ ಕಡೆಗೆ ಮೆಟ್ರೊ ಸ್ಥಗಿತಗೊಂಡಿದ್ದರಿಂದ ಯಶವಂತಪುರದಲ್ಲಿ ಇಳಿದ ಪ್ರಯಾಣಿಕರು ಬಸ್‌ಗಳಲ್ಲಿ ಪ್ರಯಾಣಿಸಲು ತೆರಳಿದರು

ಹಳಿಗೆ ಹಾರಿದ ಯುವಕ ಮೆಟ್ರೊ ಸಂಚಾರ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಲಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ಕೇರಳದ ಯುವಕ ಶುಕ್ರವಾರ ಹಳಿಗೆ ಹಾರಿದ್ದು, ತಲೆಗೆ ಏಟು ಬಿದ್ದಿದೆ. ಹಸಿರು ಮಾರ್ಗದಲ್ಲಿ ಯಶವಂತಪುರ–ನಾಗಸಂದ್ರ ನಡುವೆ 45 ನಿಮಿಷಕ್ಕೂ ಅಧಿಕ ಸಮಯ ಮೆಟ್ರೊ ರೈಲು ಸಂಚಾರ ಸ್ಥಗಿತಗೊಂಡಿತು.

ಅಬ್ಬಿಗೆರೆಯ ಅಚ್ಚಪ್ಪ ಲೇಔಟ್‌ನಲ್ಲಿರುವ ಸಮರತ್ ಆಟೋಮೋಟಿವ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಸಿಎನ್‌ಸಿ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದ ಕೇರಳದ ಅಲಪ್ಪುಳದ ಸರೋನ್ (23) ಸಂಜೆ 7.12ಕ್ಕೆ ಮೆಟ್ರೊ ರೈಲು ಬರುವ ಸಮಯದಲ್ಲಿ ಹಾರಿದ್ದರು. ರೈಲು ಮತ್ತು ಪ್ಲ್ಯಾಟ್‌ಫಾರ್ಮ್ ನಡುವೆ ಸಿಲುಕಿದ್ದನ್ನು ಕಂಡ ಬಿಎಂಆರ್‌ಸಿಎಲ್ ಸಿಬ್ಬಂದಿ ಕೂಡಲೇ ವಿದ್ಯುತ್ ಸಂಪರ್ಕ ಕಡಿತಗೊಳಿಸಿದರು. ‘ತಲೆಗೆ ಏಟು ಬಿದ್ದಿರುವ ಯುವಕನನ್ನು ಸಪ್ತಗಿರಿ ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಬಿ.ಎಲ್. ಯಶವಂತ ಚವಾಣ್ ತಿಳಿಸಿದ್ದಾರೆ.

ಘಟನೆಯ ಸಮಯದಲ್ಲಿ ನಾಲ್ಕು ರೈಲುಗಳು ಇತರ ನಿಲ್ದಾಣಗಳ ಪ್ಲ್ಯಾಟ್‌ಫಾರ್ಮ್‌ಗಳಲ್ಲಿ ಸ್ಥಗಿತಗೊಂಡವು. ಪ್ರಯಾಣಿಕರಲ್ಲಿ ಒಮ್ಮೆಲೇ ಗೊಂದಲ ಉಂಟಾಯಿತು. ಎಲ್ಲ ರೈಲುಗಳಿಂದ ಪ್ರಯಾಣಿಕರನ್ನು ಸುರಕ್ಷಿತವಾಗಿ ಹೊರಗೆ ಕಳುಹಿಸಲಾಯಿತು.

ಸಿಗ್ನಲಿಂಗ್ ಹೊಂದಾಣಿಕೆ ಮಾಡಿ 8 ಗಂಟೆಗೆ ಮೆಟ್ರೊ ರೈಲು ಸಂಚಾರ ಪುನರಾರಂಭಗೊಂಡಿತು. ಅಲ್ಲಿವರೆಗೆ ಯಶವಂತಪುರ–ರೇಷ್ಮೆ ಸಂಸ್ಥೆ ನಡುವೆ ಮಾತ್ರ ರೈಲು ಸಂಚಾರ ನಡೆಸಲಾಯಿತು.

ಒಂದು ವಾರದಲ್ಲಿ ಪ್ರಯಾಣಿಕರೊಬ್ಬರು ಮೆಟ್ರೊ ಟ್ರ್ಯಾಕ್ ಮೇಲೆ ಹಾರಿದ ಎರಡನೇ ಘಟನೆ ಇದಾಗಿದೆ. ಜ. 1 ರಂದು ಇಂದಿರಾನಗರ ನಿಲ್ದಾಣದಲ್ಲಿ ಕೆಳಗೆ ಬಿದ್ದ ತನ್ನ ಮೊಬೈಲ್ ತೆಗೆದುಕೊಳ್ಳಲು ಮಹಿಳೆಯೊಬ್ಬರು ಹಾರಿದ್ದರು. ಆಗ 15 ನಿಮಿಷ ಮೆಟ್ರೊ ಸೇವೆ ಸ್ಥಗಿತವಾಗಿತ್ತು.

ನಗರದಲ್ಲಿ ಇಂದು

ಡ್ರಗ್ಸ್ ವಿರುದ್ಧ ಜಾಗೃತಿ ವಾಕಥಾನ್: ಅತಿಥಿಗಳು: ಡಾಲಿ ಧನಂಜಯ್, ಸಂಜನಾ ಆನಂದ್, ಬಿ. ದಯಾನಂದ್, ರಮಣ್ ಗುಪ್ತಾ, ದೇವರಾಜ್, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಇಂಡಿಯನ್ ಎಕ್ಸ್‌ಪ್ರೆಸ್ ವೃತ್ತದಿಂದ ಪ್ರಾರಂಭ, ಬೆಳಿಗ್ಗೆ 7.30

ಎಂಎಸ್‌ಎಂಇ, ಸ್ಟಾರ್ಟ್‌ಅಪ್ ಸಮಾವೇಶ: ಉದ್ಘಾಟನೆ: ಪನ್ನಾರಾಜ್ ಎಸ್., ಅತಿಥಿಗಳು: ರಮೇಶ್ ಚಂದ್ರ ಲಹೋಟಿ, ಗೀತಾ ಎ.ಬಿ., ಎಸ್.ಎಸ್. ನಾಯಕ್, ರವೀಂದ್ರ ಎಸ್. ಕೋಟೆ, ಆಯೋಜನೆ: ಎಫ್‌ಕೆಸಿಸಿಐ, ಸ್ಥಳ: ಸರ್ ಎಂ.ವಿಶ್ವೇಶ್ವರಯ್ಯ ಸಭಾಂಗಣ, ಕೆ.ಜಿ. ರಸ್ತೆ, ಬೆಳಿಗ್ಗೆ 9

ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಗೃಹರಕ್ಷ ದಳ, ಪೌರ ರಕ್ಷಣೆ ಹಾಗೂ ರಾಜ್ಯ ವಿಪತ್ತು ಸ್ಪಂದನಾ ಪಡೆಗಳ ವೃತ್ತಿಪರ ಕ್ರೀಡಾಕೂಟ: ಉದ್ಘಾಟನೆ: ನೀಲಮಣಿ ಎನ್. ರಾಜು, ಕಮಲ್ ಪಂತ್, ಸ್ಥಳ: ಆರ್.ಎ. ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿ ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 9

‘ಬಾಗಿಲಿಗೆ ಬಂತು ಸರ್ಕಾರ–ಸೇವೆಗೆ ಇರಲಿ ಸಹಕಾರ’: ಉದ್ಘಾಟನೆ: ಡಿ.ಕೆ. ಶಿವಕುಮಾರ್, ಆಯೋಜನೆ: ಬಿಬಿಎಂಪಿ, ಸ್ಥಳ: ಆರ್.ಬಿ.ಎ.ಎನ್.ಎಂ.ಎಸ್. ಹೈಸ್ಕೂಲ್ ಮೈದಾನ, ಸೇಂಟ್ ಜಾನ್ಸ್ ರಸ್ತೆ, ಶಿವನ್ ಚೆಟ್ಟಿ ಗಾರ್ಡನ್, ಬೆಳಿಗ್ಗೆ 9.30

‘ಅಭಿಜಾತೆ–2024’ ರಾಜ್ಯ ತೃತೀಯ ವಿಪ್ರ ಮಹಿಳಾ ಸಮ್ಮೇಳನ: ಉದ್ಘಾಟನೆ: ನಿರ್ಮಲಾ ಸೀತಾರಾಮನ್, ಸ್ಮರಣ ಸಂಚಿಕೆ ಬಿಡುಗಡೆ: ವಿ.ಆರ್. ಗೌರಿಶಂಕರ್, ಆಹಾರ ಮೇಳದ ಉದ್ಘಾಟನೆ: ತೇಜಸ್ವಿ ಸೂರ್ಯ, ಅತಿಥಿಗಳು: ತೇಜಸ್ವಿನಿ ಅನಂತಕುಮಾರ್, ಉದಯ್ ಗರುಡಾಚಾರ್, ಎಲ್.ಎ. ರವಿಸುಬ್ರಮಣ್ಯ, ಸಿ.ಕೆ. ರಾಮಮೂರ್ತಿ, ಪ್ರಾಸ್ತಾವಿಕ ನುಡಿ: ಅಶೋಕ ಹಾರನಹಳ್ಳಿ, ಆಯೋಜನೆ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಸ್ಥಳ: ಭಾರತೀತೀರ್ಥ ಭವನ, ಶೃಂಗೇರಿ ಶಂಕರಮಠ, ಶಂಕರಪುರ, ಬೆಳಿಗ್ಗೆ 10

ಸಾರ್ವತ್ರಿಕ ಪಿಂಚಣಿ ಕುರಿತು ವಿಚಾರಸಂಕಿರಣ: ಉದ್ಘಾಟನೆ: ಕುಂಞಿ ಕೃಷ್ಣನ್, ಅತಿಥಿಗಳು: ಪ್ರಭಾತ್ ಪಟ್ನಾಯಕ್, ಮೀನಾಕ್ಷಿ ಸುಂದರಂ, ಅಮ್ಮಾನುಲ್ಲಾ ಖಾನ್, ಎಸ್.ಕೆ. ಗೀತಾ, ಸ್ಥಳ: ಎನ್‌ಜಿಒ ಹಾಲ್, ಕಬ್ಬನ್ ಉದ್ಯಾನ, ಬೆಳಿಗ್ಗೆ 10

‘ಕರ್ನಾಪೆಕ್ಸ್–2024’ ಅಂಚೆಚೀಟಿಗಳ ಹಬ್ಬ: ಅತಿಥಿಗಳು: ಕೆ. ಕಸ್ತೂರಿರಂಗನ್, ಎನ್. ಸುಧೀರ ಕುಮಾರ್, ಆಯೋಜನೆ: ಅಂಚೆ ಇಲಾಖೆ, ಸ್ಥಳ: ಕಂಠೀರವ ಒಳಾಂಗಣ ಕ್ರೀಡಾಂಗಣ, ಕಸ್ತೂರಿ ಬಾ ರಸ್ತೆ, ಬೆಳಿಗ್ಗೆ 10

ವಾರ್ಷಿಕೋತ್ಸವ: ಉದ್ಘಾಟನೆ: ಕೆ. ಗೋಪಾಲಯ್ಯ, ಅತಿಥಿಗಳು: ರಾಜು ಎನ್., ನಂದಕುಮಾರ್, ಅಧ್ಯಕ್ಷತೆ: ರವಿ ಪ್ರಕಾಶ್, ಆಯೋಜನೆ ಮತ್ತು ಸ್ಥಳ: ಅಂಬೇಡ್ಕರ್ ಮೆಮೊರಿಯಲ್ ಸೊಸೈಟಿ, ಮಹಾಲಕ್ಷ್ಮಿಪುರ, ಬೆಳಿಗ್ಗೆ 10.30

‘ಕಾರ್ಟೂನಿಸ್ಟ್ ಇಂಡಿಯಾ–2023’ ವ್ಯಂಗ್ಯಚಿತ್ರಗಳ ಪ್ರದರ್ಶನ: ಉದ್ಘಾಟನೆ: ಎಚ್.ಎಸ್. ಬಲರಾಂ, ಅತಿಥಿ: ಅಮರನಾಥ ಕಾಮತ್, ಆಯೋಜನೆ ಮತ್ತು ಸ್ಥಳ: ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆ, ಮಿಡ್‌ಫೋರ್ಡ್ ಗಾರ್ಡನ್, ಟ್ರಿನಿಟಿ ವೃತ್ತ, ಬೆಳಿಗ್ಗೆ 11

ಕಥೆ ಕೇಳೋಣ ಬನ್ನಿ: ಕಥೆ ಹೇಳುವವರು: ಎಂ.ಸಿ. ಪ್ರಕಾಶ್, ಅತಿಥಿಗಳು: ಎಸ್. ಸುರೇಶ್ ಕುಮಾರ್, ಸಾವಿತ್ರಿ, ಅಧ್ಯಕ್ಷತೆ: ವತ್ಸಲಾ ಶಾಸ್ತ್ರಿ, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಭುವನ್–ಬಿಬಿಎಂಪಿ ಶಾಲೆ, ಬೆಳಿಗ್ಗೆ 11.30

‘ಚಿತ್ರಕಲಾ ಸಮ್ಮಾನ್’ ಪ್ರಶಸ್ತಿ ಪ್ರದಾನ: ಜಿ. ಪರಮೇಶ್ವರ್, ಪುರಸ್ಕೃತರು: ವಸುಧಾ ತೋಜುರ್, ಬಿ.ವಿ. ಸುರೇಶ್, ಎಲ್.ಎನ್. ತಲ್ಲೂರ್, ಬಿ.ಬಿ. ರಾಘವೇಂದ್ರ, ಅಧ್ಯಕ್ಷತೆ: ಬಿ.ಎಲ್. ಶಂಕರ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11.30



ಮಾಹಿ ಮರಾಠೆ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಮಾಹಿ ಮರಾಠೆ, ಆಯೋಜನೆ: ನೃತ್ಯೋದಯ, ಸ್ಥಳ: ವಿವೇಕ ಆಡಿಟೋರಿಯಂ, ಜಯನಗರ, ಸಂಜೆ 5

ಬಂಜಗೆರೆ ಜಯಪ್ರಕಾಶ್ ಅವರ ‘ಬೇಗಂಪುರ’ ಪುಸ್ತಕದ ಕುರಿತು ಸಂವಾದ: ಅತಿಥಿಗಳು: ಸಿ.ಜಿ. ಲಕ್ಷ್ಮೀಪತಿ, ಸಿ.ಬಿ. ಹೊನ್ನುಸಿದ್ಧಾರ್ಥ್, ಆಯೋಜನೆ: ಬಯಲು ಬಳಗ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಸಂಜೆ 4

ಪಿಇಎಸ್ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ: ಅತಿಥಿಗಳು: ಜವಹರ್ ದೊರೆಸ್ವಾಮಿ, ಸಾಯಿ ದೀಪಕ್ ಜಯಕುಮಾರ್, ಸಂವಾದ ಕಾರ್ಯಕ್ರಮ: ಸುಧಾಮೂರ್ತಿ, ಲಕ್ಷ್ಮಿ ಪ್ರಾತುರಿ, ಸನ್ಮಾನ: ರೂಪಾ ಸುರೇಶ್, ಮೇಕಿನ್ ಮಹೇಶ್ವರಿ, ಹರೀಶ್ ದ್ವಾರಕನಹಳ್ಳಿ, ಅಧ್ಯಕ್ಷತೆ: ಎಂ.ಆರ್. ದೊರೆಸ್ವಾಮಿ, ಆಯೋಜನೆ ಮತ್ತು ಸ್ಥಳ: ಪಿಇಎಸ್ ವಿಶ್ವವಿದ್ಯಾಲಯ, ಆರ್.ಆರ್. ಆವರಣ, ಬಿಎಸ್‌ಕೆ 3ನೇ ಹಂತ, ಸಂಜೆ 4.50

ಸಂಸ್ಕೃತ ವಿದ್ವತ್ಸಮ್ಮಾನ ಸಮಾರಂಭ: ಉಪಸ್ಥಿತಿ: ಯತಿರಾಜನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಆಯೋಜನೆ: ಮೈಸೂರು ಎಜುಕೇಷನ್ ಸೊಸೈಟಿ, ಸ್ಥಳ: ಎಂ.ಇ.ಎಸ್. ಕಾಲೇಜು ಸಭಾಂಗಣ, ಮಲ್ಲೇಶ್ವರ, ಸಂಜೆ 5

ವಾರ್ಷಿಕೋತ್ಸವ: ಅತಿಥಿ: ಗಿರಿಜಾ ಲೋಕೇಶ್, ‘ಶಾಂತಾ ರಾಧಾಕೃಷ್ಣ’ ದತ್ತಿ ಪ್ರಶಸ್ತಿ ಪ್ರದಾನ: ಶಿವ ಜಯಗೋಪಾಲ್, ಅಖಿಲಾ, ಪುರಸ್ಕೃತರು: ಲತಾ ರಾಜೇಂದ್ರನ್, ಆಯೋಜನೆ: ಎಸ್.ಜಿ.ಎಸ್. ವಾಗ್ದೇವಿ ಸಂಪರ್ಕ ನ್ಯೂನ್ಯತೆಯುಳ್ಳವರ ಪುನಃಶ್ಚೇತನ ಕೇಂದ್ರ, ಗಿರಿನಗರ, ಸಂಜೆ 5

ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಆಶೀರ್ವಚನ, ಧನುರ್ಮಾಸದ ಇಷ್ಟಲಿಂಗ ಮಹಾಶಿವಪೂಜೆ: ಸಾನ್ನಿಧ್ಯ: ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದ ಸ್ವಾಮೀಜಿ, ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ: ಬಿ.ಎಸ್. ಯಡಿಯೂರಪ್ಪ, ‘ಪಂಚಾಚಾರ್ಯಶ್ರೀ ಪ್ರಶಸ್ತಿ’ ಪ್ರದಾನ: ಪುರಸ್ಕೃತರು: ಪಂಕಜ್ ರಾಯ್, ಸ್ಥಳ: ಜಗಜ್ಯೋತಿ ಬಸವೇಶ್ವರ ಸುಜ್ಞಾನ ಮಂಟಪ, ಕಾರ್ಡ್ ರಸ್ತೆ, ವಿಜಯನಗರ, ಸಂಜೆ 6

‘ಕಥಾಖಂಡ’ ನಾಟಕ ಪ್ರದರ್ಶನ: ನಿರ್ದೇಶನ: ಪಿ.ಡಿ. ಸತೀಶ್ ಚಂದ್ರ, ಆಯೋಜನೆ: ಪ್ರಕಸಂ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in



ಪರಿಪೂರ್ಣತೆ ಪಾಪಪ್ರಜ್ಞೆಯ ನಡುವೆ...

'ಒಂದು ಹೆಣ್ಣು ಪರಿಪೂರ್ಣವಾಗೋದು ಅವಳು ತಾಯಿಯಾದ ಮೇಲೆಯೇ' ಎನ್ನುವ ಆದರ್ಶದ ಮಾತುಗಳನ್ನು ಕೇಳಿಕೊಂಡೇ ಬೆಳೆದವರು ನಾವು. ಆದರೆ, ತಾಯಿಯಾದ ಮೇಲೆ ನಮ್ಮ ಅಸ್ತಿತ್ವವೇ ಕಡೆಗಣಿಸುವಂತಾಗುವುದು ಗಮನಕ್ಕೆ ಬಂದಾಗ ಕ್ಷೀಷೆ ಎನಿಸಿತು. ಅಷ್ಟಕ್ಕೂ ಮಗುವಾದ ಮೇಲೆ ವೃತ್ತಿಯನ್ನು ಮುಂದುವರಿಸಬೇಕೇ ಬೇಡವೇ ಎನ್ನುವ ಆಯ್ಕೆ ನಮ್ಮ ಕೈಯಲ್ಲಿ ಇರುವುದಿಲ್ಲ. ಅದು ಮನೆಯವರ ಕೈಯಲ್ಲಿ ಇರುತ್ತದೆ.

ನಮ್ಮನ್ನೇ ನಂಬಿ ಈ ಭೂಮಿಗೆ ಬರುವ ಕಂದಮ್ಮಗಳಿಗೆ ಸಿಗಬೇಕಾದ ಸಮಯ, ಆರೈಕೆ, ಮಮತೆಯನ್ನು ನೀಡಿ ಪೊರೆಯಬೇಕಾದುದು ನಮ್ಮ ಕರ್ತವ್ಯ. ಆದರೆ ಅದಕ್ಕಾಗಿ ನಮ್ಮ ವೈಯಕ್ತಿಕ ಆಸೆ–ಆಕಾಂಕ್ಷೆ, ವೃತ್ತಿ, ಬೆಳವಣಿಗೆಯನ್ನು ಕಡೆಗಣಿಸಬೇಕಾಗಿ ಬಂದಾಗ ಸಹಜವಾಗಿಯೇ ಬೇಸರ ಹುಟ್ಟುತ್ತದೆ. ಈ ಸಮಯದಲ್ಲಿ ಮನೆಯ ಕಡೆಯಿಂದ ಒಂದಷ್ಟು ಸಹಕಾರ ದೊರೆತರೆ ವೃತ್ತಿಯನ್ನೂ, ತಾಯ್ತನವನ್ನೂ ಸರಿದೂಗಿಸಿಕೊಂಡು ಹೋಗಬಹುದು. ಅದರ ಬದಲು 'ನೀನು ದುಡಿದು ಯಾರನ್ನು ಸಾಕಬೇಕು, ಮಕ್ಕಳನ್ನು ನೋಡಿಕೊ ಸಾಕು' ಎನ್ನುವಂಥ ಮಾತುಗಳು ಮನೋಬಲವನ್ನು ಕುಗ್ಗಿಸುತ್ತವೆ. ನನಗೆ ವೃತ್ತಿ ಹಾಗೂ ಮಕ್ಕಳು–ಎರಡರ ನಡುವೆ ಮಕ್ಕಳ ಭವಿಷ್ಯವನ್ನೇ ಆಯ್ಕೆ ಮಾಡಿಕೊಳ್ಳಬೇಕಾದ ಸಂದರ್ಭ ಎದುರಾಯಿತು. ವೃತ್ತಿಬದುಕಿನಿಂದ ಒಮ್ಮೆ ಹಿಂದೆ ಹೆಜ್ಜೆ ಇಟ್ಟ ಮೇಲೆ ಮತ್ತೆ ಅಲ್ಲಿ ಜಾಗ ಪಡೆಯುವುದು ಅಷ್ಟು ಸುಲಭವಲ್ಲ. ಇಷ್ಟು ಕಷ್ಟ ಪಟ್ಟು ಸ್ನಾತಕೋತ್ತರ ಪದವಿ ಪಡೆದರೂ ಮನೆಯಲ್ಲಿ ಉಳಿಯುವಂತಾಯಿತಲ್ಲ ಎನ್ನುವ ಬೇಸರವಿದೆ. ಪರಿಪೂರ್ಣ ಅಮ್ಮನಾಗುವುದರ ನಡುವೆ, ಅಷ್ಟೊಳ್ಳೆ ಕೆಲಸ ಬಿಟ್ಟು ಬಿಟ್ಟೆ ಎನ್ನುವ ಪಾಪಪ್ರಜ್ಞೆಯೂ ಇದ್ದೇ ಇದೆ.

ವಿಜಯಾ ಯೋಗೇಶ್
ಗೃಹಿಣಿ, ಮಲ್ಲತ್ತಹಳ್ಳಿ



ಚಿಕ್ಕ ಮಕ್ಕಳಿರುವ ಉದ್ಯೋಗಸ್ಥ ಮಹಿಳೆಯರು ತಮ್ಮ ಕೌಟುಂಬಿಕ ಕಾರಣಗಳಿಗಾಗಿ ತಮ್ಮ ಉದ್ಯೋಗವನ್ನು ತ್ಯಜಿಸಿ, ಕುಟುಂಬಕ್ಕಾಗಿ ತೆರುವ ಬೆಲೆಯನ್ನು 'ಮೆಟರ್ನಿಟಿ ಪೆನಾಲ್ಟಿ' ಅಥವಾ 'ತಾಯ್ತನದಿಂದಾಗಿ ತೆರಬೇಕಾಗಿರುವ ದಂಡ' ಎಂಬುದಾಗಿ ಸಮಾಜವಿಜ್ಞಾನಿಗಳು ಉಲ್ಲೇಖಿಸುತ್ತಾರೆ. ಈ ಬಗ್ಗೆ ಇನ್ನಷ್ಟು ಚರ್ಚೆಗಳು ನಡೆಯಬೇಕಿದೆ

ಸಂಕೀರ್ಣತೆಯ ಸುಳಿಯಲ್ಲಿ ಮಹಿಳೆಯ ಉದ್ಯೋಗದ ಆಯ್ಕೆಗಳು



ಕುಟುಂಬವೇ ದೊಡ್ಡ ಶಕ್ತಿ

ಉದ್ಯೋಗ ಮತ್ತು ತಾಯ್ತನ ಒಂದೇ ನಾಣ್ಯದ ಎರಡು ಮುಖಗಳು. ಉದ್ಯೋಗ ಅಸ್ತಿತ್ವವಾದರೆ, ಸಂತಾನ ಅಸ್ಮಿತೆ! ಉದ್ಯೋಗ ಅನಿವಾರ್ಯವಾದರೆ, ತಾಯ್ತನ ಶಕ್ತಿ. ಉದ್ಯೋಗ ಮತ್ತು ತಾಯ್ತನ ಎರಡರ ಸಮತೋಲನ ಹೇಗೆಂಬ ಗೊಂದಲ ಒಬ್ಬಿಬ್ಬರದ್ದಲ್ಲ. ಯಾವುದರಿಂದ ತಪ್ಪಿಸಿಕೊಂಡರೂ ಕಷ್ಟ. ಈ ವಿಚಾರದಲ್ಲಿ ನನಗೂ ಗೊಂದಲ, ಪಾಪಪ್ರಜ್ಞೆಯ ಅನುಭವವಾಗಿದೆ. ಆದರೆ ಯಾವುದರಿಂದಲೂ ದೂರ ಓಡಲಿಲ್ಲ.

ವೃತ್ತಿ ಜೀವನದಲ್ಲಿ ಮಾಡುವ ಸಾಧನೆಯೇ ಜೀವನದ ಪರಮೋಚ್ಚ ಗುರಿ- ಸಾರ್ಥಕತೆ ಎಂಬ ಅಮಲು ನನ್ನ ತಲೆಗೂ ಏರಿದ್ದ ಸಂದರ್ಭವದು. ಇದರ ಜೊತೆಗೆ ಮೊದಲ ಮಗು ಎಂಬ ಭಯದ ಸೆರಗು ಕಣ್ಣನ್ನು ಮುಚ್ಚಿಬಿಟ್ಟಿತ್ತು. 'ನಾವಿದ್ದೇವೆ... ಮಗುವನ್ನು ನಾವು ನೋಡಿಕೊಳ್ಳುತ್ತೇವೆ, ನಿನ್ನ ಕೆಲಸ ಮುಂದುವರಿಸು' ಎಂದು ಕುಟುಂಬ ಕೊಟ್ಟ ಧೈರ್ಯ ಹಾಗೂ 'ಕೆಲಸಕ್ಕೆ ಕೂಸು ಅಡ್ಡಿಯಾದೀತೆ? ಹುಚ್ಚು ಹುಡುಗಿ!' ಎಂದು ಒಂದು ಗಂಟೆ ಕೂರಿಸಿಕೊಂಡು ಗೆಳತಿಯಂತೆ ಕಿವಿ ಹಿಂಡಿ ಕಳಿಸಿದ ವೈದ್ಯರನ್ನು ಎಂದೂ ಮರೆಯಲಾರೆ.

ಬಾಣಂತನ ಮುಗಿಸಿ ಬಂದ ನನಗೆ ಅತ್ತೆಯು ಅಮ್ಮನಂತೆ ಕಂಡರು. ತಡವಾಗುತ್ತಿದೆ ಎಂದು ಮೂರು ತಿಂಗಳ ಮಗುವಿಗೆ ತರಾತುರಿಯಲ್ಲಿ ಎದೆಹಾಲುಣಿಸಿ ಕಣ್ತುಂಬಿಕೊಂಡು ಹೊರನಡೆದಾಗ, ನನ್ನತ್ತೆಯೇ ನನ್ನ ಮಗಳಿಗೆ ಅಮ್ಮನಂತಾದರು. ಅನಂತರ ನನ್ನಮ್ಮನೇ ನನ್ನ ಮಗಳ ಪಾಲಿಗೂ ಅಮ್ಮನಾದರು. ಅದೆಷ್ಟೋ ಸಲ ಕ್ಯಾಮೆರಾ ಮುಂದೆ ಸುದ್ದಿ ವಾಚಿಸುವಾಗ ನನ್ನ ಕೂಸು ಕಣ್ಣ ಮುಂದೆ ಬಂದಂತಾಗಿ ಸಂಕಟವೇಳುತ್ತಿತ್ತು, ಎದೆಯಲ್ಲಿ ಹಾಲು ಉಕ್ಕಿದಾಗೆಲ್ಲ ಕಣ್ಣಾಲಿಗಳು ತುಂಬಿ ಬರುತ್ತಿದ್ದವು. ಆದರೆ ಗಂಡ, ಅಮ್ಮ–ಅಪ್ಪ–ಅತ್ತೆ–ಮಾವ ಒಟ್ಟೊ ಸೇರಿ 'ನಾವಿದ್ದೇವೆ' ಎನ್ನುವ ಭರವಸೆ ನೀಡಿದಾಗ ಉದ್ಯೋಗ–ಕುಟುಂಬ ನಿರ್ವಹಣೆ ಸುಲಭವಾಗುತ್ತ ಹೋಯಿತು.

ಸಬಿತಾ ಶೆಟ್ಟಿ
ಫ್ರೀಲಾನ್ಸ್ ಜರ್ನಲಿಸ್ಟ್/ ಸೇಲ್ಸ್ ಹೆಡ್, ಡಿಟಿಡಿಸಿ ಕೊರಿಯರ್, ಲಾಜಿಸ್ಟಿಕ್

ಶ್ರೀನಿಧಿ ಅಡಿಗ

ಅವಳು ಮಗುವಾದ ನಂತರವೂ ಕೆಲಸಕ್ಕೆ ಹೋಗುತ್ತಾಳೆಯೇ? ಹೋಗುತ್ತಿದ್ದರೆ ಹೇಗೆ? ಮನೆಯಲ್ಲಿ ಏನು ಕತೆ? ಮಕ್ಕಳನ್ನು ಯಾರು ನೋಡಿಕೊಳ್ಳುತ್ತಾರೆ? ಅಷ್ಟು ಕಲಿತಿದ್ದರೂ ಕೆಲಸಕ್ಕೆ ಹೋಗುತ್ತಿಲ್ಲವಾ? ಯಾಕಂತೆ? ಅಷ್ಟು ಕಲಿತಿದ್ದರೂ ಇಷ್ಟು ಚಿಕ್ಕ ಕೆಲಸವಾ? ಇಂಥ ಪ್ರಶ್ನೆಗಳ ನಡುವೆ ಈಗಲೂ ನಲುಗುತ್ತಿರುವುದು ಮಹಿಳೆಯ ಉದ್ಯೋಗದ ಆಯ್ಕೆಗಳು.

ಸ್ಟೇಟ್ ಆಫ್ ವರ್ಕಿಂಗ್ ಇಂಡಿಯಾ 2023 (ಭಾರತೀಯ ದುಡಿಯುವ ವರ್ಗದ ಸ್ಥಿತಿ ವರದಿ 2023) ವರದಿ ಇಂಥ ಹಲವು ವಿಷಯಗಳ ಮೇಲೆ ಬೆಳಕು ಚೆಲ್ಲಿದೆ. ಮಗು ಹುಟ್ಟಿದಾಗ ವೃತ್ತಿ ಅಥವಾ ಕುಟುಂಬ ಎಂಬ ಆದ್ಯತೆಯ ಪ್ರಶ್ನೆ ಎದುರಾಗುತ್ತದೆ.

ಚಿಕ್ಕ ಮಕ್ಕಳಿರುವ ಉದ್ಯೋಗಸ್ಥ ಮಹಿಳೆಯರು ತಮ್ಮ ಕೌಟುಂಬಿಕ ಕಾರಣಗಳಿಗಾಗಿ ತಮ್ಮ ಉದ್ಯೋಗವನ್ನು ತ್ಯಜಿಸಿ, ಕುಟುಂಬಕ್ಕಾಗಿ ತೆರುವ ಬೆಲೆಯನ್ನು 'ಮೆಟರ್ನಿಟಿ ಪೆನಾಲ್ಟಿ' ಅಥವಾ 'ತಾಯ್ತನದಿಂದಾಗಿ ತೆರಬೇಕಾಗಿರುವ ದಂಡ'ಎಂಬುದಾಗಿ ಸಮಾಜವಿಜ್ಞಾನಿಗಳು ಉಲ್ಲೇಖಿಸುತ್ತಾರೆ. ತಾಯ್ತನದ ಪೂರ್ವದ ಸಂದರ್ಭದಲ್ಲಿ ಮಗುವಿನ ಆರೈಕೆಯ ಜವಾಬ್ದಾರಿ ಇಲ್ಲದ ಸಂದರ್ಭದಲ್ಲಿಯೂ, ಮಗುವಿನ ಆಗಮನವನ್ನು ಮುಂದಿಟ್ಟುಕೊಂಡು ಪ್ರಸವಕ್ಕೂ ಮೊದಲೇ ಮಹಿಳೆಯರು ತಮ್ಮ ಕೆಲಸವನ್ನು ತೊರೆದು ಬಿಡುತ್ತಾರೆ.

ಹೀಗೆ ದುಡಿಯುವ ವರ್ಗದ ಸ್ಥಿತಿಗತಿಗಳ ಕುರಿತಾದ 'ಸ್ಟೇಟ್ ಆಫ್ ವರ್ಕಿಂಗ್ ಇಂಡಿಯಾ 2023' (ಭಾರತೀಯ ದುಡಿಯುವ ವರ್ಗದ ಸ್ಥಿತಿ ವರದಿ 2023) ವರದಿಯನ್ನು ಅಜೀಂ ಪ್ರೇಮ್‌ಜಿ ವಿಶ್ವ ವಿದ್ಯಾಲಯವು, ಐಡಬ್ಲ್ಯುಡಬ್ಲ್ಯುಎಜಿಇ (IWWAGE) ಮತ್ತು ಐಐಎಮ್ (IIM) ಬೆಂಗಳೂರು ಇದರ ಸಹಯೋಗದೊಂದಿಗೆ ತಯಾರಿಸಿದೆ.

ಇಳಿಮುಖಗೊಂಡ ಲಿಂಗ-ಆಧಾರಿತ ಗಳಿಕೆಯ ಅಸಮಾನತೆಗಳು: 2004ರ ವೇಳೆಗೆ ಮಹಿಳಾ ಉದ್ಯೋಗಿಗಳು ಪುರುಷರು ಗಳಿಸುವ ವೇತನದಲ್ಲಿ ಶೇ 70 ರಷ್ಟು ಭಾಗವನ್ನು ಗಳಿಸಲು ಶಕ್ತರಾಗಿದ್ದರು ಎಂಬುದನ್ನು ವರದಿ ಸೂಚಿಸುತ್ತದೆ. 2017ರ ಹೊತ್ತಿಗೆ, ಮಹಿಳೆಯರು ಮತ್ತು ಪುರುಷರ ನಡುವಿನ ವೇತನದ ಅಂತರವು ಇನ್ನಷ್ಟು ಕಡಿಮೆಯಾಯಿತು. ಪುರುಷರು ಮಾಡುವ ಕೆಲಸಗಳನ್ನು ಮಹಿಳೆಯರೂ ಮಾಡುವ ಮೂಲಕ ಪುರುಷರ ವೇತನದ ಶೇ 76ರಷ್ಟನ್ನು ಗಳಿಸಲು ಮಹಿಳೆಯರಿಗೆ ಸಾಧ್ಯವಾಗಿದೆ ಮತ್ತು ಅಂದಿನಿಂದ, 2021-22ರವರೆಗೆ ಈ ಅಂತರವು ಸ್ಥಿರವಾಗಿದೆ ಎಂದು ವರದಿಯು ತಿಳಿಸುತ್ತದೆ.

ಕರ್ನಾಟಕ ಮತ್ತು ರಾಜಸ್ಥಾನದಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ಮದುವೆಯ ಮೊದಲು ಉದ್ಯೋಗದಲ್ಲಿ ಇರುವ ಮಹಿಳೆಯರ ಪ್ರಮಾಣ ಶೇ 26 ಇದ್ದರೆ ಮದುವೆಯ ನಂತರದ ಐದು ವರ್ಷಗಳಲ್ಲಿ ಅದರ ಸರಾಸರಿ 49 ಶೇಕಡಾಕ್ಕೆ ಏರಿದೆ. ಇದು ಹೆಚ್ಚಾಗಿ ಕುಟುಂಬದ ಉದ್ಯೋಗದಲ್ಲಿ ಪಾಲ್ಗೊಳ್ಳುವುದು ಅಥವಾ ಕೃಷಿಗೆ ಸಂಬಂಧಿಸಿದಂತೆ ಸ್ವ ಉದ್ಯೋಗ ಇತ್ಯಾದಿಗಳನ್ನು ಒಳಗೊಂಡಿದೆ. ಮಗುವಿನ ಜನನದ ನಂತರ ಮಹಿಳೆಯರು ಉದ್ಯೋಗದಲ್ಲಿ ಪಾಲ್ಗೊಳ್ಳುವ ಪ್ರಮಾಣವೂ ಹೆಚ್ಚಾಗುತ್ತದೆ ಎನ್ನುವುದನ್ನು ಸಮೀಕ್ಷೆ ಸಾಬೀತುಪಡಿಸುತ್ತದೆ. ಮಗುವಿನ ಜನನದ ಸಮಯದಲ್ಲಿ ಉದ್ಯೋಗಕ್ಕೆ ಸೇರಬೇಕಾದ ಅಗತ್ಯ ಶೇ 5ರಷ್ಟು ಎಂದು ಕಂಡುಬಂದರೆ ನಂತರದ ಐದು ವರ್ಷಗಳಲ್ಲಿ ಶೇ 30ರಷ್ಟು ಹೆಚ್ಚಾಗಿರುವುದು ಕಂಡುಬರುತ್ತದೆ.

ಮಹಿಳೆಯರ ಕಾರ್ಯಾವಧಿ

ಮಹಿಳೆಯರು ವಾರಕ್ಕೆ ಸರಾಸರಿ 55 ಗಂಟೆ ಮನೆಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ ಎಂದೂ ಅಧ್ಯಯನ ಹೇಳುತ್ತದೆ. ಪುರುಷರು ಕೇವಲ 21 ಗಂಟೆ ಕೆಲಸ ನಿರ್ವಹಿಸಿರುವುದಾಗಿ ವರದಿ ಹೇಳಿದೆ. ಇದಕ್ಕೂ (ಸರಾಸರಿ) ಹೆಚ್ಚಿನ ಕೆಲಸದ ಸಮಯ ಉಲ್ಲೇಖಿಸಿರುವ ಮಹಿಳೆಯರು ಮನೆಯ ಕೆಲಸದಲ್ಲಿ ಇನ್ನೂ ಹೆಚ್ಚಿನ ಸಮಯವನ್ನು ಕಳೆದಿರುವುದಾಗಿ ಹೇಳಿದ್ದಾರೆ. ಉದ್ಯೋಗಸ್ಥ ಮಹಿಳೆಯರು ಎದುರಿಸುತ್ತಿರುವ 'ಮೆಟರ್ನಿಟಿ ಪೆನಾಲ್ಟಿ'ಯ ಬಗ್ಗೆ ಸಾರ್ವಜನಿಕ ಅಥವಾ ಖಾಸಗೀ ವಲಯಗಳು ಗಂಭೀರವಾಗಿ ಗಮನ ಹರಿಸದಿರುವುದು ದುರದೃಷ್ಟಕರ ಸಂಗತಿ.



ಎಐ ಕ್ರಿಯೇಟಿವ್ ಚಿತ್ರ



ರಾಜಿ ಅನಿವಾರ್ಯ

ಹೊಟ್ಟೆಯಲ್ಲಿ ಕೂಸು ಮೂಡಿದ ಮರುಗಳಿಗೆಯೇ ಎದುರಾಗುವ ಪ್ರಶ್ನೆಗಳು ಕೆಲವೊಮ್ಮೆ ಹೊರಗಿನಿಂದಲೂ, ಒಳಗಿನಿಂದಲೂ ಏಕಕಾಲಕ್ಕೆ ಘರ್ಷಣೆಗಿಳಿದಂತೆನಿಸುತ್ತದೆ. ಈ ಪ್ರಶ್ನೆಗಳಿಗೆ ನಾವು ಮಾತ್ರವಲ್ಲ, ಗೂಗಲ್ ಕೂಡ ಉತ್ತರಿಸಲಾರದು. ದುಡಿಯುವ ಹೆಣ್ಣುಮಕ್ಕಳ ಜೀವನ ಕಷ್ಟದಾಯಕ ಮಾತ್ರವಲ್ಲ, ಕರುಣಾಜನಕವೂ. ಜೀವನ ಸಮರ ಶುರುವಾಗುವುದು ತಾಯ್ತನ ಆರಂಭವಾದ ತರುವಾಯವೇ. ಜೀವನದ ಒಂದಲ್ಲ ಒಂದು ಹಂತದಲ್ಲಿ, ಒಂದಲ್ಲ ಒಂದು ಕಾರಣಕ್ಕೆ ಅವಳು ರಾಜಿ ಮಾಡಿಕೊಳ್ಳುತ್ತಲೇ ಹೋಗಬೇಕು. ಇದಕ್ಕೆ ನಾನೂ ಹೊರತಲ್ಲ. ಅಲ್ಲಲ್ಲಿ, ಅಷ್ಟಿಷ್ಟು ರಾಜಿಯಾಗುತ್ತಲೇ ಎಲ್ಲವನ್ನೂ ನಿಭಾಯಿಸಬೇಕಾಯಿತು. ಅದರಲ್ಲೂ, 'ಕಾರ್ಪೊರೇಟ್' ವಲಯದ ಸ್ಪರ್ಧಾತ್ಮಕ ವೃತ್ತಿಗಳಲ್ಲಿರುವ ಮಹಿಳೆಗೆ ತಾಯ್ತನದ ಜವಾಬ್ದಾರಿ ಬಹುದೊಡ್ಡ ಸವಾಲು. ಸ್ವಂತ ಅನುಭವಕ್ಕೆ ಬರುವತನಕ ಇದರ ಕಠಿಣ ರೂಪ ನನ್ನ ಗಮನಕ್ಕೆ ಬಂದಿರಲಿಲ್ಲ.

24 ಗಂಟೆ ನಮ್ಮ ಮಮತೆ, ಪ್ರೀತಿ ಹಾಗೂ ಸ್ಪರ್ಶವನ್ನು ಬಯಸುವ ಪುಟ್ಟ ಕಂದನನ್ನು ಮಡಿಲಲ್ಲಿಟ್ಟುಕೊಂಡು, ಕೌಟುಂಬಿಕ ಸಹಾಯವೂ ಇಲ್ಲದೆ, ಅಮೆರಿಕದ ಸಮಯಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸುವುದು, ವೃತ್ತಿಯಲ್ಲಿ ಹಿಂದೆ ಬೀಳದಂತೆ ಕಾರ್ಯಕ್ಷಮತೆ ಪ್ರದರ್ಶಿಸುವುದು, ಕಂದನ ಆರೈಕೆಗೆ ಕುಂದಿಲ್ಲದಂತೆ ನಡೆದುಕೊಳ್ಳುವುದು, ವೃತ್ತಿ ಮಹತ್ವಾಕಾಂಕ್ಷೆಯೂ ಬತ್ತದಂತೆ ನೋಡಿಕೊಳ್ಳುವುದು ಎಂತಹ ದೊಡ್ಡ ಜವಾಬ್ದಾರಿ ಎನ್ನುವುದು ಅನುಭವಿಸಿದವರಿಗಷ್ಟೇ ಅರ್ಥವಾಗಬಹುದಾದ ಸ್ಥಿತಿ.

ಹೆರಿಗೆಯ ನಂತರ ದಣಿದು ಹೋದ ದೇಹ, ಉಡುಗಿಹೋದ ಚೈತನ್ಯ ಸಂಪೂರ್ಣ ಆರೈಕೆಯನ್ನು ಬಯಸುವ ಹೊತ್ತಿನಲ್ಲಿಯೇ ಮೂರನೇ ತಿಂಗಳಲ್ಲಿ ಎದ್ದು ಡ್ಯೂಟಿಗೆ ಹಾಜರಾಗಬೇಕಾಯಿತು. ಅಳುವ ಕಂದನನ್ನು ಇನ್ನೊಬ್ಬರ ಮಡಿಲಿಗೆ ಹಾಕಿ ಕೆಲಸದಲ್ಲಿ ಮನಸು ತೂರಿಸುವುದು ಕಷ್ಟವಾಗುತ್ತಿತ್ತು. ಆದರೆ ನನ್ನ ಕಂಪನಿಯಲ್ಲಿ ದುಡಿಯುವ ಅಮ್ಮಂದಿರಿಗೆ ಅನುಕೂಲವಾಗುವಂತಹ ನಿಯಮಗಳಿರುವುದರಿಂದ ಇದನ್ನೆಲ್ಲಾ ಗೆಲ್ಲಲು ಸಾಧ್ಯವಾಯಿತು. ಅದನ್ನೆಲ್ಲಾ ಹೇಗೆ ನಿಭಾಯಿಸಿದೆ ಎಂದು ನೆನಪಿಸಿಕೊಂಡರೆ ಈಗಲೂ ರೋಮಾಂಚನವಾಗುತ್ತದೆ.

ಮಾಳವಿಕಾ ದೇವಘರಿಯಾ
ಲೀಡ್ ಕನ್ಸಲ್ಟೆಂಟ್ - ಇನ್ಫೊಸಿಸ್ ಲಿಮಿಟೆಡ್



ನನ್ನ ಆಯ್ಕೆ ನನ್ನ ಖುಷಿ

'ಇಷ್ಟು ಸಂಬಳವಿದೆ, ಇನ್ನೂ ಪ್ರಗತಿಯಿದೆ. ಮತ್ತೊಮ್ಮೆ ಪರಿಶೀಲಿಸು' ದಶಕದ ಹಿಂದೆ, ಸ್ವಯಂ ನಿವೃತ್ತಿ ಕೋರಿದಾಗ ಹತ್ತಿರದವರಿಂದ ಹರಿದು ಬಂದ ಹಲವು ಅನಿಸಿಕೆಗಳು.

ನನ್ನ ಮಗಳು ಹುಟ್ಟಿದಾಗ ನಾನು ಕೆಲಸ ಬಿಡುವಂತಿರಲಿಲ್ಲ. ಆದರೆ, ಮುಂದೆ ನನ್ನ ಮಗಳಿಗಾಗಿ, ಅವಳ ಜೀವನ ಹಾಗೂ ತಾಯ್ತನವನ್ನು ಸರಳಗೊಳಿಸುವ ಸಲುವಾಗಿ ನಾನು ವೃತ್ತಿ ಬಿಡಬೇಕಾಯ್ತು ಮತ್ತು ಈ ಆಯ್ಕೆ ಸಂಪೂರ್ಣ ನನ್ನದೇ ಆಗಿತ್ತು.

ನನ್ನ ನಿರ್ಧಾರ ದೃಢವಾಗಿತ್ತು. 'ಹಣ, ಉದ್ಯೋಗಕ್ಕಿಂತ ಜೀವನ ದೊಡ್ಡದಿದೆ' ಎನ್ನುವುದು ನನ್ನ ನಂಬಿಕೆ. ನಾನು ಕೆಲಸಕ್ಕೆ ಹೋಗುವಾಗ ನನ್ನ ಅಮ್ಮನೊಡನೆ ಬೆಳೆದ ನನ್ನ ಮಗಳು, ಅವಳು ಕೆಲಸಕ್ಕೆ ಹೋದಾಗ ಅವಳ ಮಗುವನ್ನು ನಾನು ನೋಡಿಕೊಳ್ಳಬೇಕಾದುದು ನೈತಿಕ ಧರ್ಮವಾಗಿತ್ತು. ಹೀಗಾಗಿ ಐವತ್ತರೊಳಗೆ ನಿವೃತ್ತಿ ಪಡೆದೆ. ಒಂದಿನಿತೂ ಪಶ್ಚಾತ್ತಾಪವಿಲ್ಲ. 'ಯಂಗ್ ಗ್ರ್ಯಾಂಡ್ ಮದರ್' ಎಂದಾಗ ಸಂತೋಷವಾಗುತ್ತದೆ. ಉದ್ಯೋಗದಲ್ಲಿದ್ದಾಗ ನನ್ನ ಮಗಳನ್ನು ಸರಿಯಾಗಿ ಗಮನಿಸಲಿಲ್ಲ ಎಂಬ ಕೊರಗು ಈಗ ಮೊಮ್ಮೊಗನ ಪ್ರಗತಿ ಕಂಡಾಗ ಕರಗುತ್ತದೆ. ಮಗಳು ಕೆಲಸದಲ್ಲಿ ವ್ಯಸ್ತವಾಗಿರುವಾಗ ಮನೆಯ ನಿರ್ವಹಣೆ ನನ್ನದೇ. ಅಲ್ಲೊಂದು ಸಾರ್ಥಕ್ಯ ಭಾವ! ದಶಕಗಳ ಹಿಂದೆ ಏಕಕಾಲಕ್ಕೆ ನನ್ನ ತಾಯಿಯವರು, ಅಮ್ಮ ಮತ್ತು ಅಜ್ಜಿಯ ಪಾತ್ರಗಳನ್ನು ಸಮರ್ಥವಾಗಿ ನಿಭಾಯಿಸಿದರು. ಈಗ ಆ ಸರದಿ ನನ್ನದು. ಜೀವನದ ಸಂತೋಷ ಹೊರಗೆ ಹೋಗಿ ದುಡಿದರೆ ಮಾತ್ರ ಸಿಗುತ್ತದೆ ಎಂದಲ್ಲ, ನಮಗಾಗಿ, ನಮ್ಮವರಿಗಾಗಿ ಅವರ ಆರೈಕೆಗಾಗಿ ಮಿಡಿಯುವಾಗ ಸಿಗುವ ಸಾರ್ಥಕ್ಯ ಸಣ್ಣದೇನಲ್ಲ.

ಕೆ.ವಿ. ರಾಜಲಕ್ಷ್ಮಿ, ನಿವೃತ್ತ ಲೆಕ್ಕಾಧಿಕಾರಿ

ಅಭಿಪ್ರಾಯ ಸಂಗ್ರಹ: ಸುಶೀಲಾ ಡೋಣೂರ

ಚಳಿಗಾಲಕ್ಕೆ ಚಿಕನ್ ಖಾದ್ಯ

ಎಂ.ಎಸ್.ಧರ್ಮೇಂದ್ರ, ದೊಡ್ಡಮಗ್ಗೆ

ಬೋಟಿ ಕೂರ್ಮ



ಬೇಕಾಗುವ ಸಾಮಗ್ರಿಗಳು: ಬೋಟಿ 1/2 ಕೆ.ಜಿ, ಹಸಿ ಅವರೇಕಾಳು 1 ಕಪ್, ಆಲೂಗಡ್ಡೆ 2, ಬಾಳೆಕಾಯಿ 1, ಶುಂಠಿ 2 ಇಂಚು ಉದ್ದದ್ದು, ಬೆಳ್ಳುಳ್ಳಿ 2 ಉಂಡೆ, ಕೊತ್ತಂಬರಿ ಸ್ವಲ್ಪ, ಪುದೀನ ಸ್ವಲ್ಪ, ಈರುಳ್ಳಿ 2, ಟೊಮೆಟೊ 2, ಪೆಪ್ಪರ್‌ಪುಡಿ (ಕಾಳುಮೆಣಸಿನ ಪುಡಿ) ಸ್ವಲ್ಪ, ಗರಂ ಮಸಾಲೆ 1 ಚಮಚ, ಧನಿಯಾ ಪುಡಿ 1 ಚಮಚ, ಖಾರದ ಪುಡಿ 1 ಚಮಚ, ಅರಿಶಿನ ಪುಡಿ ಸ್ವಲ್ಪ, ಕಾಯಿ 1/4 ಹೋಳು, ಎಣ್ಣೆ, ಸಾಸಿವೆ, ಉಪ್ಪು .

ತಯಾರಿಸುವ ವಿಧಾನ: ಬೋಟಿ ಅಂದರೆ ಜಠರ, ದೊಡ್ಡ ಕರುಳು, ಸಣ್ಣ ಕರುಳುಗಳ ಒಳ ಭಾಗ ಹೊರಬರುವಂತೆ ಮಾಡಿ ಸುಣ್ಣ ಹಾಕಿ ಚೆನ್ನಾಗಿ ತೊಳೆದು ತೆರೆದ ಪಾತ್ರೆಯಲ್ಲಿ ಚೆನ್ನಾಗಿ ಕುದಿಸಿ, ನೊರೆಯ ರೀತಿ ತೇಲುವುದನ್ನು ಚೆಲ್ಲಿ ಮತ್ತೆ ಮತ್ತೆ ತೊಳೆದು, ಒಂದೆರೆಡು ಬಾರಿ ವಾಸನೆ ಹೋಗುವ ತನಕ ಕುದಿಸಿ ನೀರನ್ನು ಚೆಲ್ಲಬೇಕು. ಚೆನ್ನಾಗಿ ತೊಳೆಯುವುದು ಮುಖ್ಯ ತೊಳೆಯದಿದ್ದರೆ ಗ್ರೇವಿ ತಯಾರಿಸಿದ ನಂತರ ಕೆಟ್ಟ ವಾಸನೆ ಬರುತ್ತದೆ.

ಈರುಳ್ಳಿ ಖಾರಕ್ಕೆ : ಈರುಳ್ಳಿ, ಕೊತ್ತಂಬರಿ, ಪುದೀನ, ಅರಿಶಿನ ಪುಡಿ, ಶುಂಠಿ, ಬೆಳ್ಳುಳ್ಳಿಗೆ ಸ್ವಲ್ಪ ನೀರು ಹಾಕಿ ರುಬ್ಬಿಟ್ಟುಕೊಳ್ಳಿ.

ಮಸಾಲೆಗೆ: ಟೊಮೆಟೊ, ಧನಿಯಾಪುಡಿ, ಖಾರದಪುಡಿ, ಪೆಪ್ಪರ್ ಪುಡಿ, ಕಾಯಿ, ಗರಂಮಸಾಲೆಗೆ ಸ್ವಲ್ಪ ನೀರು ಹಾಕಿ ರುಬ್ಬಿಟ್ಟುಕೊಳ್ಳಿ. ಕುಕ್ಕರ್‌ಗೆ ಎಣ್ಣೆ ಹಾಕಿ ಕಾದ ನಂತರ ಸಾಸಿವೆ ಸಿಡಿಸಿ ಚೆನ್ನಾಗಿ ತೊಳೆದ ಬೋಟಿಯನ್ನು ಹಾಕಿ ಉಪ್ಪನ್ನು ಬೆರೆಸಿ ಸ್ವಲ್ಪ ಉಪ್ಪು ಹಿಡಿಯುವ ರೀತಿ ಫ್ರೈ ಮಾಡಿದ ಮೇಲೆ ಈರುಳ್ಳಿ ಖಾರ ಹಾಕಿ ಕುಕ್ಕರ್ ಮುಚ್ಚಳ ಮುಚ್ಚಿ 10 ವಿಷಲ್ ಹಾಕಿಸಿ ಆರಿದ ನಂತರ ಕುಕ್ಕರ್ ಮುಚ್ಚಳ ತೆಗೆದು ಹಸಿಅವರೇಕಾಳು, ಕತ್ತರಿಸಿದ ಆಲೂಗಡ್ಡೆ, ಬಾಳೆಕಾಯಿ ಮತ್ತು ಮಸಾಲೆ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ ಮಸಾಲೆ ಬೋಟಿಗೆ ಹಿಡಿಯುವ ತನಕ ಚೆನ್ನಾಗಿ ಬೇಯಿಸಿ ಬೆಂದ ನಂತರ ಬೇಕೆಂದರೆ ಸ್ವಲ್ಪ ಕೊತ್ತಂಬರಿ ಸೊಪ್ಪನ್ನು ಕತ್ತರಿಸಿ ಉದುರಿಸಿ.



ಮೇಕೆ ಕೈಮಾ ಉಂಡೆ– ತೊಗರಿಕಾಳು ಸಾರು

ಬೇಕಾಗುವ ಸಾಮಗ್ರಿಗಳು: ಮೇಕೆ ಕೈಮಾ ಮಾಂಸ 1/2 ಕೆ.ಜಿ, ಹಸಿ ತೊಗರಿಕಾಳು 1 ಕಪ್, ಶುಂಠಿ 2 ಇಂಚು ಉದ್ದದ್ದು, ಬೆಳ್ಳುಳ್ಳಿ 2 ಉಂಡೆ, ಕೊತ್ತಂಬರಿ ಸೊಪ್ಪು ಸ್ವಲ್ಪ, ಪುದೀನ ಸೊಪ್ಪು ಸ್ವಲ್ಪ, ಹುರಿ ಕಡ್ಲೆ 4 ಚಮಚ, ಧನಿಯಾ ಪುಡಿ 4 ಚಮಚ, ಖಾರಪುಡಿ 3 ಚಮಚ, ಅರಿಶಿನ ಪುಡಿ ಸ್ವಲ್ಪ, ಗರಂ ಮಸಾಲೆ ಸ್ವಲ್ಪ, ಚಕ್ಕೆ 2 ಇಂಚು, ಲವಂಗ 8, ಮೆಣಸು 10, ಈರುಳ್ಳಿ 1, ಟೊಮೆಟೊ 2, ಕಾಯಿ ಅರ್ಧ ಹೋಳು, ಸಾಸಿವೆ, ಎಣ್ಣೆ, ತುಪ್ಪ, ಉಪ್ಪು ರುಚಿಗೆ ತಕ್ಕಷ್ಟು.

ತಯಾರಿಸುವ ವಿಧಾನ: ಈರುಳ್ಳಿ 2, ಚಕ್ಕೆ, ಲವಂಗ, ಮೆಣಸು, ಕೊತ್ತಂಬರಿ ಸೊಪ್ಪು, ಕಾಯಿ, ಪುದೀನ, ಅರಿಶಿನ ಪುಡಿ, ಹುರಿ ಕಡ್ಲೆ, ಶುಂಠಿ, ಬೆಳ್ಳುಳ್ಳಿ, ಧನಿಯಾ ಪುಡಿ 2 ಚಮಚ, ಖಾರದಪುಡಿ 2 ಚಮಚ, ಅರಿಶಿನ ಪುಡಿ, ಸ್ವಲ್ಪ ಹರಳುಪ್ಪು ಹಾಕಿ ನೀರು ಹಾಕದೆ ರುಬ್ಬಿಟ್ಟುಕೊಳ್ಳಿ.

ರುಬ್ಬಿದ ಮಿಶ್ರಣದಲ್ಲಿ ಕಾಲು ಭಾಗವನ್ನು ತೆಗೆದುಕೊಂಡು ಅದಕ್ಕೆ ಮೇಕೆ ಕೈಮಾ ಮಾಂಸ ಹಾಕಿ, ನೀರು ಬೆರೆಸದೆ ಮಾಂಸ ಮತ್ತು ಖಾರ ಬೆರೆಯುವಂತೆ ಮಿಕ್ಸಿಯಲ್ಲಿ ರುಬ್ಬಿಕೊಂಡು ನಂತರ ಸಣ್ಣ ಉಂಡೆಗಳಾಗಿ ಮಾಡಿಟ್ಟುಕೊಳ್ಳಿ.

ಉಳಿದ ಮುಕ್ಕಾಲು ಭಾಗ ರುಬ್ಬಿದ ಮಿಶ್ರಣಕ್ಕೆ ಗರಂ ಮಸಾಲೆ, ಧನಿಯಾ ಪುಡಿ 2 ಚಮಚ, ಖಾರದಪುಡಿ 1 ಚಮಚ, ಈರುಳ್ಳಿ 1, ಟೊಮೆಟೊ ಮತ್ತು ನೀರು ಹಾಕಿ ಸಣ್ಣಗೆ ರುಬ್ಬಿಕೊಳ್ಳಿ.

ಫ್ರೈ ಪ್ಯಾನ್‌ಗೆ ಎಣ್ಣೆ ಮತ್ತು ತುಪ್ಪ ಸಮ ಪ್ರಮಾಣದಲ್ಲಿ ಹಾಕಿ ಕಾದ ನಂತರ ಸಾಸಿವೆ ಸಿಡಿಸಿ ಕತ್ತರಿಸಿದ ಈರುಳ್ಳಿ ಹಾಕಿ ಚೆನ್ನಾಗಿ ಫ್ರೈ ಮಾಡಿದ ಮೇಲೆ ರುಬ್ಬಿದ ಖಾರ ಮಿಶ್ರಣ, ಹಸಿ ತೊಗರಿಕಾಳು ಮತ್ತು ರುಚಿಗೆ ಬೇಕಾಗುವಷ್ಟು ಉಪ್ಪು ಹಾಕಿ ಖಾರ ಕುದಿಯಲು ಬಿಡಿ ನಂತರ ಉಂಡೆಗಳನ್ನು ಹಾಕಿದ ನಂತರ ಸ್ವಲ್ಪ ಸಮಯ ತಿರುಗಿಸದೆ ಮುಚ್ಚಳ ಮುಚ್ಚಿ ಬೇಯಿಸಿ ಆಮೇಲೆ ಸಾಂಬಾರು ತಿರುಗಿಸಿ ಚೆನ್ನಾಗಿ ಬೇಯಿಸಿ.

ಚಿಕನ್ ಗಿಝರ್ಡ್ ಫ್ರೈ

ಬೇಕಾಗುವ ಸಾಮಗ್ರಿಗಳು: ಚಿಕನ್ ಗಿಝರ್ಡ್ ಒಂದು ಕೆ.ಜಿ, ಈರುಳ್ಳಿ 3, ಟೊಮೆಟೊ 3, ಕೊತ್ತಂಬರಿ ಸೊಪ್ಪು ಸ್ವಲ್ಪ, ಪುದೀನ ಸೊಪ್ಪು ಸ್ವಲ್ಪ, ಹಸಿಮೆಣಸು 2, ಶುಂಠಿ-ಬೆಳ್ಳುಳ್ಳಿ ಪೇಸ್ಟ್ 2 ಚಮಚ, ಬೆಳ್ಳುಳ್ಳಿ 1 ಉಂಡೆ, ಧನಿಯಾ ಪುಡಿ 2 ಚಮಚ, ಖಾರದ ಪುಡಿ 2 ಚಮಚ, ಗರಂ ಮಸಾಲೆ 1 ಚಮಚ, ಜೀರಿಗೆ ಪುಡಿ ಸ್ವಲ್ಪ, ಪೆಪ್ಪರ್ ಪುಡಿ ಸ್ವಲ್ಪ, ಅರಿಶಿನ ಪುಡಿ ಸ್ವಲ್ಪ, ಎಣ್ಣೆ, ಸಾಸಿವೆ, ಉಪ್ಪು ರುಚಿಗೆ ತಕ್ಕಷ್ಟು.

ತಯಾರಿಸುವ ವಿಧಾನ: ಚಿಕನ್ ಗಿಝರ್ಡ್ ಅರಿಶಿನ ಪುಡಿಯಲ್ಲಿ ತೊಳೆದು ಸ್ವಲ್ಪ ಉಪ್ಪು ನೀರು ಹಾಕಿ ಕುಕ್ಕರ್‌ನಲ್ಲಿ ಬೇಯಿಸಿಟ್ಟುಕೊಳ್ಳಿ.

ಬಾಣಲಿಗೆ ಎಣ್ಣೆ ಹಾಕಿ ಕಾದ ನಂತರ ಸಾಸಿವೆ ಸಿಡಿಸಿ, ಈರುಳ್ಳಿ ಹಾಕಿ ಸ್ವಲ್ಪ ಫ್ರೈ ಮಾಡಿದ ಮೇಲೆ ಜಜ್ಜಿದ ಹಸಿಮೆಣಸಿನಕಾಯಿ, ಬೆಳ್ಳುಳ್ಳಿ, ಶುಂಠಿ-ಬೆಳ್ಳುಳ್ಳಿ ಪೇಸ್ಟ್, ಸ್ವಲ್ಪ ಅರಿಶಿನ ಪುಡಿ ಹಾಕಿ ಚೆನ್ನಾಗಿ ಫ್ರೈ ಮಾಡಿದ ಮೇಲೆ ಟೊಮೆಟೊ, ಬೇಯಿಸಿದ ಚಿಕನ್ ಗಿಝರ್ಡ್, ಕೊತ್ತಂಬರಿ, ಪುದೀನಾ, ಉಪ್ಪು ಹಾಕಿ ಸ್ವಲ್ಪ ಸಮಯ ಮುಚ್ಚಳ ಮುಚ್ಚಿ ಬೇಯಿಸಿ ನಂತರ ಧನಿಯಾಪುಡಿ, ಖಾರದಪುಡಿ, ಪೆಪ್ಪರ್‌ಪುಡಿ, ಜೀರಿಗೆ ಪುಡಿ ಮತ್ತು ಗರಂಮಸಾಲೆ ಹಾಕಿ ಚೆನ್ನಾಗಿ ಕುದಿಸಿ.



ನಿಮಿರು ದೌರ್ಬಲ್ಯಕ್ಕೂ ಹೃದ್ರೋಗಕ್ಕೂ ಸಂಬಂಧವಿದೆ

ಸ್ಪಂದನ



ಡಾ. ವೀಣಾ ಎಸ್. ಭಟ್

- **ನನಗೆ 40ವರ್ಷ– ಹೆಂಡತಿಗೆ 36 ವರ್ಷ. ಕಳೆದ ವರ್ಷವಷ್ಟೆ ಮದುವೆಯಾಗಿದೆ. ನನಗೆ ನಿಮಿರು ದೌರ್ಬಲ್ಯ ಸಮಸ್ಯೆಯಿದೆ. ಹತ್ತು ವರ್ಷಗಳಿಂದ ಮಧುಮೇಹದಿಂದಲೂ ಬಳಲುತ್ತಿದ್ದೇನೆ. ಹೆಂಡತಿಗೆ ಯಾವುದೇ ಆರೋಗ್ಯ ಸಮಸ್ಯೆಗಳಿಲ್ಲ. ಆದರೆ ಈವರೆಗೆ ಒಂದು ಬಾರಿಯೂ ಲೈಂಗಿಕ ಸಂಪರ್ಕ ಏರ್ಪಟ್ಟಿಲ್ಲ.**

ಹತ್ತು ವರ್ಷಗಳಿಂದ ಮಧುಮೇಹ ಇರುವುದರಿಂದ ನಿಮಿರು ದೌರ್ಬಲ್ಯ ಉಂಟಾಗಿರಬಹುದು. ನಿಮಿರುವಿಕೆಗೆ ಅಗತ್ಯವಿರುವಷ್ಟು ರಕ್ತಸಂಚಾರ ಆಗದೇ ನರಗಳು ಸಂಕುಚಿತಗೊಳ್ಳುವುದರಿಂದ ಈ ರೀತಿಯ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಶಿಶ್ನದ ರಕ್ತನಾಳಗಳ ಎಂಡೋಥಿಲಿಯಂನಲ್ಲಿ ಬಿಡುಗಡೆಯಾಗುವ ನೈಟ್ರಿಕ್ ಆಕ್ಸೈಡ್ ಹೆಚ್ಚು ರಕ್ತ ಸರಬರಾಜನ್ನು ಉಂಟುಮಾಡಿ, ಲೈಂಗಿಕ ಉದ್ರೇಕಕ್ಕೆ ಕಾರಣವಾಗುತ್ತದೆ. ಎಂಡೋಥೀಲಿಯಂ ಹಾನಿಗೆ ಒಳಗಾದರೆ ನಿಮಿರು ದೌರ್ಬಲ್ಯದ ಜತೆಗೆ ಹೃದ್ರೋಗವು ಕಾಣಿಸಿಕೊಳ್ಳಬಹುದು. ಹೃದಯದ ಆರೋಗ್ಯವೂ ಎಂಡೋಥಿಲಿಯಂನ ಕಾರ್ಯವೈಖರಿಯನ್ನು ಅವಲಂಬಿಸಿದೆ. ನಿಮಿರು ದೌರ್ಬಲ್ಯ ಹೃದ್ರೋಗದ ಮುನ್ಸೂಚನೆಯೂ ಆಗಿರಬಹುದು. ಹಾಗಾಗಿ ನಿರ್ಲಕ್ಷ್ಯ ಮಾಡದೇ ತಜ್ಞವೈದ್ಯರನ್ನು ನೋಡಿ.

ಧೂಮಪಾನ, ಮದ್ಯಪಾನದಂಥ ಚಟಗಳಿದ್ದರೆ ಸಂಪೂರ್ಣ ತ್ಯಜಿಸಿ. ಆಹಾರ ತಜ್ಞರ ಸಲಹೆ ಪಡೆದು ಮಧುಮೇಹ ನಿಯಂತ್ರಣದಲ್ಲಿಡಿ. ಎಂಡೋಥಿಲಿಯಂ ಆರೋಗ್ಯ ಪತ್ತೆಮಾಡಲು ಈಗ ಹಲವಾರು ವಿಧಾನಗಳಿವೆ. ನಿಮಿರು ದೌರ್ಬಲ್ಯ ನಿವಾರಣೆಗೆ ಮಾತ್ರೆಗಳ ಚಿಕಿತ್ಸೆ, ಶಾಕ್‌ವೇವ್ ಚಿಕಿತ್ಸೆಗಳಿವೆ. ತೂಕ ಹಾಗೂ ಮಧುಮೇಹ ನಿಯಂತ್ರಣದಲ್ಲಿದ್ದರೆ ಎಂಡೋಥಿಲಿಯಂ ಆರೋಗ್ಯದ ಜತೆಗೆ ಹೃದಯದ ಆರೋಗ್ಯವೂ ಸುಧಾರಿಸುತ್ತದೆ. ಈ ಸಮಸ್ಯೆಗಳಿಂದ ಹೊರಬಂದರೆ ಆರೋಗ್ಯವಂತ ಮಗುವನ್ನು ಪಡೆಯಲು ಸಾಧ್ಯವಿದೆ. ಪ್ರೊಟೀನ್‌ಯುಕ್ತ ಆಹಾರ ಸೇವಿಸಿ. ಸಕ್ಕರೆ, ಸಿಹಿಪದಾರ್ಥಗಳನ್ನು ತ್ಯಜಿಸಿ. ಒಂದು ಗಂಟೆಯಾದರೂ ನಿತ್ಯ ಬಿರುಸಿನ ನಡಿಗೆ ಮಾಡಿದರೆ ಉತ್ತಮ ಫಲಿತಾಂಶ ಸಿಗಲಿದೆ.

- **ನನ್ನ ವಯಸ್ಸು 29. ಭಾವಿ ಪತ್ನಿ ಜತೆ ವಿಡಿಯೊಕಾಲ್‌ನಲ್ಲಿ ಮಾತನಾಡುವಾಗ ಸ್ವಲ್ಪಮಟ್ಟಿಗೆ ವೀರ್ಯಸ್ಖಲನವಾಗುತ್ತಿದೆ. ಇದು ಸಹಜಕ್ರಿಯೆನಾ?**

ಇದು ಸಹಜಕ್ರಿಯೆ. ಭಾವಿಪತ್ನಿಯ ಧ್ವನಿ, ಮಾತುಗಳನ್ನು ಕೇಳುವಾಗ ಲೈಂಗಿಕವಾಗಿ ಉದ್ರೇಕಗೊಂಡು ಹೀಗಾಗುತ್ತಿದೆ. ಇದಕ್ಕೆ ಚಿಂತಿಸುವ ಅಗತ್ಯವಿಲ್ಲ.

- **ಸ್ವಪ್ನದಲ್ಲಿ ವೀರ್ಯಸ್ಖಲನವಾಗುತ್ತಿದೆ. ಇದಕ್ಕೆ ಪರಿಹಾರವೇನು?**

ಇದು ಕೂಡ ಸಹಜವಾದ ಕ್ರಿಯೆ. ಅದರಲ್ಲಿಯೂ ಹದಿಹರೆಯದಲ್ಲಿ ಇವೆಲ್ಲ ಸಾಮಾನ್ಯ. ಹಸ್ತಮೈಥುನದ ಬಗ್ಗೆ ಭಯ ಇದ್ದಾಗಲೂ ಈ ರೀತಿ ಉಂಟಾಗಬಹುದು. ಅತಿಯಾದ ವೀರ್ಯ ಸಂಗ್ರಹಗೊಂಡಾಗ ಹೀಗಾಗಬಹುದು. ಕನಸುಗಳು ಸುಪ್ತಭಾವನೆಗಳ ಮೂರ್ತರೂಪ. ಮಲಬದ್ಧತೆಯಿಂದಲೂ ಈ ಸಮಸ್ಯೆ ಕಾಣಿಸಿಕೊಳ್ಳಬಹುದು. ಧೈರ್ಯವಾಗಿರಿ.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಎಂಡೋಸಲ್ಫಾನ್: ಎನ್‌ಜಿಟಿಗೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ವರದಿ ಸಲ್ಲಿಕೆ

ಗೇರುತೋಟದಲ್ಲೇ ಅವೈಜ್ಞಾನಿಕ ವಿಲೇವಾರಿ

● ಮಂಜುನಾಥ ಹೆಬ್ಬಾರ್

ನವದೆಹಲಿ: ಕಾಸರಗೋಡಿನ ಗೇರು ಪ್ಲಾಂಟೇಷನ್ ಕಾರ್ಪೊರೇಷನ್ (ಪಿಸಿಕೆ) ಕರ್ನಾಟಕದ ಗಡಿಯಂಚಿನಲ್ಲಿರುವ 2,060 ಹೆಕ್ಟೇರ್ ಗೇರು ತೋಟಕ್ಕೆ 1983–2001 ಅವಧಿಯಲ್ಲಿ 57 ಸಾವಿರ ಲೀಟರ್ ಎಂಡೋಸಲ್ಫಾನ್ ಕೀಟನಾಶಕ ಸಿಂಪಡಿಸಿತ್ತು. ಆದರೆ, ಈ ಪ್ರಕ್ರಿಯೆಯನ್ನು ಅವೈಜ್ಞಾನಿಕವಾಗಿ ನಡೆಸಲಾಗಿತ್ತು. ಸಾವಿರಾರು ಲೀಟರ್ ಕೀಟನಾಶಕವನ್ನು ಐದು ಪಾಳುಬಾವಿಗಳಲ್ಲಿ ಹೂತಿರುವ ಸಾಧ್ಯತೆ ಇದೆ. ದತ್ತಾಂಶಗಳು ಇದ್ದರೂ ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಎಂಡೋಸಲ್ಫಾನ್ ಸಂತ್ರಸ್ತರ ಮಾಹಿತಿ ನೀಡಿಲ್ಲ.

ಕರ್ನಾಟಕ ಗಡಿಯಲ್ಲಿರುವ ಮಿಂಚಿನಪದವು ಪ್ರದೇಶಕ್ಕೆ ಭೇಟಿ ನೀಡಿ ಅಧ್ಯಯನ ನಡೆಸಿ ಸಿದ್ಧಪಡಿಸಿರುವ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ವರದಿಯಲ್ಲಿರುವ ಸಾರಗಳಿವು. ಮಂಡಳಿಯು ಈ ವರದಿಯನ್ನು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ದಕ್ಷಿಣ ವಲಯ ಪೀಠಕ್ಕೆ ಗುರುವಾರ ಸಲ್ಲಿಸಿದೆ.

ಉಡುಪಿಯ ಮಾನವ ಹಕ್ಕುಗಳ ರಕ್ಷಣಾ ಪ್ರತಿಷ್ಠಾನದ ಅಧ್ಯಕ್ಷ ಡಾ.ರವೀಂದ್ರನಾಥ್ ಶಾನುಭಾಗ್ ಸಲ್ಲಿಸಿದ ದೂರು ಅರ್ಜಿಯನ್ನು ಪುರಸ್ಕರಿಸಿದ ನ್ಯಾಯಪೀಠವು ಕೇಂದ್ರ ಸರ್ಕಾರ, ಕರ್ನಾಟಕ ಮತ್ತು ಕೇರಳ ಸರ್ಕಾರ, ಉಭಯ ರಾಜ್ಯಗಳ ಮಾಲಿನ್ಯ ನಿಯಂತ್ರಣ ಮಂಡಳಿಗಳಿಗೆ ಹಾಗೂ ಇತರರಿಗೆ ನೋಟಿಸ್ ಜಾರಿ ಮಾಡಿತ್ತು. ಅಕ್ರಮವಾಗಿ ಹೂಳಲಾಗಿದ್ದ ಎಂಡೋಸಲ್ಫಾನ್ ತೆರವಿಗೆ ಕೈಗೊಂಡ ಕ್ರಮಗಳ ಬಗ್ಗೆ ವರದಿ ಸಲ್ಲಿಸುವಂತೆ ನಿರ್ದೇಶಿಸಿತ್ತು.

ಈ ಹಿನ್ನೆಲೆಯಲ್ಲಿ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ನಿರ್ದೇಶಕ ಜೆ.ಚಂದ್ರಬಾಬು ನೇತೃತ್ವದ ಅಧಿಕಾರಿಗಳ ತಂಡವು ಮಿಂಚಿನಪದವಿಗೆ ಭೇಟಿ ನೀಡಿತ್ತು. ಪ್ಲಾಂಟೇಷನ್‌ನ ಮಣ್ಣಿನ ಎರಡು ಮಾದರಿಗಳು ಹಾಗೂ ಅಂತರ್ಜಲದ ಎರಡು ಮಾದರಿಗಳನ್ನು ಹಾಗೂ ಈಶ್ವರಮಂಗಲದ ಅಂತರ್ಜಲದ ನೀರಿನ ಮಾದರಿಗಳನ್ನು ತಂಡವು ಸಂಗ್ರಹಿಸಿದೆ. ಈ ಕುರಿತ ವರದಿಯನ್ನು ಮೂರು ವಾರಗಳಲ್ಲಿ ಪೀಠಕ್ಕೆ ಸಲ್ಲಿಸುವುದಾಗಿ ತಿಳಿಸಿದೆ. ಈ ಕೀಟನಾಶಕ ಸಿಂಪಡಿಸಿದ್ದರಿಂದ ಪರಿಸರಕ್ಕೆ ಆಗಿರುವ ಹಾನಿ, ತ್ಯಾಜ್ಯದ ಅವೈಜ್ಞಾನಿಕ ವಿಲೇವಾರಿ ಹಾಗೂ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವ ಕುರಿತು ಪೀಠವು ತಜ್ಞರ ಸಮಿತಿಯನ್ನು ರಚಿಸಬೇಕು ಎಂದು ಅಧಿಕಾರಿಗಳ ತಂಡವು ಶಿಫಾರಸು ಮಾಡಿದೆ.

ಮಾಲಿನ್ಯ ನಿಯಂತ್ರಣ ಮಂಡಳಿಯ ವರದಿಯಲ್ಲೇನಿದೆ?

- ಗೇರು ತೋಟಕ್ಕೆ ಪ್ರತಿಸಲ 750 ಲೀಟರ್ ಕೀಟನಾಶಕ ಸಿಂಪಡಿಸಲಾಗಿತ್ತು. ಆ ಪ್ರಕಾರ, 278 ಬ್ಯಾರೆಲ್‌ಗಳ ಮೂಲಕ ಸಿಂಪಡಣೆ ಮಾಡಲಾಗಿತ್ತು. ಆದರೆ, 20 ಬ್ಯಾರೆಲ್‌ಗಳನ್ನು ಮಾತ್ರ ಕಾರ್ಪೊರೇಷನ್‌ನ ಅಧಿಕಾರಿಗಳು ತೋರಿಸಿದ್ದಾರೆ. ಉಳಿದ ಬ್ಯಾರೆಲ್‌ಗಳು ಏನಾದವು?
- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಧಿಕಾರಿಗಳು ಕೀಟನಾಶಕದ ಬ್ಯಾರೆಲ್‌ಗಳ ವಿಲೇವಾರಿ ಹಾಗೂ ಉಳಿದಿರುವ ಕೀಟನಾಶಕಗಳು ಏನಾದವು ಎಂಬ ಕುರಿತು ಆರೋಗ್ಯ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿಲ್ಲ.
- ಗೇರು ಪ್ಲಾಂಟೇಷನ್ ಕಾರ್ಪೊರೇಷನ್ ಗೇರು ತೋಟದಲ್ಲಿರುವ 27 ಬಾವಿಗಳ ನೀರಿನ ಗುಣಮಟ್ಟದ ಪರೀಕ್ಷೆಯನ್ನು ಇಲ್ಲಿಯವರೆಗೆ ನಡೆಸಿಲ್ಲ. ಹೀಗಾಗಿ, ವರ್ಷಕ್ಕೆ ಎರಡು ಬಾರಿ ತೋಟದಲ್ಲಿರುವ ಮಣ್ಣಿನ ಪರೀಕ್ಷೆ ನಡೆಯಬೇಕು. ಗೇರು ತೋಟದಲ್ಲಿರುವ 27 ಬಾವಿಗಳ ನೀರಿನ ಪರೀಕ್ಷೆಯನ್ನು ತಿಂಗಳಿಗೊಮ್ಮೆ ನಡೆಸಬೇಕು.
- ಗೇರು ತೋಟದಲ್ಲಿರುವ ಐದು ಬಾವಿಗಳನ್ನು ಮುಚ್ಚಲಾಗಿದೆ. ಉಳಿದ ಕೀಟನಾಶಕವನ್ನು ಈ ಬಾವಿಗಳಲ್ಲಿ ಹೂಳಿರುವ ಶಂಕೆ ಇದೆ. ಹೀಗಾಗಿ, ತಜ್ಞರ ಸಮಿತಿಯ ಮೇಲ್ವಿಚಾರಣೆಯಲ್ಲಿ ಬಾವಿಯನ್ನು 80ರಿಂದ 100 ಅಡಿಯ ವರೆಗೆ ಅಗೆದು ಮಾಲಿನ್ಯಕಾರಕಗಳು ಇವೆಯೇ ಎಂಬುದನ್ನು ಪತ್ತೆ ಹಚ್ಚಬೇಕು. ಒಂದು ವೇಳೆ ಮಾಲಿನ್ಯಕಾರಕ ಪತ್ತೆಯಾದರೆ ಪರಿಸರ ಪರಿಹಾರವನ್ನು ಕಾರ್ಪೊರೇಷನ್‌ನಿಂದ ವಸೂಲಿ ಮಾಡಬೇಕು.
- 1986ರಿಂದ 2001ರ ಅವಧಿಯಲ್ಲಿ ಕೀಟನಾಶಕವನ್ನು ವೈಮಾನಿಕವಾಗಿ ಸಿಂಪಡಿಸುವ ಸಂದರ್ಭದಲ್ಲಿ ಮೈಕ್‌ಗಳ ಮೂಲಕ ಮಾಹಿತಿ ನೀಡಲಾಗಿತ್ತು ಎಂದು ಸ್ಥಳೀಯರು ತಿಳಿಸಿದ್ದಾರೆ. ಆದರೆ, ಗೇರುತೋಟದ ಸುತ್ತಮುತ್ತಲ ಪ್ರದೇಶದಲ್ಲಿ ವಾಯುಮಾಲಿನ್ಯ ನಿಯಂತ್ರಣ ವ್ಯವಸ್ಥೆಯನ್ನು ಅಳವಡಿಸಿಲ್ಲ.

ಸಿ.ಜಿ. ಹುನಗುಂದ ನೇಮಕ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೃತ್ತ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಸಿ.ಜಿ.ಹುನಗುಂದ ಅವರನ್ನು ಕರ್ನಾಟಕ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ನ್ಯಾಯಾಂಗ ಸದಸ್ಯರನ್ನಾಗಿ ನೇಮಿಸಿದ್ದ ಆದೇಶವನ್ನು ರದ್ದುಗೊಳಿಸಲಾಗಿದೆ.

ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಅಥವಾ ಸದಸ್ಯರಾಗಿ ಕಾರ್ಯನಿರ್ವಹಿಸಿದವರು ಕೇಂದ್ರ ಅಥವಾ ರಾಜ್ಯ ಸರ್ಕಾರಗಳ ಯಾವುದೇ ಹುದ್ದೆಯನ್ನು ವಹಿಸಿಕೊಳ್ಳುವಂತಿಲ್ಲ. ಹುನಗುಂದ ಅವರು ರಾಜ್ಯ ಮಾನವ ಹಕ್ಕುಗಳ ಆಯೋಗದ ಸದಸ್ಯರಾಗಿದ್ದರು. ಆ ಹುದ್ದೆಯಿಂದ ನಿವೃತ್ತರಾದ ಬಳಿಕ ಭೂ ಕಬಳಿಕೆ ನಿಷೇಧ ನ್ಯಾಯಾಲಯಕ್ಕೆ ನೇಮಕಗೊಂಡಿದ್ದರು.

ಹುನಗುಂದ ಅವರು ಮಾನವ ಹಕ್ಕುಗಳ ಆಯೋಗದ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದ ಮಾಹಿತಿಯನ್ನು ಮುಚ್ಚಿಟ್ಟು ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯಕ್ಕೆ ನೇಮಕಗೊಂಡಿದ್ದಾರೆ ಎಂದು ದೂರಿ ವಕೀಲ ಎಸ್. ಉಮಾಪತಿ ಅವರು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ಆರಂಭಿಸಿದ್ದ ವಿಭಾಗೀಯ ಪೀಠ, ರಾಜ್ಯ ಸರ್ಕಾರ ಮತ್ತು ಹುನಗುಂದ ಅವರಿಗೆ ನೋಟಿಸ್ ಜಾರಿಮಾಡಿತ್ತು.

ನ್ಯಾಯಾಲಯ ನೋಟಿಸ್ ಜಾರಿಗೊಳಿಸಿದ ಬಳಿಕ ಹುನಗುಂದ ಅವರ ನೇಮಕಾತಿಯನ್ನು ರದ್ದುಗೊಳಿಸಿ ಕಂದಾಯ ಇಲಾಖೆಯು 2023ರ ಸೆಪ್ಟೆಂಬರ್ 21ರಂದು ಆದೇಶ ಹೊರಡಿಸಿತ್ತು. ಅದನ್ನು ಅರ್ಜಿದಾರ ವಕೀಲ ಉಮಾಪತಿ ಅವರಿಗೆ ಅಕ್ಟೋಬರ್ 10ರಂದು ಪತ್ರದ ಮೂಲಕ ತಿಳಿಸಲಾಗಿತ್ತು.

ಹುನಗುಂದ ಅವರ ನೇಮಕಾತಿಯನ್ನು ರದ್ದುಗೊಳಿಸಿರುವ ಮಾಹಿತಿಯನ್ನು ಕಂದಾಯ ಇಲಾಖೆ ಹಂಚಿಕೊಂಡಿರುವ ಕುರಿತು ಅರ್ಜಿದಾರರು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರಿದ್ದ ವಿಭಾಗೀಯ ಪೀಠಕ್ಕೆ ಶುಕ್ರವಾರ ಮೆಮೊ ಸಲ್ಲಿಸಿದರು. ಬಳಿಕ ನ್ಯಾಯಾಲಯವು ಪ್ರಕರಣವನ್ನು ವಿಲೇವಾರಿ ಮಾಡಿತು.

ಆಸ್ಪತ್ರೆಗೆ ಕಳಪೆ ಔಷಧ: ಸಿಬಿಐ ತನಿಖೆ

ನವದೆಹಲಿ (ಪಿಟಿಐ): ದೆಹಲಿ ಸರ್ಕಾರದ ಆಸ್ಪತ್ರೆಗಳಿಗೆ ಕಳಪೆ ಗುಣಮಟ್ಟದ ಔಷಧಗಳ ಪೂರೈಕೆ ಹಾಗೂ ಮೊಹಲ್ಲಾ ಕ್ಲಿನಿಕ್‌ಗಳ ಮೂಲಕವು ಇವೇ ಔಷದಗಳನ್ನು ಪೂರೈಸಲಾಗಿದೆಯೇ ಎಂಬ ಆರೋಪ ಕುರಿತು ಕೇಂದ್ರ ಸರ್ಕಾರ ಸಿಬಿಐ ತನಿಖೆಗೆ ಆದೇಶಿಸಿದೆ.

ದೆಹಲಿಯ ಲೆಫ್ಟಿನಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರು ಡಿಸೆಂಬರ್ ತಿಂಗಳಲ್ಲಿ ಈ ಸಂಬಂಧ ಶಿಫಾರಸು ಮಾಡಿದ್ದರು. ತನಿಖೆಗೆ ಆದೇಶಿಸಿ ಕೇಂದ್ರ ಗೃಹ ಸಚಿವಾಲಯವು ಶುಕ್ರವಾರ ಆದೇಶ ಹೊರಡಿಸಿದೆ. ದೆಹಲಿ ಸರ್ಕಾರದ ಗುಪ್ತದಳ ನಿರ್ದೇಶನಾಲಯವೂ ತನಿಖೆಗೆ ಕೋರಿ ಕೇಂದ್ರ ಗೃಹ ಸಚಿವಾಲಯಕ್ಕೆ ಪತ್ರ ಬರೆದಿತ್ತು.



ಸಾಂಸ್ಕೃತಿಕ ನೃತ್ಯ ಹಿಮಾಚಲ ಪ್ರದೇಶದ ಮನಾಲಿಯಲ್ಲಿ ಶುಕ್ರವಾರ ನಡೆದ ಮನಾಲಿ ಚಳಿಗಾಲ 2024ರ ಉತ್ಸವದಲ್ಲಿ ಮಹಿಳೆಯರು 'ಕುಲ್ವಿ ನಾಟಿ' ನೃತ್ಯವನ್ನು ಪ್ರದರ್ಶಿಸಿದರು -ಪಿಟಿಐ ಚಿತ್ರ

ದಂಡ ಭೀತಿ: ಶೂ ಧರಿಸದ ಮಕ್ಕಳು

ಒಂದನೇ ಪುಟದಿಂದ

ಗಂಗೆ ಪೂಜೆ ಸೇರಿ ಮೈಲಿಗೆ ತೊಳೆಯುವ ಪೂಜೆಗೆ ನಾಲ್ಕೈದು ಸಾವಿರ ರೂಪಾಯಿ ವೆಚ್ಚವಾಗುತ್ತದೆ. ಆ ವೆಚ್ಚವನ್ನು ಚಪ್ಪಲಿ ತಾಗಿಸಿದ ಮಕ್ಕಳ ಪೋಷಕರೇ ಕೊಡಬೇಕು. ಹೆಚ್ಚಿನ ಎಲ್ಲರೂ ಬಡವರೇ ಆಗಿರುವುದರಿಂದ ಮೈಲಿಗೆ ತೊಳೆಯುವ ಪೂಜೆಗೆ ಖರ್ಚು ಮಾಡುವುದು ಕಷ್ಟ. ಹಲವು ಬಾರಿ ಈ ರೀತಿ ಹಣ ಪಾವತಿಸಿರುವ ಪೋಷಕರು, ಈಗ ಮಕ್ಕಳಿಗೆ ಚಪ್ಪಲಿ ಅಥವಾ ಶೂ ಹಾಕಿಸಿ ಶಾಲೆಗೆ ಕಳುಹಿಸುವುದನ್ನೇ ಬಿಟ್ಟಿದ್ದಾರೆ. ಬೇರೆ ಸಮುದಾಯದ ಮಕ್ಕಳು ಶೂ ಧರಿಸಿದರೂ ಎಚ್ಚರಿಕೆಯಿಂದ ಇರುತ್ತಾರೆ ಎಂದು ಅಲ್ಲಿಯವರು ವಿವರಿಸುತ್ತಾರೆ.

ಈ ಮಕ್ಕಳಿಗೆ ಶಿಕ್ಷಕರ ಚಪ್ಪಲಿ ಅಥವಾ ಶೂ ತಾಕಿದರೂ ಪೂಜೆ ನಡೆಯಲೇಬೇಕು. ಆದ್ದರಿಂದ ಈ ಮಕ್ಕಳಿಗೆ ಚಪ್ಪಲಿ/ಶೂ ತಾಕದಂತೆ ಎಚ್ಚರಿಕೆಯಿಂದ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. 'ಸರ್ಕಾರದಿಂದ ನೀಡಿರುವ ಶೂ ಧರಿಸಿಯೇ ಶಾಲೆಗೆ ಬರಬೇಕು ಎಂದು ಮಕ್ಕಳಿಗೆ ತಾಕೀತು ಮಾಡಿದ್ದಾರೆ. ಆದರೆ, ಶೂ ಧರಿಸಿ ಬಂದಾಗ ಆಗುವ ಮೈಲಿಗೆ ತೊಳೆಯುವ ಪೂಜೆಗೆ ನೀವೇ ಹಣ ನೀಡುವುದಾದರೆ ಮಕ್ಕಳಿಗೆ ಶೂ ಹಾಕಿ ಕಳುಹಿಸುವುದಾಗಿ ಗೊಲ್ಲರಹಟ್ಟಿ ಪೋಷಕರು ಹೇಳುತ್ತಾರೆ. ಬೇರೆ ದಾರಿ ಇಲ್ಲದೆ ಶಿಕ್ಷಕರು ಸುಮ್ಮನಾಗಿದ್ದಾರೆ' ಎಂದು ಸ್ಥಳೀಯರು ಹೇಳುತ್ತಾರೆ.

ಹಂಪಿ ವಿ.ವಿ: ಮೂವರಿಗೆ ನಾಡೋಜ

ಜ. 10ಕ್ಕೆ ಕನ್ನಡ ವಿ.ವಿ ಘಟಿಕೋತ್ಸವ, 264 ಮಂದಿಗೆ ಪಿಎಚ್‌.ಡಿ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಹಂಪಿ ಕನ್ನಡ ವಿಶ್ವವಿದ್ಯಾಲಯದ 32ನೇ ನುಡಿಹಬ್ಬ (ಘಟಿಕೋತ್ಸವ) ಜನವರಿ 10ರಂದು ನಡೆಯಲಿದೆ. ನಾಡೋಜ ಗೌರವಕ್ಕೆ ಬೀದರ್‌ನ ಭಾಲ್ಕಿ ಹಿರೇಮಠ ಸಂಸ್ಥಾನದ ಬಸವಲಿಂಗ ಪಟ್ಟದ್ದೇವರು, ಆಂಧ್ರಪ್ರದೇಶ ವಿಜಯನಗರದ ಕೇಂದ್ರೀಯ ಬುಡಕಟ್ಟು ವಿಶ್ವ ವಿದ್ಯಾಲಯದ ಕುಲಪತಿ ಪ್ರೊ.ತೇಜಸ್ವಿ ವಿ.ಕಟ್ಟಿಮನಿ ಮತ್ತು ತುಮಕೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಎಸ್.ಸಿ.ಶರ್ಮಾ ಆಯ್ಕೆಯಾಗಿದ್ದಾರೆ.

'ಈ ಬಾರಿ ದಾಖಲೆಯ 264 ವಿದ್ಯಾರ್ಥಿಗಳು ಪಿಎಚ್‌.ಡಿ ಪದವಿ ಪಡೆಯುವರು. ಕಳೆದ ವರ್ಷ 166 ಮಂದಿ ಪಿಎಚ್‌.ಡಿ ಪಡೆದಿದ್ದು ಈವರೆಗಿನ ದಾಖಲೆಯಾಗಿತ್ತು. ಎಚ್‌.ಡಿ.ಕೋಟೆ ತಾಲ್ಲೂಕಿನ ಗಡಿಭಾಗದಲ್ಲಿ 500 ಜನಸಂಖ್ಯೆ ಇರುವ ಪಣಿಯರ್ ಬುಡಕಟ್ಟು ಸಮುದಾಯದ ಯುವತಿ ದಿವ್ಯಾ ಎಸ್‌.ಆರ್. ಎಂಬುವರು ಸಮಾಜಶಾಸ್ತ್ರದಲ್ಲಿ ಪಿಎಚ್‌.ಡಿ.ಪದವಿ ಪಡೆಯುವರು' ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಡಿ.ವಿ. ಪರಮಶಿವಮೂರ್ತಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.



ಬಸವಲಿಂಗ ಪಟ್ಟದ್ದೇವರು



ಪ್ರೊ.ಎಸ್ ಸಿ.ಶರ್ಮಾ



ಪ್ರೊ.ತೇಜಸ್ವಿ ವಿ.ಕಟ್ಟಿಮನಿ

'ಜನವರಿ 10ರಂದು ಸಂಜೆ 5ಕ್ಕೆ ನಡೆಯುವ ಸಮಾರಂಭದಲ್ಲಿ ಕುಲಾಧಿಪತಿ ಥಾವರ್ ಚಂದ್ ಗೆಹಲೋತ್ ಅವರು ನಾಡೋಜ ಗೌರವ ಪದವಿ ಪ್ರದಾನ ಮಾಡುವರು. ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ಡಿ.ಲಿಟ್ ಮತ್ತು ಪಿಎಚ್‌.ಡಿ ಪ್ರದಾನ ಮಾಡುವರು. ಆಂಧ್ರಪ್ರದೇಶದ ಅನಂತಪುರ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಸ್‌.ಎ.ಕೋರಿ ಘಟಿಕೋತ್ಸವ ಭಾಷಣ ಮಾಡುವರು' ಎಂದರು.

ಗೌರವದಲ್ಲಿ ಪ್ರಾದೇಶಿಕ ಸಮತೋಲನ: 'ಪ್ರತಿ ವರ್ಷದಂತೆ ಈ ಸಲವೂ ನಾಡೋಜ ಗೌರವಕ್ಕೆ 10 ಜನರ ಹೆಸರು ಶಿಫಾರಸು ಮಾಡಲಾಗಿತ್ತು. ಮೂವರನ್ನು ಆಯ್ಕೆ ಮಾಡಿರುವುಕ್ಕೆ ರಾಜ್ಯಪಾಲರು ಸಮ್ಮತಿ ನೀಡಿದರು. ಬೀದರ್, ಧಾರವಾಡ ಮತ್ತು ಬೆಂಗಳೂರು ಭಾಗಗಳಿಗೆ ಆದ್ಯತೆ ನೀಡಿ ಪ್ರಾದೇಶಿಕ ಸಮತೋಲನ ಸಾಧಿಸಲಾಗಿದೆ' ಎಂದರು.

ವಿಕ್ರಂ ಸಿಂಹ ಬೆಂಬಲಕ್ಕೆ ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಸದ ಪ್ರತಾಪ್ ಸಿಂಹ ಅವರ ವಿರುದ್ಧ ಸೇಡು ತೀರಿಸಿಕೊಳ್ಳಲು ಹಾಗೂ ಅವರನ್ನು ಲೋಕಸಭೆ ಚುನಾವಣೆ ಕಣದಿಂದ ತಪ್ಪಿಸಲು ಮುಖ್ಯಮಂತ್ರಿ ಅವರೇ ಷಡ್ಯಂತ್ರ ರೂಪಿಸಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಮರ ಕಡಿದ ಆರೋಪಕ್ಕೆ ಗುರಿ ಆಗಿರುವ ಸಂಸದ ಪ್ರತಾಪ್ ಸಿಂಹ ಅವರ ಸಹೋದರ ವಿಕ್ರಂ ಸಿಂಹ ಅವರ ಮೇಲೆ ಸರ್ಕಾರ ನಡೆಸುತ್ತಿರುವ ದಬ್ಬಾಳಿಕೆ ಬಗ್ಗೆ ಹಲವಾರು ಅನುಮಾನಗಳು ಇವೆ. ಸ್ಥಳೀಯ ಒಬ್ಬ ಪುಢಾರಿ ಮುಖ್ಯಮಂತ್ರಿಗೆ ಮಾಹಿತಿ ಕೊಟ್ಟು ಪ್ರತಾಪ್ ಸಿಂಹಗೆ ಪಾಠ ಕಲಿಸಬೇಕು ಎಂದು ತಲೆ ತಿಂದ. ಅಧಿಕಾರಿಗಳಿಗೆ ಕರೆ ಮಾಡಿದ ಸಿದ್ದರಾಮಯ್ಯ ಬೀಟೆ ಮರ ಕಡಿದು ಅ ಜಾಗದಲ್ಲಿ ಹಾಕುವಂತೆ ಹೇಳಿದ್ದರು. ಈ ಪ್ರಕರಣದಲ್ಲಿ ಹಾಸನದ ಶಾಸಕರೊಬ್ಬರು ಪ್ರಧಾನ ಪಾತ್ರ ವಹಿಸಿದ್ದಾರೆ ಎಂದು ಆಪಾದಿಸಿದರು.

'ಈ ಬಗ್ಗೆ ನನಗೆ ಅಧಿಕಾರಿಗಳೇ ಮಾಹಿತಿ ಕೊಟ್ಟಿದ್ದಾರೆ. ಬೇಕಿದ್ದರೆ ಮುಖ್ಯಮಂತ್ರಿಯವರ ಮೊಬೈಲ್ ಕರೆಗಳ ಪಟ್ಟಿ ತೆಗೆಸಿ ನೋಡಲಿ. ನಾಗಮೋಹನ್ ದಾಸ್ ನೇತೃತ್ವದ ಆಯೋಗದಿಂದ ತನಿಖೆ ಮಾಡಿಸಲಿ. ಕಾಂಗ್ರೆಸ್ ವಿರೋಧಿಗಳ ದನಿ ಅಡಗಿಸಲು ಅಧಿಕಾರ ದುರ್ಬಳಕೆ ಮಾಡಿಕೊಳ್ಳುತ್ತಿದೆ' ಎಂದು ದೂರಿದರು.

ಸ್ವಾತಿ ಮಾಲಿವಾಲ್ ರಾಜೀನಾಮೆ



ನವದೆಹಲಿ (ಪಿಟಿಐ): 'ದೆಹಲಿ ಮಹಿಳಾ ಆಯೋಗ ಅಧ್ಯಕ್ಷೆ ಸ್ವಾತಿ ಮಾಲಿವಾಲ್ ಅವರು ತಮ್ಮ ಸ್ಥಾನಕ್ಕೆ ಶುಕ್ರವಾರ ರಾಜೀನಾಮೆ ನೀಡಿದ್ದಾರೆ' ಎಂದು ಮೂಲಗಳು ಹೇಳಿವೆ.

'ಎಎಪಿಯು ರಾಜ್ಯಸಭೆ ಚುನಾವಣೆಗೆ ತಮ್ಮನ್ನು ಅಭ್ಯರ್ಥಿಯಾಗಿ ಘೋಷಣೆ ಮಾಡಿದ ಬೆನ್ನಲ್ಲೇ ಸ್ವಾತಿ ಅವರು ರಾಜೀನಾಮ ನೀಡಿದ್ದಾರೆ' ಎಂದಿವೆ.

ಕನ್ನಡ ಫಲಕ: ಸರ್ಕಾರದ ಕಂಕಣ

ಒಂದನೇ ಪುಟದಿಂದ

ನಾಮಫಲಕಗಳಲ್ಲಿ ಕನ್ನಡ ಬಳಸದೇ ಇರುವುದನ್ನು ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆಯ ಟಿ.ಎ. ನಾರಾಯಣಗೌಡರ ಬಣದ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆದಿತ್ತು. ದೇವನಹಳ್ಳಿ ಸಮೀಪದ ಸಾದಹಳ್ಳಿ ಗೇಟ್‌ನಿಂದ ಹೊರಟ ಮೆರವಣಿಗೆ ಭಾರಿ ಸಂಚಲನ ಮೂಡಿಸಿತ್ತು. ಕೆಲವು ಕಡೆಗಳಲ್ಲಿ ನಾಮಫಲಕಗಳನ್ನು ಒಡೆದು ಹಾಕಿದ್ದು, ಹೋರಾಟ ಹಿಂಸೆಗೆ ತಿರುಗಿತ್ತು. ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದ್ದರು. ನಾರಾಯಣಗೌಡ ಸೇರಿದಂತೆ 40ಕ್ಕೂ ಹೆಚ್ಚು ಜನರನ್ನು ಬಂಧಿಸಿ, ಜೈಲಿಗೆ ಕಳುಹಿಸಲಾಗಿತ್ತು. ಅವರಿಗೆ ಇನ್ನೂ ಜಾಮೀನು ಸಿಕ್ಕಿಲ್ಲ. ಹೋರಾಟಗಾರರನ್ನು ಬಿಡುಗಡೆ ಮಾಡುವಂತೆ ರಕ್ಷಣಾ ವೇದಿಕೆಯು, ಅನಿರ್ದಿಷ್ಟಾವಧಿ ಪ್ರತಿಭಟನೆಯನ್ನು ಶುಕ್ರವಾರದಿಂದ ಆರಂಭಿಸಿದೆ.

ರಕ್ಷಣಾ ವೇದಿಕೆಯ ಕಾರ್ಯಕರ್ತರ ಹೋರಾಟವನ್ನು ರಾಜಕೀಯ ಪಕ್ಷಗಳು, ಕನ್ನಡ ಪರ ಸಂಘಟನೆಗಳು ಬೆಂಬಲಿಸಿದ್ದವು.

ಸಂಪುಟದ ಪ್ರಮುಖ ತೀರ್ಮಾನಗಳು

- 2023–24 ನೇ ಸಾಲಿನಲ್ಲಿ ನಾಲ್ಕು ಸಾರಿಗೆ ಸಂಸ್ಥೆಗಳು ಸರ್ಕಾರಕ್ಕೆ ಪಾವತಿಸಬೇಕಾಗಿರುವ ಮೋಟಾರು ವಾಹನ ತೆರಿಗೆ ಬಾಕಿ ಹಣ ₹581.47 ಕೋಟಿ ಪಾವತಿಸುವುದರಿಂದ ವಿನಾಯಿತಿ
- ಕೇಂದ್ರ ಪ್ರವಾಸೋದ್ಯಮ ಇಲಾಖೆಯಿಂದ ಪ್ರಶಾದ್ ಯೋಜನೆಯಡಿ ಮೈಸೂರಿನ ಚಾಮುಂಡೇಶ್ವರಿ ದೇವಿ ಸನ್ನಿಧಾನದ ಅಭಿವೃದ್ಧಿ ಯೋಜನೆಯನ್ನು ₹45.70 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಅನುಮತಿ
- ಕೇಂದ್ರ ಪುರಸ್ಕೃತ ಎಎಸ್‌ಸಿಎಡಿ ಯೋಜನೆಯಡಿ ರಾಜ್ಯದ ಜಾನುವಾರುಗಳಿಗೆ ಜಂತುನಾಶಕ ಔಷಧಿಗಳನ್ನು ₹31.15 ಕೋಟಿ ವೆಚ್ಚದಲ್ಲಿ ಒದಗಿಸುವ ಕಾರ್ಯಕ್ರಮಕ್ಕೆ ಒಪ್ಪಿಗೆ. ಕೇಂದ್ರ ಶೇ 60 ಮತ್ತು ರಾಜ್ಯ ಶೇ 40 ರಷ್ಟು ಹಣ ಒದಗಿಸಲಿವೆ
- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಬರುವ ವಿದ್ಯಾರ್ಥಿ ನಿಲಯಗಳಿಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡುವ ಸಂಬಂಧ ಈಗ ಇರುವ ಆರ್ಥಿಕ ಮಿತಿಯನ್ನು ಸಡಿಲಗೊಳಿಸಿ, ಎರಡು ವರ್ಷಗಳಿಗೆ ಅಗತ್ಯವಿರುವಷ್ಟು ಖರೀದಿಸುವ ಅಧಿಕಾರ ಜಿಲ್ಲಾಧಿಕಾರಿಗಳಿಗೆ ನೀಡಲು ಒಪ್ಪಿಗೆ
- ನಬಾರ್ಡ್ ಯೋಜನೆಯಡಿ ಕೃಷಿ ಮಾರುಕಟ್ಟೆ ಇಲಾಖೆಯಿಂದ ಮೂರು ವಿವಿಧ ಎಪಿಎಂಸಿ ಸಮಿತಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ₹33 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ
- ಕೇಂದ್ರ ಪುರಸ್ಕೃತ ಯೋಜನೆಯಾದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಗಣಕೀಕರಣ ಯೋಜನೆಯಡಿ ₹71.38 ಕೋಟಿ ವೆಚ್ಚದಲ್ಲಿ 5491 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ (ಪ್ಯಾಕ್ಸ್) ದತ್ತಾಂಶ ಡಿಜಿಟಲೀಕರಣ ಮತ್ತು ಮೈಗ್ರೇಷನ್ ಸಪೋರ್ಟ್ ಕಾರ್ಯ ಕೈಗೊಳ್ಳಲು ಅನುಮೋದನೆ.
- ಶಿವಮೊಗ್ಗ ಜಿಲ್ಲೆ ತೆವರಚಟ್ನಳ್ಳಿ ಗ್ರಾಮದಲ್ಲಿ ₹22.50 ಕೋಟಿ ವೆಚ್ಚದಲ್ಲಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯ ಕಟ್ಟಡವನ್ನು ನಿರ್ಮಿಸಲು ಒಪ್ಪಿಗೆ
- ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಒಟ್ಟು 10 ಡಬ್ಬಲ್ ಡೆಕ್ಕರ್ ಹವಾನಿಯಂತ್ರಿತ ಎಲೆಕ್ಟ್ರಿಕ್ ಬಸ್‌ಗಳನ್ನು ಜಿಸಿಸಿ ಆಧಾರದ ಮೇಲೆ ಕಾರ್ಯಾಚರಣೆ ನಡೆಸಲು ಆಡಳಿತಾತ್ಮಕ ಒಪ್ಪಿಗೆ

ಮಹಾರಾಷ್ಟ್ರ: ಎಂಟಿಎಚ್‌ಎಲ್‌ಗೆ ₹250 ಟೋಲ್

ಪ್ರಜಾವಾಣಿ ವಾರ್ತೆ

ಮುಂಬೈ: ದೇಶದ ಉದ್ದನೆಯ ಸಾಗರ ಸೇತುವೆ 'ಮುಂಬೈ ಟ್ರಾನ್ಸ್ ಹಾರ್ಬರ್ ಲಿಂಕ್' (ಎಂಟಿಎಚ್‌ಎಲ್) ಮೂಲಕ ಸಂಚಾರಕ್ಕೆ ಮಹಾರಾಷ್ಟ್ರ ಸರ್ಕಾರ ₹250 ಟೋಲ್ ಶುಲ್ಕ ನಿಗದಿ ಮಾಡಿದೆ.

ಈ ಸೇತುವೆಯನ್ನು 'ಅಟಲ್ ಬಿಹಾರಿ ವಾಜಪೇಯಿ ಸ್ಮೃತಿ ಸೇವರಿ ನ್ಹಾವಾ ಶೇವಾ ಅಟಲ್ ಸೇತು' ಎಂದೂ ಕರೆಯಲಾಗುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರು ಈ ಸೇತುವೆಯನ್ನು ಜ.12ರಂದು ಉದ್ಘಾಟಿಸುವ ನಿರೀಕ್ಷೆ ಇದೆ.




ಈ ಸಾಗರ ಸೇತುವೆಯು ಮುಂಬೈನ ಸೇವರಿ ಹಾಗೂ ರಾಯಗಡ ಜಿಲ್ಲೆಯ ನ್ಹಾವಾ ಶೇವಾ ನಗರವನ್ನು ಸಂಪರ್ಕಿಸುತ್ತದೆ. ಪ್ರಸ್ತುತ ಈ ಸ್ಥಳಗಳ ನಡುವಿನ ಸಂಚಾರಕ್ಕೆ ಎರಡೂವರೆ ಗಂಟೆಗೂ ಅಧಿಕ ಸಮಯ ಬೇಕು. ಒಂದೊಮ್ಮೆ ಈ ಸಾಗರ ಸೇತುವೆ ಸಂಚಾರಕ್ಕೆ ಮುಕ್ತಗೊಂಡಾಗ, ಪ್ರಯಾಣಕ್ಕೆ 15–20 ನಿಮಿಷಗಳಷ್ಟು ಸಾಕು.

ಎಂಟಿಎಚ್‌ಎಲ್ ಒಟ್ಟು 21.8 ಕಿ.ಮೀ. ಉದ್ದ ಇದ್ದು, ಸಾಗರದಲ್ಲಿ ಹಾಯ್ದು ಹೋಗುವ ಸೇತುವೆಯ ಉದ್ದ 16.5 ಕಿ.ಮೀ.ನಷ್ಟಿದೆ. ಈ ಸೇತುವೆಗೆ ಸಂಪರ್ಕ ಕಲ್ಪಿಸುವ ವಯಾಡಕ್ಟ್‌ಗಳ ಉದ್ದ 5.5 ಕಿ.ಮೀ. ಇದೆ.

ಚೀನಾದಲ್ಲಿರುವ ಹ್ಯಾಂಗ್‌ಜೌ ಬೇ ಬ್ರಿಡ್ಜ್ (36 ಕಿ.ಮೀ. ಉದ್ದ) ಹಾಗೂ ಸೌದಿ ಅರೇಬಿಯಾದಲ್ಲಿ ಕಿಂಗ್ ಫಹಾದ್ ಕಾಸ್‌ವೇ (26 ಕಿ.ಮೀ. ಉದ್ದ) ವಿಶ್ವದ ಇತರ ಎರಡು ಸಾಗರ ಸೇತುವೆಗಳಾಗಿವೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦
ನಾವೆಲ್ಲರೂ ಸಮಾನ ಪ್ರತಿಭೆಗಳಲ್ಲದಿರಬಹುದು; ಆದರೆ, ಪ್ರತಿಭಾನ್ವಿತರಾಗಲು ನಮಗೆಲ್ಲ ಸಮಾನ ಅವಕಾಶಗಳಿವೆ.
- ಎ.ಪಿ.ಜೆ. ಅಬ್ದುಲ್ ಕಲಾಂ

ಅದಾನಿ ಸಮೂಹ ಕುರಿತ ತೀರ್ಪು ಉತ್ತರ ಸಿಗದ ಪ್ರಶ್ನೆಗಳು

ಕಂಪನಿಗಳ ಷೇರುಗಳ ಬೆಲೆಯ ಮೇಲೆ ಕೃತಕವಾಗಿ ಪ್ರಭಾವ ಬೀರಿದ ಹಾಗೂ ಲೆಕ್ಕಪತ್ರಗಳಲ್ಲಿ ವಂಚನೆ ಎಸಗಿರುವ ಆರೋಪ ಎದುರಿಸುತ್ತಿರುವ ಅದಾನಿ ಸಮೂಹದ ವಿರುದ್ಧದ ತನಿಖೆಯನ್ನು ವಿಶೇಷ ತನಿಖಾ ತಂಡ (ಎಸ್ಐಟಿ) ಅಥವಾ ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ವಹಿಸಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಇದರಿಂದಾಗಿ, ಕೆಲವು ಪ್ರಶ್ನೆಗಳನ್ನು ಉತ್ತರಿಸದೆ ಹಾಗೆಯೇ ಬಿಟ್ಟಂತೆ ಆಗಿದೆ. ಅಮೆರಿಕದ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಒಂದು ವರ್ಷದ ಹಿಂದೆ ಈ ಆರೋಪಗಳನ್ನು ಮಾಡಿತ್ತು; ಈ ಸಂಸ್ಥೆಯು ಷೇರು ಮಾರುಕಟ್ಟೆಯಲ್ಲಿ ಶಾರ್ಟ್ ಸೆಲ್ಲಿಂಗ್ ವಹಿವಾಟು (ಷೇರು ಮೌಲ್ಯ ಕುಸಿಯುತ್ತಿರುವಾಗ ಲಾಭ ಮಾಡಿಕೊಳ್ಳುವ ವಹಿವಾಟು) ನಡೆಸುತ್ತದೆ. ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ನಡೆಸುತ್ತಿರುವ ತನಿಖೆಯಲ್ಲಿ ಕೋರ್ಟ್ ವಿಶ್ವಾಸ ವ್ಯಕ್ತಪಡಿಸಿದೆ. ನಿಯಂತ್ರಣ ಕ್ರಮಗಳಲ್ಲಿ ವೈಫಲ್ಯ ಆಗಿರುವಂತೆ ಕಂಡುಬಂದಿಲ್ಲ, ಸೆಬಿ ಸಂಸ್ಥೆಯು ಸಮಗ್ರ ತನಿಖೆ ನಡೆಸುತ್ತಿದೆ, 22 ಪ್ರಕರಣಗಳಲ್ಲಿ ಸೆಬಿ ತನಿಖೆಯನ್ನು ಪೂರ್ಣಗೊಳಿಸಿದೆ ಎಂದು ಕೋರ್ಟ್ ಹೇಳಿದೆ. ಅಲ್ಲದೆ, ಇನ್ನುಳಿದ ಎರಡು ಪ್ರಕರಣಗಳಿಗೆ ಸಂಬಂಧಿಸಿದ ತನಿಖೆಯನ್ನು ಸಾಧ್ಯವಾದಷ್ಟುಮಟ್ಟಿಗೆ ಮೂರು ತಿಂಗಳಲ್ಲಿ ಪೂರ್ಣಗೊಳಿಸಬೇಕು ಎಂದು ಸೆಬಿಗೆ ಸೂಚಿಸಿದೆ. ಷೇರುಗಳ ಶಾರ್ಟ್ ಸೆಲ್ಲಿಂಗ್ ವಹಿವಾಟು ನಡೆಸಿದವರು ಯಾವುದಾದರೂ ಕಾನೂನು ಉಲ್ಲಂಘಿಸಿದ್ದರೇ, ಅದರಿಂದಾಗಿ ಹೂಡಿಕೆದಾರರಿಗೆ ನಷ್ಟ ಆಯಿತೇ ಎಂಬುದನ್ನು ತನಿಖೆಗೆ ಒಳಪಡಿಸುವಂತೆ ಕೇಂದ್ರ ಸರ್ಕಾರಕ್ಕೆ ಕೋರ್ಟ್ ಸೂಚಿಸಿದೆ.



ಕೋರ್ಟ್ ನಿಗದಿ ಮಾಡಿರುವ ಕಾಲಮಿತಿಯಲ್ಲಿ ಸೆಬಿ ತನಿಖೆ ಪೂರ್ಣಗೊಳಿಸಬೇಕು. ಅದಕ್ಕಿಂತ ಮುಖ್ಯವಾಗಿ, ತನಿಖೆಯಲ್ಲಿ ಕಂಡುಕೊಂಡ ಎಲ್ಲ ಅಂಶಗಳನ್ನು ಸೆಬಿ ಸಾರ್ವಜನಿಕರ ಮುಂದೆ ಇರಿಸಬೇಕು

ಆದರೆ ಅದಾನಿ ಸಮೂಹಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರವಾಗಿ ಕೆಲವು ಪ್ರಶ್ನೆಗಳು ಹಾಗೇ ಉಳಿದುಕೊಂಡಿವೆ. ಏಕೆಂದರೆ, ಷೇರು ಬೆಲೆಯ ಮೇಲೆ ಪ್ರಭಾವ ಬೀರಿದ್ದರ ಕುರಿತ ಆರೋಪ ಮತ್ತು ವಿದೇಶಿ ಹೂಡಿಕೆ ಕುರಿತ ತನಿಖೆಯನ್ನು ಸೆಬಿ ಇದುವರೆಗೆ ಪರಿಣಾಮಕಾರಿಯಾಗಿ ಮಾಡಿಲ್ಲ. ವಿದೇಶಿ ಹೂಡಿಕೆದಾರರಿಗೆ ಸಂಬಂಧಿಸಿದ ಸಂಸ್ಥೆಗಳು ತೆರಿಗೆಗಳ್ಳರ ಪಾಲಿನ ಸ್ವರ್ಗವೆಂದು ಪರಿಗಣಿತವಾಗಿರುವ ಸ್ಥಳಗಳಲ್ಲಿ ಇರುವ ಕಾರಣ, 12 ವಿದೇಶಿ ಹೂಡಿಕೆದಾರರ ಪಾಲುದಾರರ ಆರ್ಥಿಕ ಹಿತಾಸಕ್ತಿಗಳನ್ನು ಸಾಬೀತು ಮಾಡುವುದು ಸವಾಲಿನ ಕೆಲಸವಾಗಿಯೇ ಉಳಿದಿದೆ ಎಂದು ಸೆಬಿ ಹೇಳಿದೆ. ಹಿಂಡನ್‌ಬರ್ಗ್ ಸಂಸ್ಥೆಯ ವರದಿ ಬಹಿರಂಗ ಆಗುವ ಮೊದಲೂ, ಅದಾನಿ ಸಮೂಹದ ಬಗ್ಗೆ ಸೆಬಿಗೆ ಸರ್ಕಾರಿ ಸಂಸ್ಥೆಗಳಿಂದಲೇ ದೂರುಗಳು ಸಲ್ಲಿಕೆಯಾಗಿದ್ದವು. ವಿದೇಶಿ ಹೂಡಿಕೆಗೆ ಹಾಗೂ ಮಾರುಕಟ್ಟೆಗೆ ನೀಡಬೇಕಿರುವ ಮಾಹಿತಿಗೆ ಸಂಬಂಧಿಸಿದ ನಿಯಮಗಳನ್ನು ಬದಲಾಯಿಸುವಂತೆ ಸೆಬಿಗೆ ತಾನು ಸೂಚಿಸಲು ಸಾಧ್ಯವಿಲ್ಲ, ಏಕೆಂದರೆ ನಿಯಮಗಳು ಈಗಾಗಲೇ ಕಠಿಣವಾಗಿವೆ ಎಂದು ಕೋರ್ಟ್ ಹೇಳಿದೆ. ಸೆಬಿ ತನಿಖೆಯಲ್ಲಿನ ಲೋಪಗಳನ್ನು ಗುರುತಿಸಿದ್ದ ಸಂಘಟಿತ ಅಪರಾಧ ಮತ್ತು ಭ್ರಷ್ಟಾಚಾರ ವರದಿಗಾರಿಕೆ ಯೋಜನೆಯ ವರದಿಯನ್ನು ಆಧರಿಸಿ ತಾನು ಆದೇಶ ನೀಡಲು ಸಾಧ್ಯವಿಲ್ಲ ಎಂದು ಕೋರ್ಟ್ ಹೇಳಿದೆ. ಈ ವರದಿಯನ್ನು ನಿರ್ಣಾಯಕ ಸಾಕ್ಷ್ಯವೆಂದು ಪರಿಗಣಿಸಲು ಆಗದು ಎಂದು ಅದು ಕಾರಣ ನೀಡಿದೆ. ಕೋರ್ಟ್ ನೀಡಿರುವ ಕಾರಣವೇ, ತನಿಖೆಯನ್ನು ಮುಂದಿನ ಹಂತಕ್ಕೆ ಒಯ್ಯುವುದು ಸೂಕ್ತವಾಗುತ್ತಿತ್ತೆ ಎಂಬ ಪ್ರಶ್ನೆಯು ಜನರ ಮುಂದೆ ಎದುರಾಗುವಂತೆ ಮಾಡಿದೆ. ತನಿಖಾ ಪತ್ರಕರ್ತರಿಗೆ ನಿರ್ಣಾಯಕ ಸಾಕ್ಷ್ಯವನ್ನು ಕಂಡುಹಿಡಿಯಲು ಬೇಕಿರುವ ಪೊಲೀಸ್ ಅಧಿಕಾರ ಇರುವುದಿಲ್ಲ; ಎಸ್ಐಟಿಗೆ ಅಂತಹ ಅಧಿಕಾರ ಇರುತ್ತದೆ.

ಸೆಬಿ ಕಾರ್ಯವ್ಯಾಪ್ತಿಯಲ್ಲಿ ಪ್ರವೇಶಿಸುವ ಇಚ್ಛೆ ಕೋರ್ಟ್‌ಗೆ ಇರಲಿಲ್ಲ ಎಂಬುದು ಅದು ನೀಡಿರುವ ತೀರ್ಪಿನಿಂದಾಗಿ ಸ್ಪಷ್ಟವಾಗುತ್ತದೆ. ತನ್ನ ಅಧಿಕಾರವ್ಯಾಪ್ತಿಯಲ್ಲಿ ಸ್ವಾಯತ್ತೆಯನ್ನು ಸೆಬಿ ಹೊಂದಿರುವ ಕಾರಣದಿಂದಾಗಿ, ಕೋರ್ಟ್ ಈ ನಿಲುವು ತಾಳಿರಬಹುದು. ನಿಯಂತ್ರಣ ಕ್ರಮಗಳು ಮನಸ್ಸಿಗೆ ತೋಚಿದಂತೆ ರೂಪಿಸಿದವು ಆಗಿದ್ದರೆ, ಆ ಕ್ರಮಗಳು ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುವ ರೀತಿಯಲ್ಲಿ ಇದ್ದರೆ ನ್ಯಾಯಾಂಗವು ಅದರ ಪರಿಶೀಲನೆಗೆ ಮುಂದಾಗಬಹುದು. ಅಸಾಮಾನ್ಯ ಸಂದರ್ಭಗಳಲ್ಲಿ ಮಾತ್ರ ತನಿಖೆಯನ್ನು ಸೆಬಿ ಕೈಯಿಂದ ಕಿತ್ತು ಇನ್ನೊಂದು ಸಂಸ್ಥೆಗೆ ವಹಿಸಬಹುದು ಎಂದು ಹೇಳಿದೆ. ಈ ಪ್ರಕರಣದಲ್ಲಿ ಅಂತಹ ಸಂದರ್ಭ ಎದುರಾಗಿಲ್ಲ ಎಂದು ಕೋರ್ಟ್ ಹೇಳಿದೆ. ಕೋರ್ಟ್ ನಿಗದಿ ಮಾಡಿರುವ ಕಾಲಮಿತಿಯಲ್ಲಿ ಸೆಬಿ ತನಿಖೆ ಪೂರ್ಣಗೊಳಿಸಬೇಕು. ಅದಕ್ಕಿಂತ ಮುಖ್ಯವಾಗಿ ತನಿಖೆಯಲ್ಲಿ ಕಂಡುಕೊಂಡ ಎಲ್ಲ ಅಂಶಗಳನ್ನು ಸೆಬಿ ಸಾರ್ವಜನಿಕರ ಮುಂದೆ ಇರಿಸಬೇಕು. ಏಕೆಂದರೆ, ಇದು ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ ವಿಷಯ, ಇದು ದೇಶದ ಷೇರುಪೇಟೆಯ ಮೇಲೆ ಪರಿಣಾಮ ಬೀರುವಂತೆ ಇದೆ, ಇಲ್ಲಿ ರಾಜಕೀಯ ಆಯಾಮಗಳು ಇವೆ. ಸೆಬಿ ತನ್ನ ನಿರ್ಣಯಗಳಿಗೆ ಆಧಾರವಾಗಿ ಇರಿಸಿಕೊಂಡ ಕಾರಣಗಳು ಯಾವುವು ಎಂಬುದನ್ನು ತಿಳಿಯುವ ಹಕ್ಕು ಜನರಿಗೆ ಇದೆ. ಹಿಂಡನ್‌ಬರ್ಗ್ ಸಂಸ್ಥೆ ಎತ್ತಿದ ಪ್ರಶ್ನೆಗಳಿಗೆ ಆಗಲೇ ಪೂರ್ತಿಯಾದ ಉತ್ತರ ಸಿಗಬಹುದು.

ದಿನದ ಟ್ವೀಟ್

ಕಾರ್ಯಕರ್ತರು ಗೌಣವಾಗುವುದೇಕೆ?



ಬಿಜೆಪಿ ಆದಿಯಾಗಿ ಎಲ್ಲ ಪಕ್ಷಗಳಿಗೂ ಅಧಿಕಾರಕ್ಕೆ ಬಂದಾಗ ಕಾರ್ಯಕರ್ತರು ನೆನಪಾಗುವುದಿಲ್ಲ, ಅವರಿಗೆ ಸಿಗಬೇಕಾದ ಸವಲತ್ತು, ಸ್ಥಾನಮಾನ ಸಿಗುವುದಿಲ್ಲ ಅಥವಾ ಕನಿಷ್ಠ ಕುಂದುಕೊರತೆ ನಿವಾರಣೆ ಸಹ ಮರೀಚಿಕೆಯಾಗುತ್ತದೆ. ಆದರೆ, ವಿರೋಧ ಪಕ್ಷದಲ್ಲಿ ಕೂತ ತಕ್ಷಣ ಕಾರ್ಯಕರ್ತರೇ ದೇವರಾಗುತ್ತಾರೆ. ಅವರಿಗೆ ಅನ್ಯಾಯ ಆದರೆ ಸಹಿಸೆವು ಎನ್ನುತ್ತಾರೆ. ಈ ಚಕ್ರ ಹೀಗೇ ಉರುಳುತ್ತಿರುತ್ತದೆ.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ



400ಕ್ಕೂ ಹೆಚ್ಚು ಸಂಸದರಿದ್ದ ಕಾಂಗ್ರೆಸ್ ಪಕ್ಷದ ಸಂಸದರ ಸಂಖ್ಯೆ 44ಕ್ಕೆ ಇಳಿದಿದೆ. ಮತದಾರರು ಒಂದು ಬಾರಿ ಮೋಸ ಹೋಗಬಹುದು, ಎರಡು ಬಾರಿ ಮೋಸ ಹೋಗಬಹುದು, ಪದೇ ಪದೇ ಮೋಸ ಹೋಗುವುದಿಲ್ಲ ಎಂಬುದಕ್ಕೆ ಇದು ಉದಾಹರಣೆ. ಕಾಂಗ್ರೆಸ್‌ನ ಬೂಟಾಟಿಕೆ, ಮೋಸಗಾರಿಕೆಯ ರಾಜಕಾರಣವನ್ನು ಪ್ರಜ್ಞಾವಂತ ಜನರು ಅರ್ಥ ಮಾಡಿಕೊಂಡಿದ್ದಾರೆ.

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ

ಬುಧವಾರ 6-1-1999

- **ಚಿನ್ನದ ಆಮದು ತೆರಿಗೆ ಹೆಚ್ಚಳ: 'ತಪ್ಪು ನಿರ್ಧಾರ'**

ದುಬೈ, ಜ. 5 - ಚಿನ್ನದ ಮೇಲೆ ಭಾರತ ಸರ್ಕಾರ ಆಮದು ಸುಂಕವನ್ನು 10 ಗ್ರಾಂಗೆ ರೂ. 250ರಿಂದ ರೂ. 400ಕ್ಕೆ ಇಂದಿನಿಂದ ಹೆಚ್ಚಿಸಿರುವುದು ತಪ್ಪು ನಿರ್ಧಾರವಾಗಿದೆ ಎಂದು ವಿಶ್ವ ಚಿನ್ನ ಪರಿಷತ್ ಹೇಳಿದೆ.

ಚಿನ್ನದ ವಲಯದಲ್ಲಿ ಉದಾರೀಕರಣ ಇಲ್ಲಿಯವರೆಗೆ ಮಾಡಿದ್ದ ಪ್ರಗತಿ ಇದರಿಂದ ಕುಂಠಿತವಾಗುತ್ತದೆ. ಅಲ್ಲದೆ, ಇದು ಮತ್ತೆ ಭಾರತದಲ್ಲಿ ಚಿನ್ನದ ಕಳ್ಳಸಾಗಾಣಿಕೆಗೆ ದಾರಿ ಮಾಡಿಕೊಡುತ್ತದೆ ಎಂದು ಪರಿಷತ್‌ನ ಮುಖ್ಯ ನಿರ್ವಾಹಕ ರೋಲ್ಫ್ ಷ್ನೀನೀಬೆಲಿ ಹೇಳಿದ್ದಾರೆ.

- **ಪ್ರಸಾರ ಭಾರತಿ, ಪೇಟೆಂಟ್ ಮಸೂದೆಗೆ ಸುಗ್ರೀವಾಜ್ಞೆ**

ನವದೆಹಲಿ, ಜ. 5 - ಪ್ರಸಾರ ಭಾರತಿ, ಕೇಂದ್ರ ಜಾಗೃತ ಆಯೋಗ ಹಾಗೂ ಕಂಪನಿಗಳಿಂದ ಷೇರು ಮರು ಖರೀದಿ ಸಂಬಂಧದ ಸುಗ್ರೀವಾಜ್ಞೆಗಳ ಪುನರ್‌ಜಾರಿಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

ಹಕ್ಕುಸ್ವಾಮ್ಯ (ಪೇಟೆಂಟ್) ಕಾಯ್ದೆ ತಿದ್ದುಪಡಿ ಮಸೂದೆಯ ಸುಗ್ರೀವಾಜ್ಞೆ ಜಾರಿಗೊಳಿಸಲೂ ಸಂಪುಟ ನಿರ್ಧರಿಸಿದೆ ಎಂದು ಅಧಿಕೃತ ವಕ್ತಾರರು ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ 6-1-1974

- **ಮಂಡ್ಯ ಕೋರ್ಟಿನಲ್ಲಿ ದಾಖಲೆಗಳ ಕಳವು ಯತ್ನ ವಿಫಲ**

ಮಂಡ್ಯ, ಜ. 5 - ಇಲ್ಲಿನ ಸಿವಿಲ್ ನ್ಯಾಯಾಲಯದ ಕಿಟಕಿ ಮೂಲಕ ಕಳ್ಳರು ಒಳಗೆ ನುಗ್ಗಿ ಕೋರ್ಟ್ ದಾಖಲೆಗಳನ್ನು ಕಳವು ಮಾಡಲು ಯತ್ನಿಸಿ ವಿಫಲರಾದ ಪ್ರಸಂಗ ವರದಿಯಾಗಿದೆ.

ನಿನ್ನೆ ರಾತ್ರಿ ಕಳ್ಳರು ಕೋರ್ಟ್ ಕಟ್ಟಡದ ಕಿಟಕಿಯ ಮೂಲಕ ಕೋರ್ಟ್ ಒಳಭಾಗವನ್ನು ಪ್ರವೇಶಿಸಿ, ಕಾವಲುಗಾರನ ಕಣ್ಣಿಗೆ ಖಾರದ ಪುಡಿ ಎರಚಿ, ಪ್ರಜ್ಞೆ ತಪ್ಪಿಸಲು ಕ್ಲೋರೋಫಾರಂ ಮೂಸಿಸಿ, ಕಳ್ಳತನಕ್ಕೆ ಯತ್ನಿಸಿದರೆಂದು ಹೇಳಲಾಗಿದೆ. ಅಷ್ಟರಲ್ಲಿ ಕಾವಲುಗಾರನು ಕೂಗಿಕೊಳ್ಳಲಾಗಿ, ನೆರೆಹೊರೆಯ ಕಚೇರಿಯ ಕಾವಲು ಕಾಯುವವರು ಓಡಿಬಂದುದನ್ನು ಕಂಡು ಕಳ್ಳರು ಪರಾರಿಯಾಗಿದ್ದಾರೆ.


- **ವಿದ್ಯಾರ್ಥಿಗಳಲ್ಲಿ ಸಚ್ಚಾರಿತ್ರ್ಯ, ಪ್ರಾಮಾಣಿಕತೆ ಬೆಳೆಸಲು ಶಿಕ್ಷಕರಿಗೆ ಕರೆ**

ಮದುರೆ, ಜ. 5 – ದೈಹಿಕ ಮತ್ತು ಬೌದ್ಧಿಕ ಶಿಸ್ತಿನ ಮೂಲಕ ವಿದ್ಯಾರ್ಥಿಗಳಲ್ಲಿ ಪ್ರಾಮಾಣಿಕತೆ ಮತ್ತು ಸಚ್ಚಾರಿತ್ರ್ಯವನ್ನು ಬೆಳೆಸಿ ಅವರ ವ್ಯಕ್ತಿತ್ವವನ್ನು ರೂಪಿಸುವುದೇ ನಮ್ಮ ಶಿಕ್ಷಣ ಸಂಸ್ಥೆಗಳ ಮುಖ್ಯ ಉದ್ದೇಶವಾಗಿರಬೇಕು ಎಂದು ರಾಷ್ಟ್ರಪತಿ ವಿ. ವಿ. ಗಿರಿ ಕರೆ ನೀಡಿದರು.

ಟಿ.ವಿ.ಎಸ್ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು, ವಿದ್ಯಾರ್ಥಿಗಳನ್ನು ಸ್ವಾವಲಂಬಿಗಳಾಗಿ, ಮೈಬಗ್ಗಿಸಿ ದುಡಿಯಬಲ್ಲ ಪ್ರಬುದ್ಧ ಯುವಕ, ಯುವತಿಯರನ್ನಾಗಿ ಮಾಡುವಂತೆ ದೇಶದ ಶಿಕ್ಷಣ ಸಂಸ್ಥೆಗಳಿಗೆ ಸೂಚಿಸಿದರು.

ಆರ್ಥಿಕ ಸಂಪನ್ಮೂಲದ ಕೊರತೆ ನಿವಾರಿಸುವ ಅತಿದೊಡ್ಡ ಸವಾಲು ಎದುರಿಸಬೇಕಿದೆ

ಡಿಆರ್‌ಡಿಒ ಮತ್ತು ಕಾಯಕಲ್ಪದ ಪ್ರಯತ್ನ



ವಿಶ್ಲೇಷಣೆ

ಎಚ್.ಆರ್.ಕೃಷ್ಣಮೂರ್ತಿ

ಡಿಫೆನ್ಸ್ ರಿಸರ್ಚ್ ಆ್ಯಂಡ್ ಡೆವಲಪ್‌ಮೆಂಟ್ ಆರ್ಗನೈಸೇಷನ್ (ಡಿಆರ್‌ಡಿಒ) ನಮ್ಮ ದೇಶದ ರಕ್ಷಣಾ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳಲ್ಲಿ ನಿರತವಾಗಿರುವ 52 ವಿವಿಧ ಪ್ರಯೋಗಾಲಯಗಳ ಸಮೂಹ. ವಾಯು, ನೌಕಾ ಮತ್ತು ಭೂ ಸೇನೆಗಳನ್ನು ಬಲಿಷ್ಠವಾದ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಸಜ್ಜುಗೊಳಿಸಲು ಅಗತ್ಯವಾದ ತಂತ್ರಜ್ಞಾನವನ್ನು ಅಭಿವೃದ್ಧಿಗೊಳಿಸಿ ಬಳಕೆಗೆ ತರುವ ದಿಕ್ಕಿನಲ್ಲಿ ಇದು ಶ್ರಮಿಸುತ್ತಿದೆ.

ಡಿಆರ್‌ಡಿಒ ವಿನ್ಯಾಸ ಮಾಡಿ, ಉತ್ಪಾದಿಸಿ, ಪರೀಕ್ಷಿಸಿ, ಬಳಕೆಗೆ ತಂದಿರುವ ಬ್ರಹ್ಮೋಸ್, ಅಗ್ನಿ, ಪೃಥ್ವಿ ಮಾಲಿಕೆಯ ಕ್ಷಿಪಣಿಗಳು. ಮಲ್ಟಿ ಬ್ಯಾರೆಲ್ ರಾಕೆಟ್ ಲಾಂಚರ್ ಪಿನಾಕ, ವಾಯು ರಕ್ಷಣೆ ವ್ಯವಸ್ಥೆಯ ಆಕಾಶ್, ವಿವಿಧ ಮಾದರಿಯ ರಾಡಾರ್ ಮತ್ತು ಎಲೆಕ್ಟ್ರಾನಿಕ್ ಯುದ್ಧ ವ್ಯವಸ್ಥೆಗಳು ಭಾರತದ ಮಿಲಿಟರಿ ಸಾಮರ್ಥ್ಯವನ್ನು ಎದ್ದು ಕಾಣುವಂತೆ ಶಕ್ತಿಯುತಗೊಳಿಸಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಅವುಗಳನ್ನು ಹೊರತುಪಡಿಸಿದರೆ ಟ್ಯಾಂಕ್‌ಗಳಿಂದ ಹಿಡಿದು ಯುದ್ಧವಿಮಾನಗಳವರೆಗೆ, ಬೇಸಿಕ್ ಅಸಾಲ್ಟ್ ರೈಫಲ್‌ನಿಂದ ಹಿಡಿದು ಯುದ್ಧನೌಕೆಗಳ ಬ್ಯಾಟರಿಗಳವರೆಗೆ, ಸಂಪರ್ಕ ವ್ಯವಸ್ಥೆಯಿಂದ ಹಿಡಿದು ಮಾನವರಹಿತ ವೈಮಾನಿಕ ವಾಹನಗಳವರೆಗೆ ಅನೇಕ ಯೋಜನೆಗಳು ನಿಗದಿತ ಕಾಲಾವಧಿಯಲ್ಲಿ ಮುಗಿಯದೆ, ಯೋಜನೆಯ ವೆಚ್ಚ ಒಂದೇ ಸಮನೆ ಏರುತ್ತಿದೆ ಎಂಬುದು ರಕ್ಷಣಾ ಪರಿಣತರ ಕಟು ಟೀಕೆ.

2023ರ ಮಾರ್ಚ್‌ನಲ್ಲಿ ಲೋಕಸಭೆಯಲ್ಲಿ ಮಂಡನೆಯಾದ, ರಕ್ಷಣಾ ಸ್ಥಾಯಿ ಸಮಿತಿಯ 38ನೇ ವರದಿಯಲ್ಲಿ, ಡಿಆರ್‌ಡಿಒ ಸಂಸ್ಥೆಯ ಮಿಷನ್ ಸ್ವರೂಪದ 178 ಯೋಜನೆಗಳಲ್ಲಿ 119 ತೀರಾ ವಿಳಂಬವಾಗಿ, ಯೋಜನಾ ವೆಚ್ಚ ಏರಿರುವುದರ ಜೊತೆಗೆ ಅಪೇಕ್ಷಿತ ಫಲಿತಾಂಶ ದೊರೆಯದಿರುವ ಯೋಜನೆಗಳನ್ನೂ ಯಶಸ್ವಿಯೆಂದು ಪರಿಗಣಿಸಿರುವ ನಿದರ್ಶನಗಳ ಪ್ರಸ್ತಾಪವಿದೆ. 2020ರ ಮಹಾಲೇಖಪಾಲರ ವರದಿ ಕೂಡ ಇದನ್ನು ಎತ್ತಿತೋರಿದೆ.

2023ರ ಆಗಸ್ಟ್‌ನಲ್ಲಿ ಕೇಂದ್ರ ಸರ್ಕಾರವು ಡಿಆರ್‌ಡಿಒ ಪುನರ್‌ರಚನೆಯ ಉದ್ದೇಶದಿಂದ, ಈ ಹಿಂದೆ ಭಾರತ ಸರ್ಕಾರಕ್ಕೆ ಪ್ರಧಾನ ವೈಜ್ಞಾನಿಕ ಸಲಹೆಗಾರರಾಗಿದ್ದ ಪ್ರೊ. ವಿಜಯ ರಾಘವನ್ ಅವರ ಅಧ್ಯಕ್ಷತೆಯಲ್ಲಿ 9 ಪರಿಣತರ ಉನ್ನತ ಸಮಿತಿಯೊಂದನ್ನು ನೇಮಿಸಿತು. ವಾಯು, ನೌಕಾ ಮತ್ತು ಭೂಸೇನೆಯ ನಿವೃತ್ತ ಉಪ ಮುಖ್ಯಸ್ಥರು, ಮನೋಹರ್ ಪರಿಕ್ಕರ್ ರಕ್ಷಣಾ ಅಧ್ಯಯನ ಸಂಸ್ಥೆ, ಐಐಟಿ ಕಾನ್ಪುರ, ಇಸ್ರೊ, ಎಲ್ ಆ್ಯಂಡ್ ಟಿಯ ಪರಿಣತರು ಈ ಸಮಿತಿಯಲ್ಲಿದ್ದಾರೆ. ರಕ್ಷಣಾ ಇಲಾಖೆ, ಡಿಆರ್‌ಡಿಒ, ರಕ್ಷಣಾ ಉದ್ಯಮ ಮತ್ತು ಉನ್ನತ ಶೈಕ್ಷಣಿಕ ಸಂಸ್ಥೆಗಳ ನಡುವೆ ಇರಬೇಕಾದ ಸಂಬಂಧ, ಅತ್ಯಾಧುನಿಕ ರಕ್ಷಣಾ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವಲ್ಲಿ ಖಾಸಗಿ ಉದ್ಯಮಗಳ ಪಾತ್ರ, ಪ್ರತಿಭಾ ಪಲಾಯನ ತಡೆಯಲು ಕೈಗೊಳ್ಳಬೇಕಾದ ಕ್ರಮಗಳು, ವಿದೇಶಿ ಸಂಸ್ಥೆಗಳು ಮತ್ತು ಪರಿಣತರೊಂದಿಗೆ ಸಾಧಿಸಬೇಕಾದ ಸಹಯೋಗದ ಸ್ವರೂಪ, ಯೋಜನೆಯ ತ್ವರಿತಗತಿಯ ಅನುಷ್ಠಾನಕ್ಕೆ ಅಗತ್ಯವಾದ ಆರ್ಥಿಕ ಮತ್ತು ಆಡಳಿತಾತ್ಮಕ ಸುಧಾರಣೆಗಳಂತಹ ವಿಷಯಗಳ ಬಗ್ಗೆ ಈ ಸಮಿತಿ ಶಿಫಾರಸು ಮಾಡಲಿದೆ. ಆದರೆ ವಿಪರ್ಯಾಸವೆಂದರೆ, ಹಲವು ವರ್ಷಗಳ ಹಿಂದೆಯೇ ಈ ಎಲ್ಲ ಅಂಶಗಳನ್ನೂ ಪರಿಗಣಿಸಿದ್ದ, ಕ್ಷಿಪಣಿ ಮತ್ತು ಬಾಹ್ಯಾಕಾಶ ವಿಜ್ಞಾನಿ ಪಿ.ರಾಮರಾವ್ ಅಧ್ಯಕ್ಷತೆಯ ಸಮಿತಿಯು 2008ರಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ನೀಡಿತ್ತು. ಅದನ್ನು ಪರಿಶೀಲಿಸಿದ ರಕ್ಷಣಾ ಸಚಿವಾಲಯದ ಕಾರ್ಯದರ್ಶಿಗಳ ಅಧ್ಯಕ್ಷತೆಯ ಸಮಿತಿ, ವರದಿಯಲ್ಲಿನ ಅಂಶಗಳನ್ನು ಅನುಷ್ಠಾನಗೊಳಿಸಲು ಕಾರ್ಯಾಚರಣೆಯ ಕ್ರಮಗಳನ್ನು ಸಿದ್ಧಪಡಿಸಿತ್ತು.

2015ರಲ್ಲಿ, ಡಿಆರ್‌ಡಿಒಗೆ ಸಂಬಂಧಿಸಿದಂತೆ ಅದರ ಆಡಳಿತಾತ್ಮಕ ಅಧಿಕಾರದ ವ್ಯಾಪ್ತಿಯಲ್ಲಿ ಬರುವ ಎಲ್ಲ ಶಿಫಾರಸುಗಳನ್ನೂ ಅನುಷ್ಠಾನಗೊಳಿಸಲಾಗಿದೆ ಎಂದು ಅಂದಿನ ರಕ್ಷಣಾ ರಾಜ್ಯ ಸಚಿವರು ಲೋಕಸಭೆಗೆ ತಿಳಿಸಿದರು. ಆದರೆ ಇದೀಗ ಬಹುತೇಕ ಅದೇ ವಿಷಯಗಳನ್ನು ಮತ್ತೊಂದು ಸಮಿತಿ ಅಧ್ಯಯನ ಮಾಡುತ್ತಿರುವುದರ ಔಚಿತ್ಯ ವ್ಯಾಪಕ ಚರ್ಚೆಗೆ ದಾರಿಮಾಡಿಕೊಟ್ಟಿದೆ. ಡಿಆರ್‌ಡಿಒ ರಚನೆ, ಸಾಂಸ್ಥಿಕ ಮೌಲ್ಯಗಳು ಮತ್ತು ಕೆಲಸದ ಬಗ್ಗೆ ಭಾರತೀಯ ಸೇನೆ, ರಕ್ಷಣಾ ಉದ್ಯಮ ಹಾಗೂ ರಕ್ಷಣಾ ಅಧ್ಯಯನ ಸಂಸ್ಥೆಗಳಿಗೆ ಬಹಳಷ್ಟು ಅಸಮಾಧಾನವಿದೆ. ಈ ಪರಿಸ್ಥಿತಿಗೆ ಡಿಆರ್‌ಡಿಒ ಸಂಪೂರ್ಣವಾಗಿ ಕಾರಣವಲ್ಲ ಎಂಬುದೂ ನಿಜ. ಭಾರತೀಯ ಸೇನೆಯ 'ಟೆಕ್ನಿಕಲ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್' ಮತ್ತು 'ಡೈರೆಕ್ಟರೇಟ್ ಆಫ್ ಟೆಕ್ನಿಕಲ್ ಡೆವಲಪ್‌ಮೆಂಟ್ ಆ್ಯಂಡ್ ಪ್ರೊಡಕ್ಷನ್' ಸಂಸ್ಥೆಗಳನ್ನು ವಿಲೀನಗೊಳಿಸಿ 1958ರಲ್ಲಿ ಡಿಆರ್‌ಡಿಒ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಹೀಗಾಗಿ, ಈ ಎರಡು ಸರ್ಕಾರಿ ಸಂಸ್ಥೆಗಳ ಕಾರ್ಯವೈಖರಿ ಮತ್ತು ವೃತ್ತಿಮೌಲ್ಯಗಳೇ ಇಲ್ಲಿಯೂ ಮುಂದುವರಿದಿವೆ ಎಂಬ ಟೀಕೆಯಿದೆ. ಡಿಆರ್‌ಡಿಒ ಹಾಗೂ ವಾಯು, ನೌಕಾ ಮತ್ತು ಭೂಸೇನೆ ನಡುವೆ ಪರಸ್ಪರ ಅಸಮಾಧಾನವಿರುವುದು, ವಿಶ್ವಾಸ, ಸದ್ಭಾವನೆಯ ಕೊರತೆ ಮತ್ತೊಂದು ಮುಖ್ಯ ಸಮಸ್ಯೆ.

ವಿವಿಧ ಶಸ್ತ್ರಾಸ್ತ್ರಗಳ ಪ್ರಾಯೋಗಿಕ ಮಾದರಿಗಳಿಗೆ (ಪ್ರೋಟೋಟೈಪ್) ಸಂಬಂಧಿಸಿದಂತೆ 'ಪರಿಕಲ್ಪನೆಯ ಪ್ರಮಾಣ'ವನ್ನು (ಪ್ರೂಫ್ ಆಫ್ ಕಾನ್ಸೆಪ್ಟ್) ಡಿಆರ್‌ಡಿಒ ನಿರೂಪಿಸುತ್ತದೆ. ಆದರೆ ಅವುಗಳ ಉತ್ಪಾದನೆ ಮತ್ತು ಅಳವಡಿಕೆ ಬಗ್ಗೆ ಹೆಚ್ಚಿನ ಗಮನ ನೀಡಿಲ್ಲವೆಂಬುದು ರಕ್ಷಣಾ ದಳಗಳ ದೂರು. ತಂತ್ರಜ್ಞಾನದ ಅಭಿವೃದ್ಧಿ ಮತ್ತು ಶಸ್ತ್ರಾಸ್ತ್ರಗಳ ಉತ್ಪಾದನೆಯ ಹಂತಗಳಲ್ಲಿ, ರಕ್ಷಣಾದಳಗಳು ಮತ್ತೆ ಮತ್ತೆ ತಮ್ಮ ಅಪೇಕ್ಷಿತ ಅಗತ್ಯಗಳನ್ನು ಬದಲಿಸುವುದರಿಂದಲೇ ಯೋಜನೆಗಳು ವಿಳಂಬವಾಗುತ್ತಿವೆ ಎಂಬುದು ಡಿಆರ್‌ಡಿಒ ಅಭಿಪ್ರಾಯ.



ದೇಶದ ರಕ್ಷಣಾ ಉದ್ಯಮವನ್ನು 2001ರಲ್ಲಿ ಖಾಸಗಿ ಸಂಸ್ಥೆಗಳ ಭಾಗವಹಿಸುವಿಕೆಗೆ ಸಂಪೂರ್ಣವಾಗಿ ತೆರೆಯಲಾಯಿತು. ಇಂದು ಸುಮಾರು 350 ಖಾಸಗಿ ಸಂಸ್ಥೆಗಳು ಈ ವಲಯದಲ್ಲಿದ್ದರೂ ಸಂಶೋಧನೆ, ಅಭಿವೃದ್ಧಿ ಮತ್ತು ಉತ್ಪಾದನೆಯ ಕ್ಷೇತ್ರಗಳಲ್ಲಿ ಬಂಡವಾಳ ಹೂಡಲು ಆಸಕ್ತಿ ತೋರುತ್ತಿಲ್ಲ. ಈ ಕಂಪನಿಗಳು ಅಭಿವೃದ್ಧಿಪಡಿಸಿದ ತಂತ್ರಜ್ಞಾನ ಮತ್ತು ಉತ್ಪನ್ನಗಳನ್ನು ಸರ್ಕಾರ ಕೊಂಡು ಬಳಸುತ್ತದೆ ಎಂಬ ಯಾವುದೇ ಭರವಸೆ ಇಲ್ಲದಿರುವಾಗ ಆ ಬಗೆಯ ಹಿಂಜರಿಕೆ ಸಹಜ. ಅಂತಹ ಭರವಸೆಯನ್ನು ಕೊಡುವ ಸಾಧ್ಯತೆಯನ್ನು ವಿಜಯ ರಾಘವನ್ ಸಮಿತಿ ಪರಿಶೀಲಿಸಬೇಕಾಗಿದೆ.

2022- 23ನೇ ಸಾಲಿನ ಬಜೆಟ್‌ನಲ್ಲಿ, ರಕ್ಷಣಾ ಸಚಿವಾಲಯದ ಆಯವ್ಯಯದ ಶೇ 25ರಷ್ಟು ಭಾಗವನ್ನು ಖಾಸಗಿ ಮತ್ತು ಸ್ಟಾರ್ಟ್‌ಅಪ್ ಕಂಪನಿಗಳಿಗೆ ಮೀಸಲಿಡುವುದಾಗಿ ಹಣಕಾಸು ಸಚಿವರು ಮಾಡಿದ ಘೋಷಣೆಗೆ ಉತ್ತಮ ಪ್ರತಿಕ್ರಿಯೆ ದೊರೆತಿದ್ದರೂ ಅದು ಸಂಪೂರ್ಣವಾಗಿ ಅನುಷ್ಠಾನಗೊಂಡಿಲ್ಲ. ಹಾಗೆಯೇ ಭವಿಷ್ಯದ ತಂತ್ರಜ್ಞಾನವನ್ನು ರೂಪಿಸುವ ಮಹತ್ತರವಾದ ಸವಾಲನ್ನು, ಅಂತಹ ಸಾಮರ್ಥ್ಯವಿರುವ ಪ್ರತಿಷ್ಠಿತ ಕಂಪನಿಗಳಿಗೆ ನೀಡಿ ಅವುಗಳನ್ನು ಪ್ರೋತ್ಸಾಹಿಸಬೇಕೆಂಬ ಅಭಿಪ್ರಾಯವೂ ಚರ್ಚೆಗಳಲ್ಲಿ ಮಂಡಿತವಾಗಿದೆ.

ರಕ್ಷಣಾ ಇಲಾಖೆಯ ಬಿಗಿಯಾದ ಆಡಳಿತಾತ್ಮಕ ಹಾಗೂ ಆರ್ಥಿಕ ನಿಯಂತ್ರಣದಿಂದ ಡಿಆರ್‌ಡಿಒ ಸ್ವಾತಂತ್ರ್ಯ ಮೊಟಕುಗೊಂಡಿದೆ. ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅದಕ್ಕೆ ಅನುವಾಗಿಸುವುದು, ಡಿಆರ್‌ಡಿಒ ಮತ್ತು ರಕ್ಷಣಾದಳಗಳ ನಡುವೆ ಸದ್ಭಾವನೆ ಹಾಗೂ ಸಮನ್ವಯ ಸಾಧಿಸುವುದು, ಯೋಜನೆಯೊಂದು ಕಾರ್ಯಸಾಧ್ಯವಲ್ಲವೆಂದು ಖಚಿತವಾದ ನಂತರ ಅದನ್ನು ತ್ವರಿತವಾಗಿ ಕೈಬಿಡುವ ನೀತಿಯಂತಹವುಗಳನ್ನು ಸಮಿತಿ ಗಂಭೀರವಾಗಿ ಪರಿಗಣಿಸಬೇಕೆಂದು ಪರಿಣತರು ಒತ್ತಾಯಿಸಿದ್ದಾರೆ.

ಅಮೆರಿಕದ 'ಡಿಫೆನ್ಸ್ ಅಡ್ವಾನ್ಸ್ಡ್ ರಿಸರ್ಚ್ ಪ್ರಾಜೆಕ್ಟ್ ಏಜೆನ್ಸಿ'ಯ ಸ್ವರೂಪದಂತೆಯೇ ಡಿಆರ್‌ಡಿಒ ಸಂಸ್ಥೆಯನ್ನು ರೂಪಿಸಬೇಕೆಂಬ ಪಿ.ರಾಮರಾವ್ ಸಮಿತಿಯ ಶಿಫಾರಸನ್ನು ಈಗ ಮತ್ತೊಮ್ಮೆ ಪರಿಶೀಲಿಸಿ ಅನುಷ್ಠಾನಗೊಳಿಸಬೇಕೆಂಬ ಒತ್ತಾಯವಿದೆ. ಇವುಗಳೊಂದಿಗೆ ಡಿಆರ್‌ಡಿಒಗೆ ಲಭ್ಯವಿರುವ ಆರ್ಥಿಕ ಸಂಪನ್ಮೂಲದ ಬಗೆಗೂ ಈ ಸಮಿತಿ ಗಮನಹರಿಸಬೇಕಿದೆ.

ರಕ್ಷಣಾ ಸಚಿವಾಲಯದ 2018-19ರ ಬಜೆಟ್‌ನಲ್ಲಿ ಡಿಆರ್‌ಡಿಒಗೆ ದೊರೆತದ್ದು ಶೇ 6.39ರಷ್ಟು. ಇದರ ಹೆಚ್ಚುಭಾಗ ವೆಚ್ಚವಾದದ್ದು ಸಿಬ್ಬಂದಿಯ ಸಂಬಳ ಮತ್ತಿತರ ಆಡಳಿತಾತ್ಮಕ ಅಗತ್ಯಗಳಿಗೆ. 2023-24ರಲ್ಲಿ ಇದರ ಪ್ರಮಾಣ ಶೇ 5.1. ಇದಕ್ಕಿಂತ ಮುಖ್ಯವಾಗಿ 2017-18ರಲ್ಲಿ ಡಿಆರ್‌ಡಿಒ ಸಂಸ್ಥೆಯ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ದೊರೆತ ಹಣ ಜಿಡಿಪಿಯ ಶೇ 0.088ರಷ್ಟು. 2023-24ರಲ್ಲಿ ಇದು ಶೇ 0.077ಕ್ಕೆ ಇಳಿದಿದೆ. ಡಿಆರ್‌ಡಿಒ ಸಂಸ್ಥೆಯ ಪುನರ್‌ರಚನೆಯಲ್ಲಿ ಅತಿದೊಡ್ಡ ಸವಾಲಾಗಿರುವ ಆರ್ಥಿಕ ಸಂಪನ್ಮೂಲದ ಕೊರತೆಯನ್ನು ಪ್ರೊ. ವಿಜಯ ರಾಘವನ್ ಸಮಿತಿ ಹೇಗೆ ನಿರ್ವಹಿಸಲಿದೆ ಎಂಬುದನ್ನು ಕಾದುನೋಡಬೇಕಿದೆ.

ಚುರುಮುರಿ



2024ರ ರಜಾಪರ್ವ

● ಆನಂದ

ಜನವರಿ: ಸೋಮವಾರದ ಸಂಕ್ರಾಂತಿಯಿಂದ ರಜಾಪರ್ವದ ಶುಭಾರಂಭ. ಶನಿವಾರ, ಭಾನುವಾರ ಸೇರಿಸಿಕೊಂಡರೆ ಮೂರು ದಿನಗಳ ರಜೆ. ಶುಕ್ರವಾರದ ರಿಪಬ್ಲಿಕ್ ಡೇ ಜತೆ ಶನಿವಾರ, ಭಾನುವಾರ ಕಂಬೈನ್ಡ್ ಮಾಡಿದರೆ ಮತ್ತೆ ತ್ರೀ ಡೇಸ್ ಹಾಲಿಡೆ.
ಫೆಬ್ರುವರಿ: ನೀರಸ ತಿಂಗಳು.
ಮಾರ್ಚ್: ಶಿವರಾತ್ರಿ ಮರುದಿನ ಸೆಕೆಂಡ್ ಸಾಟರ್ಡೇ ರಜೆ. ನಂತರ ಭಾನುವಾರ ರಜೆ. ಮತ್ತೆ 3 ದಿನಗಳ ರಜಾಪರ್ವ. ಗುಡ್ ಫ್ರೈಡೆಗೆ ರಜೆ. ಶನಿವಾರ ರಜೆ ಹಾಕಿ ಮರುದಿನದ ಭಾನುವಾರ ಸೇರಿಸಿದರೆ ಮೂರು ದಿನ ಚುಟ್ಟಿ!
ಏಪ್ರಿಲ್: ರಜೆಗಳ ಮಹಾಪೂರವಿದೆ. ಆದರೆ, ಕ್ಯಾಲೆಂಡರ್ ಎಡವಟ್ಟಿನಿಂದ ಅಂಬೇಡ್ಕರ್ ಮತ್ತು ಮಹಾವೀರ ಜಯಂತಿಗಳು ಭಾನುವಾರ ಬಂದು ಎರಡು ರಜೆ ಲಾಸ್. ಇಲ್ಲದಿದ್ದಲ್ಲಿ ಯುಗಾದಿ ಮತ್ತು ರಂಜಾನ್ ಸೇರಿ 5 ದಿನ ರಜೆ ಇರುತ್ತಿತ್ತು.
ಮೇ: ಬಸವ ಜಯಂತಿ ಶುಕ್ರವಾರ, ಶನಿವಾರ ಸೆಕೆಂಡ್ ಸಾಟರ್ಡೇ ಆಗಿರುವುದರಿಂದ ಮತ್ತೆ ತ್ರೀಡೇಸ್ ಹಾಲಿಡೆ. ಬುದ್ಧಪೂರ್ಣಿಮಾ ಗುರುವಾರವಾದ್ದರಿಂದ ಅಟ್ಯಾಚ್‌ಮೆಂಟ್ ಅಸಾಧ್ಯ.
ಜೂನ್: ಬಕ್ರೀದ್ ಸೋಮವಾರ. ಶನಿವಾರ, ಭಾನುವಾರದ ಜತೆ ಅಟ್ಯಾಚ್ ಮಾಡಿ.
ಜುಲೈ: ಯೂಸ್‌ಲೆಸ್. ಒಂದೂ ಇಲ್ಲ.
ಆಗಸ್ಟ್: ಪಂದ್ರ ಆಗಸ್ಟ್ ಗುರುವಾರ. ರಿಪಬ್ಲಿಕ್ ಡೇ ತರಹ ಕೊಆಪರೇಟಿವ್ ಅಲ್ಲ.
ಸೆಪ್ಟೆಂಬರ್: ವಿನಾಯಕ ಜಯಂತಿ ಶನಿವಾರ. ಮರುದಿನ ಭಾನುವಾರ. ಗಣೇಶ ಪೂಜೆ ಮಾಡದಿರುವವರಿಗೆ 2 ದಿನದ ಪಿಕ್‌ನಿಕ್ ಸಾಧ್ಯ.
ಅಕ್ಟೋಬರ್: ಓವರ್‌ಕ್ರೌಡೆಡ್ ಮಂತ್. ಗಾಂಧಿ ಜಯಂತಿ, ಆಯುಧಪೂಜೆ, ವಾಲ್ಮೀಕಿ ಜಯಂತಿ, ನರಕ ಚತುರ್ದಶಿ ಎಲ್ಲವೂ ಈ ತಿಂಗಳಲ್ಲೇ. ಆಯುಧಪೂಜೆ ಶುಕ್ರವಾರ ಬಂದಿದ್ದು ಶನಿವಾರ, ಭಾನುವಾರದ ಜತೆ ಅಟ್ಯಾಚ್‌ಮೆಂಟ್ ಸಾಧ್ಯ.
ನವೆಂಬರ್: ಶುಕ್ರವಾರದಂದು ರಾಜ್ಯೋತ್ಸವ. ಶನಿವಾರ ಬಲಿಪಾಡ್ಯಮಿ. ಭಾನುವಾರ ರಜೆ. 15 ದಿನಗಳ ನಂತರ ಕನಕ ಜಯಂತಿ ಸೋಮವಾರ. ಶನಿವಾರ, ಭಾನುವಾರದ ಜತೆ ಸೇರಿಸಿಕೊಳ್ಳಿ.
ಡಿಸೆಂಬರ್: ಕ್ರಿಸ್‌ಮಸ್ ಒಂದೇ ಸೇವಿಂಗ್ ಗ್ರೇಸ್. ಅದೂ ವಾರದ ಮಧ್ಯದಲ್ಲಿ.
ಹ್ಯಾಪಿ ಹಾಲಿಡೇಸ್.

ಸಂಗತ

ಬ್ಯಾಕ್‌ಲಾಗ್: ವರವಲ್ಲ, ಸಂಕಷ್ಟ!

ಬ್ಯಾಕ್‌ಲಾಗ್ ನಿಯಮ ಸಡಿಲಿಕೆ ತಮಗೆ ವರದಾನವಾಯಿತು ಎಂದುಕೊಂಡಿದ್ದ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ, ಈಗ ಅದರ ದುಷ್ಪರಿಣಾಮದ ಅರಿವಾಗುತ್ತಿದೆ

● ಎಚ್.ಕೆ.ಶರತ್


ಎಂಜಿನಿಯರಿಂಗ್ ಅಂತಿಮ ವರ್ಷದ ವಿದ್ಯಾರ್ಥಿಯೊಬ್ಬನ ತಾಯಿ, ಮಗ ಓದುತ್ತಿರುವ ಕಾಲೇಜಿಗೆ ಭೇಟಿ ನೀಡಿ, ವಿಭಾಗದ ಮುಖ್ಯಸ್ಥರ ಬಳಿ ಮಗನ ಶೈಕ್ಷಣಿಕ ಪ್ರಗತಿಯ ಕುರಿತು ಸಮಾಲೋಚಿಸತೊಡಗಿದರು. 'ವಿವಿಧ ಕಂಪನಿಗಳು ನಡೆಸುವ ಕ್ಯಾಂಪಸ್ ನೇಮಕಾತಿ ಪ್ರಕ್ರಿಯೆಯಲ್ಲಿ ನನ್ನ ಮಗ ಭಾಗವಹಿಸಲು ಅವಕಾಶ ಇಲ್ಲವೇ' ಎನ್ನುವುದು ಅವರ ಮುಖ್ಯ ಪ್ರಶ್ನೆಯಾಗಿತ್ತು.

ಸದ್ಯ ಏಳನೇ ಸೆಮಿಸ್ಟರ್‌ನಲ್ಲಿ ಓದುತ್ತಿರುವ ಅವರ ಮಗ, ಹಿಂದಿನ ಸೆಮಿಸ್ಟರ್‌ಗಳ 13 ವಿಷಯಗಳಲ್ಲಿ ಪಾಸ್ ಆಗದೆ ಹಾಗೇ ಉಳಿಸಿಕೊಂಡಿದ್ದ. ಹೀಗಾಗಿ, ಈ ವಿದ್ಯಾರ್ಥಿಗೆ ಕ್ಯಾಂಪಸ್ ನೇಮಕಾತಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅವಕಾಶ ಇರಲಿಲ್ಲ. ಏಳು ಮತ್ತು ಎಂಟನೇ ಸೆಮಿಸ್ಟರ್‌ನಲ್ಲಿ ಓದಬೇಕಿರುವ ವಿಷಯಗಳೊಂದಿಗೆ ಪಾಸಾಗದೆ ಉಳಿಸಿಕೊಂಡಿರುವ 13 ವಿಷಯಗಳ ಪರೀಕ್ಷೆ ಬರೆದು ಪಾಸ್ ಆಗುವುದು ಕಷ್ಟಸಾಧ್ಯವೇ ಸರಿ.

ವಾಸ್ತವಾಂಶ ಮನಗಂಡು, ನಾಲ್ಕು ವರ್ಷಗಳಲ್ಲಿ ಆಗದಿದ್ದರೂ ಸಾಧ್ಯವಾದಷ್ಟು ಬೇಗ ಮಗ ಎಂಜಿನಿಯರಿಂಗ್ ಮುಗಿಸಲು ಏನು ಮಾಡಬೇಕೆನ್ನುವ ಕುರಿತು ಮಾಹಿತಿ ಪಡೆಯುವುದು ಅವರ ಏಕಮಾತ್ರ ಆದ್ಯತೆಯಾಗಬಹುದೇನೋ ಎನ್ನುವ ನಿರೀಕ್ಷೆ ಅಧ್ಯಾಪಕರಲ್ಲಿತ್ತು. ಆದರೆ, ಅವರಿಗೆ ಮಗ ಇನ್ನು ಆರೇಳು ತಿಂಗಳುಗಳಲ್ಲಿ ಎಂಜಿನಿಯರಿಂಗ್ ಪದವಿ ಮುಗಿಸುವ ಕುರಿತು ಅಪರಿಮಿತ ಭರವಸೆ ಇದ್ದ ಹಾಗಿತ್ತು. 'ಏಳನೇ ಸೆಮಿಸ್ಟರ್‌ನಲ್ಲಿ ಹೆಚ್ಚುವರಿಯಾಗಿ ಆರು ಹಾಗೂ ಎಂಟನೇ ಸೆಮಿಸ್ಟರ್‌ನಲ್ಲಿ ಹೆಚ್ಚುವರಿಯಾಗಿ ಏಳು ವಿಷಯಗಳ ಪರೀಕ್ಷೆ ಬರೆದು ಪಾಸಾದರೆ ನಾಲ್ಕು ವರ್ಷಕ್ಕೆ ಎಂಜಿನಿಯರಿಂಗ್ ಮುಗಿಸಬಹುದಲ್ಲವೇ?' ಎಂದು ವಿಚಾರಿಸಿದರು.

ಆದರೆ, ನಿಯಮಾವಳಿ ಪ್ರಕಾರ, ಅವರ ಮಗ ಆಯಾ ಸೆಮಿಸ್ಟರ್‌ನ ಏಳೆಂಟು ವಿಷಯಗಳೊಂದಿಗೆ ಹೆಚ್ಚುವರಿಯಾಗಿ ಆರೇಳು ವಿಷಯಗಳ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಇರಲಿಲ್ಲ. ಅಲ್ಲದೆ 13 ವಿಷಯಗಳನ್ನು ಬಾಕಿ ಉಳಿಸಿಕೊಂಡಿರುವ ವಿದ್ಯಾರ್ಥಿಯ ಪಾಲಿಗೆ ಒಂದೇ ಬಾರಿಗೆ 14ಕ್ಕಿಂತ ಹೆಚ್ಚು ವಿಷಯಗಳಲ್ಲಿ ಪಾಸಾಗುವುದು ಅಸಾಧ್ಯ ಎನಿಸುವಂತಹ ಸವಾಲೇ ಸರಿ. ವಸ್ತುಸ್ಥಿತಿ ಹೀಗಿದ್ದರೂ ತಾಯಿಗೆ ಮಗ ಕ್ಯಾಂಪಸ್ ಸಂದರ್ಶನದ ಮೂಲಕ ಹೇಗಾದರೂ ಕೆಲಸ ಪಡೆಯಲೇಬೇಕೆನ್ನುವ ಮಹತ್ವಾಕಾಂಕ್ಷೆಯನ್ನು ಸಡಿಲಿಸಲು ಸಾಧ್ಯವಾಗಲೇ ಇಲ್ಲ.

ವಿಶ್ವವಿದ್ಯಾಲಯ ರೂಪಿಸಿರುವ ನಿಯಮಾವಳಿ ಹಾಗೂ ಕ್ಯಾಂಪಸ್ ಸಂದರ್ಶನಕ್ಕೆ ಬರುವ ಕಂಪನಿಗಳು ಅನುಸರಿಸುವ ಮಾನದಂಡಗಳು ಯಾವುವು ಎನ್ನುವುದನ್ನು ಪ್ರಾಧ್ಯಾಪಕರು ಅವರಿಗೆ ವಿವರಿಸಿ, 'ನಿಮ್ಮ ಮಗ ಮೊದಲು ಎಂಜಿನಿಯರಿಂಗ್ ಪದವಿ ಮುಗಿಸುವ ಹಾಗೆ ನೋಡಿಕೊಳ್ಳಿ. ಈಗಲೇ ಕೆಲಸದ ಬಗ್ಗೆ ಹೆಚ್ಚು ಚಿಂತಿಸಲು ಹೋಗಬೇಡಿ' ಎನ್ನುವ ಸಲಹೆ ನೀಡಿ ಕಳಿಸಿದರು. ಕೊರೊನಾ ಕಾರಣಕ್ಕೆ ತರಗತಿಗಳು ಸಕಾಲಕ್ಕೆ ನಡೆಯದೆ, ಆನ್‌ಲೈನ್ ತರಗತಿಗಳ ಮೂಲಕ ಕಲಿಸುವ ಸನ್ನಿವೇಶ ಅನಿರ್ದಿಷ್ಟಾವಧಿಗೆ ಮುಂದುವರಿದಾಗ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಅದುವರೆಗೂ ಜಾರಿಯಲ್ಲಿದ್ದ ಗರಿಷ್ಠ ನಾಲ್ಕು ಬ್ಯಾಕ್‌ಲಾಗ್ ನಿಯಮವನ್ನು ಸಡಿಲಗೊಳಿಸಿತು. ವಿದ್ಯಾರ್ಥಿಗಳು ಹಿಂದಿನ ಸೆಮಿಸ್ಟರ್‌ಗಳ ಅದೆಷ್ಟೇ ವಿಷಯಗಳಲ್ಲಿ ಫೇಲ್ ಆಗಿದ್ದರೂ ಮುಂದಿನ ವರ್ಷಕ್ಕೆ ದಾಖಲಾಗಬಹುದು ಎನ್ನುವ ರಿಯಾಯಿತಿ ಘೋಷಿಸಿ ಅನುಷ್ಠಾನಕ್ಕೂ ತರಲಾಯಿತು. ವಿಶ್ವವಿದ್ಯಾಲಯಗಳು ಜಾರಿಗೆ ತಂದ ಈ ಸಡಿಲಿಕೆ ತಮ್ಮ ಪಾಲಿಗೆ ವರದಾನವಾಗಲಿದೆ ಎಂದು, ಕಲಿಕೆಯಲ್ಲಿ ಹಿಂದುಳಿದಿದ್ದ ವಿದ್ಯಾರ್ಥಿಗಳು ಮೊದಲಿಗೆ ಭಾವಿಸಿದ್ದರು. ಆದರೆ ಇದರ ದುಷ್ಪರಿಣಾಮ ಏನೆಂಬುದು ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಈಗ ಮನದಟ್ಟಾಗತೊಡಗಿದೆ.



ಗರಿಷ್ಠ ನಾಲ್ಕು ಬ್ಯಾಕ್‌ಲಾಗ್ ನಿಯಮ ಜಾರಿಯಲ್ಲಿದ್ದ ವೇಳೆ, ಯಾವುದೇ ವಿದ್ಯಾರ್ಥಿ ನಾಲ್ಕಕ್ಕಿಂತ ಹೆಚ್ಚು ವಿಷಯಗಳನ್ನು ಪಾಸ್ ಆಗದೆ ಉಳಿಸಿಕೊಂಡಿದ್ದರೆ ಮುಂದಿನ ಶೈಕ್ಷಣಿಕ ವರ್ಷಕ್ಕೆ ದಾಖಲಾಗಲು ಅವಕಾಶ ಇರಲಿಲ್ಲ. ಹೀಗಾಗಿ, ಬಾಕಿ ಇರುವ ವಿಷಯಗಳನ್ನು ಆದಷ್ಟು ಬೇಗ ಪಾಸು ಮಾಡಿಕೊಳ್ಳುವುದು ವಿದ್ಯಾರ್ಥಿಗಳ ಮೊದಲ ಆದ್ಯತೆಯಾಗುತ್ತಿತ್ತು.

ಇನ್ನು ಆರೇಳು ತಿಂಗಳುಗಳಲ್ಲಿ ಎಂಜಿನಿಯರಿಂಗ್ ಓದು ಮುಗಿಸಬೇಕಿರುವ 2023-24ನೇ ಸಾಲಿನ ಕೆಲ ವಿದ್ಯಾರ್ಥಿಗಳು, 20ಕ್ಕಿಂತ ಹೆಚ್ಚು ವಿಷಯಗಳಲ್ಲಿ ಪಾಸ್ ಆಗದೆ ಹಾಗೇ ಉಳಿಸಿಕೊಂಡಿರುವ ನಿದರ್ಶನಗಳೂ ಇವೆ. ಹೀಗೆ ಅಧಿಕ ಸಂಖ್ಯೆಯ ಬ್ಯಾಕ್‌ಲಾಗ್‌ಗಳನ್ನು ಉಳಿಸಿಕೊಂಡು ನಿಗದಿತ ಅವಧಿಗೆ ಪದವಿ ಪಡೆಯುವ ಅರ್ಹತೆ ಗಳಿಸಲು ವಿಫಲರಾಗುವವರ ಬಗ್ಗೆ ಪೋಷಕರು ಹಾಗೂ ಆಯಾ ಕಾಲೇಜು-ವಿಶ್ವವಿದ್ಯಾಲಯಗಳು ವಿಶೇಷ ಮುತುವರ್ಜಿ ತೋರದೇ ಹೋದರೆ, ಅವರು ಪದವಿ ಪೂರ್ಣಗೊಳಿಸುವುದೇ ಅನುಮಾನ.

ಕೊರೊನಾ ಲಾಕ್‌ಡೌನ್ ಜಾರಿಯಲ್ಲಿದ್ದ ವೇಳೆ ಪದವಿ ಓದುತ್ತಿದ್ದ ಮೂರ್ನಾಲ್ಕು ಬ್ಯಾಚುಗಳ ವಿದ್ಯಾರ್ಥಿಗಳಷ್ಟೇ ಈ ಅಪರಿಮಿತ ಬ್ಯಾಕ್‌ಲಾಗ್‌ಗಳ ದುಷ್ಪರಿಣಾಮ ಎದುರಿಸಬೇಕಿದೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು 2022-23ನೇ ಸಾಲಿನ ನಂತರ ಎಂಜಿನಿಯರಿಂಗ್ ಪದವಿಗೆ ದಾಖಲಾಗಿರುವ ವಿದ್ಯಾರ್ಥಿಗಳಿಗೆ 16 ಕ್ರೆಡಿಟ್‌ಗಿಂತ ಹೆಚ್ಚು ವಿಷಯಗಳನ್ನು ಪಾಸ್ ಮಾಡದೆ ಉಳಿಸಿಕೊಂಡಿದ್ದರೆ, ಅಂತಹ ವಿದ್ಯಾರ್ಥಿಗಳು ಮುಂದಿನ ಶೈಕ್ಷಣಿಕ ವರ್ಷಕ್ಕೆ ಪದೋನ್ನತಿ ಹೊಂದಲು ಅವಕಾಶವಿಲ್ಲ ಎಂಬ ನಿಯಮವನ್ನು ಈಗಾಗಲೇ ಜಾರಿಗೆ ತಂದಿದೆ. ಹೀಗಾಗಿ, ಅಪರಿಮಿತ ಬ್ಯಾಕ್‌ಲಾಗ್ ತಂದೊಡ್ಡಿರುವ ಸಂಕಷ್ಟ ಮೂರ್ನಾಲ್ಕು ಬ್ಯಾಚುಗಳ ವಿದ್ಯಾರ್ಥಿಗಳನ್ನಷ್ಟೇ ಬಾಧಿಸಲಿದೆ.

ವಾಚಕರ ವಾಣಿ

ನಮ್ಮ ಸಂವಿಧಾನ ಹೇಳುವುದೇನು?

'ಭಾರತ ಹಿಂದೂ ರಾಷ್ಟ್ರವಾಗಲು ಇನ್ನೇನು ಬಾಕಿಯಿದೆ... ಭಾರತದಲ್ಲಿ ಬಹುಸಂಖ್ಯಾತರಾದ ಹಿಂದೂಗಳು ಅಭಿಮಾನದಿಂದ ನಮ್ಮದು ಹಿಂದೂ ರಾಷ್ಟ್ರ ಎಂದು ಹೇಳಿಕೊಳ್ಳುವುದರಲ್ಲಿ ತಪ್ಪೇನಿದೆ? ನಮ್ಮ ದೇಶವನ್ನು ಹಿಂದೂಸ್ತಾನ, ಹಿಂದೂರಾಷ್ಟ್ರ ಎಂದು ಹೇಳಿಕೊಳ್ಳಬಾರದು ಎಂದು ಯಾವ ಸಂವಿಧಾನದಲ್ಲಿಯೂ ಹೇಳಿಲ್ಲ' ಎಂದು ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ಜ. 5). ನಾವು ನಮ್ಮ ಭಾರತದ ಸಂವಿಧಾನದ ಕುರಿತು ಮಾತನಾಡುವುದಾದರೆ, ನಮ್ಮಲ್ಲಿ ನಾಗರಿಕರಿಗೆ ತಮ್ಮದೇ ಆದ ಧರ್ಮ ಇದೆ, ಆದರೆ ರಾಷ್ಟ್ರಕ್ಕೆ ತನ್ನದೇ ಆದ ಧರ್ಮವಿಲ್ಲ. ಭಾರತವು ಮತಧರ್ಮ ನಿರಪೇಕ್ಷ ರಾಷ್ಟ್ರ ಎಂಬುದನ್ನು ಸಂವಿಧಾನದ ಮೊದಲ ಪುಟದಲ್ಲಿಯೇ ಪ್ರಸ್ತಾವನೆಯಲ್ಲಿ ಹೇಳಲಾಗಿದೆ. ನಮ್ಮ ನೆರೆಯ ರಾಷ್ಟ್ರ 'ಇಸ್ಲಾಮಿಕ್ ರಿಪಬ್ಲಿಕ್ ಆಫ್ ಪಾಕಿಸ್ತಾನ್', ಆದರೆ ನಮ್ಮದು ಸ್ಪಷ್ಟವಾಗಿ 'ರಿಪಬ್ಲಿಕ್ ಆಫ್ ಇಂಡಿಯಾ'.

ಸಂವಿಧಾನದ ಪ್ರಕಾರ, ನಮ್ಮ ದೇಶದ ಹೆಸರು 'ಇಂಡಿಯಾ' ಎಂದರೆ, 'ಭಾರತ'. ಆದರೆ, ಹಿಂದೂರಾಷ್ಟ್ರ ಎಂಬ ಪದ ಸಂವಿಧಾನದಲ್ಲಿ ಇಲ್ಲ. ವಿಪರ್ಯಾಸವೆಂದರೆ, ಭಾರತವನ್ನು ಇಸ್ಲಾಮಿಕ್ ರಾಷ್ಟ್ರವನ್ನಾಗಿ ಮಾಡುತ್ತೇವೆ ಎನ್ನುವವರನ್ನು ಭಯೋತ್ಪಾದಕರು ಎನ್ನುತ್ತೇವೆ; ಆದರೆ ಭಾರತವನ್ನು ಹಿಂದೂ ರಾಷ್ಟ್ರ ಮಾಡುತ್ತೇವೆ ಎನ್ನುವವರನ್ನು ದೇಶಭಕ್ತರು ಎನ್ನುತ್ತೇವೆ. ಸಂವಿಧಾನದ ಪ್ರಕಾರ ಇವೆರಡೂ ಅಪರಾಧಗಳೇ.

ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ, ಬೆಂಗಳೂರು

ಅರಿವಿನ ಹಣತೆಗೆ ಬತ್ತಿ ಹೊಸೆಯಬೇಕಿದೆ

ವಿಶ್ವಮಾನವ ಸಂದೇಶ ಸಾರಿದ ಕುವೆಂಪು ಹಾಗೂ ಮಹಿಳೆಯರಲ್ಲಿ ಶಿಕ್ಷಣದ ಅರಿವು ಮೂಡಿಸಿ ಸಮಾನತೆಯ ಬೀಜ ಬಿತ್ತಿದ ಸಾವಿತ್ರಿಬಾಯಿ ಫುಲೆ ಅವರ ಜನ್ಮದಿನವನ್ನು ಇತ್ತೀಚೆಗಷ್ಟೇ ನಾಡಿನಾದ್ಯಂತ ಆಚರಿಸಿದ್ದೇವೆ. ಇದಾದ ಕೆಲವೇ ದಿನಗಳಲ್ಲಿ, ತರೀಕೆರೆ ತಾಲ್ಲೂಕಿನ ಗೇರುಮರಡಿ ಗೊಲ್ಲರಹಟ್ಟಿಗೆ ದಲಿತ ಯುವಕನ ಪ್ರವೇಶವನ್ನು ಸಹಿಸದೆ ಅಲ್ಲಿನ ಎರಡು ದೇಗುಲಗಳಿಗೆ ಬೀಗ ಹಾಕಿರುವುದು (ಪ್ರ.ವಾ., ಜ. 5) ವಿಷಾದನೀಯ. ಪರಿಶಿಷ್ಟ ಜಾತಿಯವರು ಹಟ್ಟಿ ಪ್ರವೇಶ ಮಾಡಿದರೆ ದೇವರಿಗೆ ಮೈಲಿಗೆಯಾಗುತ್ತದೆ ಎಂಬ ಮೂಢನಂಬಿಕೆಯುಳ್ಳ ಜನರಿರುವುದನ್ನು ನೋಡಿದರೆ, ನಾವು ಆಚರಿಸಿಕೊಂಡು ಬರುತ್ತಿರುವ ಮಹಾನ್ ಪುರುಷರ ಎಷ್ಟೋ ಜಯಂತಿಗಳು ತೂತುಬಿದ್ದ ಬಿಂದಿಗೆಗಳಿಗೆ ನೀರು ತುಂಬಿಸಿದಂತೆ ಆಗುತ್ತಿವೆಯೇನೋ ಎಂದು ಅನಿಸದೇ ಇರದು.

ಮಹನೀಯರ ತ್ಯಾಗ, ಬಲಿದಾನದ ಫಲವನ್ನು ಉಣ್ಣುತ್ತಿರುವ ನಾಡಿನ ಸುಶಿಕ್ಷಿತ ಸಮುದಾಯವು ಆರ್ಥಿಕವಾಗಿ, ಸಾಮಾಜಿಕವಾಗಿ ಸ್ವಾವಲಂಬಿಯಾಗಿದ್ದರೂ ಮಹನೀಯರು ಹಚ್ಚಿ ಹೋದ ಅರಿವಿನ ಹಣತೆಗೆ ಬತ್ತಿ ಹೊಸೆದು, ಎಣ್ಣೆ ಹಾಕುವ ಪ್ರಯತ್ನವನ್ನು ಮಾಡದೆ, ನೆರೆಹೊರೆಯವರ ಈ ತೆರನಾದ ಮೌಢ್ಯಗಳಿಗೆ ಕುರುಡಾಗಿರುವುದೂ ಇಂತಹ ಪ್ರಕರಣಗಳಿಗೆ ಕಾರಣ.

ರೇವಣ್ಣ ಎಂ.ಜಿ., ಕೃಷ್ಣರಾಜಪೇಟೆ, ಮಂಡ್ಯ

ಸುಲಭ ರಾಜಕಾರಣ ಮತ್ತು ವಿಐಪಿ ಪಟ್ಟ

ದೇಶದಲ್ಲಿ 5.79 ಲಕ್ಷ ಮಂದಿ ವಿಐಪಿ ಪಟ್ಟಿಯಲ್ಲಿದ್ದು, ಸಕಲ ಸವಲತ್ತು, ಸೌಭಾಗ್ಯಕ್ಕೆ ಭಾಜನರಾಗಿದ್ದಾರೆ ಎಂದು ಮಿತ್ರರೊಬ್ಬರು ಜಾಲತಾಣದಲ್ಲಿ ಬರೆದಿದ್ದರು. ಇದನ್ನು ನೋಡಿ ಅತಿಶಯೋಕ್ತಿ ಎನಿಸಲಿಲ್ಲ. ರಾಜಕೀಯ ಹುಟ್ಟು ಮತ್ತು ಸ್ಥಿತಿವಂತಿಕೆ ಹೇಗಾಗುತ್ತದೆ ಎನ್ನುವುದು, ಜಾಗೃತರಾಗಿ ಆಚೀಚೆ ನೋಡಿ ಗ್ರಹಿಸುವ ಎಲ್ಲಾ ಜನಸಾಮಾನ್ಯರಿಗೆ ವೇದ್ಯವಾಗುವ ವಿದ್ಯಮಾನ!

ಹಳ್ಳಿಗಳ ಹೊರವಲಯದ ಮಾರಿಗುಡಿ, ಊರ ಮುಂದಣ ಅರಳೀಕಟ್ಟೆ, ಪಾಳುಮನೆಯ ಮುರುಕು ಜಗಲಿಯ ಮೇಲೆ ಜೂಜು-ಜಗಳ ಆಡುತ್ತಾ, ಜರ್ದಾ ಜಗಿಯುತ್ತಾ, ರಾತ್ರಿ ಏನು ಮಾಡಬೇಕು ಎಂದು ಯೋಜನೆ ಹಾಕಿಕೊಳ್ಳುತ್ತಾ ಕಾಲ ತಳ್ಳುವ ಸೋಂಬೇರಿ ಸಮೂಹದ ಸಂಖ್ಯೆ ನಮ್ಮಲ್ಲಿ ಕಮ್ಮಿಯೇ? ಈ ಪೈಕಿ ತುಸು ಚಾಲೂಕಿನವರು ತಾಲ್ಲೂಕು ಕಚೇರಿ, ಸಬ್‌ರಿಜಿಸ್ಟ್ರಾರ್ ಕಚೇರಿ, ಆರ್‌ಟಿಒ ಕಚೇರಿಯ ಜವಾನರು ಮತ್ತು ಗುಮಾಸ್ತರುಗಳೊಂದಿಗೆ ಒಡನಾಟ ಹೊಂದಿರುತ್ತಾರೆ. ಸ್ಥಿರಚರಾಸ್ತಿ ದಲ್ಲಾಳಿಕೆಯಲ್ಲಿ ಒಬ್ಬರಿಗಿಂತ ಒಬ್ಬರು ಸಿದ್ಧಹಸ್ತರು! ಕಪ್ಪುಹಣದ ಹುದುಗು ನಿರ್ಮಿಸುವ ಫರ್ಮೆಂಟೇಷನ್ ಬ್ಯಾಕ್ಟೀರಿಯಾಗಳೇ ಇವರಾಗಿರುತ್ತಾರೆ ಅಂದಮೇಲೆ, ಮುಂದಿನ ರಾಜಕೀಯ ಧುರೀಣರು, ವಿಐಪಿ ಮಹೋದಯರು ಎನಿಸಿಕೊಳ್ಳುವ ಅದೃಷ್ಟ ಇಂಥವರಿಗಲ್ಲದೆ, ಅದು ಪ್ರಾಮಾಣಿಕ ಜನಸೇವಕರನ್ನು ಹುಡುಕಿಕೊಂಡು ಬರುವುದೇ?!

ಆರ್.ಕೆ.ದಿವಾಕರ, ಬೆಂಗಳೂರು

ಆರ್ಥಿಕ ಬೆಳವಣಿಗೆ: ಸಂತೋಷ ಹೆಚ್ಚಿಸಲಿ

ವಿಶ್ವಸಂಸ್ಥೆ ಇತ್ತೀಚೆಗೆ ಬಿಡುಗಡೆ ಮಾಡಿದ 'ವಿಶ್ವ ಆರ್ಥಿಕ ಪರಿಸ್ಥಿತಿ ಮತ್ತು ಭವಿಷ್ಯ' ಎಂಬ ವರದಿಯಲ್ಲಿ, ಭಾರತದ ಆರ್ಥಿಕತೆಯು ಹಿಂದಿನ ಕೆಲವು ವರ್ಷಗಳಲ್ಲಿ ತನ್ನ ಸಮಾನ ದೇಶಗಳನ್ನು ಮೀರಿಸಿದೆ ಹಾಗೂ ಇದು 2024 ಮತ್ತು 2025ರಲ್ಲಿ ಸಹ ಮುಂದುವರಿಯಲಿದೆ ಎಂದು ಅಂದಾಜು ಮಾಡಲಾಗಿದೆ. ಅಲ್ಲದೆ, ಭಾರತವು ವಿಶ್ವದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಎಂದೂ ವರದಿ ಹೇಳಿದೆ. ದೇಶದಲ್ಲಿ ರಾಜಕೀಯ ಸ್ಥಿರತೆಯೊಂದಿಗೆ ಆರ್ಥಿಕ ಸ್ಥಿರತೆಯೂ ಇದ್ದು, ವಿಶ್ವದ ಬೇರೆ ದೇಶಗಳಿಗೆ ಹೋಲಿಸಿದರೆ ಭಾರತದ ಆರ್ಥಿಕ ಪ್ರಗತಿ ಅತ್ಯುತ್ತಮವಾಗಿದೆ ಎಂದು ಐಎಂಎಫ್ ಸಹ ಶ್ಲಾಘಿಸಿದೆ. ಈ ಬೆಳವಣಿಗೆಗಳು ಭಾರತೀಯರಾದ ನಾವೆಲ್ಲರೂ ಹೆಮ್ಮೆಪಡುವಂತಹವು.

ಆದರೆ ಇಷ್ಟೆಲ್ಲಾ ಆರ್ಥಿಕ ಬೆಳವಣಿಗೆಯ ನಡುವೆಯೂ ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಪರಿಹಾರಗಳ ಕಾರ್ಯಜಾಲ ಪ್ರಕಟಿಸಿರುವ 2023ರ ವಿಶ್ವ ಸಂತೋಷ ಸೂಚ್ಯಂಕದ ಪಟ್ಟಿಯಲ್ಲಿ ಭಾರತ 150 ರಾಷ್ಟ್ರಗಳ ಪೈಕಿ 126ನೇ ಸ್ಥಾನದಲ್ಲಿದೆ. ಭಾರತದ ಶ್ರೇಯಾಂಕದ ಬಗ್ಗೆ ಭಿನ್ನಾಭಿಪ್ರಾಯ ಇದ್ದರೂ ಹೆಚ್ಚು ಸಂತೋಷವಾಗಿರುವ ಜಗತ್ತಿನ ಮೊದಲ ಹತ್ತು ದೇಶಗಳಲ್ಲಂತೂ ನಮ್ಮ ದೇಶ ಇಲ್ಲ. ದೇಶದ ಆರ್ಥಿಕ ಅಭಿವೃದ್ಧಿಯು ನಾಗರಿಕರ ಸಂತೋಷದ ಮಟ್ಟವನ್ನು ಹೆಚ್ಚಿಸುವಲ್ಲಿ ವಿಫಲವಾಗುವುದಕ್ಕೆ ಕಾರಣವಾದ ನ್ಯೂನತೆಗಳನ್ನು ಸರಿಪಡಿಸುವ ಕಾರ್ಯವನ್ನು ಆದ್ಯತೆಯ ಮೇರೆಗೆ ಮಾಡಬೇಕಿದೆ. ಇಲ್ಲವಾದಲ್ಲಿ ಆರ್ಥಿಕ ಬೆಳವಣಿಗೆ ಹಾಗೂ ಅಭಿವೃದ್ಧಿ ಕಾರ್ಯಗಳು ಅರ್ಥಹೀನವಾಗುತ್ತವೆ.

ಟಿ.ಜಯರಾಂ, ಕೋಲಾರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

'ಕರಸೇವಕ'ನ ಬಂಧನವು ರಾಜಕೀಯ ದ್ವೇಷ ಸಾಧನೆಯ ಕ್ರಮವೇ?

ಧರ್ಮದ ಹೆಸರಿನಲ್ಲಿ ರಾಜಕೀಯ ಲಾಭಕ್ಕೆ ಯತ್ನ

● ಪ್ರಿಯಾಂಕ್ ಖರ್ಗೆ



ವಿಧಾನಸಭಾ ಚುನಾವಣೆಯಲ್ಲಿನ ಹೀನಾಯ ಸೋಲಿನಿಂದ ಹತಾಶೆಯ ಸ್ಥಿತಿಗೆ ತಲುಪಿರುವ ಬಿಜೆಪಿ ರಾಜ್ಯ ನಾಯಕರು, ರಾಜ್ಯದ ಜನರು ಕೊಟ್ಟ ಏಟಿನ ಆಘಾತದಿಂದ ಇನ್ನೂ ಹೊರಬಂದಿಲ್ಲ. ಚುನಾವಣಾ ಫಲಿತಾಂಶ ಪ್ರಕಟವಾದ ಬಳಿಕ ಬಿಜೆಪಿಯ ಕೇಂದ್ರ ನಾಯಕರು ಆ ಪಕ್ಷದ ರಾಜ್ಯ ಘಟಕದ ನಾಯಕರನ್ನು ದೀರ್ಘ ಕಾಲ ದೂರ ಇರಿಸಿದ್ದರು.


> ಬಿಜೆಪಿ ಸರ್ಕಾರದ ಅವಧಿಯಲ್ಲೂ ಆ ಪ್ರಕರಣ ಇತ್ತು. ಬಸವರಾಜ ಬೊಮ್ಮಾಯಿ, ಆರ್. ಅಶೋಕ ಅವರಿಗೆಲ್ಲ ಕರಸೇವಕರ ಮೇಲೆ ಇಷ್ಟೊಂದು ಪ್ರೀತಿ ಇರುವುದು ನಿಜವಾಗಿದ್ದರೆ ಅವರ ವಿರುದ್ಧದ ಪ್ರಕರಣಗಳನ್ನು ಹಿಂಪಡೆಯುವ ಪ್ರಯತ್ನವನ್ನು ಏಕೆ ಮಾಡಲಿಲ್ಲ? ಈಗ ರಾಜಕೀಯ ಲಾಭಕ್ಕಾಗಿ ಕರಸೇವಕರ ಹೆಸರನ್ನು ಬಳಕೆ ಮಾಡಲು ಹೊರಟಿರುವುದನ್ನು ಅರಿಯದಷ್ಟು ರಾಜ್ಯದ ಜನ ಮೂರ್ಖರು ಎಂದು ಅವರು ಭಾವಿಸಿರಬೇಕು

ರಾಜ್ಯದ ಬಿಜೆಪಿ ನಾಯಕರ ವಿರುದ್ಧ ಆ ಪಕ್ಷದ ವರಿಷ್ಠರ ಕೋಪ ಇನ್ನೂ ತಣಿದಿಲ್ಲ. ಈಗ ಹಿಂದುತ್ವದ ದಾಳವನ್ನು ಮುಂದಿಟ್ಟುಕೊಂಡು ರಾಜ್ಯದಲ್ಲಿ ಗದ್ದಲ ಸೃಷ್ಟಿಸಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಒಲವು ಗಳಿಸಲು ಬಿಜೆಪಿ ನಾಯಕರು ಕೆಟ್ಟ ತಂತ್ರವೊಂದನ್ನು ರೂಪಿಸಿದ್ದಾರೆ. ಅದರ ಭಾಗವಾಗಿಯೇ 'ಕರಸೇವಕ'ರ ಬಂಧನದ ಹೆಸರಿನಲ್ಲಿ ರಾಜ್ಯದ ಉದ್ದಗಲಕ್ಕೆ ಸುಳ್ಳು ಹಬ್ಬಿಸುತ್ತಾ, ಅಶಾಂತಿ ಸೃಷ್ಟಿಗೆ ಪ್ರಯತ್ನ ಮಾಡುತ್ತಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾಗಿ ಆರು ತಿಂಗಳು ಕಳೆದಿವೆ. ಈ ಅವಧಿಯಲ್ಲಿ ರಾಜ್ಯದ ಮಹಿಳೆಯರ, ರೈತರ ಪರ ಅಥವಾ ಕನ್ನಡಿಗರ ಹಿತಾಸಕ್ತಿಯ ಪರ ಒಮ್ಮೆಯೂ ಬಿಜೆಪಿ ಸೊಲ್ಲೆತ್ತಲಿಲ್ಲ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಮತ್ತು ವಿರೋಧ ಪಕ್ಷದ ನಾಯಕರ ನೇಮಕವಾಗುತ್ತಿದ್ದಂತೆಯೇ ಮಣಿಕಂಠ ರಾಠೋಡ್ ಪ್ರಕರಣ ಮುಂದಿಟ್ಟುಕೊಂಡು ನನ್ನ ರಾಜೀನಾಮೆಗೆ ಆಗ್ರಹಿಸಿದ್ದರು. ಮಣಿಕಂಠ ವಿರುದ್ಧ ಅನ್ನಭಾಗ್ಯ ಅಕ್ಕಿ ಕಳ್ಳಸಾಗಣೆಯ 50ಕ್ಕೂ ಹೆಚ್ಚು ಪ್ರಕರಣಗಳಿವೆ. ಅಂಗನವಾಡಿ ಮಕ್ಕಳಿಗೆ ವಿತರಿಸಲು ಪೂರೈಸಿದ್ದ ಹಾಲಿನ ಪುಡಿ ಕಳ್ಳತನದ ಪ್ರಕರಣದಲ್ಲಿ ಶಿಕ್ಷೆಗೊಳಗಾದ ವ್ಯಕ್ತಿ ಆತ. ಬೆಳಗಾವಿಯಲ್ಲಿ ವಿಧಾನಮಂಡಲದ ಚಳಿಗಾಲದ ಅಧಿವೇಶನ ನಡೆಯುತ್ತಿದ್ದಾಗ ಬಿಜೆಪಿ ಕಾರ್ಯಕರ್ತ ಪೃಥ್ವಿ ಸಿಂಗ್ ಎಂಬಾತ ತಾನೇ ಕೊಯ್ದುಕೊಂಡು ಹಲ್ಲೆಯ ಕತೆ ಕಟ್ಟಿದ್ದ. ಅದನ್ನೇ ಮುಂದಿಟ್ಟುಕೊಂಡು ಎರಡು ದಿನ ಬಿಜೆಪಿಯವರು ಕಲಾಪಕ್ಕೆ ಅಡ್ಡಿಪಡಿಸಿದ್ದರು. ಪೃಥ್ವಿ ಸಿಂಗ್ ವಿರುದ್ಧ ಗಾಂಜಾ ಬೆಳೆದಿರುವುದು, ಮಾರಕಾಸ್ತ್ರಗಳ ದಾಸ್ತಾನಿನ ಆರೋಪಗಳಿವೆ. ಲಾಂಗ್ ಪೆಂಡಿಂಗ್ ಕೇಸ್' (ಎಲ್‌ಪಿಸಿ) ವಾರಂಟ್‌ಗಳ ತ್ವರಿತ ಇತ್ಯರ್ಥಕ್ಕೆ ಹೈಕೋರ್ಟ್ ನೀಡಿದ್ದ ನಿರ್ದೇಶನದ ಅನುಸಾರ 31 ವರ್ಷ ಹಳೆಯ ಪ್ರಕರಣದಲ್ಲಿ ಹುಬ್ಬಳ್ಳಿಯ ಶ್ರೀಕಾಂತ್ ಪೂಜಾರಿಯನ್ನು ಬಂಧಿಸಿದ್ದನ್ನು ಮುಂದಿಟ್ಟುಕೊಂಡು 'ಕರಸೇವಕರ' ಹೆಸರಿನಲ್ಲಿ ಹುಸಿ ಹೋರಾಟ ರೂಪಿಸಿ ರಾಜಕೀಯ ಲಾಭ ಪಡೆಯುವ ತಂತ್ರ ಹೂಡಿದೆ.

ಶ್ರೀಕಾಂತ್ ಪೂಜಾರಿ ಮೇಲೆ 16 ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದವು. ದೊಂಬಿ, ಅಕ್ರಮ ಮದ್ಯ ಮಾರಾಟ ಹಾಗೂ ಮಟ್ಕಾ ದಂಧೆಯಲ್ಲಿ ಭಾಗಿಯಾಗಿದ್ದ ಆರೋಪಗಳಿದ್ದವು. 15 ಪ್ರಕರಣಗಳಲ್ಲಿ ಆತ ಖುಲಾಸೆಯಾಗಿದ್ದಾನೆ ಎಂಬ ವಾದವನ್ನು ಬಿಜೆಪಿ ಮುಂದಿಡುತ್ತಿದೆ. ಅದು ಸತ್ಯವೇ ಆಗಿದ್ದರೂ ಬಾಕಿ ಇರುವ ಒಂದು ಪ್ರಕರಣದಲ್ಲಿ ಶ್ರೀಕಾಂತ್ ಅರೋಪಿಯಲ್ಲವೆ? ದೀರ್ಘ ಕಾಲದಿಂದ ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಕಾರಣಕ್ಕಾಗಿ ಆತನನ್ನು ಪೊಲೀಸರು ಬಂಧಿಸಿದ್ದರು. ಹುಬ್ಬಳ್ಳಿಯಲ್ಲೇ ಅಂತಹ 36 ಪ್ರಕರಣಗಳಲ್ಲಿ ಆರೋಪಿಗಳ ಬಂಧನವಾಗಿದೆ. ಈ ಪ್ರಕರಣದಲ್ಲಿ ರಾಜ್ಯ ಸರ್ಕಾರದ ಯಾವುದೇ ಪಾತ್ರ ಇಲ್ಲ. ಹೈಕೋರ್ಟ್ ನಿರ್ದೇಶನದಂತೆ ನಡೆದ ಬಂಧನ ಕಾರ್ಯಾಚರಣೆಯನ್ನೂ ಬಿಜೆಪಿ ಈಗ ರಾಜಕೀಯಕ್ಕಾಗಿ ವಿರೋಧಿಸುತ್ತಿದೆ. ಸಂವಿಧಾನ ಮತ್ತು ಅದರಿಂದ ದತ್ತವಾದ ಕಾನೂನನ್ನು ಯಾವತ್ತೂ ಒಪ್ಪದೇ, ಕಾನೂನು ವಿರೋಧಿ ಚಟುವಟಿಕೆ ಮಾಡುವುದನ್ನೇ ರೂಢಿಸಿಕೊಂಡಿರುವ ಬಿಜೆಪಿ ನಾಯಕರು, ಶ್ರೀಕಾಂತ್ ಬಂಧನ ವಿರೋಧಿಸಿ ಬೀದಿಗಿಳಿಯುವ ಮೂಲಕ ರಾಜ್ಯದ ಜನರನ್ನೂ ನ್ಯಾಯಾಂಗದ ವಿರುದ್ಧ ಎತ್ತಿಕಟ್ಟುವ ಕೆಲಸಕ್ಕೆ ಕೈಹಾಕಿದ್ದಾರೆ. ಇದು ಆ ಪಕ್ಷದವರ ಸಂವಿಧಾನ ವಿರೋಧಿ ಮನಃಸ್ಥಿತಿಗೆ ಸಾಕ್ಷಿ.

ಶ್ರೀಕಾಂತ್ ಪೂಜಾರಿ ವಿರುದ್ಧ ನಮ್ಮ ಸರ್ಕಾರದ ಅವಧಿಯಲ್ಲಿ ಹೊಸ ಪ್ರಕರಣ ದಾಖಲಿಸಿಲ್ಲ. ಬಿಜೆಪಿ ಸರ್ಕಾರದ ಅವಧಿಯಲ್ಲೂ ಆ ಪ್ರಕರಣ ಇತ್ತು. ಬಸವರಾಜ ಬೊಮ್ಮಾಯಿ, ಆರ್. ಅಶೋಕ ಅವರಿಗೆಲ್ಲ ಕರಸೇವಕರ ಮೇಲೆ ಇಷ್ಟೊಂದು ಪ್ರೀತಿ ಇರುವುದು ನಿಜವಾಗಿದ್ದರೆ ಅವರ ವಿರುದ್ಧದ ಪ್ರಕರಣಗಳನ್ನು ಹಿಂಪಡೆಯುವ ಪ್ರಯತ್ನವನ್ನು ಏಕೆ ಮಾಡಲಿಲ್ಲ? ಈಗ ರಾಜಕೀಯ ಲಾಭಕ್ಕಾಗಿ ಕರಸೇವಕರ ಹೆಸರನ್ನು ಬಳಕೆ ಮಾಡಲು ಹೊರಟಿರುವುದನ್ನು ಅರಿಯದಷ್ಟು ರಾಜ್ಯದ ಜನ ಮೂರ್ಖರು ಎಂದು ಅವರು ಭಾವಿಸಿರಬೇಕು. ಪರಶುರಾಮನ ಕಂಚಿನ ಪ್ರತಿಮೆ ನಿರ್ಮಾಣ ಕಾಮಗಾರಿಯಲ್ಲಿ ಕಾರ್ಕಳದ ಜನರಿಗೆ ಮೋಸ ಮಾಡಿರುವ ಶಾಸಕ ವಿ. ಸುನಿಲ್ ಕುಮಾರ್ ಕೂಡ ಈಗ 'ನಾನೂ ಕರಸೇವಕ ನನ್ನನ್ನೂ ಬಂಧಿಸಿ' ಎನ್ನುತ್ತಿದ್ದಾರೆ. ಪರಶುರಾಮನ ಹೆಸರಿನಲ್ಲಿ ಮೋಸ ಮಾಡಿದವರನ್ನೂ ರಾಮಭಕ್ತ ಎನ್ನಬಹುದೆ? ಸಂಸತ್ತಿನ ಮೇಲೆ ದಾಳಿ ಮಾಡಿದವರಿಗೆ ಪಾಸ್ ನೀಡಿದ್ದ ಬಿಜೆಪಿ ಸಂಸದ ಪ್ರತಾಪ್ ಸಿಂಹ ಈಗ ಮೈಸೂರು ಚಾಮುಂಡೇಶ್ವರಿ ದೇವಿಯ ಕಡೆ ಕೈ ತೋರಿಸುತ್ತಿದ್ದಾರೆ. ಸಮಾಜದ ಶಾಂತಿ ಕದಡುವವರು, ಕಳ್ಳಕಾಕರಿಗೆಲ್ಲ 'ರಾಮಭಕ್ತ'ರ ಪಟ್ಟವನ್ನು ಬಿಜೆಪಿಯವರು ಕಟ್ಟುತ್ತಾರೆಂದರೆ ಅವರ ಸಂಸ್ಕೃತಿ ಏನು ಎಂಬುದಕ್ಕೆ ಬೇರೆ ವ್ಯಾಖ್ಯಾನ ಬೇಕಿಲ್ಲ.



ಈ ದೇಶ ಯಾವುದೇ ಧರ್ಮ ಗ್ರಂಥದ ಆಧಾರದಲ್ಲಿ ನಡೆಯುತ್ತಿಲ್ಲ. ಭಗವದ್ಗೀತೆ, ಬೈಬಲ್, ಕುರ್‌ಆನ್ ಯಾವುದೂ ಭಾರತದ ಆಡಳಿತವನ್ನು ನಿರ್ಧರಿಸುತ್ತಿಲ್ಲ. ಡಾ.ಬಿ.ಆರ್. ಅಂಬೇಡ್ಕರ್ ನೀಡಿದ ಸಂವಿಧಾನದ ಅಡಿಯಲ್ಲಿ ದೇಶ ಮುನ್ನಡೆಯುತ್ತಿದೆ. ರಾಜ್ಯದಲ್ಲಿ ಸಂವಿಧಾನದಂತೆ ನಡೆಯುವ ಸರ್ಕಾರವಿದೆ. ಕಾನೂನು ಉಲ್ಲಂಘಿಸುವವರು ಯಾವ ಧರ್ಮಕ್ಕೆ ಸೇರಿದ್ದಾರೆ ಎಂಬುದನ್ನು ಆಧರಿಸಿ ತೀರ್ಮಾನ ಕೈಗೊಳ್ಳುವ ವ್ಯವಸ್ಥೆ ಇಲ್ಲ. ಯಾರೇ ಕಾನೂನು ಉಲ್ಲಂಘಿಸಿದರೂ ಬಂಧಿಸುತ್ತೇವೆ. ಅವರು ಕರಸೇವಕರೇ ಆಗಿರಲಿ, ಸ್ವಯಂಸೇವಕರೇ ಆಗಿರಲಿ, ನಾನೇ ಆಗಿರಲಿ. ಎಲ್ಲರಿಗೂ ಒಂದೇ ನ್ಯಾಯ.

ರಾಮಮಂದಿರ ನಿರ್ಮಾಣ ಆಯಿತು. ರಾಮರಾಜ್ಯವೂ ನಿರ್ಮಾಣ ಆಗಬೇಕಲ್ಲವೆ? ಉದ್ಯೋಗ ಸೃಷ್ಟಿ, ರೈತರು, ಕಾರ್ಮಿಕರು, ಮಹಿಳೆಯರ ಜೀವನಮಟ್ಟ ಸುಧಾರಣೆಯ ಬಗ್ಗೆ ಯಾವತ್ತಾದರೂ ಬಿಜೆಪಿ ನಾಯಕರು ಯೋಚಿಸಿದ್ದಾರೆಯೆ? 15ನೇ ಹಣಕಾಸು ಆಯೋಗದ ಅನುದಾನ ಹಾಗೂ ಸರಕು ಮತ್ತು ಸೇವಾ ತೆರಿಗೆಯ ಹಂಚಿಕೆಯಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯ, ವಿಪತ್ತು ಪರಿಹಾರ ನಿಧಿಯಡಿ ನೆರವು ನೀಡುವುದರಲ್ಲಿನ ವಿಳಂಬದ ಬಗ್ಗೆ ಏಕೆ ಬಿಜೆಪಿ ನಾಯಕರು ಮೌನ ವಹಿಸಿದ್ದಾರೆ? ಧರ್ಮದ ಹೆಸರಿನಲ್ಲಿ ಜನರ ದಿಕ್ಕು ತಪ್ಪಿಸುವ ಬಿಜೆಪಿ ನಾಯಕರು ತಮ್ಮ ಮಕ್ಕಳನ್ನು ಧರ್ಮ ರಕ್ಷಣೆ, ಗೋರಕ್ಷಣೆ ಮತ್ತು ಗೋಶಾಲೆಗಳ ಕೆಲಸಕ್ಕೆ ಏಕೆ ನಿಯೋಜಿಸುವುದಿಲ್ಲ? ಇವರ ಮಕ್ಕಳೆಲ್ಲರೂ ಒಳ್ಳೆಯ ಶಿಕ್ಷಣ, ಉದ್ಯೋಗ ಪಡೆಯಬೇಕು. ವಿದೇಶದಲ್ಲೇ ಓದಬೇಕು. ನವೋದ್ಯಮಗಳನ್ನು ಸ್ಥಾಪಿಸಬೇಕು. ಕಾರು, ಬಂಗಲೆ ಹೊಂದಿರಬೇಕು. ಬಡವರ ಮಕ್ಕಳು ಬೀದಿಯಲ್ಲಿ ನಿಂತು ಬಡಿದಾಡಿ, ಪ್ರಾಣ ಬಿಡಬೇಕು ಎಂಬುದು ಬಿಜೆಪಿ ನಾಯಕರ ಧೋರಣೆ. ಅದರ ಭಾಗವಾಗಿಯೇ ಇಂತಹ ಘಟನೆಗಳನ್ನು ಮುಂದಿಟ್ಟುಕೊಂಡು ಜನರನ್ನು ಪ್ರಚೋದಿಸುವ ಕೆಲಸ ಮಾಡುತ್ತಿದ್ದಾರೆ. ಬಡ ಹಿಂದುಳಿದ, ದಲಿತ ಯುವಕರನ್ನು ಬಿಜೆಪಿ ರಾಜಕೀಯ ದಾಳವಾಗಿ ಬಳಸಿಕೊಳ್ಳುತ್ತದೆ ಎನ್ನುವುದಕ್ಕೆ ಪರೇಶ್ ಮೇಸ್ತ ಪ್ರಕರಣಕ್ಕಿಂತ ಬೇರೆ ಸಾಕ್ಷ್ಯ ಬೇಕೆ?

ರಾಮಾಯಣವನ್ನು ನಿಜವಾಗಿಯೂ ಇವರು ಓದಿದ್ದರೆ ಇಂತಹ ಹೀನ ರಾಜಕೀಯ ಮಾಡುತ್ತಿರಲಿಲ್ಲ. 'ರಾವಣ ನನ್ನಿಂದ ಅಂತ್ಯವಾಗಲಿಲ್ಲ, ಅವನ ಅಹಂಕಾರವೇ ಅವನ ಅಂತ್ಯಕ್ಕೆ ಕಾರಣವಾಯಿತು' ಎಂದು ಶ್ರೀರಾಮ ಕೊನೆಯಲ್ಲಿ ಹೇಳುತ್ತಾನೆ. ಅದೇ ರೀತಿಯ ಅಹಂಕಾರದಿಂದ ಬಿಜೆಪಿ ವರ್ತಿಸುತ್ತಿದೆ. ಧೋರಣೆ ಬದಲಾಗದಿದ್ದರೆ ಅಹಂಕಾರವೇ ಬಿಜೆಪಿಯ ಅಂತ್ಯಕ್ಕೆ ಕಾರಣವಾಗುತ್ತದೆ.

ಲೇಖಕ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ

ನಿರೂಪಣೆ: ವಿ.ಎಸ್. ಸುಬ್ರಹ್ಮಣ್ಯ

ರಾಮಮಂದಿರ ಸಹಿಸದ ವಿಘ್ನ ಸಂತೋಷಿ ಕಾಂಗ್ರೆಸ್

● ಆರ್. ಅಶೋಕ



ಶ್ರೀರಾಮ ಜನ್ಮಭೂಮಿ ಅಯೋಧ್ಯೆಯಲ್ಲಿ ರಾಮಮಂದಿರದ ಉದ್ಘಾಟನೆಗೆ ಇನ್ನೇನು ಕೆಲವೇ ದಿನಗಳು ಬಾಕಿ ಇರುವಾಗಲೇ, ಅಚಾನಕ್ಕಾಗಿ ಕರ್ನಾಟಕ ಅಚ್ಚರಿಯ ಬೆಳವಣಿಗೆಗಳಿಗೆ ಸಾಕ್ಷಿಯಾಗುತ್ತಿದೆ. ಮೂರು ದಶಕಗಳ ಹಳೆಯ ಪ್ರಕರಣಗಳಿಗೆ ಮರುಜೀವ ಸಿಗುತ್ತಿರುವುದು, 1992ರ ರಾಮಜನ್ಮಭೂಮಿ ಹೋರಾಟದಲ್ಲಿ ಪಾಲ್ಗೊಂಡ ಕರಸೇವಕರ ಬಂಧನ, ಚಿಕ್ಕಮಗಳೂರಿನ ದತ್ತಪೀಠ ಪ್ರಕರಣದ ಮರುತನಿಖೆಯ ಗುಮಾನಿ, ರಾಜ್ಯದಲ್ಲಿ ಗೋಧ್ರಾ ರೀತಿ ಕೋಮುಗಲಭೆ ಸಂಭವಿಸಬಹುದು ಎಂದು ಕಾಂಗ್ರೆಸ್ ನಾಯಕರೊಬ್ಬರ ಹೇಳಿಕೆ, ಇವೆಲ್ಲವನ್ನೂ ಗಮನಿಸಿದರೆ ಇದರ ಹಿಂದೆ ಆಡಳಿತ ಪಕ್ಷ ಹಾಗೂ ರಾಜ್ಯ ಸರ್ಕಾರದ ಪೂರ್ವನಿಯೋಜಿತ ಷಡ್ಯಂತ್ರ ಇರುವುದು ಸ್ಪಷ್ಟವಾಗುತ್ತದೆ. ಇದಕ್ಕೆಲ್ಲಾ ಪುಷ್ಟಿ ನೀಡುವಂತೆ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಈ ಸಂದರ್ಭದಲ್ಲಿ ಹಳೆಯ ಕೇಸುಗಳನ್ನು ಕೆದಕುವ ಅಗತ್ಯ ಇತ್ತೇ ಎಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಅಯೋಧ್ಯೆಯ ರಾಮಜನ್ಮಭೂಮಿ ವಿವಾದ ಈ ದೇಶದ ಸರ್ವೋಚ್ಚ ನ್ಯಾಯಾಲಯದಲ್ಲಿ ತಾರ್ಕಿಕ ಅಂತ್ಯ ಕಂಡಿದೆ. ಈಗ ಅದು ವಿವಾದವಲ್ಲ. ಕೋಟ್ಯಂತರ ಶ್ರದ್ಧಾಳು ಹಿಂದೂಗಳು ಸಂಭ್ರಮ ಪಡುತ್ತಿರುವ ಸಂತೋಷದ ವಿಷಯ. ರಾಮಮಂದಿರದ ವಿಷಯವನ್ನು ಬಿಜೆಪಿ ರಾಜಕೀಯಕ್ಕೆ ಬಳಸಿಕೊಳ್ಳುತ್ತಿದೆ ಎಂದು ಟೀಕೆ ಮಾಡಿದರೆ ಮಾಡಲಿ. ಏಕೆಂದರೆ ಬಿಜೆಪಿ ಬಹಳ ಹಿಂದಿನಿಂದಲೇ ಮಂದಿರ ನಿರ್ಮಾಣಕ್ಕಾಗಿ ಹೋರಾಟ ನಡೆಸಿದೆ. ಚುನಾವಣೆ ಬರಲಿ, ಬರದೇ ಇರಲಿ, ಎಲ್ಲ ಸಂದರ್ಭದಲ್ಲೂ ಮಂದಿರ ನಿರ್ಮಾಣದ ಪ್ರಯತ್ನಕ್ಕೆ ಶತ ಪ್ರಯತ್ನ ಮಾಡುತ್ತಲೇ ಬಂದಿದ್ದೇವೆ. ಆದರೆ ಕಾಂಗ್ರೆಸ್ ಮಂದಿರ ನಿರ್ಮಾಣದಲ್ಲಿ ಕೈ ಜೋಡಿಸುವುದಿಲ್ಲ, ಉದ್ಘಾಟನಾ ಕಾರ್ಯಕ್ರಮಕ್ಕೆ ಬರುವುದಿಲ್ಲ, ಕಾರ್ಯಕ್ರಮಕ್ಕೆ ಹೋಗುವವರಿಗೂ ಬಿಡುವುದಿಲ್ಲ ಎಂಬ ಧೋರಣೆ ತಳೆದಿರುವುದು ಈ ನೆಲದ ಪರಂಪರೆ, ಸಂಸ್ಕೃತಿಗೆ ಮಾಡುವ ಘೋರ ಅಪಮಾನ. ಬಿಜೆಪಿಯನ್ನು ಕೋಮುವಾದಿ ಎಂದು ಟೀಕಿಸುವ ಕಾಂಗ್ರೆಸ್ ವಾಸ್ತವದಲ್ಲಿ ಕೋಮುವಾದಿ ಮನಃಸ್ಥಿತಿ ಹೊಂದಿದೆ. ಮಂದಿರ ಉದ್ಘಾಟನೆಯ ಶ್ರೇಯಸ್ಸು ಬಿಜೆಪಿಗೆ ದೊರೆತಿದೆ ಎಂದು ಕರುಬುವ ಇವರು, ತಾವೇ ಮುಂದೆ ಬಂದು ಮಂದಿರ ನಿರ್ಮಾಣಕ್ಕೆ ಕೈ ಜೋಡಿಸಿ ಕೀರ್ತಿ ಪತಾಕೆ ಹಾರಿಸಿಕೊಳ್ಳಬಹುದಿತ್ತು.

ಹುಬ್ಬಳ್ಳಿಯ ಕರಸೇವಕ ಶ್ರೀಕಾಂತ್ ಪೂಜಾರಿಯ ವಿರುದ್ಧ 16 ಪ್ರಕರಣಗಳಿವೆ ಎಂದು ಪೊಲೀಸರು ಹಾಗೂ ಸಚಿವರು ಹೇಳಿದರೂ ವಾಸ್ತವವಾಗಿ 15 ಪ್ರಕರಣಗಳಿಗೆ ತಾರ್ಕಿಕ ಅಂತ್ಯ ದೊರಕಿದ್ದು ಒಂದು ಪ್ರಕರಣ ಮಾತ್ರ ಚಾಲ್ತಿಯಲ್ಲಿದೆ. ಅದು ಕೂಡ 31 ವರ್ಷಗಳ ಹಿಂದೆ, 1992ರಲ್ಲಿ ಅವರು ತಲೆಮರಿಸಿಕೊಂಡಿದ್ದರು ಎನ್ನುವ ಪ್ರಕರಣ. ಆದರೆ 2004, 2009, 2018ರಲ್ಲಿ ಶ್ರೀಕಾಂತ್‌ರನ್ನು ಠಾಣೆಗೆ ಕರೆಸಿಕೊಂಡು ಮುಚ್ಚಳಿಕೆ ಬರೆಸಿಕೊಳ್ಳಲಾಗಿದೆ. ತಲೆಮರೆಸಿಕೊಂಡಿದ್ದರೆ ಇವೆಲ್ಲ ಹೇಗೆ ಸಾಧ್ಯವಾಯಿತು ಎಂದು ಪೊಲೀಸರೇ ಹೇಳಬೇಕು. ಆಟೊರಿಕ್ಷಾ ಚಲಾಯಿಸಿಕೊಂಡು ಪ್ರಾಮಾಣಿಕವಾಗಿ ದುಡಿಯುತ್ತಿದ್ದ ಶ್ರೀಕಾಂತ್ ತಲೆಮರೆಸಿಕೊಳ್ಳದೆ ಹುಬ್ಬಳ್ಳಿಯಲ್ಲಿ ನೆಮ್ಮದಿಯಾಗಿ ಬದುಕುತ್ತಿದ್ದರು ಎನ್ನುವುದು ಪೊಲೀಸರಿಗೂ ಗೊತ್ತಿರುವ ಸಂಗತಿ.

ಹಳೆಯ ಪ್ರಕರಣಗಳನ್ನು ಕೆದಕಲು ಸರ್ಕಾರಕ್ಕೆ ಅಷ್ಟೊಂದು ಆಸಕ್ತಿ ಇದ್ದರೆ ರಾಜ್ಯದಲ್ಲಿ ಬಾಕಿ ಇರುವ ಸುಮಾರು 50 ಸಾವಿರ ಪ್ರಕರಣಗಳನ್ನು ತ್ವರಿತವಾಗಿ ವಿಚಾರಣೆ ನಡೆಸಲು ಕ್ರಮ ವಹಿಸಲಿ. ಬೆಂಗಳೂರಿನಲ್ಲಿ 10 ಸಾವಿರದಷ್ಟು ಪ್ರಕರಣಗಳಿದ್ದು, ಅವುಗಳ ವಿಚಾರಣೆಯನ್ನೂ ನಡೆಸಿ ಕಾನೂನು ವ್ಯವಸ್ಥೆಯ ಮೇಲಿನ ಭಾರ ಇಳಿಸಿಕೊಳ್ಳಲಿ. ರಾಮಭಕ್ತರನ್ನು ಬೆದರಿಸುವ ಕುಕೃತ್ಯಕ್ಕೆ ಹಳೆಯ ಪ್ರಕರಣಗಳನ್ನು ಶೀಘ್ರ ಮುಗಿಸುವ ಮಹಾ ಸುಧಾರಣಾ ಪರ್ವದ ಹೆಸರು ಕೊಡುವುದು ಬೇಡ. ಒಂದು ವೇಳೆ ಶ್ರೀಕಾಂತ್ ಮೇಲಿನ ಪ್ರಕರಣಕ್ಕೆ ಅಂತ್ಯ ಕಾಣಿಸಬೇಕೆಂಬ ಉದ್ದೇಶವಿದ್ದರೆ ಮೊದಲು ನೋಟಿಸ್ ನೀಡಬೇಕಿತ್ತು, ಎಫ್‌ಐಆರ್ ಪ್ರತಿ ನೀಡಬೇಕಿತ್ತು. ಇವ್ಯಾವುದನ್ನೂ ಮಾಡದೆ ನ್ಯಾಯಾಲಯಕ್ಕೆ ರಜೆ ಇರುವಾಗ ಏಕಾಏಕಿ ಎಳೆದುಕೊಂಡು ಜೈಲಿಗೆ ಹಾಕಿರುವುದನ್ನು ನೋಡಿದರೆ ಇದು ಸಂಪೂರ್ಣ ರಾಜಕೀಯಪ್ರೇರಿತ ಎಂದು ತಿಳಿಯದಷ್ಟು ದಡ್ಡರು ಯಾರೂ ಇಲ್ಲ.

> ಹಳೆಯ ಪ್ರಕರಣಗಳನ್ನು ಕೆದಕಲು ಸರ್ಕಾರಕ್ಕೆ ಅಷ್ಟೊಂದು ಆಸಕ್ತಿ ಇದ್ದರೆ ರಾಜ್ಯದಲ್ಲಿ ಬಾಕಿ ಇರುವ ಸುಮಾರು 50 ಸಾವಿರ ಪ್ರಕರಣಗಳನ್ನು ತ್ವರಿತವಾಗಿ ವಿಚಾರಣೆ ನಡೆಸಲು ಕ್ರಮ ವಹಿಸಲಿ. ಬೆಂಗಳೂರಿನಲ್ಲಿ 10 ಸಾವಿರದಷ್ಟು ಪ್ರಕರಣಗಳಿದ್ದು, ಅವುಗಳ ವಿಚಾರಣೆಯನ್ನೂ ನಡೆಸಿ ಕಾನೂನು ವ್ಯವಸ್ಥೆಯ ಮೇಲಿನ ಭಾರ ಇಳಿಸಿಕೊಳ್ಳಲಿ. ರಾಮಭಕ್ತರನ್ನು ಬೆದರಿಸುವ ಕುಕೃತ್ಯಕ್ಕೆ ಹಳೆಯ ಪ್ರಕರಣಗಳನ್ನು ಶೀಘ್ರ ಮುಗಿಸುವ ಮಹಾ ಸುಧಾರಣಾ ಪರ್ವದ ಹೆಸರು ಕೊಡುವುದು ಬೇಡ

ಪಿಎಫ್‌ಐ, ಎಸ್‌ಡಿಪಿಐ ಮೊದಲಾದ ದೇಶದ್ರೋಹಿ ಸಂಘಟನೆಗಳ ಬಗ್ಗೆ ಮೃದು ಧೋರಣೆ ಹೊಂದಿರುವ ಕಾಂಗ್ರೆಸ್, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮೊದಲ ಅವಧಿಯಲ್ಲಿ ಈ ಸಂಘಟನೆಗಳ ದುಷ್ಕೃತ್ಯಗಳಿಗೆ ಪರೋಕ್ಷವಾಗಿ ಬೆಂಬಲ ನೀಡಿತ್ತು. 2009ರ ಜುಲೈನಲ್ಲಿ ಶಿವಮೊಗ್ಗ ಮತ್ತು ಮೈಸೂರಿನಲ್ಲಿ ಗಲಭೆ ನಡೆಸಿದ್ದಕ್ಕೆ ಬಿಜೆಪಿ ಸರ್ಕಾರ ಪಿಎಫ್‌ಐ ಹಾಗೂ ಕೆಎಫ್‌ಡಿಯ 1,600 ಕಾರ್ಯಕರ್ತರ ವಿರುದ್ಧ 175 ಪ್ರಕರಣಗಳನ್ನು ದಾಖಲಿಸಿತ್ತು. ಅದರ ವಿರುದ್ಧ ಪೊಲೀಸ್ ಮಹಾನಿರ್ದೇಶಕರು ಹಾಗೂ ಕಾನೂನು ಇಲಾಖೆ ಕಾರ್ಯದರ್ಶಿ ನೀಡಿದ್ದ ಸಲಹೆಯನ್ನು ಬದಿಗಿಟ್ಟ ಕಾಂಗ್ರೆಸ್ ಸರ್ಕಾರ, 2015ರ ಜೂನ್ 1ರಂದು ಪ್ರಕರಣಗಳನ್ನು ಹಿಂಪಡೆಯಲು ಆದೇಶಿಸಿತ್ತು.

ಕೆಜಿ ಹಳ್ಳಿ, ಡಿಜೆ ಹಳ್ಳಿ ಗಲಭೆ ಪ್ರಕರಣಗಳನ್ನು ವಾಪಸ್ ಪಡೆಯುವಂತೆ ಶಾಸಕ ತನ್ವೀರ್ ಸೇಠ್ ಪತ್ರ ಬರೆದಾಗ ಅದಕ್ಕೆ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿದೆ. ಕೆಲವರ ವಿರುದ್ಧ ಸುಳ್ಳು ದೋಷಾರೋಪ ಮಾಡಿದ್ದು, ಈ ವಿಚಾರವನ್ನು ಪರಿಶೀಲಿಸುವಂತೆ ಸಂಪುಟ ಉಪ ಸಮಿತಿಗೆ ತಿಳಿಸಿದ್ದೇವೆ ಎಂದು ಗೃಹ ಸಚಿವರು ಹೇಳಿದ್ದಾರೆ. 'ಮುಸಲ್ಮಾನರಿಗೆ ವಿನಾಯಿತಿ, ಹಿಂದೂಗಳಿಗೆ ಜೈಲೇ ಗತಿ' ಎನ್ನುವ ಈ ಮನಃಸ್ಥಿತಿಯನ್ನು ಬಿಜೆಪಿ ತೀವ್ರವಾಗಿ ವಿರೋಧಿಸುತ್ತದೆ.

ರಾಮಮಂದಿರ ಉದ್ಘಾಟನೆಗೆ ಕೆಲವು ದಿನಗಳು ಇರುವಾಗ ಸಮಯ ನೋಡಿಕೊಂಡು ಪೂರ್ವಯೋಜಿತವಾಗಿ ಕಾಂಗ್ರೆಸ್ ಈ ಕೆಲಸ ಮಾಡಿದೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಈ ಮೂಲಕ ಕರಸೇವಕರು ಹಾಗೂ ರಾಮಭಕ್ತರು ಮಂದಿರ ಉದ್ಘಾಟನೆಗೆ ಹೋಗಬಾರದು, ಹಿಂದೂ ಧರ್ಮ ರಕ್ಷಣೆ ಸಂಬಂಧಿತ ಹೋರಾಟಗಳಲ್ಲಿ ಪಾಲ್ಗೊಳ್ಳಬಾರದು ಎಂಬ ಸಂದೇಶ ರವಾನಿಸುವುದೇ ಕಾಂಗ್ರೆಸ್ ಸರ್ಕಾರದ ಉದ್ದೇಶ. ಇದರ ಜೊತೆಗೆ ಬಾಬರಿ ಮಸೀದಿ ನೆಲಸಮವಾಗಿದ್ದಕ್ಕೆ ಬೇಸರಗೊಂಡಿರುವವರ ಮನಸ್ಸುಗಳನ್ನೂ ತೃಪ್ತಿ ಪಡಿಸುವ ಉದ್ದೇಶ ಇದ್ದಂತಿದೆ. ಮಂದಿರ ನಿರ್ಮಾಣವಂತೂ ತಡೆಯಲು ಸಾಧ್ಯವಾಗಿಲ್ಲ, ಕನಿಷ್ಠಪಕ್ಷ ಕರಸೇವಕರಿಗೆ ತಕ್ಕ ಪಾಠ ಕಲಿಸಿದ್ದೇವೆ ಎಂದು ತಮ್ಮ ಮತ ಬ್ಯಾಂಕ್‌ಗಳಿಗೆ ಸಂತೈಸಲು ಹೊರಟಿದೆ.

ಯಾರೇನೇ ಮಾಡಿದರೂ ರಾಮಮಂದಿರ ಉದ್ಘಾಟನೆಯಾಗುವುದನ್ನಾಗಲೀ, ಭಕ್ತರು ಶ್ರೀರಾಮನನ್ನು ಬರಮಾಡಿಕೊಳ್ಳುವುದನ್ನಾಗಲೀ ತಪ್ಪಿಸಲು ಸಾಧ್ಯವಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈಗಾಲಾದರೂ ಎಚ್ಚೆತ್ತುಕೊಂಡು ಕರಸೇವಕರ ಮೇಲಿನ ಅನಗತ್ಯ ಕಾನೂನು ಕ್ರಮವನ್ನು ವಾಪಸ್ ಪಡೆಯಲಿ. ಇಲ್ಲವಾದರೆ ಬಿಜೆಪಿಯಿಂದ ಹಾಗೂ ಅಸಂಖ್ಯಾತ ರಾಮಭಕ್ತರಿಂದ ಇನ್ನಷ್ಟು ಪ್ರತಿರೋಧ ಎದುರಿಸಲು ಸಿದ್ಧವಾಗಲಿ.

ಲೇಖಕ: ವಿಧಾನಸಭೆಯ ವಿರೋಧ ಪಕ್ಷದ ನಾಯಕ

ನಾವು ನೋಡಿದ ಸಿನಿಮಾ

ಟಿ.ವಿ. ಹಾಸ್ಯದ 'ಹ್ಯಾಂಗ್‌ಓವರ್'

ಆನ್‌ಲೈನ್ ಮದುವೆ ಆಫ್‌ಲೈನ್ ಶೋಭನ (ಕನ್ನಡ)

- **ನಿರ್ದೇಶನ:** ವೇಂಪಲ್ಲಿ ಬಾವಾಜಿ
- **ನಿರ್ಮಾಣ:** ಅಪ್ಸರ ಮೂವೀಸ್
- **ತಾರಾಗಣ:** ಜಗ್ಗಪ್ಪ, ಸುಶ್ಮಿತ, ಸೀರುಂಡೆ ರಘು ಮತ್ತಿತರರು



ಚಿತ್ರದ ಶೀರ್ಷಿಕೆಯೇ ಹೇಳುವಂತೆ ಇದು ಆನ್‌ಲೈನ್ ಮದುವೆಯಿಂದಾಗುವ ಎಡವಟ್ಟಿನ ಕಥೆ. ಎಷ್ಟು ವರ್ಷವಾದರೂ ತಮಗೆ ತಕ್ಕ ಜೋಡಿ ಸಿಗದ ನಾಯಕ ಶ್ಯಾಮ ಹಾಗೂ ನಾಯಕಿ ಸತ್ಯಭಾಮ ಆನ್‌ಲೈನ್‌ನಲ್ಲಿ ಮದುವೆಯಾಗುತ್ತಾರೆ. ಇಬ್ಬರದ್ದೂ ಒಂದೊಂದು ರೀತಿಯ ವ್ಯಕ್ತಿತ್ವ. ತಮ್ಮ ನಿರೀಕ್ಷೆಗೆ ತಕ್ಕ ಸಂಗಾತಿ ಸಿಗದೆ ಬದುಕಿನಲ್ಲಿ ಒದ್ದಾಡುತ್ತಿದ್ದವರಿಗೆ ಆನ್‌ಲೈನ್‌ನಲ್ಲಿ ಮದುವೆ ಮಾಡಿಸುವ ಆ್ಯಪ್ ಒಂದು ವರವಾಗಿ ಪರಿಣಮಿಸುತ್ತದೆ.

ಖಾಸಗಿ ವಾಹಿನಿಗಳ ಹಾಸ್ಯಭರಿತ ರಿಯಾಲಿಟಿ ಶೋಗಳ ಕಲಾವಿದರೇ ಚಿತ್ರದ ಪ್ರಮುಖ ಪಾತ್ರಗಳಲ್ಲಿದ್ದಾರೆ. ಈ ಶೋಗಳಿಂದಲೇ ಜನಪ್ರಿಯರಾದ ಜಗ್ಗಪ್ಪ ಮತ್ತು ಸುಶ್ಮಿತ ಚಿತ್ರದ ನಾಯಕ, ನಾಯಕಿ. ಹೀಗಾಗಿ ಇಡೀ ಚಿತ್ರದ ಉದ್ದೇಶವೇ ನಗಿಸುವುದು ಎಂಬುದನ್ನು ನಿರ್ದೇಶಕ ವೇಂಪಲ್ಲಿ ಬಾವಾಜಿ ಪ್ರಾರಂಭದ ದೃಶ್ಯದಲ್ಲಿಯೇ ತೋರಿಸಿಬಿಡುತ್ತಾರೆ. ಸಿನಿಮಾದ ಸಾಕಷ್ಟು ದೃಶ್ಯಗಳು ರಿಯಾಲಿಟಿ ಶೋನಂತೆ ನಾಟಕೀಯ ಎನ್ನಿಸಿದರೂ ನಗು ತರಿಸುತ್ತವೆ. ಇಡೀ ಚಿತ್ರಕಥೆಯನ್ನು ರಿಯಾಲಿಟಿ ಶೋದ ಸ್ಕಿಟ್‌ನಂತೆ ಹೆಣೆದಿರುವುದು ಚಿತ್ರದ ಓಘಕ್ಕೆ ಅಡ್ಡಿಯುಂಟು ಮಾಡುತ್ತದೆ.

ಜಗ್ಗಪ್ಪ, ಸುಶ್ಮಿತ, ಸೀರುಂಡೆ ರಘು, ಗಜೇಂದ್ರ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿ ನಗು ತರಿಸುತ್ತಾರೆ. ಸೀರಿಯಲ್ ಪ್ರೇಮಿಯಾಗಿ ಸುಶ್ಮಿತ ಪಾತ್ರವೇ ಅತಿಯೆನಿಸುವಂತಿದೆ. ಇದ್ದಕ್ಕಿದ್ದಂತೆ ಮಾರಿಯಂತೆ ಆಡುವ ತಮ್ಮ ಪಾತ್ರವನ್ನು ಶಕ್ತವಾಗಿ ನಿಭಾಯಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಶೋಭನಕ್ಕಾಗಿ ಹಪಹಪಿಸುವ ಅಸಹಾಯಕ ಗಂಡನ ಪಾತ್ರದಲ್ಲಿ ಜಗ್ಗಪ್ಪ ಇಷ್ಟವಾಗುತ್ತಾರೆ. ಯೂಟ್ಯೂಬರ್ ಪಾತ್ರದಲ್ಲಿ ರಘು ಸಮಯೋಚಿತವಾಗಿ ನಟಿಸಿದ್ದಾರೆ. ಎಲ್ಲರ ಹಾವಭಾವಗಳು ಕೂಡ ಪಾತ್ರಕ್ಕೆ ತಕ್ಕಂತಿವೆ. ಆನ್‌ಲೈನ್‌ನಲ್ಲಿ ಮದುವೆಯಾದ ಜೋಡಿಯ ಆಫ್‌ಲೈನ್ ಶೋಭನಕ್ಕೆ ನೂರೆಂಟು ಅಡ್ಡಿಗಳು. ಈ ಅಡೆತಡೆಗಳನ್ನು ಪುನರಾವರ್ತನೆಯಾಗದಂತೆ ಹೆಣೆಯುವ ಅವಕಾಶ ನಿರ್ದೇಶಕರಿಗಿತ್ತು. ಅವವೇ ವಿಷಯಗಳ ಪುನರಾವರ್ತನೆ ನಗುವಿನ ನಡುವೆ ಅಲ್ಲಲ್ಲಿ ಕಿರಿಕಿರಿಯುಂಟು ಮಾಡುತ್ತದೆ.

ಚಿತ್ರದ ಪರಿಕಲ್ಪನೆ ಹೊಸತಾಗಿದೆ. ಅದನ್ನು ಹೊಸತಾಗಿ ನಿರೂಪಿಸುವ ಅವಕಾಶವನ್ನು ನಿರ್ದೇಶಕರು ಕೈಚೆಲ್ಲಿದ್ದಾರೆ. ಇಡೀ ಕಥೆ ಮನೆಯ ನಾಲ್ಕು ಗೋಡೆ ಬಿಟ್ಟು ಹೆಚ್ಚು ಕಾಲ ಆಚೆ ಬರುವುದಿಲ್ಲ. ಹೀಗಾಗಿ ಚಿತ್ರದಲ್ಲಿ ಛಾಯಾಗ್ರಾಹಕ ಬಾಲು ಕೈಚಳಕ ಕಾಣಿಸುವುದಿಲ್ಲ. ಹಾಸ್ಯ ಸನ್ನಿವೇಶಗಳ ಹಿನ್ನೆಲೆ ಸಂಗೀತ ಕೂಡ ಹೊಸತೆನಿಸುವುದಿಲ್ಲ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5552

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇಂದ್ರಿಯಗಳ ಮೂಲಕ ಬರುವ ಜ್ಞಾನ (4)
3.ಸುಗಂಧಲೇಪನ ದ್ರವ್ಯ (4)
5.ಕನಸಲ್ಲ! ದಿಟ! (3)
7.ಯಾಮಾರಿದ್ದಕ್ಕೇ ಉಗ್ರವಾದ ಹೊಡೆದಾಟ (4)
8.ರತ್ನಗಳನ್ನು ಕುಂದಣಿಸಿದ ಆಸನ (7)
11.ನೆರೆಮನೆಯವ ಸೇರಿದ ಜೈಲು (4)
12.ಮರದ ಮೆಟ್ಟು (3)
14.ಒಳ್ಳೆಯದನ್ನು ಮೆಚ್ಚತಕ್ಕವನು (4)
15.ಕರದಲ್ಲಿರುವ ಚಿನ್ನ (4)

ಮೇಲಿಂದಕೆಳಕ್ಕೆ

1.ತುಂಬಾ ಹದಗೆಟ್ಟ ಸ್ಥಿತಿ (3)
2.ಬಹುಮಾನ ಅಥವಾ ಇನಾಮು (3)
4.ದೊಡ್ಡ ಹಾರೆಯಿದು (3)
6.ನಿರಾಕರಿಸುವಿಕೆಯನ್ನು ಹೀಗೆನ್ನಿ (3)
7.ಮಾರುತ್ತಿದ್ದಾಗ ಬೀಸಿದ ಗಾಳಿ (3)
9.ಬೊಕ್ಕಸ ಇಲ್ಲಿದೆ (3)
10.ರಾವು ಬಡಿದಾಗ ಹೊರಬಿದ್ದ ತೀರ್ಪು! (3)
11.ಸೀರೆಯ ಹೊದೆಯುವ ಭಾಗ (3)
12.ಹೊಳೆಯನ್ನು ದಾಟುವ ಸ್ಥಳ (3)
13.ಕೀವು ಇಲ್ಲಿ ಉಲ್ಟಾಪಲ್ಟಾ ಕಾಣುತ್ತಿದೆ (3)

1		2		■	3			4
	■		■	■	■	■	■	
5	6		■	■	7			
■		■	■	■		■	■	■
■	8		9				10	■
■	■	■		■	■	■		■
11				■	■	12		13
	■	■	■	■	■		■	
14				■	15			

5551ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಏರುಪೇರು
3.ಅಭಾಗಿನಿ 5.ಕಗ್ಗೊಲೆ
6.ಕರ 8.ಉರ
9.ಸಭಾತ್ಯಾಗ
11.ಸಸ್ಯಹಾರ 12.ನಾಳ
13.ಣಬಾ 15.ಮನವಿ
17.ಕಲಗಚ್ಚು 18.ಕನ್ನಡಕ

ಮೇಲಿಂದ ಕೆಳಕ್ಕೆ:
1.ಏಕೈಕ 2.ರುಕ
3.ಅಲೆ 4.ನಿರ್ಭರ
7.ರಸಕವಳ
8.ಉಪಕರಣ 10.ಗಲಸ
12.ನಾವಿಕ 14.ಬಾಲಕ
15.ಮಚ್ಚು 16.ವಿಕ

ಸುಡೊಕು 5937

				7			4	
		4	6	2	8			9
7	6			1				
						6	7	
6		1	7		2			4
								1
9				6		5		
	3	6	2		5			7
8		5		4			6	3

5936 ಸುಡೊಕು

4	8	1	6	9	7	5	2	3
6	7	5	3	2	4	9	1	8
3	9	2	1	8	5	4	7	6
9	6	4	8	1	3	2	5	7
7	5	3	4	6	2	1	8	9
2	1	8	7	5	9	3	6	4
1	2	7	9	4	6	8	3	5
5	3	9	2	7	8	6	4	1
8	4	6	5	3	1	7	9	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜನವರಿ 6, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ದಶಮಿ ಗಂ. 24-42 ನಕ್ಷತ್ರ: ಸ್ವಾತಿ ಗಂ. 21-23 ಯೋಗ: ಸುಕರ್ಮ ಗಂ. 06-47 ನಂತರ ಧೃತಿ 30-10 ಕರಣ: ವಣಿಜ ಗಂ. 12-21, ಧನು ಮಾಸದ 21 ನೇ ದಿನ, ಮಳೆನಕ್ಷತ್ರ: ಪೂರ್ವಾಷಾಢ 3. ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-59 ಸೂರ್ಯಾಸ್ತ : 06-14
ಮುಸ್ಲಿಂ ದಿನಾಂಕ : 23 ಜುಮಾದುಸ್ಸಾನಿ , ದಿನ ವಿಶೇಷ : ಪಾರ್ಶ್ವನಾಥರ ಜನ್ಮದಿನ (ಜೈನ್), ಎಪಿಫನಿ (ಕ್ರಿಶ್ಚಿಯನ್), ಅದೃಷ್ಟ ಸಂಖ್ಯೆ : 7, 9

ಮೇಷ: ವಾಣಿಜ್ಯ ಇಲಾಖೆಯ ಅಧಿಕಾರಿಗಳಿಗೆ ಇಂದು ಸರ್ಕಾರದಿಂದ ಅನುಕೂಲ ಉಂಟಾಗುವುದು. ರಾಜಕೀಯ ಭವಿಷ್ಯದ ಬಗ್ಗೆ ನಿರ್ಧಾರ ಕೈಗೊಳ್ಳಲು ಚಿಂತನೆ ನಡೆಸುವಿರಿ. ಮೆಕ್ಯಾನಿಕ್ ಕೆಲಸಗಾರರಿಗೆ ಅಧಿಕ ವರಮಾನ.

ವೃಷಭ: ಪ್ರಸ್ತುತ ಕೆಲಸದಲ್ಲೇ ಮುಂದುವರಿಯುವುದರಿಂದ ಧನ ಮತ್ತು ಗೌರವ ಸಂಪಾದನೆಯ ಅವಕಾಶಗಳನ್ನು ಪಡೆಯುವಿರಿ. ಯಾವುದೇ ಬದಲಾವಣೆ ಸರಿಯಲ್ಲ. ಏಳಿಗೆಯು ಹತ್ತಾರು ಶತ್ರುಗಳನ್ನು ಹುಟ್ಟಿಸಲಿದೆ.

ಮಿಥುನ: ಹೋಟೆಲ್ ಉದ್ಯಮದವರಿಗೆ ನಿತ್ಯದ ಆದಾಯದಲ್ಲಿ ಬಹಳ ವ್ಯತ್ಯಾಸ ಉಂಟಾಗುವುದು. ಕುಟುಂಬ ಅಭಿವೃದ್ಧಿಗೆ ಉತ್ತಮ ಯೋಚನೆಗಳು ಬರಲಿದೆ, ಪ್ರಯೋಜನಾಕಾರಿಯಾಗಿ ಉಪಯೋಗಿಸಿಕೊಳ್ಳಿ.

ಕರ್ಕಾಟಕ: ಆರೋಗ್ಯದಲ್ಲಾಗುವ ಬದಲಾವಣೆಗೆ ನಿಮ್ಮ ಆಹಾರವೇ ಮುಖ್ಯ ಕಾರಣ. ವ್ಯಾಪಾರ ವ್ಯವಹಾರದಲ್ಲಿ ಮಧ್ಯವರ್ತಿಗಳ ಉಪಟಳಕ್ಕೆ ಗುರಿಯಾಗುವ ಸಾಧ್ಯತೆ. ಕ್ರೀಡಾಪಟುಗಳು ಜಯವನ್ನು ಗಳಿಸುವಿರಿ.

ಸಿಂಹ: ಸಂಸ್ಥೆಯಿಂದ ಹೆಚ್ಚಿನ ತರಬೇತಿ ಪಡೆದುಕೊಳ್ಳುವ ಅವಕಾಶಗಳು ಎದುರಾದಲ್ಲಿ ಸದುಪಯೋಗ ಪಡಿಸಿಕೊಳ್ಳಿ. ನಿವೇಶನ ಕೊಳ್ಳಲು ಸೂಕ್ತಸ್ಥಳದ ಹುಡುಕಾಟ ನಡೆಸುವಿರಿ.

ಕನ್ಯಾ: ಬಾಕಿಯಿದ್ದ ವ್ಯಾಜ್ಯಗಳು ಒಡಹುಟ್ಟಿದವರ ಸಹಾಯದಿಂದ ಬಗೆಹರಿಯುವವು. ಸಾಂಸಾರಿಕ ಬದುಕಿನಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದು ಬದುಕಿಗೆ ದಾರಿಯಾಗುತ್ತದೆ. ಹೆಂಡತಿಯ ಮಾತು ಮುಖ್ಯವೆನಿಸುತ್ತದೆ.

ತುಲಾ: ಯಶಸ್ಸಿನ ಹಾದಿಯಲ್ಲಿದ್ದೀರಿ. ಯಶಸ್ಸಿಗೆ ಕಾರಣರಾದವರನ್ನು ಕಾರ್ಯ ಮುಗಿಯುವವರೆಗೆ ಜೊತೆಯಲ್ಲಿಯೆ ಇರಿಸಿಕೊಳ್ಳಿ. ತಡವಾದ ಹಾಗೂ ಬಾಕಿಯುಳಿದ ಕಾರ್ಯಕ್ಕೆ ಇಂದು ಹೊಸ ಜೀವ ಬರುವುದು.

ವೃಶ್ಚಿಕ: ಮನೆಯ ಪಿತ್ರಾರ್ಜಿತ ಆಸ್ತಿಯ ವ್ಯವಹಾರಗಳು ಒಂದು ಹಂತ ತಲುಪಿದ್ದಕ್ಕೆ ಸಮಾಧಾನವಾಗುವುದು. ಕೌಟುಂಬಿಕವಾಗಿ ನೆಮ್ಮದಿ ಪಡೆಯುವಿರಿ. ಧರ್ಮಕಾರ್ಯದಲ್ಲಿ ಆಸಕ್ತಿ ಹೆಚ್ಚಿದ್ದರಿಂದ ಶುಭಫಲ ಕಾಣುವಿರಿ.

ಧನು: ಜನರನ್ನು ಆಕರ್ಷಿಸುವ ಕಲೆ ಚೆನ್ನಾಗಿರುವುದರಿಂದ ಈ ದಿನ ನಿಮ್ಮೆಲ್ಲಾ ಕೆಲಸ ಕಾರ್ಯಗಳಲ್ಲಿ ಅತಿ ಹೆಚ್ಚಿನ ಪ್ರಗತಿಯನ್ನು ಕಾಣುವಿರಿ. ಈ ದಿನ ಕೃಷಿ ಕಾರ್ಮಿಕರಿಗೆ ಕೆಲಸದಲ್ಲಿ ಬಿಡುವಿಲ್ಲದಂತೆ ಆಗುತ್ತದೆ.

ಮಕರ: ಶ್ವಾಸಕೋಶಕ್ಕೆ ಸಂಬಂಧಪಟ್ಟ ಕಾಯಿಲೆಗಳು ಕಂಡುಬಂದರೆ, ತಕ್ಷಣವೇ ವೈದ್ಯರನ್ನು ಸಂಪರ್ಕಿಸಿ. ಬೋಧನೆಯಲ್ಲಿ ವಿಶೇಷವಾಗಿ ಸಾಧನೆ ಅಥವಾ ಹೆಸರನ್ನು ಸಂಪಾದಿಸುವಂತಾಗಲಿದೆ.


ಕುಂಭ: ನಿತ್ಯ ಬಳಕೆಯ ಅವಶ್ಯ ಉಪಕರಣಗಳ ಖರೀದಿಗಾಗಿ ಧನವ್ಯಯದ ಸಾಧ್ಯತೆ ಇದೆ. ಹೆಚ್ಚಿನ ಕ್ರಿಯಾತ್ಮಕ ಶಕ್ತಿ ಇದೆ. ಆದರೆ ಕೆಲಸಗಳು ಕಾರ್ಯಗತವಾಗಲು ಆತುರ ತೋರಬೇಡಿ. ಪುಣ್ಯಕ್ಷೇತ್ರಗಳ ದರ್ಶನದ ಯೋಗವಿದೆ.

ಮೀನ: ಈ ದಿನದ ಆಗುಹೋಗುಗಳ ಬಗ್ಗೆ ತಲೆಕೆಡಿಸಿ ಕೊಳ್ಳುವ ಅವಶ್ಯಕತೆ ಇಲ್ಲ. ಇದೆಲ್ಲವು ಕ್ಷಣಿಕ. ಬೆಲೆಬಾಳುವ ವಸ್ತು ಕಳೆದುಹೋಗುವ ಸಾಧ್ಯತೆಯಿದೆ. ಹೆಂಡತಿಗೆ ಹೊಸ ಉದ್ಯೋಗ ದೊರೆತು ಸಂತೋಷವಾಗುವುದು.

ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ನಾಯಕತ್ವದಲ್ಲೇ ಕಾಂಗ್ರೆಸ್ ಅಂತ್ಯ: ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ

‘ಮೋದಿಗೆ ಶ್ರೀರಾಮ: ಇವರಿಗೆ ಸಿದ್ದರಾಮ’

ಪ್ರಜಾವಾಣಿ ವಾರ್ತೆ



ದೇವೇಗೌಡ

ಬೆಂಗಳೂರು: ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಾಯಕತ್ವದಲ್ಲೇ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅಂತ್ಯ ಕಾಣಲಿದೆ ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ‘60 ವರ್ಷಗಳಿಂದ ರಾಜಕೀಯ ಮಾಡಿಕೊಂಡು ಬಂದಿದ್ದೇನೆ. ಕರ್ನಾಟಕ ದಲ್ಲಿ ಇವರು ಅಂತ್ಯ ಕಾಣುತ್ತಿದ್ದಾರೆ ಎಂದು ಇವತ್ತೇ ಹೇಳುತ್ತಿದ್ದೇನೆ. ನಾವು ಅವರನ್ನು ಸೋಲಿಸಿಯೇ ತೀರುತ್ತೇವೆ’ ಎಂದರು.

‘ಡಿಸಿಎಂ ಸಾಗಿಸಿದ ಹಣ ಎಷ್ಟು?’

ಉಪಮುಖ್ಯಮಂತ್ರಿಯವರು ಪಂಚರಾಜ್ಯ ಚುನಾವಣೆಯಲ್ಲಿ ಎಲ್ಲೆಲ್ಲಿಗೆ ಹೋಗಿದ್ದಾರೆ? ಎಷ್ಟು ಹಣ ಸಾಗಿಸಿದ್ದಾರೆ ಎಂಬ ಮಾಹಿತಿ ಎಲ್ಲರಿಗೂ ಗೊತ್ತಿದೆ ಎಂದು ದೇವೇಗೌಡ ಹೇಳಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೆಸರು ಉಲ್ಲೇಖಿಸದೇ ಮಾತನಾಡಿದ ಅವರು. ಕರ್ನಾಟಕದ ಸಂಪತ್ತು ಬೆಂಗಳೂರಿನಿಂದ ಎಲ್ಲಿಗೆ ಹೋಗಿದೆ? ಚುನಾವಣಾ ಆಯೋಗ ಎಷ್ಟು ಮೊತ್ತ ವಶಪಡಿಸಿಕೊಂಡಿದೆ ಎಂಬುದು ಜನರಿಗೆ ಗೊತ್ತಿದೆ ಎಂದರು.

ನೈಸ್ ಮಾತ್ರವಲ್ಲ; ಬೆಂಗಳೂರಿನ ಎಲ್ಲ ಸಂಸ್ಥೆಗಳು ಹಾಗೂ ಜಲಸಂಪನ್ಮೂಲ ಇಲಾಖೆ ಅವರ ಬಳಿಯೇ ಇದೆ. ಅಲ್ಲೆಲ್ಲ ಏನೇನು ಆಗುತ್ತಿದೆ ಎಂದು ಹೇಳಲು ನಾಚಿಕೆಯಾಗುತ್ತದೆ ಎಂದರು.

> **ಹಣ ಸಾಗಿಸಿದ್ದಾಗಿ ಆರೋಪ ಮಾಡಿರುವ ದೇವೇಗೌಡರು ಅದನ್ನು ನೋಡಿದ್ದಾರಾ? ಅದರ ಬಗ್ಗೆ ಅವರಿಗೆ ಮಾಹಿತಿ ಇದ್ದರೆ ಬಹಿರಂಗಪಡಿಸಲಿ**
> **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

ನೈಸ್ ಯೋಜನೆ ವಶಕ್ಕೆ ಪಡೆಯಲು ಆಗ್ರಹ

ನೈಸ್ ಕಂಪನಿಯ ವಶದಲ್ಲಿರುವ 13,404 ಎಕರೆ ರೈತರ ಜಮೀನನ್ನು ಸರ್ಕಾರ ವಶಕ್ಕೆ ಪಡೆಯಬೇಕು. ಅದನ್ನು ಮಾಡದೇ ಇದ್ದರೆ ಸಿದ್ದರಾಮಯ್ಯನವರ ರಾಜಕೀಯ ಜೀವನದಲ್ಲಿ ಇದೊಂದು ಕಪ್ಪುಚುಕ್ಕೆಯಾಗಿ ಉಳಿಯಲಿದೆ ಎಂದು ದೇವೇಗೌಡ ಹೇಳಿದರು.

ಅಕ್ಟೋಬರ್‌ನಲ್ಲಿ ಈ ಕುರಿತು ಸಿದ್ದರಾಮಯ್ಯ ಅವರಿಗೆ ಬರೆದ ಪತ್ರ ಪ್ರದರ್ಶಿಸಿದ ಅವರು, ಅವರು ಬಡವರ ಪರ ಮಾತನಾಡುತ್ತಾರೆ. ಆ ಯೋಜನೆಯಲ್ಲಿ ಇಷ್ಟೊಂದು ಅಕ್ರಮ ಆಗಿದ್ದರೂ, ಬಡವರ ಭೂಮಿ ಲೂಟಿ ಹೊಡೆಯಲಾಗಿದ್ದರೂ ಏನು ಕ್ರಮ ತೆಗೆದುಕೊಂಡಿಲ್ಲ. ಅವರಿಗೆ ಏನು ಕಷ್ಟವಿದೆಯೋ ಎಂದು ವ್ಯಂಗ್ಯವಾಗಿ ಹೇಳಿದರು.

ಈ ಯೋಜನೆಯ ಒಟ್ಟು ಮೌಲ್ಯ ₹7 ಸಾವಿರ ಕೋಟಿ ಎಂದು ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗ ರಚಿಸಿದ್ದ ಸದನ ಸಮಿತಿಯ ವರದಿಯೇ ಹೇಳಿದೆ. ಯೋಜನೆಯನ್ನು ಸರ್ಕಾರ ಸ್ವಾಧೀನಪಡಿಸಿಕೊಳ್ಳಬೇಕು ಎಂದೂ ಸಮಿತಿ ಶಿಫಾರಸು ಮಾಡಿತ್ತು. ಅದನ್ನು ಈಗ ಮಾಡಲಿ ಎಂದು ಆಗ್ರಹಿಸಿದರು.

‘ಅಲ್ಲಿ ಪ್ರಧಾನಿ ಮೋದಿಯವರು ಶ್ರೀರಾಮ ಅನ್ನುತ್ತಾ ಉಪವಾಸ, ನದಿಸ್ನಾನ, ತಣ್ಣೀರು ಸ್ನಾನ ಇವೆಲ್ಲ ಮಾಡುತ್ತಿದ್ದಾರೆ. ಇಲ್ಲಿ ಇವರಿಗೆ ಸಿದ್ದರಾಮ ಮಾತ್ರ. ಸಿದ್ದರಾಮ ಹೆಸರಿನಲ್ಲಿ ಎನ್‌ಡಿಎ ಸೋಲಿಸಿ 20 ಸೀಟು ಗೆಲ್ಲುತ್ತೇವೆ ಎಂಬ ಅಹಂಕಾರದಿಂದ ಇವೆಲ್ಲ ಮಾಡುತ್ತಿದ್ದಾರೆ. 20 ಸೀಟು ಗೆಲ್ಲುವುದು ಅವರ ಕನಸು ಮಾತ್ರ. ಈ ಬಾರಿ ಮೋದಿಯವರ ನೇತೃತ್ವದಲ್ಲಿ ಕರ್ನಾಟಕದಲ್ಲಿ ಎಲ್ಲರ ನಿರೀಕ್ಷೆ ಮೀರಿ ಜನರು ಎನ್‌ಡಿಎ ಮೈತ್ರಿಗೆ ಅಭೂತಪೂರ್ವ ತೀರ್ಪು ಕೊಡುತ್ತಾರೆ’ ಎಂದು ಹೇಳಿದರು.

‘ಹಿಂದೂ ಕಾರ್ಯಕರ್ತ ಶ್ರೀಕಾಂತ ಪೂಜಾರಿ ಅವರ ಮೇಲಿದ್ದ ಹಿಂದಿನ ಪ್ರಕರಣವನ್ನು ಮತ್ತೆ ತೆರೆದ ಕಾಂಗ್ರೆಸ್‌ನವರು ಸೇಡು ತೀರಿಸಿಕೊಳ್ಳಲು ಹೊರಟಿದ್ದಾರೆ. ಕುಮಾರಸ್ವಾಮಿ ಜತೆ ಮಂತ್ರಿ ಆಗಿದ್ದವರೊಬ್ಬರು ನಿತ್ಯವೂ ಏನೇನೋ ಮಾತಾಡ್ತಾರೆ. ಟಿಪ್ಪು ವಿಷಯ ಬಿಟ್ಟು ಬೇರೆ ಏನು ಅಂತ ಮಾತನಾಡುತ್ತಾರೆ ಅವರು’ ಎಂದು ಪ್ರಶ್ನಿಸಿದ ಅವರು, ‘ನಾನು ರಾಮನನ್ನು ಪೂಜಿಸುತ್ತೇನೆ. ದರ್ಗಾಕ್ಕೂ ಹೋಗಿದ್ದೇನೆ. ತಿರುಪತಿಗೂ ಹೋಗಿದ್ದೇನೆ. ಬಿಜೆಪಿ ಜತೆ ಹೋದ ಬಳಿಕ ಸೇಡಿನ ರಾಜಕೀಯ ಮಾಡಬೇಡಿ ಎಂದು ಕಾಂಗ್ರೆಸ್‌ಗೆ ಹೇಳುತ್ತೇನೆ. ಎನ್‌ಡಿಎ ಮಿತ್ರ ಪಕ್ಷವಾಗಿ ನಾವು ಕೆಲಸ ಮಾಡುತ್ತಿದ್ದು, ಮಿತ್ರಪಕ್ಷದ ಬಗ್ಗೆ ಮಾತನಾಡುತ್ತೇವೆ’ ಎಂದರು.

ಸುದ್ದಿ 2 ನಿಮಿಷ

ಲಂಚಕ್ಕೆ ಬೇಡಿಕೆ: ರಾಣೆಬೆನ್ನೂರು ತಹಶೀಲ್ದಾರ್ ಲೋಕಾಯುಕ್ತ ಬಲೆಗೆ

ಹಾವೇರಿ: ಅಕ್ರಮ ಸಾಗಣೆ ಮಾಡುತ್ತಿದ್ದ ಮರಳು ತುಂಬಿದ ಎರಡು ಟಿಪ್ಪರ್ ಲಾರಿಗಳನ್ನು ಬಿಡಲು ₹12 ಸಾವಿರ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ರಾಣೆಬೆನ್ನೂರಿನ ತಹಶೀಲ್ದಾರ್ ಹನುಮಂತ ಶಿರಹಟ್ಟಿ (ಎಚ್.ಎನ್.ಶಿರಹಟ್ಟಿ) ಮತ್ತು ಜೀಪ್ ಚಾಲಕ ಮಾಲತೇಶ ಮಡಿವಾಳರ ಎಂಬುವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

‘ಜೀಪ್ ಚಾಲಕ ಲಂಚ ಪಡೆದು, ರಾಣೆಬೆನ್ನೂರಿನ ವೀರಭದ್ರೇಶ್ವರ ಬಡಾವಣೆಯಲ್ಲಿರುವ ತಹಶೀಲ್ದಾರ್ ಮನೆಗೆ ಒಯ್ದು ಕೊಡುವಾಗ ಇಬ್ಬರೂ ಆರೋಪಿಗಳು ಸಿಕ್ಕಿಬಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.



‘ರಾಣೆಬೆನ್ನೂರಿನ ಮಂಜುನಾಥ ವಾಲೀಕಾರ ಅವರಿಗೆ ಸೇರಿದ ಎರಡು ಟಿಪ್ಪರ್ ಲಾರಿಗಳು ಅಕ್ರಮವಾಗಿ ಮರಳು ಸಾಗಿಸುತ್ತಿವೆ ಎಂಬ ಆರೋಪದ ಮೇರೆಗೆ ಈಚೆಗೆ ವಶಕ್ಕೆ ಪಡೆಯಲಾಗಿತ್ತು. ಎರಡು ಲಾರಿಗಳ ಬಿಡುಗಡೆಗೆ ತಹಶೀಲ್ದಾರ್ ಆರಂಭದಲ್ಲಿ ₹ 20 ಸಾವಿರ ಲಂಚದ ಬೇಡಿಕೆ ಇಟ್ಟಿದ್ದರು. ಚೌಕಾಸಿ ಬಳಿಕ ₹12 ಸಾವಿರ ಲಂಚಕ್ಕೆ ಒಪ್ಪಿದ್ದರು’ ಎಂದು ಅವರು ತಿಳಿಸಿದ್ದಾರೆ.

ಲೋಕಾಯುಕ್ತ ಡಿವೈಎಸ್ಪಿ ಚಂದ್ರಶೇಖರ್ ನೇತೃತ್ವದಲ್ಲಿ ಹಾವೇರಿ ಲೋಕಾಯುಕ್ತ ಪೊಲೀಸ್ ಠಾಣೆಯ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು.

ಮಗಳ ಮೇಲೆ ಅತ್ಯಾಚಾರ ಎಸಗಿದ ತಂದೆ, ಮಗು ಜನನ

ಬೆಳಗಾವಿ: ತಾಲ್ಲೂಕಿನ ಗ್ರಾಮವೊಂದರಲ್ಲಿ ಬುದ್ಧಿಮಾಂದ್ಯ ಮಗಳ ಮೇಲೆ ತಂದೆಯೇ ನಿರಂತರ ಅತ್ಯಾಚಾರ ಎಸಗಿದ್ದರಿಂದ ಮಗು ಜನಿಸಿದ ಪ್ರಕರಣ ತಡವಾಗಿ ಗೊತ್ತಾಗಿದೆ.

ಘಟನೆ 2023ರ ಫೆಬ್ರವರಿಯಲ್ಲಿ ನಡೆದಿದ್ದು, ಯುವತಿ ಮಗುವಿಗೆ ಜನ್ಮ ನೀಡಿದ್ದಾಳೆ. ಯುವತಿಯ ತಾಯಿ ಕೆಲ ವರ್ಷಗಳ ಹಿಂದೆ ಮೃತಪಟ್ಟಿದ್ದರಿಂದ ಮನೆಯಲ್ಲಿ ತಂದೆ– ಮಗಳು ಮಾತ್ರ ಇರುತ್ತಿದ್ದರು. ಮಗಳು ಗರ್ಭ ಧರಿಸಿದ ಅನುಮಾನ ಬಂದಿದ್ದರಿಂದ ಗ್ರಾಮದ ಕೆಲವರು ಆಶಾ ಕಾರ್ಯಕರ್ತೆಗೆ ಮಾಹಿತಿ ನೀಡಿದ್ದರು. ಅವರ ಮೂಲಕ ಸರ್ಕಾರೇತರ ಸ್ವಯಂ ಸೇವಾ ಸಂಘಟನೆ (ಎನ್‌ಜಿಒ) ತಂಡ ಪರಿಶೀಲಿಸಿದಾಗ ಯುವತಿ ಗರ್ಭಿಣಿ ಆಗಿರುವುದು ಖಚಿತವಾಯಿತು.

‘ಎನ್‌ಜಿಒ ಸದಸ್ಯರು ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆಗೆ ದೂರು ನೀಡಿದ ಆಧಾರದ ಮೇಲೆ ಪೊಲೀಸರು ತನಿಖೆ ನಡೆಸಿದರು. ಬುದ್ಧಿಮಾಂದ್ಯೆಗೆ ಜನಿಸಿದ ಮಗು ಹಾಗೂ ಆಕೆಯ ತಂದೆಯ ಡಿಎನ್‌ಎ ಅನ್ನು ಆಗಸ್ಟ್‌ನಲ್ಲಿ ತಪಾಸಣೆ ಮಾಡಲಾಯಿತು. ತಂದೆಯೇ ಮಗಳ ಮೇಲೆ ಅತ್ಯಾಚಾರ ಎಸಗಿದ್ದರಿಂದ ಮಗು ಜನಿಸಿದೆ ಎಂಬುದು ಖಚಿತವಾಯಿತು. ಆರೋಪಿಯನ್ನು ಬಂಧಿಸಿ, ಸೆಪ್ಟೆಂಬರ್‌ನಲ್ಲಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಕೂಡ ಸಲ್ಲಿಸಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಎಸ್.ಎನ್.ಸಿದ್ರಾಮಪ್ಪ ತಿಳಿಸಿದ್ದಾರೆ.

ಹಾಲುಮತ ಸಂಸ್ಕೃತಿ ವೈಭವ ಪುರಸ್ಕಾರಕ್ಕೆ ಮೂವರ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಯಚೂರು ಜಿಲ್ಲೆಯ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ಶಾಖಾಮಠ ತಿಂಥಣಿಬ್ರಿಜ್ ಮಠದಲ್ಲಿ ಜ.12ರಿಂದ 14ರ ತನಕ ಹಾಲುಮತ ಸಂಸ್ಕೃತಿ ವೈಭವ ಹಮ್ಮಿಕೊಳ್ಳಲಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘12ರಂದು ನಡೆಯುವ ಯುವಜನ ಸಮಾವೇಶದಲ್ಲಿ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ, ಗುರುಮಹಾಂತೇಶ ಸ್ವಾಮೀಜಿ ಪಾಲ್ಗೊಳ್ಳಲಿದ್ದಾರೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಉದ್ಘಾಟಿಸಲಿದ್ದು, ಮಾಜಿ ಸಚಿವ ಬಂಡೆಪ್ಪ ಕಾಶೆಂಪುರ ಅಧ್ಯಕ್ಷತೆ ವಹಿಸಲಿದ್ದಾರೆ. ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಭಗವಂತ ಖೂಬಾ ಭಾಗವಹಿಸಲಿದ್ದಾರೆ’ ಎಂದರು.

‘ಹಾಲುಮತ ಭಾಸ್ಕರ ಪ್ರಶಸ್ತಿ’ಗೆ ಲೇಖಕ ಕಾಂಚ ಐಲಯ್ಯ ಶೆಫರ್ಡ್, ‘ಕನಕ ರತ್ನ ಪ್ರಶಸ್ತಿ’ಗೆ ಪತ್ರಕರ್ತೆ ವಿಜಯಲಕ್ಷ್ಮಿ ಶಿಬರೂರು, ‘ಸಿದ್ಧಶ್ರೀ ಪ್ರಶಸ್ತಿ’ಗೆ ಕಾವಾಡಿ ದಂಪತಿ ಬೊಮ್ಮ ಮತ್ತು ಬೆಳ್ಳಿ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ತಲಾ ₹ 50 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ. ಜ.13ರಂದು ನಡೆಯುವ ಕಾರ್ಯಕ್ರಮದಲ್ಲಿ ಸಚಿವರಾದ ಸತೀಶ ಜಾರಕಿಹೊಳಿ, ಪ್ರಿಯಾಂಕ್ ಖರ್ಗೆ ಅವರು ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ’ ಎಂದರು.

‘14ರಂದು ನಡೆಯುವ ಹಾಲುಮತ ಮಾತೃ ಶಕ್ತಿ ಸಮಾವೇಶದಲ್ಲಿ ಈಶ್ವರಾನಂದಪುರಿ ಸ್ವಾಮೀಜಿ, ಮಲ್ಲಾರಲಿಂಗ ಮಹಾರಾಜ ಸ್ವಾಮೀಜಿ, ಅಡವಿಲಿಂಗ ಮಹಾರಾಜ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ದೇವದುರ್ಗದ ಶಾಸಕಿ ಕರೆಮ್ಮ ನಾಯಕ್ ಸಮಾವೇಶ ಉದ್ಘಾಟಿಸಲಿದ್ದಾರೆ. ವಿಶ್ರಾಂತ ಕುಲಪತಿ ಮಲ್ಲಿಕಾ ಘಂಟಿ ಅಧ್ಯಕ್ಷತೆ ವಹಿಸಲಿದ್ದಾರೆ’ ಎಂದರು.

‘ಸ್ಪರ್ಧೆಗೆ ಸಿದ್ಧ’

‘ಮಾನಸಿಕವಾಗಿ ನಾನು ಕಾಂಗ್ರೆಸಿನಲ್ಲಿರುವುದರಿಂದ ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸಿನಿಂದಲೇ ಕೊಡಗು–ಮೈಸೂರು ಕ್ಷೇತ್ರದಿಂದ ಸ್ಪರ್ಧಿಸಲು ಬಯಸುತ್ತೇನೆ’ ಎಂದು ವಿಶ್ವನಾಥ್ ಹೇಳಿದರು. ‘ಕಾಂಗ್ರೆಸ್ ಟಿಕೆಟ್ ನೀಡಿದರೆ ಸ್ಪರ್ಧಿಸುವೆ. ಇಲ್ಲದಿದ್ರೆ ಪಕ್ಷಕ್ಕಾಗಿ ಕೆಲಸ ಮಾಡುತ್ತೇನೆ. ನನಗೆ ಸಂಸದನಾಗಿ, ಸಚಿವನಾಗಿ ಕೆಲಸ ಮಾಡಿರುವ ಅನುಭವಿದೆ’ ಎಂದರು.

ಬಿಜೆಪಿ– ಜೆಡಿಎಸ್ ಮೈತ್ರಿ: ಫ್ಲೆಕ್ಸ್ ಸಂದೇಶ

ಲೋಕಸಭೆ: ಎಚ್‌ಡಿಡಿ, ಎಚ್‌ಡಿಕೆ, ನಿಖಿಲ್ ಮೂವರಲ್ಲೊಬ್ಬರು ಅಭ್ಯರ್ಥಿ?

• ಎಂ.ಎನ್.ಯೋಗೇಶ್

ಮಂಡ್ಯ: ಬಿಜೆಪಿ-ಜೆಡಿಎಸ್ ಜತೆಯಾಗಿ ಚುನಾವಣೆ ಎದುರಿಸಲಿವೆ ಎಂಬ ಸಂದೇಶವನ್ನು ಮತದಾರರಿಗೆ ಮುಟ್ಟಿಸಲು ಜೆಡಿಎಸ್ ಮುಖಂಡರು ಜಿಲ್ಲೆಯ ವಿವಿಧೆಡೆ ಬೃಹತ್ ಫ್ಲೆಕ್ಸ್‌ಗಳನ್ನು ಅಳವಡಿಸುತ್ತಿದ್ದಾರೆ. ‘ಮೈತ್ರಿ ಅಭ್ಯರ್ಥಿಯಾಗಿ ದೇವೇಗೌಡರ ಕುಟಂಬದ ಯಾರಾದರೂ ಸ್ಪರ್ಧಿಸುತ್ತಾರೆಯೇ’ ಎಂಬ ಪ್ರಶ್ನೆಯನ್ನೂ ಇದು ಮೂಡಿಸಿದೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್-ಕಾಂಗ್ರೆಸ್ ಮೈತ್ರಿಯಲ್ಲಿ ಒಮ್ಮತದ ಅಭ್ಯರ್ಥಿಯಾಗಿ ನಿಖಿಲ್ ಕುಮಾರಸ್ವಾಮಿ ಸ್ಪರ್ಧಿಸಿದ್ದರು. ಆದರೆ, ಕಾಂಗ್ರೆಸ್ ಮುಖಂಡರು ಮೈತ್ರಿ ನಿಯಮ ಉಲ್ಲಂಘಿಸಿ ಪಕ್ಷೇತರ ಅಭ್ಯರ್ಥಿ ಸುಮಲತಾ ಅವರನ್ನು ಬೆಂಬಲಿಸಿದ್ದರು. ಪ್ರತಿ ಚುನಾವಣೆಯಲ್ಲಿ ಜಿದ್ದಾಜಿದ್ದಿಗೆ ಬೀಳುತ್ತಿದ್ದ ಕಾಂಗ್ರೆಸ್ ಹಾಗೂ ಜೆಡಿಎಸ್ ಕಳೆದ ಬಾರಿ ಹೊಂದಾಣಿಕೆ ಮಾಡಿಕೊಂಡಿದ್ದು ಮತದಾರರ ಮೇಲೆ ಹೆಚ್ಚಿನ ಪರಿಣಾಮ ಬೀರಿರಲಿಲ್ಲ.

‘ಹಿಂದಿನ ತಪ್ಪು ಮರುಕಳಿಸಬಾರದು’ ಎಂದು ಜೆಡಿಎಸ್ ಮುಖಂಡರು ಮೈತ್ರಿ ಕುರಿತ ಫ್ಲೆಕ್ಸ್‌ಗಳನ್ನು ಪ್ರಮುಖ ರಸ್ತೆ, ವೃತ್ತಗಳಲ್ಲಿ ಅಳವಡಿಸುತ್ತಿದ್ದಾರೆ. ಕಳೆದ ತಿಂಗಳು ಪ್ರಧಾನಿ ಮೋದಿ ಅವರನ್ನು ದೇವೇಗೌಡರು ಹಾಗೂ ಅವರ ಪುತ್ರರು ಭೇಟಿ ಮಾಡಿದ ಚಿತ್ರಗಳನ್ನೇ ಬಳಸಿದ್ದಾರೆ.



ಮಂಡ್ಯ ಸಮೀಪದ ಇಂಡುವಾಳು ಬಳಿ ಬಿಜೆಪಿ– ಜೆಡಿಎಸ್ ಮೈತ್ರಿ ಕುರಿತು ಬೃಹತ್ ಫ್ಲೆಕ್ಸ್ ಅಳವಡಿಸಲಾಗಿದೆ –ಚಿತ್ರ: ಧನುಷ್ ಡಿ.ವಿ

ಪ್ರಧಾನಿ ಮೋದಿ ಅವರೊಂದಿಗೆ ಎಚ್.ಡಿ.ದೇವೇಗೌಡ ಹಾಗೂ ಎಚ್.ಡಿ.ಕುಮಾರಸ್ವಾಮಿ ಇರುವ ಚಿತ್ರ ಬಳಸಿಕೊಳ್ಳಲಾಗಿದೆ. ಫ್ಲೆಕ್ಸ್‌ನಲ್ಲಿ ನಿಖಿಲ್ ಕುಮಾರಸ್ವಾಮಿಯೂ ಇದ್ದಾರೆ. ‘ರಾಜ್ಯದ ನೀರಾವರಿ ಸಮಸ್ಯೆಗಳಿಗೆ ಪರಿಹಾರ; ಜನತಾದಳ ಮತ್ತು ಬಿಜೆಪಿಯ ಮೈತ್ರಿಗೆ ಅಧಿಕಾರ’ ಎಂಬ ಬರಹ ರಾರಾಜಿಸುತ್ತಿದೆ.

ಹೊಸ ವರ್ಷ ಹಾಗೂ ಸಂಕ್ರಾಂತಿ ಹಬ್ಬದ ಶುಭಾಶಯ ಕೋರುವ ಫ್ಲೆಕ್ಸ್‌ಗಳು ಗಮನ ಸೆಳೆಯುತ್ತಿವೆ. ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಬದಿಯ ಇಂಡುವಾಳು ಬಳಿ ಜೆಡಿಎಸ್ ಮುಖಂಡ ಬಿ.ಆರ್.ರಾಮಚಂದ್ರ ಅಳವಡಿಸಿರುವ ಬೃಹತ್ ಫ್ಲೆಕ್ಸ್ ಗಮನ ಸೆಳೆಯುತ್ತಿದೆ. ಶ್ರೀರಂಗ ಪಟ್ಟಣದಲ್ಲೂ ಹೆದ್ದಾರಿ ಬದಿಯಲ್ಲಿ ಮುಖಂಡ ರವೀಂದ್ರ ಶ್ರೀಕಂಠಯ್ಯ ಫ್ಲೆಕ್ಸ್ ಅಳವಡಿಸಿದ್ದಾರೆ.

‘ಮೈತ್ರಿಯ ವಿಷಯ ಎಲ್ಲರಿಗೂ ಗೊತ್ತಿದೆ. ಆದರೂ ಅದನ್ನು ಮತ್ತಷ್ಟು ಗಟ್ಟಿಯಾಗಿ ಹೇಳಲು ಸ್ಥಳೀಯ ನಾಯಕರು ಫ್ಲೆಕ್ಸ್ ಅಳವಡಿಸಿದ್ದಾರೆ’ ಎಂದು ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಡಿ.ರಮೇಶ್ ಅವರು ಹೇಳುತ್ತಾರೆ.

ಎಚ್.ಡಿ.ರೇವಣ್ಣ ಚಿತ್ರವಿಲ್ಲದ ಫ್ಲೆಕ್ಸ್

ಎಚ್.ಡಿ.ದೇವೇಗೌಡ, ಕುಮಾರಸ್ವಾಮಿ ಅವರೊಂದಿಗೆ ಎಚ್.ಡಿ.ರೇವಣ್ಣ ಕೂಡ ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಿದ್ದರು. ಆದರೆ, ಫ್ಲೆಕ್ಸ್‌ನಲ್ಲಿ ರೇವಣ್ಣ ಚಿತ್ರವನ್ನು ಕೈಬಿಡಲಾಗಿದೆ.

‘ಮುಂಬರುವ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆಯ ಮೈತ್ರಿ ಅಭ್ಯರ್ಥಿಯಾಗಿ ದೇವೇಗೌಡ, ಕುಮಾರಸ್ವಾಮಿ, ನಿಖಿಲ್ –ಈ ಮೂವರಲ್ಲಿ ಒಬ್ಬರು ಸ್ಪರ್ಧಿಸುತ್ತಾರೆ. ರೇವಣ್ಣ ಹಾಸನಕ್ಕೆ ಸೀಮಿತ ಎಂಬ ಸಂದೇಶವನ್ನು ಫ್ಲೆಕ್ಸ್ ಮೂಲಕ ನೀಡುತ್ತಿದ್ದಾರೆ’ ಎಂಬ ಮಾತು ಸ್ಥಳೀಯರಲ್ಲಿದೆ.

3 ಡಿಸಿಎಂ: ಹೈಕಮಾಂಡ್ ಭೇಟಿಗೆ ನಿರ್ಧಾರ– ರಾಜಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಮೂವರಿಗೆ ಉಪ ಮುಖ್ಯಮಂತ್ರಿ ಹುದ್ದೆ ನೀಡುವಂತೆ ಮನವರಿಕೆ ಮಾಡಲು ಕಾಂಗ್ರೆಸ್ ಹೈಕಮಾಂಡ್ ಭೇಟಿ ಮಾಡಲು ನಿರ್ಧರಿಸಿದ್ದೇವೆ’ ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ನಿವಾಸದಲ್ಲಿ ಗುರುವಾರ ರಾತ್ರಿ ನಡೆದ ಭೋಜನಕೂಟದ ಸಭೆಯ ಕುರಿತು ಸುದ್ದಿಗಾರರಿಗೆ ಶುಕ್ರವಾರ ಪ್ರತಿಕ್ರಿಯಿಸಿದ ಅವರು, ‘ಭೋಜನಕೂಟದಲ್ಲಿ ಹಲವು ವಿಚಾರಗಳ ಬಗ್ಗೆ ಚರ್ಚೆಯಾಗಿದೆ. ಮೂವರಿಗೆ ಉಪ ಮುಖ್ಯಮಂತ್ರಿ ಹುದ್ದೆ ನೀಡಲು ಒಟ್ಟಾಗಿ ಹೈಕಮಾಂಡ್ ಭೇಟಿ ಮಾಡಬೇಕು ಎಂಬ ಅಭಿಪ್ರಾಯ ವ್ಯಕ್ತವಾಗಿದೆ’ ಎಂದರು.

ಉತ್ತರ ಭಾರತದ ವಿವಿಧ ರಾಜ್ಯಗಳಲ್ಲಿ ಚುನಾವಣೆ ನಡೆದಾಗ ಒಂದಕ್ಕಿಂತ ಹೆಚ್ಚು ಮಂದಿಗೆ ಉಪ ಮುಖ್ಯಮಂತ್ರಿ ಹುದ್ದೆ ನೀಡುವ ತೀರ್ಮಾನವನ್ನು ಬಿಜೆಪಿ ಮಾಡಿತ್ತು. ಈಗ ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರನ್ನು ಕಾಂಗ್ರೆಸ್ ಪಕ್ಷದ ಜತೆಯಲ್ಲಿ ಉಳಿಸಿಕೊಳ್ಳಬೇಕಿದೆ. ಅದಕ್ಕಾಗಿ ಇನ್ನಷ್ಟು ಮಂದಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂಬ ಬೇಡಿಕೆ ಮಂಡಿಸಲಾಗುವುದು ಎಂದು ಹೇಳಿದರು.

‘ಒಬ್ಬರೇ ಉಪ ಮುಖ್ಯಮಂತ್ರಿ ಇರಬೇಕು ಎಂಬುದು ಡಿ.ಕೆ. ಶಿವಕುಮಾರ್ ಅವರ ಅಭಿಪ್ರಾಯ ಇರಬಹುದು. ಎಲ್ಲರ ಅಭಿಪ್ರಾಯ ಪಡೆದ ಬಳಿಕ ತೀರ್ಮಾನ ಮಾಡಬೇಕಾಗುತ್ತದೆ. ಉಪ ಮುಖ್ಯಮಂತ್ರಿ ಹುದ್ದೆಗಳನ್ನು ಇಬ್ಬರಿಗೆ ನೀಡಬೇಕೊ ಅಥವಾ ಮೂವರಿಗೆ ನೀಡಬೇಕೊ ಎಂಬುದನ್ನು ಪಕ್ಷದ ಹೈಕಮಾಂಡ್ ತೀರ್ಮಾನ ಮಾಡುತ್ತದೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ತುಮಕೂರು ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸುವಂತೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಬಿಜೆಪಿ ಸಲಹೆ ನೀಡಿದೆ ಎಂಬ ವಿಚಾರ ಕುರಿತು ಪ್ರತಿಕ್ರಿಯಿಸಿದ ರಾಜಣ್ಣ, ‘ಯಾರನ್ನೂ ಸ್ಪರ್ಧಿಸದಂತೆ ನಿರ್ಬಂಧಿಸಲು ಆಗುವುದಿಲ್ಲ. ನಮ್ಮ ಅಭ್ಯರ್ಥಿಯ ಗೆಲುವಿಗೆ ಕಾರ್ಯತಂತ್ರ ರೂಪಿಸಿ, ಕೆಲಸ ಮಾಡುವುದು ಗೊತ್ತಿದೆ’ ಎಂದು ಹೇಳಿದರು.

‘ಕಾರ್ಯಸೂಚಿ ಇರಲಿಲ್ಲ’

‘ಸಚಿವ ಸತೀಶ ಜಾರಕಿಹೊಳಿ ನಿವಾಸದಲ್ಲಿ ಗುರುವಾರ ರಾತ್ರಿ ನಡೆದ ಭೋಜನಕೂಟದಲ್ಲಿ ನಾನೂ ಪಾಲ್ಗೊಂಡಿದ್ದೆ. ಸಭೆಗೆ ಯಾವುದೇ ನಿರ್ದಿಷ್ಟ ಕಾರ್ಯಸೂಚಿ ಇರಲಿಲ್ಲ. ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಹೆಚ್ಚು ಸ್ಥಾನ ಗಳಿಸುವಂತೆ ಕಾರ್ಯತಂತ್ರ ರೂಪಿಸುವ ಬಗ್ಗೆ ಚರ್ಚಿಸಿದ್ದೇವೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸುದ್ದಿಗಾರರಿಗೆ ಶುಕ್ರವಾರ ಪ್ರತಿಕ್ರಿಯಿಸಿದರು.

ಕಾರ್ಮಿಕನಿಂದ ಕಲ್ಯಾಣ ಮಂಟಪದ ಒಳಚರಂಡಿ ಸ್ವಚ್ಛತೆ

ದಾವಣಗೆರೆ: ನಗರದ ಕಲ್ಯಾಣ ಮಂಟಪವೊಂದರಲ್ಲಿ ಕೂಲಿ ಕಾರ್ಮಿಕರೊಬ್ಬರನ್ನು ಒಳಚರಂಡಿ ಸ್ವಚ್ಛತೆಗೆ ಚರಂಡಿ ಇಳಿಸಲಾಗಿದೆ. ದೇಹದ ಸ್ವಲ್ಪ ಭಾಗ ಚರಂಡಿಯಲ್ಲಿ ಮುಳುಗಿದ ಸ್ಥಿತಿಯಲ್ಲಿ ಕಾರ್ಮಿಕ ಚರಂಡಿ ಸ್ವಚ್ಛತೆಗೆ ಇಳಿದಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ಸಕ್ಕಿಂಗ್ ಯಂತ್ರದ ಮೂಲಕ ಚರಂಡಿ ಸ್ವಚ್ಛಗೊಳಿಸದೆ ಕಾರ್ಮಿಕನನ್ನು ಸ್ವಚ್ಛತೆಗೆ ಇಳಿಸಿದ ಕಲ್ಯಾಣ ಮಂಟಪದ ಮಾಲೀಕರು, ವ್ಯವಸ್ಥಾಪಕರ ವಿರುದ್ಧ ಮ್ಯಾನುಯಲ್ ಸ್ಕಾವೆಂಜರ್ ಸಂಘದ ಪದಾಧಿಕಾರಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮ್ಯಾನುಯಲ್ ಸ್ಕಾವೆಂಜರ್ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಎನ್. ಹುಚ್ಚೆಂಗಪ್ಪ ಅವರು, ಒಳಚರಂಡಿ ಸ್ವಚ್ಛತೆಗೆ ಯಂತ್ರದ ಬದಲು ಕಾರ್ಮಿಕರನ್ನು ಬಳಸಿದ್ದು ತಪ್ಪು. ಕಲ್ಯಾಣ ಮಂಟಪದ ವ್ಯವಸ್ಥಾಪಕರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಈ ಕುರಿತ ಪ್ರತಿಕ್ರಿಯೆಗೆ ಮಹಾನಗರ ಪಾಲಿಕೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರನ್ನು ಸಂಪರ್ಕಿಸಿದರೂ ಕರೆ ಸ್ವೀಕರಿಸಲಿಲ್ಲ.

ಬೆಳಗಾವಿ, ಚಿಕ್ಕೋಡಿ ಲೋಕಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಟಿಕೆಟ್‌ಗೆ ಪೈಪೋಟಿ, ಆಯ್ಕೆ ಕಗ್ಗಂಟು

ಕುರುಬ, ಲಿಂಗಾಯತ... ‘ಕೈ’ ಸಮೀಕರಣ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಜಿಲ್ಲೆಯ ಬೆಳಗಾವಿ ಮತ್ತು ಚಿಕ್ಕೋಡಿ ಲೋಕಸಭಾ ಕ್ಷೇತ್ರಗಳ ಪೈಕಿ ಒಂದರಲ್ಲಿ ಲಿಂಗಾಯತರಿಗೆ, ಇನ್ನೊಂದರಲ್ಲಿ ಕುರುಬರಿಗೆ ಟಿಕೆಟ್ ನೀಡಲು ಯತ್ನಗಳು ನಡೆದಿವೆ. ಎರಡು ದೊಡ್ಡ ಸಮಾಜಗಳ ಮತಗಳಿಗೆ ಗಾಳ ಹಾಕಿ, ಗೆಲುವು ಸಾಧಿಸಬೇಕು ಎಂಬುದು ಈ ಸಮೀಕರಣದ ಹಿಂದಿನ ಕಾಂಗ್ರೆಸ್ ತಂತ್ರವಾಗಿದೆ.

ಎರಡೂ ಕ್ಷೇತ್ರಗಳಲ್ಲಿ ಗೆಲ್ಲಬೇಕೆಂಬ ಒತ್ತಾಸೆ ಕಾಂಗ್ರೆಸ್ ಹೈಕಮಾಂಡ್‌ನಿಂದ ಹೆಚ್ಚಿದ್ದರಿಂದ ಸಚಿವರಾದ ಲಕ್ಷ್ಮಿ ಹೆಬ್ಬಾಳಕರ ಮತ್ತು ಸತೀಶ ಜಾರಕಿಹೊಳಿ ಅವರಿಗೆ ದೊಡ್ಡ ಸವಾಲು ಎದುರಾಗಿದೆ. ಎರಡೂ ಕ್ಷೇತ್ರಗಳಲ್ಲಿ ಆಕಾಂಕ್ಷಿಗಳ ದಂಡೇ ಸಿದ್ಧವಾಗಿದ್ದು, ಯಾರಿಗೆ ಟಿಕೆಟ್ ಸಿಗಲಿದೆ ಎಂಬುದು ನಿಗೂಢವಾಗಿದೆ.

ಬೆಳಗಾವಿ ಕ್ಷೇತ್ರದಿಂದ ಮಾಜಿ ಸಂಸದ ಅಮರಸಿಂಹ ಪಾಟೀಲ, ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ವಿನಯ ನಾವಲಗಟ್ಟಿ, ಮುಖಂಡ ಕಿರಣ ಸಾಧುನವರ, ಸಚಿವೆ ಲಕ್ಷ್ಮಿ ಹೆಬ್ಬಾಳಕರ ಪುತ್ರ ಮೃಣಾಲ್ ಪ್ರಬಲ ಆಕಾಂಕ್ಷಿಗಳು. ಚಿಕ್ಕೋಡಿ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಚಿಕ್ಕೋಡಿ ಜಿಲ್ಲಾ ಘಟಕದ ಅಧ್ಯಕ್ಷ, ಕುರುಬ ಸಮಾಜದ ಲಕ್ಷ್ಮಣರಾವ್ ಚಿಂಗಳೆ, ಮುಖಂಡರಾದ ಎಸ್.ಕೆ.ಬುಟಾಳೆ, ಗಜಾನನ ಮಂಗಸೂಳಿ, ಲಕ್ಷ್ಮಣ ಸವದಿ ಅವರ ಪುತ್ರ ಚಿದಾನಂದ ಸವದಿ ಪ್ರಬಲ ಆಕಾಂಕ್ಷಿಗಳು.



> **ಬೆಳಗಾವಿ ಅಥವಾ ಚಿಕ್ಕೋಡಿ ಟಿಕೆಟ್ ನೀಡುವಾಗ ಕುರುಬರನ್ನೂ ಪರಿಗಣಿಸುತ್ತೇವೆ ಎಂದು ಹೇಳಿದ್ದೇನೆ. ಸಮರ್ಥರಿದ್ದರೆ ಕೊಡುತ್ತೇವೆ**
> **ಸತೀಶ ಜಾರಕಿಹೊಳಿ** ಕಾರ್ಯಾಧ್ಯಕ್ಷ, ಕೆಪಿಸಿಸಿ

ಕುರುಬರ ಬೇಡಿಕೆ: ಜಿಲ್ಲೆಯಲ್ಲಿ ಲಿಂಗಾಯತರ ನಂತರ ಹೆಚ್ಚಿನ ಸಂಖ್ಯೆಯಲ್ಲಿ ಕುರುಬರು ಇದ್ದಾರೆ. ಒಂದು ಕ್ಷೇತ್ರದಲ್ಲಿ ಕುರುಬರಿಗೆ ಟಿಕೆಟ್ ನೀಡಿ, ಎರಡೂ ಕ್ಷೇತ್ರಗಳಲ್ಲಿ ಸಮುದಾಯಗಳ ಪರಸ್ಪರ ಸಹಕಾರ ತತ್ವದಡಿ ಗೆಲ್ಲಬೇಕು ಎಂಬುದು ಕಾಂಗ್ರೆಸ್ ಲೆಕ್ಕಾಚಾರ. ವಿಧಾನಸಭಾ ಚುನಾವಣೆಯ ಬಳಿಕವೇ ಈ ತಂತ್ರವನ್ನು ಕಾಂಗ್ರೆಸ್ ಆರಂಭಿಸಿದೆ. ಬೆಳಗಾವಿಯಲ್ಲಿ ಅಕ್ಟೋಬರ್ 3 ಮತ್ತು 4ರಂದು ಷಫರ್ಡ್ಸ್ ಇಂಟರ್‌ನ್ಯಾಷನಲ್ ವತಿಯಿಂದ ಅಂತರರಾಷ್ಟ್ರೀಯ ಕುರುಬರ ಸಮಾವೇಶ ಹಾಗೂ ಕಾರ್ಯಕಾರಿಣಿ ಸಭೆ ನಡೆಸಿದ್ದು ಕೂಡ ಇದರ ಪೂರ್ವಸಿದ್ಧತೆಯೇ.

‘ಜಿಲ್ಲೆಯ ಒಂದು ಕ್ಷೇತ್ರಕ್ಕೆ ಕುರುಬರಿಗೆ ಟಿಕೆಟ್ ನೀಡಲಾಗುವುದು’ ಎಂದು ಸಚಿವ ಸತೀಶ ಜಾರಕಿಹೊಳಿ ಇದೇ ಸಮಾವೇಶದಲ್ಲಿ ಘೋಷಿಸಿದ್ದರು.

ಕುರುಬ ಸಮಾಜದ ಲೆಕ್ಕಾಚಾರದಲ್ಲಿ ಅಮರಸಿಂಹ ಪಾಟೀಲ ಪ್ರಬಲರು. 1999ರಲ್ಲಿ ಅವರು ಕಾಂಗ್ರೆಸ್‌ನಿಂದ ಸಂಸದರಾಗಿದ್ದರು. ಅದಕ್ಕೂ ಮುನ್ನ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿದ್ದ ಅವರು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಲೆಕ್ಕಾಚಾರದಲ್ಲಿ ‘ಬಲಾಢ್ಯ’ರು.

ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅಮರ ಸಿಂಹ ಪಾಟೀಲ ಆಪ್ತರು. ಅಮರಸಿಂಹ ಅವರ ತಂದೆ ವಿ.ಎಲ್. ಪಾಟೀಲ, ಖರ್ಗೆ ಜತೆಯಾಗಿ ರಾಜಕಾರಣ ಮಾಡಿದವರು.

ಕಾಂಗ್ರೆಸ್‌ನ ಇನ್ನೊಂದು ಬಣ ಚಿಕ್ಕೋಡಿಯಲ್ಲಿ ಲಕ್ಷ್ಮಣರಾವ್ ಚಿಂಗಳೆ ಅವರಿಗೆ ಟಿಕೆಟ್ ಕೊಟ್ಟು, ಬೆಳಗಾವಿಯಲ್ಲಿ ಲಿಂಗಾಯತರಿಗೇ ಕೊಡಬೇಕು ಎಂಬ ವಾದ ಮಂಡಿಸಿದೆ. ಅಮರಸಿಂಹ ಅವರಿಗೆ ಟಿಕೆಟ್ ತಪ್ಪಿಸುವ ಯತ್ನವೂ ಕೆಲ ನಾಯಕರಿಂದ ಜೋರಾಗಿ ನಡೆದಿದೆ.

‘ವಿಧಾನಸಭೆಯಲ್ಲಿ 11 ಸ್ಥಾನಗಳನ್ನು ಗೆದ್ದ ಕಾಂಗ್ರೆಸ್‌ನಲ್ಲಿ ಒಬ್ಬರೂ ಕುರುಬರು ಇಲ್ಲ. ಅದಕ್ಕೆ ಲೋಕಸಭೆಗೆ ಟಿಕೆಟ್ ಅನಿವಾರ್ಯ’ ಎಂಬ ಕೂಗು ಗಟ್ಟಿಯಾಗಿದೆ. ಸಿದ್ದರಾಮಯ್ಯ, ಎಚ್. ವಿಶ್ವನಾಥ, ಎಚ್.ಎಂ.ರೇವಣ್ಣ ಅವರಂಥ ನಾಯಕರು ಕೂಡ ಈ ಬೇಡಿಕೆ ಪರ ಇದ್ದಾರೆ ಎಂಬುದು ಮೂಲಗಳ ಮಾಹಿತಿ.

ಸಚಿವರ ಮಕ್ಕಳಿಗೆ ಸಿಗುವುದೇ ಅವಕಾಶ?

‘ಸಚಿವೆ ಲಕ್ಷ್ಮಿ ಹೆಬ್ಬಾಳಕರ ಪುತ್ರ ಮೃಣಾಲ್‌ಗೆ, ಸಚಿವ ಸತೀಶ ಜಾರಕಿಹೊಳಿ ಪುತ್ರಿ ಪ್ರಿಯಾಂಕಾ ಅವರಿಗೆ ಟಿಕೆಟ್ ಕೊಡಬೇಕು’ ಎಂಬ ಒತ್ತಾಯ ಆರು ತಿಂಗಳಿಂದ ಇದೆ. ಆದರೆ, ಇಬ್ಬರನ್ನೂ ಕರೆಸಿದ ಹೈಕಮಾಂಡ್ ಹೊಸ ಸೂತ್ರ ನೀಡಿದೆ.

‘ಇಬ್ಬರಲ್ಲಿ ಒಬ್ಬರು ಸಚಿವ ಸ್ಥಾನ ಬಿಟ್ಟು ಲೋಕಸಭೆಗೆ ನಿಲ್ಲಬೇಕು. ಅವರಿಂದ ತೆರವಾದ ವಿಧಾನಸಭೆಗೆ ಅವರ ಮಕ್ಕಳಿಗೆ ಟಿಕೆಟ್ ಕೊಡಲಾಗುವುದು’ ಎಂದು ಹೈಕಮಾಂಡ್ ಹೇಳಿದೆ. ಆದರೆ, ಇದನ್ನು ಇಬ್ಬರೂ ಸಚಿವರು ನಿರಾಕರಿಸಿದ್ದಾರೆ ಎಂದು ಪಕ್ಷದ ಮೂಲಗಳು ಹೇಳಿವೆ.



ಲಕ್ಷ್ಮಿ ಹೆಬ್ಬಾಳಕರ

ಸದ್ಯ ಮೃಣಾಲ್ ಮಾತ್ರ ಟಿಕೆಟ್ ಕೇಳಿದ್ದಾರೆ. ಪ್ರಿಯಾಂಕಾ ಅರ್ಜಿ ಸಲ್ಲಿಸಿಲ್ಲ. ಪ್ರಿಯಾಂಕಾ ಅವರಿಗೆ ಟಿಕೆಟ್ ನೀಡುವುದಾದರೆ ಎಸ್‌ಟಿ ಮೀಸಲು ಕ್ಷೇತ್ರದಲ್ಲಿ ಮಾತ್ರ ನೀಡಬೇಕು ಎಂಬ ತಕರಾರು ಇನ್ನೊಂದು ಗುಂಪಿನದ್ದು.

ಖಾಸಗಿ ಬಸ್‌ಗೂ ಶಕ್ತಿ ಯೋಜನೆ ಹೈಕೋರ್ಟ್‌ನಿಂದ ಅರ್ಜಿ ವಿಲೇವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಿಳೆಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣದ ಸೌಲಭ್ಯ ಒದಗಿಸಿರುವ ಶಕ್ತಿ ಯೋಜನೆಯನ್ನು ಖಾಸಗಿ ಬಸ್‌ಗಳಿಗೂ ವಿಸ್ತರಿಸಲು ಆದೇಶಿಸಬೇಕು‘ ಎಂದು ಕೋರಲಾಗಿದ್ದ ಅರ್ಜಿಯನ್ನು ವಿಲೇವಾರಿ ಮಾಡಿರುವ ಹೈಕೋರ್ಟ್, ‘ಅರ್ಜಿದಾರರು ಸಲ್ಲಿಸಿರುವ ಮನವಿಯನ್ನು ಎರಡು ತಿಂಗಳಲ್ಲಿ ಪರಿಗಣಿಸಿ’ ಎಂದು ಸರ್ಕಾರಕ್ಕೆ ನಿರ್ದೇಶಿಸಿದೆ.



ಈ ಸಂಬಂಧ ಉಡುಪಿ ಜಿಲ್ಲೆ ಕಾರ್ಕಳದ ಖಾಸಗಿ ಬಸ್ ಆಪರೇಟರ್ ಶರತ್ ಕುಮಾರ್ ಶೆಟ್ಟಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿಯಲ್ಲಿ ಏನಿದೆ?: ‘ರಾಜ್ಯದಲ್ಲಿ ಖಾಸಗಿ ಬಸ್‌ಗಳ ಸಂಚಾರಕ್ಕೆ 65 ವರ್ಷಗಳ ಇತಿಹಾಸವಿದೆ. 16 ಜಿಲ್ಲೆಗಳಲ್ಲಿ 9 ಸಾವಿರಕ್ಕೂ ಹೆಚ್ಚು ಖಾಸಗಿ ಬಸ್‌ಗಳು ಸೇವೆ ಒದಗಿಸುತ್ತಿವೆ. 75 ಸಾವಿರ ಕಾರ್ಮಿಕರ ಜೀವನ ಇವುಗಳ ಮೇಲೆ ಅವಲಂಬಿತವಾಗಿದೆ. ಖಾಸಗಿ ಬಸ್ ಆಪರೇಟರ್‌ಗಳು ಅತಿ ಹೆಚ್ಚು ತೆರಿಗೆ ಪಾವತಿದಾರರಾಗಿದ್ದು, ವಾರ್ಷಿಕ ₹ 1,620 ಕೋಟಿ ತೆರಿಗೆ ಸಂಗ್ರಹವಾಗುತ್ತಿದೆ‘ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

‘ಶಕ್ತಿ ಯೋಜನೆ ಜಾರಿಗೆ ಬಂದಾಗಿನಿಂದ ಖಾಸಗಿ ಬಸ್ ಆಪರೇಟರ್‌ಗಳಿಗೆ ಸಂಕಷ್ಟ ಪ್ರಾರಂಭವಾಗಿದೆ. ಹಾಗಾಗಿ, ಶಕ್ತಿ ಯೋಜನೆಯನ್ನು ಖಾಸಗಿ ಬಸ್‌ಗಳಿಗೂ ಅನ್ವಯಿಸಬೇಕು. ಖಾಸಗಿ ಬಸ್‌ಗಳಲ್ಲಿ ಪ್ರಯಾಣಿಸುವ ಮಹಿಳೆಯರ ಪ್ರಯಾಣ ವೆಚ್ಚವನ್ನು ಸರ್ಕಾರವು ಖಾಸಗಿ ಬಸ್ ಆಪರೇಟರ್‌ಗಳಿಗೆ ಮರು ಪಾವತಿ ಮಾಡಬೇಕು. ಈ ನಿಟ್ಟಿನಲ್ಲಿ ಸರ್ಕಾರ ಹಾಗೂ ಸಾರಿಗೆ ಇಲಾಖೆಗೆ 2023ರ ಜುಲೈ 26ರಂದು ಸಲ್ಲಿಸಿರುವ ಮನವಿಯನ್ನು ಪರಿಗಣಿಸಲು ಆದೇಶಿಸಬೇಕು‘ ಎಂದು ಅರ್ಜಿದಾರರು ಕೋರಿದ್ದಾರೆ. ಅರ್ಜಿದಾರರ ಪರ ಹಿರಿಯ ವಕೀಲ ಪುತ್ತಿಗೆ ರಮೇಶ್ ವಾದ ಮಂಡಿಸಿದರು.

ಸಿರಿಧಾನ್ಯ ಅಂತರರಾಷ್ಟ್ರೀಯ ವಾಣಿಜ್ಯ ಮೇಳದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ

ಇಂದಿರಾ ಕ್ಯಾಂಟೀನ್, ಬಿಸಿಯೂಟದಲ್ಲಿ ಸಿರಿಧಾನ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇಂದಿರಾ ಕ್ಯಾಂಟೀನ್, ಶಾಲೆಗಳಲ್ಲಿನ ಬಿಸಿಯೂಟಕ್ಕೆ ಸಿರಿಧಾನ್ಯಗಳನ್ನು ಬಳಸುವುದು ಹಾಗೂ ಪಡಿತರ ವಿತರಣೆಯಲ್ಲಿ ಸಿರಿಧಾನ್ಯಗಳನ್ನು ಸೇರಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಿದರು.

ಕೃಷಿ ಇಲಾಖೆಯು ಇಲ್ಲಿನ ಅರಮನೆ ಮೈದಾನದಲ್ಲಿ ಏರ್ಪಡಿಸಿರುವ ಮೂರು ದಿನಗಳ ‘ಸಿರಿಧಾನ್ಯ ಮತ್ತು ಸಾವಯವ ಅಂತರ ರಾಷ್ಟ್ರೀಯ ವಾಣಿಜ್ಯ ಮೇಳ 2024’ಕ್ಕೆ ಶುಕ್ರವಾರ ಚಾಲನೆ ನೀಡಿ, ಅವರು ಮಾತನಾಡಿದರು.

’ಇಂದಿರಾ ಕ್ಯಾಂಟೀನ್, ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ ಮತ್ತು ಪಡಿತರದಲ್ಲಿ ಸಿರಿಧಾನ್ಯಗಳನ್ನು ಸೇರಿಸುವ ಕುರಿತು ಸದ್ಯದಲ್ಲೇ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಚರ್ಚಿಸಿ ತೀರ್ಮಾನಿಸಲಾಗುವುದು’ ಎಂದರು.

‘ಗುಣಮಟ್ಟದ ಸಿರಿಧಾನ್ಯ ಬೀಜ ಉತ್ಪಾದನೆ ಕುರಿತು ಕೃಷಿ ಇಲಾಖೆ ಕಾರ್ಯದರ್ಶಿಗೆ ಸೂಚನೆ ನೀಡಿದ್ದೇನೆ. ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳಿಗೆ ಸಲಹೆ ನೀಡಿದ್ದೇನೆ. ಇದಕ್ಕಾಗಿ ಪ್ರತ್ಯೇಕ ಕೋಶವೊಂದನ್ನು ಆರಂಭಿಸಲಾಗುತ್ತದೆ. ಮುಂದಿನ ವರ್ಷದಿಂದಲೇ ನಾವು ಬಿತ್ತನೆ ಬೀಜಗಳನ್ನು ರಫ್ತು ಮಾಡುತ್ತೇವೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.



‘ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳದಲ್ಲಿ ಆಯೋಜಿಸಲಾಗಿದ್ದ ಧಾನ್ಯಗಳ ಪ್ರದರ್ಶನವನ್ನು ಜನ ಕುತೂಹಲದಿಂದ ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

ಇದಕ್ಕೂ ಮುನ್ನ ಮಾತನಾಡಿದ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ‘ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷಾಚರಣೆ ನಂತರ, ದೇಶದ ಸಿರಿಧಾನ್ಯ ರಫ್ತಿನಲ್ಲಿ ಶೇ 30ರಷ್ಟು ಹೆಚ್ಚಳವಾಗಿದೆ. ವಿಶ್ವದಾದ್ಯಂತ ರಾಜ್ಯದ ಸಿರಿಧಾನ್ಯಗಳ ಜೊತೆಗೆ, ಬಿತ್ತನೆ ಬೀಜಕ್ಕೂ ಬೇಡಿಕೆ ಹೆಚ್ಚಿದೆ. ಹಾಗಾಗಿ, ಗುಣಮಟ್ಟದ ಬಿತ್ತನೆ ಬೀಜಗಳನ್ನು ಉತ್ಪಾದಿಸುವ ಅಗತ್ಯವಿದೆ’ ಎಂದು ಅವರು ಅಭಿಪ್ರಾಯಪಟ್ಟರು.

’ಪ್ರಸ್ತುತ ರಾಜ್ಯದಲ್ಲಿ ಕೈಗಾರಿಕೆ ಇಲಾಖೆ ಅಡಿಯಲ್ಲಿರುವ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ರಫ್ತು ವಿಭಾಗವನ್ನು, ಅದೇ ಇಲಾಖೆಯಡಿಯಲ್ಲೇ ಪ್ರತ್ಯೇಕ ವಿಭಾಗವನ್ನಾಗಿಸಿ, ಸಿಬ್ಬಂದಿ ನಿಯೋಜಿಸಬೇಕು. ಇದರಿಂದ ನಮ್ಮ ರಾಜ್ಯದ ಕೃಷಿ –ತೋಟಗಾರಿಕೆ ಉತ್ಪನ್ನಗಳನ್ನು ಬೇರೆ ಬೇರೆ ದೇಶಗಳಿಗೆ ರಫ್ತು ಹೆಚ್ಚು ಅನುಕೂಲವಾಗುತ್ತದೆ’ ಎಂದು ಅವರು ತಿಳಿಸಿದರು.

‘ಕೇಂದ್ರ ಸರ್ಕಾರ ಆಹಾರ ಸಂಸ್ಕರಣಾ ಘಟಕ ಮತ್ತು ಸಾಯವ ಕೃಷಿಗೆ ಒತ್ತು ನೀಡುತ್ತಿದೆ. ರಾಜ್ಯದಲ್ಲೂ ಆಹಾರ ಸಂಸ್ಕರಣಾ ಘಟಕ ಸ್ಥಾಪನೆ ಸೇರಿದಂತೆ, ಕೃಷಿ ಮೂಲ ಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳಿಗಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದರೆ, ಅದಕ್ಕೆ ಅನುಮೋದನೆ ಕೊಡಿಸಲಾಗುವುದು’ ಎಂದು ಭರವಸೆ ನೀಡಿದರು.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು.

‘ಬರ ಪರಿಹಾರದ ಬಗ್ಗೆಯೂ ಹೇಳಿ’

ಬೆಂಗಳೂರು: ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆಯವರು ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ಮೇಳದಲ್ಲಿ ‘ಕರ್ನಾಟಕದ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಅಗತ್ಯ ನೀಡುತ್ತದೆ’ ಎಂದು ಹೇಳಿದರು. ಆಗ ವೇದಿಕೆಯಲ್ಲೇ ಇದ್ದ ಶಾಸಕ ವಿನಯ್ ಕುಲಕರ್ಣಿ, ‘ಮೊದಲು ಕರ್ನಾಟಕ ಬರ ಪರಿಹಾರದ ಬಗ್ಗೆಯೂ ಹೇಳಿ’ ಎಂದು ಅವರು ಕೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶೋಭಾ ಅವರು, ‘ಖಂಡಿತವಾಗಿ ಎಲ್ಲವನ್ನೂ ಗಮನಿಸುತ್ತಾರೆ. ಇಲ್ಲಿ ನೀವು ರಾಜಕೀಯ ಮಾಡಲು ಬರಬೇಡಿ, ಕುತ್ಕೊಳ್ಳಿ’ ಎಂದು ಹೇಳಿದರು.

ರಾಮಮಂದಿರ ಉದ್ಘಾಟನೆ: ಸಿ.ಎಂಗೆ ಆಹ್ವಾನ

ಅಯೋಧ್ಯೆಯಲ್ಲಿ ಇದೇ 22ರಂದು ನಡೆಯಲಿರುವ ರಾಮಮಂದಿರ ಉದ್ಘಾಟನೆಗೆ ಆಗಮಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಉತ್ತರ ಪ್ರದೇಶದ ಕೃಷಿ ಸಚಿವ ಸೂರ್ಯಪ್ರತಾಪ್ ಸಾಹಿ ಅವರು ವೈಯಕ್ತಿಕವಾಗಿ ಆಹ್ವಾನ ನೀಡಿದರು.

ನಗರದ ಅರಮನೆ ಮೈದಾನದಲ್ಲಿ ನಡೆದ ವಾಣಿಜ್ಯ ಮೇಳದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡುವ ವೇಳೆ ಮುಖ್ಯಮಂತ್ರಿಯವರನ್ನು ಆಹ್ವಾನಿಸಿದರು. ‘ಉಳಿದವರೆಲ್ಲರೂ ಜನವರಿ 26ರ ನಂತರ ಅಯೋಧ್ಯೆಗೆ ಬರಬಹುದು’ ಎಂದು ಮನವಿ ಮಾಡಿದರು.

ಹಾವೇರಿ ತಾಲ್ಲೂಕಿನ ದೇವಗಿರಿಯ ಏಳು ಕೇಂದ್ರಗಳಿಗೆ ಆಧುನಿಕ ಸೌಲಭ್ಯ • ಪುಟಾಣಿಗಳಲ್ಲಿ ಸಂತಸ

ಸ್ಮಾರ್ಟ್ ಅಂಗನವಾಡಿ: ಹಾಜರಾತಿ ವೃದ್ಧಿ

• ಸಿದ್ದು ಆರ್.ಜಿ.ಹಳ್ಳಿ



ಹಾವೇರಿ ತಾಲ್ಲೂಕಿನ ದೇವಗಿರಿ ಗ್ರಾಮದ ಸುಸಜ್ಜಿತ ಅಂಗನವಾಡಿ ಕೇಂದ್ರದಲ್ಲಿ ಕಲಿಕೆಯಲ್ಲಿ ನಿರತರಾದ ಪುಟಾಣಿ ಮಕ್ಕಳು
–ಪ್ರಜಾವಾಣಿ ಚಿತ್ರಗಳು: ಮಾಲತೇಶ ಇಚ್ಚಂಗಿ

ಹಾವೇರಿ: ತಾಲ್ಲೂಕಿನ ದೇವಗಿರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ 7 ಅಂಗನವಾಡಿ ಕೇಂದ್ರಗಳು ಅತ್ಯಾಧುನಿಕ ಸೌಲಭ್ಯಗಳೊಂದಿಗೆ ಆಕರ್ಷಕ ಸ್ವರೂಪ ಪಡೆದಿದ್ದು, ಪುಟಾಣಿ ಮಕ್ಕಳಲ್ಲಿ ಸಂತಸ ಮೂಡಿಸಿವೆ.

ಸ್ಮಾರ್ಟ್ ಅಂಗನವಾಡಿ ಕೇಂದ್ರಗಳಲ್ಲಿ ಟಿವಿ ಪರದೆ ಮೂಲಕ ಡಿಜಿಟಲ್ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ. ಆಡಿಯೊ-ವಿಡಿಯೊ ಒಳಗೊಂಡ ಪಾಠಗಳು ಮಕ್ಕಳನ್ನು ಕಲಿಕೆಯತ್ತ ಆಕರ್ಷಿಸುತ್ತಿವೆ. ನಿರಂತರ ವಿದ್ಯುತ್ ಸಂಪರ್ಕ, ಫ್ಯಾನ್ ಸೌಲಭ್ಯ ಕೂಡ ಕಲ್ಪಿಸಲಾಗಿದೆ.

‘ಮೊದಲಿಗೆ 6ರಿಂದ 8 ಮಕ್ಕಳು ಅಂಗನವಾಡಿಗೆ ಬರುತ್ತಿದ್ದರು. ಕಟ್ಟಡದ ಸ್ವರೂಪ ಬದಲಾದ ಬಳಿಕ 10 ರಿಂದ 15 ಮಕ್ಕಳು ಬರುತ್ತಿದ್ದಾರೆ. ಈ ಮಾದರಿ ಕಲಿಕಾ ಕೇಂದ್ರಕ್ಕೆ ಮಕ್ಕಳನ್ನು ಕಳುಹಿಸಲು ಪೋಷಕರು ಆಸಕ್ತರಾಗಿದ್ದಾರೆ’ ಎಂದು ದೇವಗಿರಿಯ ಅಂಗನವಾಡಿ ಕಾರ್ಯಕರ್ತೆ ವಿಜಯಲಕ್ಷ್ಮಿ ಪೂಜಾರ ತಿಳಿಸಿದರು.

ಮಳೆಯಿಂದ ಸೋರುತ್ತಿದ್ದ ಕಟ್ಟಡಗಳನ್ನು ದುರಸ್ತಿಗೊಳಿಸಿ, ಮಾಸಿದ ಗೋಡೆಗಳಿಗೆ ಬಣ್ಣ ಬಳಿಯಲಾಗಿದೆ. ಚಿತ್ತಾಕರ್ಷಕ 3ಡಿ ಪೇಂಟಿಂಗ್ ಮಾಡಲಾಗಿದೆ. ಗೋಡೆಗಳ ಮೇಲೆ ವನ್ಯಪ್ರಾಣಿ, ಚೋಟಾ ಭೀಮ್ ಮುಂತಾದ ಚಿತ್ರಗಳ ಜೊತೆಗೆ ಅಕ್ಷರ, ವಾರ, ತಿಂಗಳು, ಅಂಕಿ-ಅಂಶಗಳನ್ನು ಬರೆದು ಕಲಿಕೆಗೆ ಉತ್ತೇಜನ ನೀಡಲಾಗಿದೆ.

ಸಮವಸ್ತ್ರ, ಐಡಿ ಕಾರ್ಡ್: ಮಕ್ಕಳಿಗೆಂದೇ ಪುಟ್ಟ ಡೆಸ್ಕ್‌ಗಳಿವೆ. ಎಲ್ಲ ಮಕ್ಕಳಿಗೂ ಸಮವಸ್ತ್ರ ಮತ್ತು ಐಡಿ ಕಾರ್ಡ್ ವಿತರಿಸಲಾಗಿದೆ. ಖಾಸಗಿ ಕಾನ್ವೆಂಟ್ ಶಾಲೆಗಳಿಗೆ ಸಮಾನವಾಗಿ ಅಂಗನವಾಡಿ ಕೇಂದ್ರಗಳನ್ನು ಅಭಿವೃದ್ಧಿಪಡಿಸಲಾಗಿದೆ. ಪೌಷ್ಟಿಕ ಆಹಾರ, ಶುದ್ಧ ನೀರು, ಸ್ವಚ್ಛ ಶೌಚಾಲಯಕ್ಕೆ ಆದ್ಯತೆ ನೀಡಲಾಗಿದೆ.

ಆಟಕ್ಕೂ ಆದ್ಯತೆ: ‘ಅಂಗನವಾಡಿ ಅಂಗಳದಲ್ಲಿ ಜೋಕಾಲಿ, ಜಾರುಬಂಡಿ ಮುಂತಾದ ಆಟಿಕೆಗಳು ಇವೆ. ಆಟವಾಡುವಾಗ ಬಿದ್ದು ಮಕ್ಕಳಿಗೆ ಗಾಯವಾಗದಿರಲಿ ಎಂದು ನೆಲಕ್ಕೆ ಹಸಿರು ಹುಲ್ಲಿನ ಹೊದಿಕೆ ಅಳವಡಿಸಿದ್ದೇವೆ. ಕಾಂಪೌಂಡ್‌ಗಳಿಗೆ ಸುಣ್ಣಬಣ್ಣ ಬಳಿದು, ಅಲ್ಲಿಯೂ ವರ್ಣರಂಜಿತ ಚಿತ್ರಗಳನ್ನು ಬಿಡಿಸಲಾಗಿದೆ’ ಎಂದು ದೇವಗಿರಿ ಗ್ರಾಮದ ಅಂಗನವಾಡಿ ಕಾರ್ಯಕರ್ತೆ ಚನ್ನಕ್ಕ ಕಾರದ ವಿವರಿಸಿದರು.

‘₹ 14 ಲಕ್ಷ ವೆಚ್ಚದಲ್ಲಿ ಅಭಿವೃದ್ಧಿ’

‘ಅಮೃತ ಯೋಜನೆ, 15ನೇ ಹಣಕಾಸು ಆಯೋಗದ ಅನುದಾನ, ಗ್ರಾಮ ಪಂಚಾಯಿತಿ ಸದಸ್ಯರ ನೆರವು ಮತ್ತು ಜನರ ದೇಣಿಗೆಯಿಂದ ₹14 ಲಕ್ಷ ವೆಚ್ಚದಲ್ಲಿ 7 ಅಂಗನವಾಡಿ ಕೇಂದ್ರಗಳನ್ನು ಉನ್ನತೀಕರಿಸಿದ್ದೇವೆ. ಪುಸ್ತಕ, ಆಟಿಕೆಗಳನ್ನು ಜೋಡಿಸಿಡಲು ರ್‍ಯಾಕ್ ಕೊಡಿಸಿದ್ದೇವೆ. ಮಕ್ಕಳು ತಪ್ಪದೇ ಅಂಗನವಾಡಿ ಕೇಂದ್ರಗಳಿಗೆ ಬರುತ್ತಿರುವುದು ಸಂತಸ ತಂದಿದೆ’ ಎಂದು ದೇವಗಿರಿ ಗ್ರಾಮ ಪಂಚಾಯಿತಿ ಪಿಡಿಒ ಸುನೀತಾ ಗರಡಿ ಅವರು ತಿಳಿಸಿದರು.



ಹಾವೇರಿ ತಾಲ್ಲೂಕಿನ ದೇವಗಿರಿ ಗ್ರಾಮದ ಅಂಗನವಾಡಿ ಅಂಗಳದಲ್ಲಿ ಆಟವಾಡುತ್ತಿರುವ ಮಕ್ಕಳು

ಈ ಮಾದರಿಯಲ್ಲೇ ಇತರ ಕಡೆಗಳಲ್ಲೂ ಅಭಿವೃದ್ಧಿಪಡಿಸುತ್ತೇವೆ. ಉದ್ಯೋಗ ಖಾತ್ರಿ ಯೋಜನೆಯಡಿ ಹೊಸ ಕಟ್ಟಡ, ಕೈತೋಟ ಅಭಿವೃದ್ಧಿಪಡಿಸುತ್ತೇವೆ
ಅಕ್ಷಯ ಶ್ರೀಧರ
ಸಿಇಒ, ಹಾವೇರಿ ಜಿಲ್ಲಾ ಪಂಚಾಯಿತಿ

ಮಹಿಳಾ ಕಾಂಗ್ರೆಸ್: ಅಲ್ಕಾ ಅಧ್ಯಕ್ಷೆ



ಅಲ್ಕಾ ಲಂಬಾ

ನವದೆಹಲಿ (ಪಿಟಿಐ): ಮಾಜಿ ಶಾಸಕಿ ಅಲ್ಕಾ ಲಂಬಾ ಅವರು ಅಖಿಲ ಭಾರತ ಮಹಿಳಾ ಕಾಂಗ್ರೆಸ್‌ನ ನೂತನ ರಾಷ್ಟ್ರೀಯ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.

ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ವರುಣ್ ಚೌಧರಿ ಅವರನ್ನು ಪಕ್ಷದ ವಿದ್ಯಾರ್ಥಿ ಸಂಘಟನೆ ಎನ್‌ಎಸ್‌ಯುಐನ ಅಧ್ಯಕ್ಷರನ್ನಾಗಿ ಶುಕ್ರವಾರ ನೇಮಕ ಮಾಡಿದರು.

ಲಂಬಾ ಅವರನ್ನು ಕಳೆದ ವರ್ಷ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ (ಸಿಡಬ್ಲ್ಯುಸಿ) ‘ವಿಶೇಷ ಆಹ್ವಾನಿತ’ರನ್ನಾಗಿ ಹೆಸರಿಸಲಾಗಿತ್ತು. ಸಣ್ಣ ವಯಸ್ಸಿನಲ್ಲೇ ರಾಜಕೀಯ ಜೀವನ ಆರಂಭಿಸಿದ್ದ ಅಲ್ಕಾ ಅವರು 1995 ರಲ್ಲಿ ಎನ್‌ಎಸ್‌ಯುಐ ಅಭ್ಯರ್ಥಿಯಾಗಿ ದೆಹಲಿ ವಿ.ವಿ ಸ್ಟೂಡೆಂಟ್ಸ್ ಯೂನಿಯನ್‌ನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

2014 ರಲ್ಲಿ ಕಾಂಗ್ರೆಸ್ ತೊರೆದು ಎಎಪಿ ಸೇರಿದ್ದ ಅವರು 2019 ರಲ್ಲಿ ಕಾಂಗ್ರೆಸ್‌ಗೆ ವಾಪಸಾಗಿದ್ದರು. 2015ರ ಚುನಾವಣೆಯಲ್ಲಿ ದೆಹಲಿಯ ಚಾಂದನಿ ಚೌಕ ಕ್ಷೇತ್ರದಿಂದ ಶಾಸಕಿಯಾಗಿ ಆಯ್ಕೆಯಾಗಿದ್ದರು.

ಮಹಿಳಾ ಕಾಂಗ್ರೆಸ್ ನಿರ್ಗಮಿತ ಅಧ್ಯಕ್ಷೆ ನೆಟ್ಟಾ ಡಿಸೋಜಾ ಮತ್ತು ಎನ್‌ಎಸ್‌ಯುಐ ನಿರ್ಗಮಿತ ಅಧ್ಯಕ್ಷ ನೀರಜ್ ಕುಂದನ್ ಅವರ ಕೊಡುಗೆಗಳನ್ನು ಪಕ್ಷವು ಶ್ಲಾಘಿಸುತ್ತದೆ ಎಂದು ಕಾಂಗ್ರೆಸ್ ಪ್ರಕಟಣೆ ತಿಳಿಸಿದೆ.

‘50 ಸಾವಿರ ವಾಹನಗಳು ಗುಜರಿಗೆ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ರಾಷ್ಟ್ರೀಯ ವಾಹನ ಗುಜರಿ ನೀತಿ’ ಅಡಿ ಇದುವರೆಗೆ 49,770 ವಾಹನಗಳನ್ನು ಗುಜರಿಗೆ ಹಾಕಲಾಗಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ 38,200 ವಾಹನಗಳನ್ನು ಗುಜರಿಗೆ ಹಾಕಲಾಗಿದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ತಿಳಿಸಿದೆ.

ಈ ಕುರಿತು ಮಾತನಾಡಿದ ಕೇಂದ್ರ ರಸ್ತೆ ಸಾರಿಗೆ ಇಲಾಖೆ ಕಾರ್ಯದರ್ಶಿ ಅನುರಾಗ್ ಜೈನ್ ಅವರು, ‘ವಾಹನ ಗುಜರಿ ನೀತಿಯಡಿ ದೇಶದಲ್ಲಿ 44 ನೋಂದಾಯಿತ ವಾಹನಗಳ ಗುಜರಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಗುಜರಿಗೆ ಹಾಕುವ ವಾಹನಗಳಿಗೆ ರಿಯಾಯಿತಿ ಮತ್ತು ವಾಹನಗಳ ಮೇಲಿನ ತೆರಿಗೆ ವಿನಾಯಿತಿ ನೀಡುವುದಾಗಿ 19 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ತಿಳಿಸಿವೆ’ ಎಂದರು.

ಈ ನೀತಿಯಿಂದಾಗಿ ವಾಹನಗಳ ಖರೀದಿ ಶೇ 8ರಷ್ಟು ಹೆಚ್ಚಳವಾಗಲಿದ್ದು, ದೇಶದ ಜಿಡಿಪಿಗೆ ಶೇ 0.5ರಷ್ಟು ಕೊಡುಗೆ ನೀಡಲಿದೆ. ಆದಾಗ್ಯೂ, ವಾಹನಗಳ ತಯಾರಕ ಸಂಸ್ಥೆಗಳು ವಾಹನಗಳ ಗುಜರಿ ನೀತಿಗೆ ಅನಿರ್ಬಂಧಿತ ಸಹಕಾರ ನೀಡಬೇಕು ಎಂದು ಸೂಚಿಸಿದರು. 2021ರ ಆಗಸ್ಟ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರೀಯ ವಾಹನಗಳ ಗುಜರಿ ನೀತಿಯನ್ನು ಜಾರಿಗೊಳಿಸಿದ್ದರು. ಈ ನೀತಿಯಿಂದ ಚಾಲನೆಗೆ ಅರ್ಹವಿಲ್ಲದ ಮತ್ತು ವಾಯು ಮಾಲಿನ್ಯಕ್ಕೆ ಕಾರಣವಾಗುವ ವಾಹನಗಳನ್ನು ಗುಜರಿಗೆ ಹಾಕಲು ನೆರವಾಗಲಿದೆ. ಅಲ್ಲದೆ, ದೇಶದ ಆರ್ಥಿಕತೆಗೂ ಪೂರಕವಾಗಲಿದೆ.

ವೃದ್ಧಾಪ್ಯ ಪಿಂಚಣಿ: ಮಕ್ಕಳಿಗೆ ಊಟ

ಹೂವಿನಹಡಗಲಿ ತಾಲ್ಲೂಕಿನ 63–ತಿಮಲಾಪುರ ಗ್ರಾಮದ ಗಂಗಪ್ಪಜ್ಜನ ಸೇವೆ

• ಕೆ. ಸೋಮಶೇಖರ್



ಗಂಗಪ್ಪಜ್ಜ

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ 63–ತಿಮಲಾಪುರ (ಅಲ್ಲಿಪುರ) ಗ್ರಾಮದ ಬೊಗಳೆ ಗಂಗಪ್ಪಜ್ಜ (80) ಅವರು ತಮ್ಮ ವೃದ್ಧಾಪ್ಯ ಪಿಂಚಣಿಯನ್ನು ಸ್ವಂತಕ್ಕೆ ಬಳಸದೇ, ಅದೇ ಮಕ್ಕಳಿಗೆ ಸಿಹಿ ಊಟ ಒದಗಿಸಲು ಇಷ್ಟಪಡುತ್ತಾರೆ.

ಗ್ರಾಮದ ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ 1 ರಿಂದ 10ನೇ ತರಗತಿವರೆಗೆ 265 ವಿದ್ಯಾರ್ಥಿಗಳಿದ್ದಾರೆ. ಗಂಗಪ್ಪಜ್ಜ ತಮಗೆ ಮಾಸಾಶನ ಬಂದ ಮಾರನೇ ದಿನ ಶಾಲೆಯಲ್ಲಿ ಸಿಹಿ ಅಡುಗೆ ಮಾಡಿಸುತ್ತಾರೆ. ಗೋಧಿ ಪಾಯಸ, ಕೇಸರಿ ಬಾತ್, ಹೆಸರುಬೇಳೆ ಪಾಯಸ ಹೀಗೆ ಒಂದೊಂದು ತಿಂಗಳು ಒಂದೊಂದು ಸಿಹಿ ತಿನಿಸು ತಯಾರಿಸುತ್ತಾರೆ.



ಹೂವಿನಹಡಗಲಿ ತಾಲ್ಲೂಕು 63– ತಿಮಲಾಪುರ ಗ್ರಾಮದ ಸರ್ಕಾರಿ ಶಾಲೆ ಮಕ್ಕಳಿಗೆ ಸಿಹಿ ಉಣಬಡಿಸುತ್ತಿರುವ ಗಂಗಪ್ಪಜ್ಜ

ಗಂಗಪ್ಪಜ್ಜಗೆ ಸಿಗುವ ₹1,200 ಪಿಂಚಣಿಯನ್ನು ಶಾಲಾ ಮಕ್ಕಳಿಗೆ ಮೀಸಲಿಡುತ್ತಾರೆ. ಜಮೀನು ಗುತ್ತಿಗೆಯಿಂದ ಬರುವ ಹಣದಲ್ಲಿ ಜೀವನ ನಿರ್ವಹಿಸುತ್ತಾರೆ.

‘ಬಾಲ್ಯದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಮೈಲಾರ ಮಹಾದೇವಪ್ಪ ಸಿದ್ದಮ್ಮ ದಂಪತಿಯ ಚಳವಳಿಯಲ್ಲಿ ನಾನು ಭಾಗವಹಿಸಿದ್ದೆ. ಅವರ ಸೇವಾಕಾರ್ಯಗಳಿಂದ ಪ್ರಭಾವಿತನಾಗಿ ನಮ್ಮೂರ ಶಾಲೆಗೆ ನನ್ನ ಕೈಲಾದ ಸೇವೆಯನ್ನು ಸಲ್ಲಿಸುತ್ತಿರುವೆ. ದೇವರ ಸಮಾನರಾದ ಮಕ್ಕಳನ್ನು ಸಂತೃಪ್ತಿ ಪಡಿಸಿದರೆ, ದೇವರನ್ನು ತೃಪ್ತಿಪಡಿಸಿದಂತೆ ಎಂಬುದು ನನ್ನ ಭಾವನೆ. 6 ವರ್ಷಗಳಿಂದ ಪಿಂಚಣಿ ಹಣವನ್ನು ಶಾಲಾ ಮಕ್ಕಳ ಸಿಹಿಯೂಟಕ್ಕೆ ನೀಡುತ್ತಿರುವೆ’ ಎಂದು ಗಂಗಪ್ಪಜ್ಜ ಹೇಳಿದರು.

ಗಂಗಪ್ಪಜ್ಜ ಅಪರೂಪದ ದಾನಿ. ಅವರಿಗೆ ಆರ್ಥಿಕ ಸಂಕಷ್ಟವಿದ್ದರೂ ಪಿಂಚಣಿ ಹಣ ಸ್ವಂತಕ್ಕೆ ಬಳಸದೇ ಶಾಲಾ ಮಕ್ಕಳಿಗಾಗಿ ಖರ್ಚು ಮಾಡುತ್ತಾರೆ
ಶೇಖ್ ಮಹ್ಮದ್ ರಫಿ
ಪ್ರೌಢಶಾಲೆ ಮುಖ್ಯಶಿಕ್ಷಕ

‘ಸಿ.ಎಂ ದಾರಿ ತಪ್ಪಿಸುತ್ತಿರುವ ಕಾಣದ ಕೈಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿಯವರಿಗೆ ಒಂದೋ ಆಡಳಿತದ ಮೇಲೆ ಸಂಪೂರ್ಣ ನಿಯಂತ್ರಣ ಕೈತಪ್ಪಿದೆ ಅಥವಾ ಕಾಣದ ಕೈಗಳು ದಿಕ್ಕು ತಪ್ಪಿಸುತ್ತಿವೆ. ಇಲ್ಲವೆಂದರೆ ರಾಮಮಂದಿರ ಉದ್ಘಾಟನೆ ಸಂದರ್ಭದಲ್ಲಿ ಹಿಂದೂ ಕಾರ್ಯಕರ್ತರನ್ನು ಕೆಣಕಲೆಂದೇ ಉದ್ದೇಶಪೂರ್ವಕವಾಗಿ ಈ ಪ್ರಕರಣಕ್ಕೆ ಮರುಜೀವ ನೀಡುವ ಅಗತ್ಯವೇನಿತ್ತು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಪ್ರಶ್ನಿಸಿದರು.

‘ನಾನೂ ಕರಸೇವಕ ನನ್ನನ್ನೂ ಬಂಧಿಸಿ’ ಎಂಬ ಘೋಷವಾಕ್ಯದಡಿ ಬಿಜೆಪಿ ಆರಂಭಿಸಿರುವ ಅಭಿಯಾನ ಶುಕ್ರವಾರವೂ ಮುಂದುವರಿಯಿತು. ಆರ್. ಅಶೋಕ, ಸಂಸದ ಪಿ.ಸಿ. ಮೋಹನ್, ವಿಧಾನಪರಿಷತ್ತಿನ ವಿರೋಧ ಪಕ್ಷದ ಮುಖ್ಯಸಚೇತಕ ಎನ್. ರವಿಕುಮಾರ್, ಶಾಸಕ ಎಸ್. ಸುರೇಶ್ ಕುಮಾರ್, ಮಾಜಿ ಸಚಿವ ರಾಮಚಂದ್ರಗೌಡ ಬೆಂಗಳೂರಿನಲ್ಲಿ ನಡೆದ ಅಭಿಯಾನದಲ್ಲಿ ಫಲಕ ಹಿಡಿದು ಪ್ರತಿಭಟನೆ ತೋರಿಸಿದರು.



ಬೆಂಗಳೂರಿನ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆ ಎದುರು ಸಂಸದ ಪಿ.ಸಿ.ಮೋಹನ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ವಿಧಾನ ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಅವರು ಶುಕ್ರವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಈ ವೇಳೆ ಮಾತನಾಡಿದ ಅಶೋಕ, ಮೇಲ್ಕಂಡ ಎರಡರಲ್ಲಿ ಯಾವುದು ಸತ್ಯವಾದರೂ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿಯುವ ನೈತಿಕತೆ ಹೊಂದಿಲ್ಲ. ಆದ್ದರಿಂದ ತಮ್ಮ ತಪ್ಪನ್ನು ಒಪ್ಪಿಕೊಂಡು ಶ್ರೀಕಾಂತ್ ಪೂಜಾರಿ ಅವರನ್ನು ಪ್ರಕರಣದಿಂದ ಮುಕ್ತಗೊಳಿಸಬೇಕು ಎಂದು ಒತ್ತಾಯಿಸಿದರು.

ಬಂಧಿತ ಶ್ರೀಕಾಂತ ಪೂಜಾರಿ ಅವರ ಮೇಲೆ ಇದ್ದ 16 ಪ್ರಕರಣಗಳಲ್ಲಿ 15 ಪ್ರಕರಣಗಳು ಈಗಾಗಲೇ ತಾರ್ಕಿಕ ಅಂತ್ಯ ಕಂಡಿದ್ದು, ಬಾಕಿ ಇರುವ ಒಂದು ಪ್ರಕರಣ 1992 ರಲ್ಲಿ ಅವರು ನಾಪತ್ತೆ ಆಗಿದ್ದರು ಎಂಬ ಕಾರಣಕ್ಕೆ ದಾಖಲಾಗಿತ್ತು. ಆದರೆ, ಸಿದ್ದರಾಮಯ್ಯ 16 ಪ್ರಕರಣಗಳೂ ಬಾಕಿ ಇದೆ ಎಂದು ಹಸಿ ಸುಳ್ಳು ಹೇಳಿದ್ದಾರೆ. ಸುಳ್ಳು ಹೇಳಿರುವ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಶ್ರೀಕಾಂತ ಪೂಜಾರಿ ಬಂಧನ, ಪ್ರತಿಭಟನೆ ಸೇರಿ ಎಲ್ಲವೂ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ನಡೆದಿವೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಕೈವಾಡವಿದೆ
ಜಗದೀಶ ಶೆಟ್ಟರ್
ವಿಧಾನ ಪರಿಷತ್ ಸದಸ್ಯ

ಪಶ್ಚಿಮ ಬಂಗಾಳ: ಇ.ಡಿ ಅಧಿಕಾರಿಗಳ ಮೇಲೆ ಹಲ್ಲೆ

ಒಂದನೇ ಪುಟದಿಂದ...

ಏನಿದು ಘಟನೆ?: ಪಡಿತರ ವಿತರಣೆಯಲ್ಲಿ ನಡೆದಿರುವ ಹಗರಣ ಸಂಬಂಧ ಇ.ಡಿ ಅಧಿಕಾರಿಗಳು ಶುಕ್ರವಾರ ಬೆಳಿಗ್ಗೆ ಏಕಕಾಲದಲ್ಲಿ ಪಶ್ಚಿಮ ಬಂಗಾಳದ 15 ಕಡೆ ದಾಳಿ ನಡೆಸಿದ್ದಾರೆ. ಅಧಿಕಾರಿಗಳ ತಂಡವೊಂದು ಉತ್ತರ 24 ಪರಗಣ ಜಿಲ್ಲೆಯ ಸಂದೇಶ್‌ಖಾಲೀ ಎಂಬಲ್ಲಿರುವ ಟಿಎಂಸಿ ನಾಯಕ ಶೇಖ್ ಶಾಜಹಾನ್ ಅವರ ಮನೆಯಲ್ಲಿ ಶೋಧಕ್ಕೆ ಮುಂದಾಗಿದೆ.

ಶಾಜಹಾನ್ ಅವರು ಇದೇ ಹಗರಣದಲ್ಲಿ ಬಂಧಿತರಾಗಿರುವ ಸಚಿವ ಜ್ಯೋತಿಪ್ರಿಯೊ ಮಲಿಕ್ ಅವರ ಆಪ್ತರಾಗಿದ್ದಾರೆ. ಹಗರಣದ ತನಿಖೆಯ ಭಾಗವಾಗಿ ಇ.ಡಿ ದಾಳಿ ನಡೆಸಿತ್ತು. ಇ.ಡಿ ಅಧಿಕಾರಿಗಳು ಶಾಜಹಾನ್ ಮನೆಗೆ ಬಂದ ಸುದ್ದಿ ತಿಳಿಯುತ್ತಿದ್ದಂತೆಯೇ ಅವರ ಬೆಂಬಲಿಗರು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳದಲ್ಲಿ ಜಮಾಯಿಸಿದರು.

‘ದೊಡ್ಡ ಸಂಖ್ಯೆಯಲ್ಲಿ ಸೇರಿದ್ದ ಟಿಎಂಸಿ ಬೆಂಬಲಿಗರು ಮೊದಲು ಇ.ಡಿ ಅಧಿಕಾರಿಗಳು ಮತ್ತು ಅವರ ಭದ್ರತೆಗೆ ಬಂದಿದ್ದ ಸಿಆರ್‌ಪಿಎಫ್ ಸಿಬ್ಬಂದಿಗೆ ಘೇರಾವ್ ಹಾಕಿದರು. ಆ ಬಳಿಕ ಏಕಾಏಕಿ ಹಲ್ಲೆ ನಡೆಸಿದರು’ ಎಂದು ಅಧಿಕಾರಿಯೊಬ್ಬರು ಹೇಳಿದರು.

‘ದಾಳಿಕೋರರು ವಾಹನಗಳನ್ನೂ ಜಖಂಗೊಳಿಸಿದರು. ಇದರಿಂದ ಅಧಿಕಾರಿಗಳು ತಮ್ಮ ವಾಹನಗಳನ್ನು ಅಲ್ಲೇ ಬಿಟ್ಟು, ಆಟೊ ರಿಕ್ಷಾ ಮತ್ತು ದ್ವಿಚಕ್ರ ವಾಹನಗಳಲ್ಲಿ ಸಂದೇಶ್‌ಖಾಲೀ ಪ್ರದೇಶದಿಂದ ಹೊರಗೆ ಸುರಕ್ಷಿತ ತಾಣಕ್ಕೆ ತೆರಳಬೇಕಾಯಿತು’ ಎಂದು ಘಟನೆಯನ್ನು ವಿವರಿಸಿದರು. ‘ಹಿಂದೆಂದೂ ಈ ರೀತಿಯ ದಾಳಿ ನಡೆದ ಉದಾಹರಣೆಗಳಿಲ್ಲ. ದಾಳಿಯಿಂದ ತಪ್ಪಿಸಿಕೊಳ್ಳಲು ನಮ್ಮ ಅಧಿಕಾರಿಗಳು ಸ್ಥಳದಿಂದ ಓಡಿಹೋಗಬೇಕಾಯಿತು’ ಎಂದರು.

ಘಟನೆಗೆ ಸಂಬಂಧಿಸಿದಂತೆ ಪೊಲೀಸರು 10 ಮಂದಿಯನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ಇ.ಡಿ ದಾಳಿಯ ವರದಿ ಮಾಡಲು ಸ್ಥಳಕ್ಕೆ ಬಂದಿದ್ದ ಪತ್ರಕರ್ತರ ಮೇಲೂ ಹಲ್ಲೆ ನಡೆದಿದೆ. ‘ಕೆಲವು ಪತ್ರಕರ್ತರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

800ರಿಂದ 1000 ಮಂದಿ ಇದ್ದರು: ‘ಶೇಖ್ ಶಾಜಹಾನ್ ಮನೆಗೆ ಹೋದ ಅಧಿಕಾರಿಗಳು ಮತ್ತು ಸಿಆರ್‌ಪಿಎಫ್‌ನ 27 ಸಿಬ್ಬಂದಿ ಮೇಲೆ 800ರಿಂದ 1000 ಮಂದಿ ದಾಳಿ ನಡೆಸಿದ್ದಾರೆ. ಕೈಯಲ್ಲಿ ಲಾಠಿ, ಕಲ್ಲು ಹಾಗೂ ಇಟ್ಟಿಗೆಗಳನ್ನು ಹಿಡಿದುಕೊಂಡಿದ್ದ ದಾಳಿಕೋರರು ಏಕಾಏಕಿ ನುಗ್ಗಿ ಬಂದಿದ್ದಾರೆ’ ಎಂದು ಇ.ಡಿ ನವದೆಹಲಿಯ ಕಚೇರಿ ಬಿಡುಗಡೆಗೊಳಿಸಿದ ಪ್ರಕಟಣೆ ತಿಳಿಸಿದೆ.

‘ಮೂವರು ಅಧಿಕಾರಿಗಳು ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಅಧಿಕಾರಿಗಳ ಮೊಬೈಲ್ ಫೋನ್‌ಗಳು, ಲ್ಯಾಪ್‌ಟಾಪ್ ಮತ್ತು ಪರ್ಸ್‌ಗಳನ್ನು ಜನರ ಗುಂಪು ಕಸಿದುಕೊಂಡಿದೆ. ಘಟನೆ ಬಗ್ಗೆ ಸ್ಥಳೀಯ ಪೊಲೀಸರಿಗೆ ದೂರು ನೀಡಲಾಗಿದೆ’ ಎಂದು ಹೇಳಿದೆ.

ಘೋರ ಘಟನೆ: ರಾಜ್ಯಪಾಲ ಆನಂದ್ ಬೋಸ್

ಇ.ಡಿ ಅಧಿಕಾರಿಗಳ ಮೇಲಿನ ಹಲ್ಲೆಯನ್ನು ರಾಜ್ಯಪಾಲ ಸಿ.ವಿ.ಆನಂದ್ ಬೋಸ್ ಅವರು ತೀಕ್ಷ್ಣ ಮಾತುಗಳಿಂದ ಖಂಡಿಸಿದ್ದಾರೆ. ‘ಸಂದೇಶ್‌ಖಾಲೀಯಲ್ಲಿ ನಡೆದ ಘೋರ ಘಟನೆ ಆತಂಕಕಾರಿಯಾಗಿದೆ’ ಎಂದಿದ್ದಾರೆ.

‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅನಾಗರಿಕತೆ ಮತ್ತು ವಿಧ್ವಂಸಕತೆಯನ್ನು ತಡೆಯುವುದು ಸುಸಂಸ್ಕೃತ ಸರ್ಕಾರದ ಕರ್ತವ್ಯವಾಗಿದೆ. ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮಕ್ಕಾಗಿ ನನ್ನ ಮುಂದಿರುವ ಎಲ್ಲಾ ಸಾಂವಿಧಾನಿಕ ಆಯ್ಕೆಗಳನ್ನು ಪರಿಶೀಲಿಸುತ್ತೇನೆ’ ಎಂದು ರಾಜಭವನ ಹೊರಡಿಸಿದ ಧ್ವನಿಮುದ್ರಿತ ಸಂದೇಶದಲ್ಲಿ ತಿಳಿಸಿದ್ದಾರೆ.

ಮಮತಾ ರಾಜೀನಾಮೆಗೆ ಬಿಜೆಪಿ ಆಗ್ರಹ

ನವದೆಹಲಿ (ಪಿಟಿಐ): ‘ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ನೈತಿಕ ಹೊಣೆಹೊತ್ತು ರಾಜೀನಾಮೆ ನೀಡಲಿ. ಜನರ ಹಾಗೂ ಇ.ಡಿ ಅಧಿಕಾರಿಗಳ ಕ್ಷಮೆಯಾಚಿಸಲಿ’ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ ಆಗ್ರಹಿಸಿದ್ದಾರೆ.

ಬಂಗಾಳದಲ್ಲಿ ‘ಜಂಗಲ್ ರಾಜ್’ ಇದೆ ಎಂದು ಟೀಕಿಸಿರುವ ಅವರು, ‘ದಾಳಿ ನಡೆಸಿದವರಲ್ಲಿ ರೋಹಿಂಗ್ಯಾಗಳು ಮತ್ತು ಅಕ್ರಮ ವಲಸಿಗರೂ ಇದ್ದರು’ ಎಂದು ಆರೋಪಿಸಿದರು.

‘ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಸರ್ಕಾರದ ಆಡಳಿತ ಮುಂದುವರಿದರೆ ರಾಷ್ಟ್ರೀಯ ಭದ್ರತೆಗೆ ಅಪಾಯವಿದೆ’ ಎಂದು ಬಿಜೆಪಿ ಪಶ್ಚಿಮ ಬಂಗಾಳ ಸಹ ಉಸ್ತುವಾರಿ ಅಮಿತ್ ಮಾಳವೀಯಾ ಹೇಳಿದ್ದಾರೆ.

ಟಿಎಂಸಿ ಆಡಳಿತದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಪಶ್ಚಿಮ ಬಂಗಾಳದಲ್ಲಿ ತಕ್ಷಣದಿಂದಲೇ ರಾಷ್ಟ್ರಪತಿ ಆಳ್ವಿಕೆ ಜಾರಿಯಾಗಲಿ
ಅಧೀರ್ ರಂಜನ್ ಚೌಧರಿ, ಬಂಗಾಳ ಕಾಂಗ್ರೆಸ್ ಅಧ್ಯಕ್ಷ

ಪುತ್ರಿ ವಶಕ್ಕೆ ಕೋರಿದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪತ್ನಿಯ ಸುಪರ್ದಿಯಲ್ಲಿ ಭಾರತದಲ್ಲಿ ನೆಲೆಯೂರಿರುವ ನಾಲ್ಕು ವರ್ಷದ ಮಗಳನ್ನು ನನ್ನ ಸುಪರ್ದಿಗೆ ನೀಡುವಂತೆ ಆದೇಶಿಸಬೇಕು‘ ಎಂದು ಕೋರಿ ಅಮೆರಿಕದಲ್ಲಿರುವ ಪತಿ ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ಅಮೆರಿಕದಲ್ಲಿರುವ ಪತಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ, ‘ಮಗುವಿನ ಹಿತಾಸಕ್ತಿ ಹಾಗೂ ಯೋಗಕ್ಷೇಮವನ್ನು ಪರಿಗಣಿಸಿದರೆ, ಮಗು ತಾಯಿಯೊಂದಿಗೆ ಇರುವುದೇ ಸೂಕ್ತ. ಮಗುವಿನ ಭೇಟಿ ಮತ್ತು ಸುಪರ್ದಿ ವಿಚಾರದಲ್ಲಿ ಪ್ರತ್ಯೇಕವಾಗಿ ತಮ್ಮ ಹಕ್ಕು ಪ್ರತಿಪಾದಿಸಲು ಪತ್ನಿ ಹಾಗೂ ಪತಿಗೆ ಮುಕ್ತ ಅವಕಾಶವಿದ್ದು ಈ ಅರ್ಜಿಯನ್ನು ವಜಾಗೊಳಿಸಲಾಗುತ್ತಿದೆ‘ ಎಂದು ತಿಳಿಸಿದೆ.

ಪ್ರಕರಣವೇನು?: ದಂಪತಿ 2018ರಲ್ಲಿ ಅಮೆರಿಕದಲ್ಲಿ ವಿವಾಹವಾಗಿದ್ದರು. 2019ರಲ್ಲಿ ಹೆಣ್ಣು ಮಗು ಜನಿಸಿತ್ತು. ಪತ್ನಿಯು 2021ರ ಅಕ್ಟೋಬರ್ 6ರಂದು ಪತಿಯಿಂದ ಪ್ರತ್ಯೇಕವಾಗಿ ಮಗುವನ್ನು ತಮ್ಮ ಸುಪರ್ದಿಯಲ್ಲಿ ಇರಿಸಿಕೊಂಡು ವಾಸ ಮಾಡುತ್ತಿದ್ದರು. ಇಬ್ಬರ ಮಧ್ಯೆ ಭಿನ್ನಾಭಿಪ್ರಾಯ ತಲೆದೋರಿದ ಹಿನ್ನೆಲೆಯಲ್ಲಿ ಕ್ಯಾಲಿಫೋರ್ನಿಯಾ ಕೋರ್ಟ್‌ಗೆ 2022ರಲ್ಲಿ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಲಾಗಿತ್ತು.

ಈ ಅರ್ಜಿ ವಿಚಾರಣಾ ಹಂತದಲ್ಲಿರುವಾಗ, ’ನಾನೇ ಮಗುವಿನ ಪೋಷಣೆ ಮಾಡುತ್ತೇನೆ‘ ಎಂಬುದಾಗಿ ಘೋಷಿಸುವಂತೆ ಕೋರಿ ಪತ್ನಿ ಕೋರ್ಟ್ ಮೆಟ್ಟಿಲೇರಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ್ದ ಅಮೆರಿಕ ಕೋರ್ಟ್, ಮಗುವಿನ ಸುಪರ್ದಿಯನ್ನು ತಂದೆ, ತಾಯಿ ಇಬ್ಬರಿಗೂ ನೀಡಿತ್ತು. ‘ಪರಸ್ಪರ ಸಮ್ಮತಿ ಹಾಗೂ ಕೋರ್ಟ್ ಅನುಮತಿ ಇಲ್ಲದೇ ಮಗುವನ್ನು ಅಮೆರಿಕದಿಂದ ಹೊರಗೆ ಕರೆದೊಯ್ಯಬಾರದು‘ ಎಂದು 2022ರ ಆಗಸ್ಟ್ 25ರಂದು ಆದೇಶಿಸಿತ್ತು.

ಅಪಹೃತ ಹಡಗಿನಲ್ಲಿದ್ದ 21 ಮಂದಿ ರಕ್ಷಣೆ

ಒಂದನೇ ಪುಟದಿಂದ...

ಹಡಗು ಬ್ರೆಜಿಲ್‌ನ ಡು ಅಕೊ ಬಂದರಿನಿಂದ ಸಂಚಾರ ಆರಂಭಿಸಿದ್ದು, ಬಹರೇನ್‌ನ ಖಲೀಫಾ ಬಿನ್ ಸಲ್ಮಾನ್‌ಗೆ ತೆರಳುತ್ತಿತ್ತು. ಅಪಹರಣಕ್ಕೆ ಒಳಗಾದಾಗ ಸೊಮಾಲಿಯಾ ಪೂರ್ವದಲ್ಲಿ 300 ನಾಟಿಕಲ್ ಮೈಲು ದೂರದಲ್ಲಿತ್ತು.


ಹಡಗಿನ ಸಮೀಪದಲ್ಲಿಯೇ ಐಎನ್‌ಎಸ್ ಚೆನ್ನೈ ಇದ್ದುದರಿಂದ, ಕಾರ್ಯಾಚರಣೆಗೆ ತೊಡಗಿಸಲಾಯಿತು. ಇದು, ಅಪಹೃತ ಹಡಗನ್ನು ಮಧ್ಯಾಹ್ನ ಅಡ್ಡಗಟ್ಟಿತ್ತು. ಗಸ್ತು ವಿಮಾನ, ಶಸ್ತ್ರಸಜ್ಜಿತ ಎಂಕ್ಯೂ9ಬಿ ಡ್ರೋನ್, ಹೆಲಿಕಾಪ್ಟರ್ ಬಳಸಿಯೂ ನಿಗಾ ವಹಿಸಲಾಗಿತ್ತು.

ಇದಕ್ಕೂ ಮೊದಲೇ ನೌಕಾಪಡೆಯ ಯುದ್ಧ ವಿಮಾನದ ಮೂಲಕ ಹಡಗಿನೊಂದಿಗೆ ಸಂಪರ್ಕ ಸಾಧಿಸಲಾಗಿತ್ತು. ಭಾರತೀಯ ಸಿಬ್ಬಂದಿ ಸೇರಿ ಹಡಗಿನಲ್ಲಿದ್ದವರ ಸುರಕ್ಷತೆಯನ್ನು ಖಾತರಿಪಡಿಸಿಕೊಳ್ಳಲಾಗಿತ್ತು. ರಕ್ಷಣಾ ಕಾರ್ಯ ಪೂರ್ಣಗೊಂಡ ಬಳಿಕ ಹಡಗಿನಲ್ಲಿ ವಿದ್ಯುತ್ ಸಂಪರ್ಕ ಮರುಸ್ಥಾಪಿಸಲಾಗಿದೆ. ಮುಂದಿನ ಬಂದರಿನೆಡೆಗಿನ ಸಂಚಾರವನ್ನು ಹಡಗು ಮುಂದುವರಿಸಿತು.

ಹಡಗು ಅಪಹರಣವಾಗಿದ್ದನ್ನು ಗುರುವಾರ ಇಂಗ್ಲೆಂಡ್‌ನ ಯುಕೆಎಂಟಿಒ ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿತ್ತು. 5-6 ಜನರಿದ್ದ ಶಸ್ತ್ರಸಜ್ಜಿತರ ಗುಂಪು ಜ. 4ರಂದು ಹಡಗನ್ನು ಏರಿತ್ತು ಎಂದು ತಿಳಿಸಲಾಗಿತ್ತು.

ವಾಣಿಜ್ಯ ಉದ್ದೇಶದ ಹಡಗುಗಳ ಅಪಹರಣ ಅಥವಾ ಅಪಹರಣದ ಯತ್ನ ಕೃತ್ಯಗಳು ಏಡನ್ ಕೊಲ್ಲಿ ಮತ್ತು ಅರಬ್ಬಿ ಸಮುದ್ರ ವಲಯದಲ್ಲಿ ಆರು ವರ್ಷಗಳ ತರುವಾಯ ಕಳೆದ ಡಿಸೆಂಬರ್ ತಿಂಗಳಲ್ಲಿ ಹಠಾತ್ ಏರಿಕೆಯಾಗಿವೆ. ಹುತಿ ದಾಳಿಯನ್ನು ಹತ್ತಿಕ್ಕುವ ಗುರಿಯಿಂದ ಅಮೆರಿಕದ ನೌಕಾಪಡೆಯು ಕೆಂಪುಸಮುದ್ರ ವಲಯದತ್ತ ಹೆಚ್ಚು ಗಮನಹರಿಸಿದ್ದು ಇದಕ್ಕೆ ಕಾರಣ ಎನ್ನುತ್ತಾರೆ ತಜ್ಞರು.

ಷೇರುಪೇಟೆ ವಹಿವಾಟು ▲ 178



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,658
ಇಂದಿನ ಅಂತ್ಯ	21,710
▲	52
ದಿನದ ಗರಿಷ್ಠ	21,749

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹590
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹590

ಖಾದ್ಯ ತೈಲ ಮುಂಬೈ (10 ಕೆಜಿಗೆ)



ಶೇಂಗಾ (ರಿಫೈನ್ಡ್)	₹1600 (1610)
ಸೋಯಾ (ರಿಫೈನ್ಡ್)	₹885 (875)
ಸೂರ್ಯಕಾಂತಿ (ರಿಫೈನ್ಡ್)	₹902 (885)
ಪಾಮೋಲಿನ್	₹827 (824)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹239-469
ದ್ವಿತಳಿ (ಬಿ.ವಿ)	₹335-588

ಎನ್.ಆರ್.ಪುರ ರಬ್ಬರ್


(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹152.50
ಆರ್‌ಎಸ್‌ಎಸ್-5	₹148.50
ಗುಡ್ ಲಾಟ್	₹131.50

ವಿನಿಮಯ ದರ

$ ಡಾಲರ್	83.15
£ ಪೌಂಡ್	105.30
€ ಯುರೊ	90.77
¥ ಯೆನ್ (100ಕ್ಕೆ)	57

ಟೊಯೊಟಾ ವಾಹನ ಬೆಲೆ ಶೇ 2.5 ಹೆಚ್ಚಳ

ನವದೆಹಲಿ (ಪಿಟಿಐ): ಆಯ್ದ ಮಾದರಿಯ ವಾಹನಗಳ ಮೇಲೆ ಶೇ 0.5ರಿಂದ ಶೇ 2.5ರ ವರೆಗೆ ಬೆಲೆ ಹೆಚ್ಚಿಸಲಾಗಿದೆ ಎಂದು ಟೊಯೊಟಾ ಕಿರ್ಲೋಸ್ಕರ್ ಮೋಟರ್ ಶುಕ್ರವಾರ ತಿಳಿಸಿದೆ.



ಉತ್ಪಾದನಾ ವೆಚ್ಚದ ಹೆಚ್ಚಳದಿಂದಾಗಿ ದರ ಏರಿಕೆ ಅನಿವಾರ್ಯವಾಗಿದೆ. ಈ ಬೆಲೆ ಹೊಂದಾಣಿಕೆಯು ಗ್ರಾಹಕರ ಮೇಲೆ ಕನಿಷ್ಠ ಪರಿಣಾಮ ಬೀರಲಿದೆ. ಏರಿಕೆಯು ಜನವರಿ 1ರಿಂದಲೇ ಜಾರಿಗೆ ಬಂದಿದೆ ಎಂದು ಕಂಪನಿ ತಿಳಿಸಿದೆ.

ಮಾರುತಿ ಸುಜುಕಿ, ಹುಂಡೈ, ಟಾಟಾ ಮೋಟರ್ಸ್ ಸೇರಿದಂತೆ ಪ್ರಯಾಣಿಕ ವಾಹನ ತಯಾರಕರು ಜನವರಿಯಿಂದ ಬೆಲೆ ಏರಿಕೆ ಮಾಡುವುದಾಗಿ ಈಗಾಗಲೇ ಘೋಷಿಸಿವೆ.

ಔಡಿ ಕಾರು ಮಾರಾಟ ಏರಿಕೆ: ದೇಶದಲ್ಲಿ ಔಡಿ ಕಾರುಗಳ ಚಿಲ್ಲರೆ ಮಾರಾಟವು 2023ರಲ್ಲಿ ಶೇ 89ರಷ್ಟು ಬೆಳವಣಿಗೆ ಕಂಡಿದ್ದು, ಒಟ್ಟು 7,931 ಕಾರುಗಳು ಮಾರಾಟವಾಗಿವೆ. 2022 ರಲ್ಲಿ ಒಟ್ಟು 4,187 ಕಾರುಗಳು ಮಾರಾಟ ಆಗಿದ್ದವು ಎಂದು ಕಂಪನಿ ತಿಳಿಸಿದೆ.

ಎ4, ಎ6 ಮತ್ತು ಕ್ಯು5 ವಾಹನಗಳಿಗೆ ಹೆಚ್ಚಿದ ಬೇಡಿಕೆ ಸೇರಿದಂತೆ ವಿವಿಧ ಮಾದರಿಯ ಕಾರುಗಳಿಗೂ ಹೆಚ್ಚಿನ ಬೇಡಿಕೆ ಕಂಡುಬಂದಿರುವುದೇ ಈ ಮಾರಾಟ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ಕಂಪನಿ ತಿಳಿಸಿದೆ.

ವೋಲ್ವೊ ಕಾರು ಮಾರಾಟ ಏರಿಕೆ: ದೇಶದಲ್ಲಿ ವೋಲ್ವೊ ಕಾರುಗಳ ಮಾರಾಟವು 2023ರಲ್ಲಿ ಶೇ 31ರಷ್ಟು ಹೆಚ್ಚಾಗಿದೆ. ಒಟ್ಟು 2,423 ಕಾರುಗಳು ಮಾರಾಟವಾಗಿವೆ. 2022ರಲ್ಲಿ ದೇಶೀಯ ಮಾರುಕಟ್ಟೆಯಲ್ಲಿ 1,851 ಕಾರುಗಳ ಮಾರಾಟವಾಗಿತ್ತು ಎಂದು ಕಂಪನಿ ತಿಳಿಸಿದೆ.

ರಾಷ್ಟ್ರೀಯ ಸಾಂಖ್ಯಿಕ ಕಚೇರಿ ವರದಿ ಬಿಡುಗಡೆ; ಕೃಷಿ ಕ್ಷೇತ್ರ ಬೆಳವಣಿಗೆ ಇಳಿಕೆ

ಜಿಡಿಪಿ: ಶೇ 7.3 ಪ್ರಗತಿ ನಿರೀಕ್ಷೆ

ನವದೆಹಲಿ (ಪಿಟಿಐ): ಭಾರತದ ಆರ್ಥಿಕ ಬೆಳವಣಿಗೆ ದರವು (ಜಿಡಿಪಿ) 2023-24ರ ಹಣಕಾಸು ವರ್ಷದಲ್ಲಿ ಶೇ 7.3ರಷ್ಟು ಆಗಬಹುದು ಎಂಬ ನಿರೀಕ್ಷೆ ಇದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ತಿಳಿಸಿದೆ.

ಎನ್‌ಎಸ್‌ಒ ಶುಕ್ರವಾರ ಬಿಡುಗಡೆಗೊಳಿಸಿರುವ ವರದಿಯಲ್ಲಿರುವ ಅಂದಾಜಿನ ಪ್ರಕಾರ, ಹಿಂದಿನ ಹಣಕಾಸು ವರ್ಷದ ಮಟ್ಟವನ್ನು (ಶೇ 7.2) ಮೀರಲಿದೆ.

ಗಣಿಗಾರಿಕೆ, ತಯಾರಿಕಾ ವಲಯ ಸೇರಿದಂತೆ ಪ್ರಮುಖ ವಲಯಗಳ ಬೆಳವಣಿಗೆಯಲ್ಲಿ ಸುಧಾರಣೆ ಕಂಡುಬಂದಿದೆ. ಹಾಗಾಗಿ, ಈ ಪ್ರಮಾಣದ ಬೆಳವಣಿಗೆಯನ್ನು ನಿರೀಕ್ಷಿಸಲಾಗಿದೆ ಎಂದು ವಿವರಿಸಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ತಯಾರಿಕಾ ವಲಯವು ಶೇ 6.5ರಷ್ಟು ಬೆಳವಣಿಗೆ ಕಾಣಲಿದೆ. 2022-23ನೇ ಸಾಲಿಗಿಂತಲೂ ಶೇ 1.3ರಷ್ಟು ಹೆಚ್ಚಳವಾಗಲಿದೆ ಎಂದು ಅಂದಾಜಿಸಿದೆ.

ಗಣಿಗಾರಿಕೆ ವಲಯವು ಶೇ 8.1ರಷ್ಟು ಬೆಳವಣಿಗೆ ಹೊಂದಲಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ 4.1ರಷ್ಟು ಹೆಚ್ಚಳವಾಗಲಿದೆ. ಅಲ್ಲದೇ ಹಣಕಾಸು, ರಿಯಲ್ ಎಸ್ಟೇಟ್ ಮತ್ತು ವೃತ್ತಿಪರ ಸೇವಾ ವಲಯವು ಶೇ 8.9ರಷ್ಟು ಬೆಳವಣಿಗೆ ಸಾಧಿಸುವ ನಿರೀಕ್ಷೆಯಿದೆ ಎಂದು ತಿಳಿಸಿದೆ.


2022-23ರಲ್ಲಿ ಜಿಡಿಪಿ ಗಾತ್ರವು ₹160.06 ಲಕ್ಷ ಕೋಟಿ ಇತ್ತು. 2023-24ರಲ್ಲಿ ಈ ಗಾತ್ರವು ₹171.79 ಲಕ್ಷ ಕೋಟಿ ತಲುಪಲಿದೆ ಎಂದು 2023ರ ಮೇ 31ರಂದು ಬಿಡುಗಡೆಗೊಳಿಸಿದ್ದ ಎನ್‌ಎಸ್‌ಒ ವರದಿಯಲ್ಲಿ ಹೇಳಲಾಗಿತ್ತು.

ಮತ್ತೊಂದೆಡೆ ಪ್ರಸಕ್ತ ಹಣಕಾಸು ವರ್ಷದಲ್ಲಿ ಆರ್ಥಿಕತೆಯ ಬೆಳವಣಿಗೆ ದರವು ಶೇ 7ರಷ್ಟು ಪ್ರಗತಿ ಕಾಣಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಅಂದಾಜಿಸಿತ್ತು. ಆದರೆ, ಆರ್‌ಬಿಐನ ನಿರೀಕ್ಷೆಗಿಂತಲೂ ಎನ್‌ಎಸ್‌ಒ ವರದಿಯು ಹೆಚ್ಚಿನ ಬೆಳವಣಿಗೆಯನ್ನು ಅಂದಾಜಿಸಿದೆ. 2022-23ರಲ್ಲಿ ₹272.41 ಲಕ್ಷ ಕೋಟಿ ಇದ್ದ ಜಿಡಿಪಿ ಗಾತ್ರವು 2023-24ರಲ್ಲಿ ₹296.58 ಲಕ್ಷ ಕೋಟಿಗೆ (3.57 ಟ್ರಿಲಿಯನ್ ಡಾಲರ್) ತಲುಪಲಿದೆ ಎಂದು ಸದ್ಯ ಬಿಡುಗಡೆಯಾಗಿರುವ ವರದಿಯಲ್ಲಿ ವಿವರಿಸಲಾಗಿದೆ.

ಕೃಷಿ ವಲಯ ಕುಂಠಿತ: ಕೃಷಿ ವಲಯದ ಬೆಳವಣಿಗೆಯು ಶೇ 1.8ರಷ್ಟು ಕಾಣಲಿದೆ ಎಂದು ಅಂದಾಜಿಸಲಾಗಿದೆ. ಇದು ಹಿಂದಿನ ಹಣಕಾಸು ವರ್ಷದಲ್ಲಿ ದಾಖಲಾಗಿದ್ದ ಶೇ 4ರಷ್ಟು ಬೆಳವಣಿಗೆಗಿಂತಲೂ ಕಡಿಮೆಯಾಗಿದೆ ಎಂದು ಹೇಳಿದೆ.

ವ್ಯಾಪಾರ, ಹೋಟೆಲ್, ಸಾರಿಗೆ, ಸಂವಹನ ಮತ್ತು ಪ್ರಸಾರ ವಲಯದ ಬೆಳವಣಿಗೆಯು ಶೇ 6.3ರಷ್ಟು ಕಾಣಲಿದೆ. ಇದು 2022-23ರಲ್ಲಿದ್ದ ಶೇ 14ಕ್ಕಿಂತ ಕಡಿಮೆ ಎಂದು ವಿವರಿಸಿದೆ.

ನಿರ್ಮಾಣ ವಲಯ ಶೇ 10.7, ಸಾರ್ವಜನಿಕ ಆಡಳಿತ, ರಕ್ಷಣೆ ಸೇರಿದಂತೆ ಇತರೆ ಸೇವಾ ವಲಯ ಶೇ 7.7ರಷ್ಟು ಬೆಳವಣಿಗೆ ಸಾಧಿಸಲಿದೆ ಎಂದು ತಿಳಿಸಿದೆ.



2024ರಲ್ಲಿ ಶೇ 6.2 ಬೆಳವಣಿಗೆ: ವಿಶ್ವಸಂಸ್ಥೆ

ವಿಶ್ವಸಂಸ್ಥೆ (ಪಿಟಿಐ): ದೇಶೀಯ ಬೇಡಿಕೆ ಹೆಚ್ಚಳ ಸೇರಿದಂತೆ ತಯಾರಿಕಾ ಮತ್ತು ಸೇವಾ ವಲಯದಲ್ಲಿನ ಸದೃಢ ಬೆಳವಣಿಗೆಯಿಂದಾಗಿ 2024ರಲ್ಲಿ ಭಾರತದ ಜಿಡಿಪಿಯು ಶೇ 6.2ರಷ್ಟು ಬೆಳವಣಿಗೆಯಾಗುವ ನಿರೀಕ್ಷೆಯಿದೆ ಎಂದು ವಿಶ್ವಸಂಸ್ಥೆ ಹೇಳಿದೆ.

ಭಾರತ ಆರ್ಥಿಕತೆಯ ಈ ಬೆಳವಣಿಗೆಯಿಂದಾಗಿ ದಕ್ಷಿಣ ಏಷ್ಯಾದ ಜಿಡಿಪಿ ಶೇ 5.2ರಷ್ಟು ಪ್ರಗತಿ ಕಾಣುವ ನಿರೀಕ್ಷೆಯಿದೆ. ಭಾರತವು ವಿಶ್ವದಲ್ಲೇ ಅತಿವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿ ಮುಂದುವರಿಯಲಿದೆ ಎಂದು ಗುರುವಾರ ಬಿಡುಗಡೆಯಾದ ವಿಶ್ವ ಆರ್ಥಿಕ ಪರಿಸ್ಥಿತಿ ಮತ್ತು ಭವಿಷ್ಯ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. 2024ರಲ್ಲಿ ಭಾರತದ ಜಿಡಿಪಿಯು 2023ರ ಹಣಕಾಸು ವರ್ಷದಲ್ಲಿ ನಿರೀಕ್ಷೆ ಮಾಡಿರುವುದಕ್ಕಿಂತಲೂ ಕಡಿಮೆ ಇರಲಿದೆ. 2025ರಲ್ಲಿ ಜಿಡಿಪಿ ಶೇ 6.6ಕ್ಕೆ ಏರಿಕೆಯಾಗುವ ನಿರೀಕ್ಷೆಯಿದೆ ಎಂದು ವಿವರಿಸಿದೆ.

ಮಳೆ ಕೊರತೆಯಿಂದಾಗಿ ಕೃಷಿ ಉತ್ಪಾದನೆ ಕಡಿಮೆಯಾಗಬಹುದು. ಆದರೆ, ತಯಾರಿಕಾ ಮತ್ತು ಸೇವಾ ವಲಯದಿಂದ ಭಾರತದ ಆರ್ಥಿಕತೆಗೆ ಹೆಚ್ಚಿನ ಕೊಡುಗೆ ಮುಂದುವರಿಯಲಿದೆ ಎಂದು ಹೇಳಿದೆ.

ವಿದೇಶಿ ವಿನಿಮಯ ಸಂಗ್ರಹ ಹೆಚ್ಚಳ

ಮುಂಬೈ (ಪಿಟಿಐ): ಭಾರತದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಡಿಸೆಂಬರ್ 29ಕ್ಕೆ ಕೊನೆಗೊಂಡ ವಾರದ ವಹಿವಾಟಿನಲ್ಲಿ ₹22,936 ಕೋಟಿ ಹೆಚ್ಚಾಗಿದ್ದು, ₹51.81 ಲಕ್ಷ ಕೋಟಿಗೆ ತಲುಪಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಶುಕ್ರವಾರ ತಿಳಿಸಿದೆ.

2021ರ ಅಕ್ಟೋಬರ್‌ನಲ್ಲಿ ₹53.62 ಲಕ್ಷ ಕೋಟಿಗೆ ಏರಿಕೆಯಾಗಿ ಸಾರ್ವಕಾಲಿಕ ದಾಖಲೆ ಬರೆದಿತ್ತು. ಡಿಸೆಂಬರ್‌ನಲ್ಲಿ ವಿದೇಶಿ ಕರೆನ್ಸಿ ಆಸ್ತಿಗಳೇ ಮೀಸಲು ಸಂಗ್ರಹದ ಪ್ರಮುಖ ಅಂಶವಾಗಿದ್ದು, ₹15,537 ಕೋಟಿಯಿಂದ ₹45.85 ಲಕ್ಷ ಕೋಟಿಗೆ ಹೆಚ್ಚಳವಾಗಿದೆ ಎಂದು ಆರ್‌ಬಿಐನ ಅಂಕಿ-ಅಂಶ ತಿಳಿಸಿವೆ. ಚಿನ್ನದ ಸಂಗ್ರಹವು ₹7,091 ಕೋಟಿಯಿಂದ ₹4 ಲಕ್ಷ ಕೋಟಿಗೆ ಏರಿಕೆ ಆಗಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯೊಂದಿಗಿನ (ಐಎಂಎಫ್) ಭಾರತದ ಮೀಸಲು ₹16.62 ಕೋಟಿಗೆ ಇಳಿದು, ₹40,664 ಕೋಟಿಗೆ ತಲುಪಿದೆ ಎಂದು ಹೇಳಿವೆ.

ತೊಗರಿ ಖರೀದಿಗೆ ಪೋರ್ಟಲ್ ಆರಂಭ

ನವದೆಹಲಿ (ಪಿಟಿಐ): ದೇಶದ ತೊಗರಿ ಬೆಳೆಗಾರರಿಗೆ ಅನುಕೂಲ ಕಲ್ಪಿಸಲು ಕೇಂದ್ರ ಸರ್ಕಾರವು ಪೋರ್ಟಲ್ ಆರಂಭಿಸಿದೆ.

ಕನಿಷ್ಠ ಬೆಂಬಲ ಬೆಲೆ ಅಥವಾ ಮಾರುಕಟ್ಟೆ ದರದಡಿ ರೈತರಿಂದ ನೇರವಾಗಿ ತೊಗರಿ ಖರೀದಿಗೆ ಇದರಿಂದ ಅನುಕೂಲವಾಗಲಿದೆ. ಕರ್ನಾಟಕದಲ್ಲಿ ಅತಿಹೆಚ್ಚು ತೊಗರಿ ಬೆಳೆಯುವ ಕಲಬುರಗಿ, ಯಾದಗಿರಿ, ರಾಯಚೂರು, ವಿಜಯಪುರ, ಬೀದರ್ ಜಿಲ್ಲೆಯ ರೈತರಿಗೆ ಹೆಚ್ಚಿನ ಪ್ರಯೋಜನ ಸಿಗಲಿದೆ.

ರಾಷ್ಟ್ರೀಯ ಸಹಕಾರ ಗ್ರಾಹಕರ ಮಹಾಮಂಡಳ (ಎನ್‌ಸಿಸಿಎಫ್) ಮತ್ತು ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಮಹಾಮಂಡಳವು (ನಾಫೆಡ್) ಖರೀದಿ ಏಜೆನ್ಸಿಗಳಾಗಿವೆ. ರೈತರು ಪೋರ್ಟಲ್‌ನಲ್ಲಿ ಹೆಸರು ನೋಂದಾಯಿಸಿ ಮಾರಾಟ ಮಾಡಬಹುದಾಗಿದೆ. ಅವರ ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ಹಣ ಜಮೆಯಾಗಲಿದೆ.

ಈ ಪೋರ್ಟಲ್ ಸೇವೆಯನ್ನು ಉದ್ದು ಮತ್ತು ಮೆಕ್ಕೆಜೋಳ ಖರೀದಿಗೂ ವಿಸ್ತರಿಸಲು ಕೇಂದ್ರ ನಿರ್ಧರಿಸಿದೆ.

ಅಮಿತ್ ಶಾ ಚಾಲನೆ: ಗುರುವಾರ ಪೋರ್ಟಲ್‌ಗೆ ಚಾಲನೆ ನೀಡಿದ ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರು, ನಾಫೆಡ್ ಮತ್ತು ಎನ್‌ಸಿಸಿಎಫ್‌ನಡಿ ಹೆಸರು ನೋಂದಾಯಿಸಿ ತೊಗರಿ ಮಾರಾಟ ಮಾಡಿದ 25 ರೈತರಿಗೆ ಸ್ಥಳದಲ್ಲಿಯೇ ₹68 ಲಕ್ಷ ಮೊತ್ತವನ್ನು ಡಿಬಿಟಿ ಮೂಲಕ ವರ್ಗಾಯಿಸಿದರು.

'2027ರ ವೇಳೆಗೆ ದ್ವಿದಳ ಧಾನ್ಯಗಳ ಉತ್ಪಾದನೆಯಲ್ಲಿ ಭಾರತವು ಸ್ವಾವಲಂಬನೆ ಸಾಧಿಸಲಿದೆ. ಇದು ಪ್ರಧಾನಿ ನರೇಂದ್ರ ಮೋದಿ ಅವರ ಆಶಯವೂ ಆಗಿದೆ' ಎಂದು ಸಚಿವ ಶಾ ತಿಳಿಸಿದರು.

'ದೇಶದಲ್ಲಿ ದ್ವಿದಳ ಧಾನ್ಯಗಳಿಗೆ ಉತ್ತಮ ಧಾರಣೆ ಸಿಗುತ್ತಿಲ್ಲ. ಹಾಗಾಗಿ, ಹಲವು ರೈತರು ದ್ವಿದಳ ಧಾನ್ಯ ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಪೋರ್ಟಲ್ ಆರಂಭಿಸುವ ಮೂಲಕ ರೈತರಿಗೆ ಭರವಸೆ ತುಂಬಲು ಸರ್ಕಾರ ಮುಂದಾಗಿದೆ' ಎಂದರು.

ದೇಶದಲ್ಲಿ 2016-17ರ ಮುಂಗಾರು ಋತುವಿನಲ್ಲಿ ತೊಗರಿ ಉತ್ಪಾದನೆಯು 8.87 ದಶಲಕ್ಷ ಟನ್ ಆಗಿತ್ತು. ಆ ನಂತರದ ವರ್ಷಗಳಲ್ಲಿ ಉತ್ಪಾದನೆಯು ಕುಸಿದಿದೆ. 2022-23ರಲ್ಲಿ 3.31 ದಶಲಕ್ಷ ಟನ್ ಉತ್ಪಾದನೆ ಯಾಗಿತ್ತು. 2023-24ರ ಋತುವಿನಲ್ಲಿ 3.42 ದಶಲಕ್ಷ ಟನ್ ಉತ್ಪಾದನೆಯಾಗುವ ನಿರೀಕ್ಷೆಯಿದೆ ಎಂದು ಕೃಷಿ ಸಚಿವಾಲಯ ಅಂದಾಜಿಸಿದೆ.

ಸೇವಾ ಚಟುವಟಿಕೆ 3 ತಿಂಗಳ ಗರಿಷ್ಠಕ್ಕೆ ಏರಿಕೆ

ನವದೆಹಲಿ (ಪಿಟಿಐ): ಸದೃಢ ಆರ್ಥಿಕ ಪರಿಸ್ಥಿತಿ ಹಾಗೂ ಸಕಾರಾತ್ಮಕ ಬೇಡಿಕೆ ಪ್ರವೃತ್ತಿಯಿಂದಾಗಿ ಡಿಸೆಂಬರ್‌ನಲ್ಲಿ ದೇಶದ ಸೇವಾ ವಲಯದ ಚಟುವಟಿಕೆಯು ಮೂರು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಆಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆ ತಿಳಿಸಿದೆ.


ನವೆಂಬರ್‌ನಲ್ಲಿ 56.9 ಇದ್ದ ಸೂಚ್ಯಂಕವು ಡಿಸೆಂಬರ್‌ನಲ್ಲಿ 59ಕ್ಕೆ ಏರಿದೆ. ಇದು ಉತ್ಪಾದನೆಯಲ್ಲಿ ಹೆಚ್ಚಿದ ಏರಿಕೆಯನ್ನು ತೋರಿಸುತ್ತದೆ ಎಂದು ವರದಿ ತಿಳಿಸಿದೆ.

ಈ ಸೂಚ್ಯಂಕವು ಪಿಎಂಐ (ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್) 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಸಕಾರಾತ್ಮಕ ಬೆಳವಣಿಗೆ ಎಂದು ಕರೆಯಲಾಗುತ್ತದೆ. 50ಕ್ಕಿಂತಲೂ ಕೆಳಗಿನ ಮಟ್ಟದಲ್ಲಿ ಇದ್ದರೆ ನಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ.

'2023ರಲ್ಲಿ ದೇಶದ ಸೇವಾ ವಲಯದಲ್ಲಿ ಹೆಚ್ಚಿದ ಹೊಸ ಆರ್ಡರ್‌ಗಳಿಂದ ವ್ಯಾಪಾರ ಚಟುವಟಿಕೆಗಳು ಏರುಗತಿ ಕಂಡಿವೆ' ಎಂದು ಎಚ್‌ಎಸ್‌ಬಿಸಿಯ ಭಾರತದ ಮುಖ್ಯ ಅರ್ಥಶಾಸ್ತ್ರಜ್ಞ ಪ್ರಂಜುಲ್ ಭಂಡಾರಿ ಹೇಳಿದ್ದಾರೆ.

ಫೆ.8ಕ್ಕೆ ಚುನಾವಣೆ ನಡೆಯುವುದು ಅನುಮಾನ: ಇಮ್ರಾನ್ ಖಾನ್

ಲಂಡನ್/ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದಲ್ಲಿ ಫೆಬ್ರುವರಿ 8ರಂದು ನಿಗದಿಯಾಗಿರುವ ಚುನಾವಣೆ ನಡೆಯುವ ಬಗ್ಗೆ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅನುಮಾನ ವ್ಯಕ್ತಪಡಿಸಿದ್ದಾರೆ.


ಇಮ್ರಾನ್ ಖಾನ್

ಜತೆಗೆ, 2022ರಲ್ಲಿ ಅಮೆರಿಕದ ಒತ್ತಡದಿಂದ ತಮ್ಮನ್ನು ಪದಚ್ಯುತಿಗೊಳಿಸಲಾಯಿತು ಎಂದು ಗಂಭೀರ ಆರೋಪ ಮಾಡಿದ್ದಾರೆ.

'ಪಾಕಿಸ್ತಾನ ಚುನಾವಣೆಗಳು ಪ್ರಹಸನವಾಗಲಿದೆ ಎಂಬ ಶೀರ್ಷಿಕೆಯೊಂದಿಗೆ ಇಮ್ರಾನ್ ಖಾನ್ ಹೆಸರಲ್ಲಿ ಬ್ರಿಟಿಷ್ ಪತ್ರಿಕೆ 'ದಿ ಎಕನಾಮಿಸ್ಟ್'ನಲ್ಲಿ ಶುಕ್ರವಾರ ಲೇಖನವೊಂದು ಪ್ರಕಟಗೊಂಡಿದ್ದು, ಅದರಲ್ಲಿನ ಆರೋಪಗಳನ್ನು ಪಾಕಿಸ್ತಾನ ಸರ್ಕಾರ ಮತ್ತು ಅಮೆರಿಕ ನಿರಾಕರಿಸಿವೆ.

'ಪಾಕಿಸ್ತಾನದ ಪ್ರಸ್ತುತ ರಾಜಕೀಯ ಸನ್ನಿವೇಶದ ಬಗ್ಗೆ ಬರಹದಲ್ಲಿ ಕಟುಟೀಕೆ ಮಾಡಲಾಗಿದೆ. ಖಾನ್ ಮಾಡುತ್ತಾ ಬಂದಿರುವ ಹಲವು ಆರೋಪಗಳನ್ನು ಪುನರುಚ್ಚರಿಸಲಾಗಿದೆ. ಪಾಕಿಸ್ತಾನದಲ್ಲಿ ರಾಜಕೀಯ ಸ್ಥಿರತೆ ಮತ್ತು ಸುಧಾರಣೆಗಳನ್ನು ತರಬೇಕಿದ್ದರೆ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳ ಅಗತ್ಯವಿದೆ ಎಂದು ಬರಹದಲ್ಲಿ ಆಗ್ರಹಿಸಲಾಗಿದೆ. ಪ್ರಜಾಪ್ರಭುತ್ವಕ್ಕೆ ಮುತ್ತಿಗೆ ಹಾಕಲಾಗಿದೆ. ಪಾಕಿಸ್ತಾನವು ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದೆ' ಎಂದು ಖಾನ್ ಬೇಸರ ವ್ಯಕ್ತಪಡಿಸಿದ್ದಾರೆ.

ಖಾನ್ ರಾವಲ್ಪಿಂಡಿಯ ಅಡಿಯಾಲಾ ಜೈಲಿನಲ್ಲಿ ಬಂಧಿತರಾಗಿದ್ದಾರೆ. ತೋಷಖಾನಾ ಭ್ರಷ್ಟಾಚಾರ ಪ್ರಕರಣದಲ್ಲಿ ದೋಷಿಯಾಗಿರುವ ಅವರು, ಅಧಿಕೃತ ರಹಸ್ಯ ಕಾಯಿದೆಯಡಿಯಲ್ಲಿನ ಪ್ರಕರಣವೂ ಸೇರಿದಂತೆ ಹಲವು ಪ್ರಕರಣಗಳಲ್ಲಿ ವಿಚಾರಣೆ ಎದುರಿಸುತ್ತಿದ್ದಾರೆ.

ಚುನಾವಣೆ ಮುಂದೂಡುವ ನಿರ್ಣಯಕ್ಕೆ ಅಂಗೀಕಾರ

ವಿಪರೀತ ಚಳಿ ವಾತಾವರಣ ಹಾಗೂ ಭದ್ರತಾ ಕಾರಣಗಳನ್ನು ಉಲ್ಲೇಖಿಸಿ ಫೆಬ್ರುವರಿ 8ರಂದು ನಡೆಯಬೇಕಿದ್ದ ಸಾರ್ವತ್ರಿಕ ಚುನಾವಣೆಯನ್ನು ಮುಂದೂಡುವ ನಿರ್ಣಯಕ್ಕೆ ಪಾಕಿಸ್ತಾನ ಸೆನೆಟ್ ಶುಕ್ರವಾರ ಅಂಗೀಕಾರ ನೀಡಿದೆ. ನಿರ್ಣಯ ಅಂಗೀಕಾರದಿಂದಾಗಿ ಪಾಕಿಸ್ತಾನ ದಲ್ಲಿರುವ ರಾಜಕೀಯ ಅನಿಶ್ಚಿತತೆ ಇನ್ನೂ ಹೆಚ್ಚಿದೆ.

ಕಂಪನಿಯಿಂದ ಸುಧಾರನ್ನು ಹೊರಗಿಟ್ಟು ತಪ್ಪು ಮಾಡಿದೆ: ನಾರಾಯಣಮೂರ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುಧಾ ನನಗಿಂತ ಹೆಚ್ಚು ಓದಿದ್ದರು. ಇನ್ಫೊಸಿಸ್ ಸಂಸ್ಥಾಪಕರಾದ ಆರು ಜನರಿಗಿಂತ ಅವರು ಹೆಚ್ಚು ಅರ್ಹತೆ ಹೊಂದಿದ್ದರು. ಹೀಗಿದ್ದರೂ ಅವರನ್ನು ಕಂಪನಿಯಿಂದ ಹೊರಗಿಟ್ಟದ್ದು ದೊಡ್ಡ ತಪ್ಪು' ಎಂದು ಇನ್ಫೊಸಿಸ್ ಸಂಸ್ಥಾಪಕ, ಸುಧಾಮೂರ್ತಿ ಅವರ ಪತಿ ಎನ್.ಆರ್. ನಾರಾಯಣಮೂರ್ತಿ ಹೇಳಿದ್ದಾರೆ.

'ಸಿಎನ್‌ಬಿಸಿ-ಟಿವಿ18'ಗೆ ನೀಡಿದ ಸಂದರ್ಶನದಲ್ಲಿ ತಮ್ಮ ಮನದಾಳದ ಅಭಿಪ್ರಾಯ ಹಂಚಿಕೊಂಡಿರುವ ಅವರು, 'ಕುಟುಂಬವನ್ನು ಕಂಪನಿಯ ಪರಿಧಿಗೆ ತರಬಾರದು ಎಂಬ ಆದರ್ಶವನ್ನು ನಂಬಿದ್ದ ನನ್ನಿಂದ ಇದೊಂದು ತಪ್ಪು ಆಗಿದೆ' ಎಂದಿದ್ದಾರೆ.

'ಕಾರ್ಪೊರೇಟ್ ಜಗತ್ತಿನ ಅತ್ಯುತ್ತಮ ಪದ್ಧತಿ ಎಂದರೆ ಕುಟುಂಬವನ್ನು ಕಂಪನಿಯೊಳಗೆ ತಾರದಿರುವುದು ಎಂದು ನಾನು ನಂಬಿದ್ದೆ. ಆ ಕಾಲದಲ್ಲಿ ಮಕ್ಕಳು ಕಂಪನಿಗಳನ್ನು ನಡೆಸಲು ಬರುತ್ತಿದ್ದುದನ್ನು ನಾನು ನೋಡಿದ್ದೆ. ಅವರಿಂದ ಬಹಳಷ್ಟು ಕಾನೂನುಗಳ ಉಲ್ಲಂಘನೆಯಾಗುತ್ತಿದ್ದವು. ಆದರೆ ಇತ್ತೀಚೆಗೆ ಕೆಲ ವರ್ಷಗಳ ಹಿಂದೆ ನನ್ನ ನಿರ್ಧಾರದ ಕುರಿತು ಕೆಲ ತತ್ವಜ್ಞಾನದ ಪ್ರಾಧ್ಯಾಪಕರೊಂದಿಗೆ ಚರ್ಚಿಸಿದೆ. ನನ್ನ ನಿರ್ಧಾರವೇ ತಪ್ಪು' ಎಂದು ಅವರು ಹೇಳಿದರು.


ನಾರಾಯಣ ಮೂರ್ತಿ

'ಕುಟುಂಬದಲ್ಲಿ ಪತ್ನಿ, ಪುತ್ರ ಅಥವಾ ಪುತ್ರಿ ವ್ಯವಹಾರ ನಡೆಸುವಷ್ಟು ಸಮರ್ಥರಿದ್ದರೆ, ಕಂಪನಿಯ ಚೌಕಟ್ಟಿನೊಳಗೆ ಉತ್ತಮವಾಗಿ ಕಾರ್ಯನಿರ್ವಹಿಸುವ ವರಾದರೆ ಅಂಥವರನ್ನು ತಡೆಯುವ ಯಾವುದೇ ಹಕ್ಕು ನಿಮಗಿಲ್ಲ. ಒಂದೊಮ್ಮೆ ಹಾಗೆ ಮಾಡಿದ್ದೇ ಆದರೆ ನಿಮ್ಮದೇ ಹಕ್ಕುಗಳನ್ನು ನೀವು ಕಸಿದುಕೊಂಡಂತೆ ಎಂದಿದ್ದರು' ಎಂದು ಅವರು ನೆನಪಿಸಿಕೊಂಡಿದ್ದಾರೆ.

'ಲೇಖಕಿಯೂ ಆಗಿರುವ ಸುಧಾಮೂರ್ತಿ ಅವರು ಇನ್ಫೊಸಿಸ್ ಕಂಪನಿ ಆರಂಭಿಸಲು ಅಗತ್ಯವಿದ್ದ ಹೂಡಿಕೆಗಾಗಿ ₹10 ಸಾವಿರ ನೀಡಿದವರಲ್ಲಿ ಮೊದಲಿಗರು. ಆದರೆ ಅದೇ ₹10 ಸಾವಿರ ಶತಕೋಟಿ ಡಾಲರ್ ಆಗಲಿದೆ ಎಂದು ನಾನು ಆಗ ಊಹಿಸಿರಲಿಲ್ಲ' ಎಂದು ನಾರಾಯಣಮೂರ್ತಿ ಅಚ್ಚರಿ ವ್ಯಕ್ತಪಡಿಸಿದ್ದಾರೆ.

ಕುಟುಂಬ ನಿರ್ವಹಣೆಗಾಗಿ ಒಪ್ಪಿದೆ: ಪತಿ ಹೇಳಿಕೆಗೆ ಪ್ರತಿಕ್ರಿಯಿಸಿರುವ ಸುಧಾ ಮೂರ್ತಿ ಅವರು, 'ಆ ಸಂದರ್ಭದಲ್ಲಿ ಅವರ (ನಾರಾಯಣಮೂರ್ತಿ) ನಿರ್ಧಾರ ಮಿದುಳಿಗೆ ಸರಿ ಎನಿಸಿದರೂ, ಹೃದಯ ಒಪ್ಪಿಕೊಳ್ಳಲಿಲ್ಲ. ನನಗೆ ಕೆಲಸ ಮಾಡುವ ಮನಸ್ಸಿತ್ತು. ಆದರೆ, ಕೌಟುಂಬಿಕ ಹಿತದ ದೃಷ್ಟಿಯಿಂದ ನಾನೇ ಹಿಂದೆ ಸರಿಯಲು ನಿರ್ಧರಿಸಿದೆ' ಎಂದಿದ್ದಾರೆ.

'ನಾರಾಯಣಮೂರ್ತಿಅವರುಆಗತಮ್ಮನಿರ್ಧಾರಕ್ಕೆ ಕಟಿಬದ್ಧರಾಗಿದ್ದರು. ನೀನು ಕಂಪನಿ ಸೇರುವುದೇ ಆದರೆ, ನಾನು ಹಿಂದೆ ಸರಿಯುತ್ತೇನೆ ಎಂದುಬಿಟ್ಟರು. ಅವರು ಒಮ್ಮೆ ನಿರ್ಧಾರ ತೆಗೆದುಕೊಂಡರೆ, ಅದು ಸರಿಯೋ ಅಥವಾ ತಪ್ಪೋ, ಅದರಿಂದ ಅವರು ಎಂದಿಗೂ ಹಿಂದೆ ಸರಿಯುವ ವ್ಯಕ್ತಿಯಲ್ಲ. ಅವರ ವ್ಯಕ್ತಿತ್ವ ನನಗೆ ಚೆನ್ನಾಗಿ ಗೊತ್ತಿತ್ತು' ಎಂದು ಹೇಳಿದ್ದಾರೆ.

ಹೇಳಿಕೆ ಸಮರ್ಥನೆ

ಇತ್ತೀಚೆಗೆ ತೀವ್ರ ಚರ್ಚೆಗೆ ಕಾರಣವಾದ, 'ವಾರದಲ್ಲಿ 70 ಗಂಟೆ ದುಡಿಮೆ' ಕುರಿತ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿರುವ ನಾರಾಯಣಮೂರ್ತಿ ಅವರು, 'ರೈತರು, ಕಾರ್ಖಾನೆ ಕಾರ್ಮಿಕರು ಹಾಗೂ ಭಾರತದಲ್ಲಿರುವ ಇತರ ದುಡಿಯುವ ವರ್ಗ ಅತ್ಯಂತ ಶ್ರಮಜೀವಿಗಳಾಗಿದ್ದಾರೆ. ಆದರೆ ಶಿಕ್ಷಣ ಪಡೆದ ದೇಶದ ವಿದ್ಯಾವಂತರೇ ಅಷ್ಟು ಶ್ರಮ ವಹಿಸುತ್ತಿಲ್ಲ' ಎಂದು ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

'ರಿಯಾಯಿತಿಯೊಂದಿಗೆ ಶಿಕ್ಷಣ ಪಡೆದ ನಾವು ಸರ್ಕಾರದ ಸೌಕರ್ಯಗಳಿಗೆ ಧನ್ಯವಾದ ಹೇಳಬೇಕು. ಆದರೆ ಈ ಅದೃಷ್ಟ ಸಿಗದ ಬಹಳಷ್ಟು ಜನ ಅತ್ಯಂತ ಕಷ್ಟಪಟ್ಟು ಕೆಲಸ ಮಾಡುತ್ತಿದ್ದಾರೆ. 70 ಗಂಟೆ ದುಡಿಮೆ ಕುರಿತ ನನ್ನ ಹೇಳಿಕೆಗೆ ಸಾಕಷ್ಟು ಟೀಕೆಗಳು ವ್ಯಕ್ತವಾದವು. ಆದರೆ ಬಹಳಷ್ಟು ಉತ್ತಮರು ಹಾಗೂ ಅನಿವಾಸಿ ಭಾರತೀಯರು ಅದನ್ನು ಒಪ್ಪಿಕೊಂಡಿದ್ದಾರೆ' ಎಂದಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ		ಶಿವಮೊಗ್ಗ		ಶಿರಸಿ	
ಕೋಕ	15000-27500	ಬೆಟ್ಟೆ	26169-54261	ಬೆಟ್ಟೆ	39299-45839
ಹೊಸತು	27500-37000	ಗೊರಬಲು	16059-37419	ಬಿಳಿಗೋಟು	26009-34698
ಹಳತು	42000-43000	ಹೊಸತು	46096-47596	ಚಾಲಿ	37099-39999
ಕಾರ್ಕಳ		ರಾಶಿ	36530-48599	ಕೆಂಪುಗೋಟು	31299-36999
ಹೊಸತು	25000-37000	ಸರಕು	53699-80003	ರಾಶಿ	43208-47909
ಹಳತು	30000-44000	**ಸಿದ್ದಾಪುರ**		**ಯಲ್ಲಾಪುರ**	
ಕುಮಟ		ಬಿಳಿಗೋಟು	30209-33499	ಅಪಿ	56059-67169
ಚಿಪ್ಪು	25899-33509	ಚಾಲಿ	37399-39299	ಬಿಳಿಗೋಟು	24899-35194
ಕೋಕ	20169-31569	ಕೋಕ	30689-32889	ಚಾಲಿ	36800-39661
ಫ್ಯಾಕ್ಟರಿ	11509-23299	ಹೊಸಚಾಲಿ	32800-33819	ಕೋಕ	18299-30499
ಹಳೆಚಾಲಿ	38099-39869	ಕೆಂಪುಗೋಟು	31100-33000	ಕೆಂಪುಗೋಟು	24899-36307
ಹೊಸಚಾಲಿ	34369-36039	ರಾಶಿ	44109-48209	ರಾಶಿ	46000-55379
		ತಟ್ಟಿಬೆಟ್ಟೆ	38209-42699	ತಟ್ಟಿಬೆಟ್ಟೆ	38599-45699


ನವದೆಹಲಿಯಲ್ಲಿ ಶುಕ್ರವಾರ ನಡೆದ ಎನ್‌ಸಿಸಿ ರಿಪಬ್ಲಿಕ್ ದಿನಾಚರಣೆಯಲ್ಲಿ ಎನ್‌ಸಿಸಿ ಕೆಡೆಟ್‌ಗಳು ನೃತ್ಯ ಪ್ರದರ್ಶಿಸಿದರು —ಪಿಟಿಐ ಚಿತ್ರ

ಹೆದ್ದಾರಿ ನಿರ್ಮಾಣ ಇಳಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ 2022-23ನೇ ಸಾಲಿನಲ್ಲಿ 10,331 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾಗಿದ್ದರೆ, ಈ ಆರ್ಥಿಕ ವರ್ಷದ ನವೆಂಬರ್ ಅಂತ್ಯದವರೆಗೆ 5,248 ಕಿ.ಮೀ. ಹೆದ್ದಾರಿಯಷ್ಟೇ ನಿರ್ಮಾಣವಾಗಿದೆ.

ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಬಂದ ಬಳಿಕ ರಾಷ್ಟ್ರೀಯ ಹೆದ್ದಾರಿ ನಿರ್ಮಾಣದಲ್ಲಿ ಗಣನೀಯ ಏರಿಕೆಯಾಗಿದೆ ಎಂದು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಹಲವು ಸಲ ಹೇಳಿಕೆಗಳನ್ನು ನೀಡಿದ್ದರು. ಆದರೆ, ಸಚಿವಾಲಯವು ಶುಕ್ರವಾರ ಬಿಡುಗಡೆ ಮಾಡಿರುವ ಅಂಕಿ-ಅಂಶಗಳ ಪ್ರಕಾರ, ಹೆದ್ದಾರಿ ನಿರ್ಮಾಣದಲ್ಲಿ ಗಣನೀಯವಾಗಿ ಇಳಿಕೆಯಾಗಿದೆ.

ಇನ್ನೊಂದೆಡೆ, ಕಳೆದ ಐದು ವರ್ಷಗಳಲ್ಲಿ ಟೋಲ್ ರಸ್ತೆಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಟೋಲ್ ಸಂಗ್ರಹ ಪ್ರಮಾಣ ದುಪ್ಪಟ್ಟಾಗಿದೆ. ಫಾಸ್ಟ್‌ಟ್ಯಾಗ್ ಮೂಲಕ ಪ್ರತಿದಿನ ₹147 ಕೋಟಿ ಸಂಗ್ರಹ ಆಗುತ್ತಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ 13,814 ಕಿಲೋಮೀಟರ್ ಉದ್ದದ ಹೆದ್ದಾರಿ ನಿರ್ಮಾಣ ಗುರಿಯನ್ನು ಸಾಧಿಸುವ ವಿಶ್ವಾಸ ಹೊಂದಿದ್ದೇವೆ ಎಂದು ಸಚಿವಾಲಯದ ಕಾರ್ಯದರ್ಶಿ ಅನುರಾಗ್ ಜೈನ್ ತಿಳಿಸಿದರು.

ಟೋಲ್ ಸಂಗ್ರಹ

ವರ್ಷ	ಟೋಲ್ ರಸ್ತೆ	ಮೊತ್ತ (₹ಕೋಟಿಗಳಲ್ಲಿ)
2018-19	25,996	25,154
2019-20	29,666	27,637
2020-21	34,071	27,923
2021-22	38,315	33,907
2022-23	42,595	48,028
2023-24 (ನ. ಅಂತ್ಯದ ವರೆಗೆ)	45,428	36,377

ಹೊಸ ವ್ಯವಸ್ಥೆ: ರಸ್ತೆ ಅಪಘಾತದ ಬಗ್ಗೆ ಟ್ರಕ್ ಚಾಲಕರು ಪೊಲೀಸ್ ಠಾಣೆ ಅಥವಾ ಅಧಿಕಾರಿಗಳಿಗೆ ಮಾಹಿತಿ ನೀಡುವುದಕ್ಕೆ ಸಂಬಂಧಿಸಿದಂತೆ ಹೊಸ ತಂತ್ರಜ್ಞಾನ ವ್ಯವಸ್ಥೆಯ ಅನುಷ್ಠಾನಕ್ಕೆ ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ನಿರ್ಧರಿಸಿದೆ. ಈ ವ್ಯವಸ್ಥೆ ಮೂಲಕ ಮಾಹಿತಿ ನೀಡಿದರೆ ಆ ಪ್ರಕರಣವನ್ನು 'ಅಪಘಾತ ನಡೆಸಿ ಪರಾರಿ'ಯಾದ ಪ್ರಕರಣದಡಿ ಪರಿಗಣಿಸುವುದಿಲ್ಲ ಎಂದರು.

ಮುಂಬೈ ಧಾರಣೆ

ಶೇಂಗಾ 05-01-2024

ಜಾವಾ 70/80(ಹೊಸ)	12000-12100
ಜಾವಾ 80/90(ಹೊಸ)	11300-11400
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1620)
ಒಂದು ವಾರದ ಡೆಲಿವರಿ	1605 (1615)
ಸೋಯಾ ಕಚ್ಚಾ	845 (830)
ಪಾಮ್ ವಾರದ ಡೆಲಿವರಿ	825 (822)
ಸೂರ್ಯಕಾಂತಿ ಎಣ್ಣೆ ಕಚ್ಚಾ	835 (815)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 62,150 (62,450)
ಬೆಳ್ಳಿ ಕೆ.ಜಿ 71,500 (71,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮುದ್ರೆಮನೆ ಕಾಫಿ (50 ಕೆಜಿಗೆ)



ಎಪಿ	₹13750
ಎಸಿ	₹7840
ಆರ್‌ಪಿ	₹11000
ಆರ್‌ಸಿ	₹6750

ಮುಖ್ಯಮಂತ್ರಿಯವರ ಶಿಫಾರಸು ಇಲ್ಲದೆ ಸಚಿವ ವಿ. ಸೆಂಥಿಲ್ ಬಾಲಾಜಿ ವಜಾ

ರಾಜ್ಯಪಾಲರಿಗಿಲ್ಲ ವಿವೇಚನಾ ಅಧಿಕಾರ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಮುಖ್ಯಮಂತ್ರಿಯ ಶಿಫಾರಸು ಇಲ್ಲದೆ ರಾಜ್ಯಪಾಲರು ಸಚಿವರನ್ನು ಸಂಪುಟದಿಂದ ವಜಾಗೊಳಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ನೌಕರಿ ಕೊಡಿಸಲು ಹಣ ಪಡೆದ ಆರೋಪದ ಅಡಿಯಲ್ಲಿ ತಮಿಳುನಾಡು ಸಚಿವ ವಿ. ಸೆಂಥಿಲ್ ಬಾಲಾಜಿ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬಂಧಿಸಿದ ನಂತರದಲ್ಲಿ ಅವರನ್ನು ಸಚಿವ ಸ್ಥಾನದಲ್ಲಿ ಮುಂದುವರಿಸಬಾರದು ಎಂದು ಕೋರಿದ್ದ ಅರ್ಜಿಯನ್ನು ಮದ್ರಾಸ್ ಹೈಕೋರ್ಟ್ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಹೈಕೋರ್ಟ್ ವ್ಯಕ್ತಪಡಿಸಿದ್ದ ಅನಿಸಿಕೆ ತನ್ನ ಅನಿಸಿಕೆಯೂ ಹೌದು ಎಂದು ಹೇಳಿರುವ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಉಜ್ಜಲ್ ಭೂಯಾನ್ ಅವರಿದ್ದ ಸುಪ್ರೀಂ ಕೋರ್ಟ್ ಪೀಠವು, ಈ ವಿಚಾರದಲ್ಲಿ



ಮಧ್ಯಪ್ರವೇಶ ಮಾಡುವ ಅಗತ್ಯ ಇಲ್ಲ ಎಂದು ಹೇಳಿದೆ. ಮದ್ರಾಸ್ ಹೈಕೋರ್ಟ್ ಆದೇಶ ವನ್ನು ಪ್ರಶ್ನಿಸಿ ಎಂ.ಎಲ್. ರವಿ ಎನ್ನುವವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

ಬಾಲಾಜಿ ಅವರನ್ನು ಸಂಪುಟದಿಂದ ವಜಾಗೊಳಿಸಿ ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರು ಆದೇಶ ಹೊರಡಿಸಿದ್ದರು. ನಂತರ ಇನ್ನೊಂದು ಆದೇಶ ಹೊರಡಿಸಿದ ರಾಜ್ಯಪಾಲ ರವಿ ಅವರು, ಬಾಲಾಜಿ ಅವರನ್ನು ವಜಾಗೊಳಿಸುವ ಮೊದಲ ಆದೇಶವನ್ನು ಅಮಾನತಿನಲ್ಲಿ ಇರಿಸಿದ್ದರು. ವಜಾ ಆದೇಶವನ್ನು ಅಮಾನತಿನಲ್ಲಿ ಇರಿಸಿದ ಆದೇಶವನ್ನು ರದ್ದುಗೊಳಿಸಬೇಕು ಎಂದು ಕೋರಿ ಮದ್ರಾಸ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿತ್ತು.

ರಾಜ್ಯಪಾಲ ರವಿ ಹಾಗೂ ತಮಿಳುನಾಡಿನ ಡಿಎಂಕೆ ಸರ್ಕಾರದ ನಡುವೆ ಸಂಘರ್ಷ ಕೆಲವು ತಿಂಗಳುಗಳಿಂದ ನಡೆಯುತ್ತಿದೆ. ರಾಜ್ಯಪಾಲರು ಸಚಿವ ಬಾಲಾಜಿ ಅವರನ್ನು ಸಂಪುಟದಿಂದ ವಜಾಗೊಳಿಸುವ ಆದೇಶವನ್ನು 2023ರ ಜೂನ್‌ನಲ್ಲಿ ಹೊರಡಿಸಿದ್ದರು. ಆದರೆ ಇದಕ್ಕೆ ಟೀಕೆಗಳು ವ್ಯಕ್ತವಾದ ನಂತರದಲ್ಲಿ ಅವರು, ಮೊದಲ ಆದೇಶವನ್ನು ಅಮಾನತಿನಲ್ಲಿ ಇರಿಸಲು ಬಯಸುವುದಾಗಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರಿಗೆ ತಿಳಿಸಿದ್ದರು.

ಇಂತಹ ಪ್ರಕರಣಗಳಲ್ಲಿ ರಾಜ್ಯಪಾಲರಿಗೆ ಇರುವ ವಿವೇಚನಾ ಅಧಿಕಾರದ ಬಗ್ಗೆ ಉಲ್ಲೇಖಿಸಿದ್ದ ಹೈಕೋರ್ಟ್, 'ಸಚಿವ ಸ್ಥಾನವನ್ನು ಹಿಂಪಡೆಯುವ ತೀರ್ಮಾನ ಕೈಗೊಳ್ಳುವಾಗ ರಾಜ್ಯಪಾಲರು ಮುಖ್ಯಮಂತ್ರಿಗೆ ತಿಳಿಸಿಯೇ ಆ ತೀರ್ಮಾನ ಕೈಗೊಳ್ಳಬೇಕು. ಏಕಪಕ್ಷೀಯವಾಗಿ ಇಂತಹ ತೀರ್ಮಾನ ತೆಗೆದುಕೊಳ್ಳುವಂತೆ ಇಲ್ಲ. ಈ ಪ್ರಕರಣದಲ್ಲಿ ಮುಖ್ಯಮಂತ್ರಿ ಅವರು ಒಪ್ಪಿಗೆ ನೀಡಿಲ್ಲ' ಎಂದು ಹೇಳಿತ್ತು.

ಬಾಲಾಜಿ ಅವರನ್ನು ಇ.ಡಿ. ಅಧಿಕಾರಿಗಳು ಜೂನ್ 14ರಂದು ಬಂಧಿಸಿದ್ದರು. ಬಂಧನ ನಂತರ ಬಾಲಾಜಿ ಅವರಲ್ಲಿದ್ದ ಖಾತೆಗಳನ್ನು ಹಿಂಪಡೆಯಲಾಗಿದೆ.

ಸಂಕ್ಷಿಪ್ತ ಸುದ್ದಿ

ಪೃಥ್ವಿ ಯೋಜನೆಗೆ ಸಂಪುಟ ಒಪ್ಪಿಗೆ

ನವದೆಹಲಿ (ಪಿಟಿಐ): ಈಗಾಗಲೇ ಜಾರಿಯಲ್ಲಿ ಇರುವ ಐದು ಉಪಯೋಜನೆಗಳನ್ನು ಒಳಗೊಳ್ಳುವ 'ಪೃಥ್ವಿ ವಿಜ್ಞಾನ' ಹೆಸರಿನ ಸಮಗ್ರ ಯೋಜನೆಯೊಂದಕ್ಕೆ ಕೇಂದ್ರ ಸಚಿವ ಸಂಪುಟವು ಶುಕ್ರವಾರ ಅನುಮೋದನೆ ನೀಡಿದೆ. ಈ ಯೋಜನೆಗೆ 2021ರಿಂದ ಅನ್ವಯವಾಗುವಂತೆ 2026ರವರೆಗೆ ₹4,797 ಕೋಟಿ ವೆಚ್ಚವಾಗಲಿದೆ.

ಉಪ ಯೋಜನೆಗಳನ್ನು ಒಂದುಗೂಡಿಸಲು ಭೂವಿಜ್ಞಾನ ಸಚಿವಾಲಯ ಮುಂದಿರಿಸಿದ ಪ್ರಸ್ತಾವಕ್ಕೆ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯು ಒಪ್ಪಿಗೆ ನೀಡಿತು. ಪೃಥ್ವಿ ವಿಜ್ಞಾನ ಯೋಜನೆಯು ಏಕೀಕೃತ ಬಹುಶಿಸ್ತೀಯ ಭೂವಿಜ್ಞಾನ ಸಂಶೋಧನೆಗೆ ಅನುವು ಮಾಡಿಕೊಡಲಿದೆ ಎಂದು ಕೇಂದ್ರದ ಪ್ರಕಟಣೆ ತಿಳಿಸಿದೆ.

ಹವಾಮಾನ, ಸಮುದ್ರ, ನೀರು ಹೆಪ್ಪುಗಟ್ಟಿರುವ ಸ್ಥಳಗಳು, ಭೂಕಂಪನ ವಿಜ್ಞಾನಕ್ಕೆ ಸಂಬಂಧಿಸಿದ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಈ ಸಂಶೋಧನೆಗಳು ನೆರವು ನೀಡಲಿವೆ.

ಎನ್‌ಎಂಸಿಯಿಂದ ಫೆಲೋಶಿಪ್ ಕೋರ್ಸ್

ನವದೆಹಲಿ (ಪಿಟಿಐ): ರಾಷ್ಟ್ರೀಯ ವೈದ್ಯಕೀಯ ಆಯೋಗವು (ಎನ್‌ಎಂಸಿ) ತನ್ನ ನಿಯಂತ್ರಣದಲ್ಲಿನ ವೈದ್ಯಕೀಯ ಕಾಲೇಜುಗಳಲ್ಲಿ ಪೋಸ್ಟ್ ಡಾಕ್ಟೋರಲ್ ಫೆಲೋಶಿಪ್ ಕೋರ್ಸ್ ಆರಂಭಿಸಲಿದೆ. ಸಂಶೋಧನೆ ಹಾಗೂ ವೈದ್ಯ ವೃತ್ತಿಗೆ ಸಂಬಂಧಿಸಿದ ಕೆಲವು ಕೌಶಲಗಳನ್ನು ಬೆಳೆಸಲು ಈ ಕ್ರಮಕ್ಕೆ ಅದು ಮುಂದಾಗಿದೆ.

ಇದುವರೆಗೆ ವೈದ್ಯಕೀಯ ಸಂಸ್ಥೆಗಳು ವೈದ್ಯರ ತರಬೇತಿಯ ಉದ್ದೇಶದಿಂದ ಈ ಕೋರ್ಸ್‌ಗಳನ್ನು ತಮ್ಮ ಹಂತದಲ್ಲಿಯೇ ರೂಪಿಸಿ, ಅನುಮೋದನೆ ನೀಡುತ್ತಿದ್ದವು. 'ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ನಿಯಮ – 2023'ಅನ್ನು ಈಚೆಗೆ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ.

ಇದರ ಅನ್ವಯ, ವೈದ್ಯಕೀಯ ಕಾಲೇಜೊಂದಕ್ಕೆ ಸ್ನಾತಕೋತ್ತರ ಕೋರ್ಸ್ ಆರಂಭಿಸಲು ಅನುಮತಿ ಸಿಕ್ಕಾಗ, ಅದು ಮಾನ್ಯತೆ ಪಡೆದಿದೆ ಎಂದು ಪರಿಗಣಿತವಾಗುತ್ತದೆ.

ದಾಭೋಲ್ಕರ್ ಹತ್ಯೆ: ಜಾಮೀನು ಪ್ರಶ್ನಿಸಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): ವಿಚಾರವಾದಿ ನರೇಂದ್ರ ದಾಭೋಲ್ಕರ್ ಹತ್ಯೆ ಪ್ರಕರಣದ ಆರೋಪಿಗೆ ನೀಡಿದ್ದ ಜಾಮೀನು ಪ್ರಶ್ನಿಸಿ, ದಾಭೋಲ್ಕರ್ ಪುತ್ರಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ದ್ವಿಚಕ್ರವಾಹನದಲ್ಲಿ ಬಂದಿದ್ದ ಹಂತಕರು 2013ರ ಆಗಸ್ಟ್ 20ರಂದು ಪುಣೆಯಲ್ಲಿ ದಾಭೋಲ್ಕರ್ ಅವರನ್ನು ಗುಂಡಿಟ್ಟು ಕೊಂದಿದ್ದರು. ಪ್ರಕರಣದ ಐವರು ಆರೋಪಿಗಳಲ್ಲಿ ಒಬ್ಬರಾದ ವಿಕ್ರಮ್ ಭಾವೆ ಅವರಿಗೆ ಬಾಂಬೆ ಹೈಕೋರ್ಟ್ 2021ರ ಮೇ 6 ರಂದು ಜಾಮೀನು ನೀಡಿತ್ತು. ದಾಭೋಲ್ಕರ್ ಪುತ್ರಿ ಮುಕ್ತಾ ದಾಭೋಲ್ಕರ್ ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಮತ್ತು ಎಸ್.ವಿ.ಎನ್ ಭಟ್ಟಿ ಅವರಿದ್ದ ಪೀಠ, 'ಪ್ರಕರಣದ ಆರೋಪಿಗೆ ಜಾಮೀನು ಮಂಜೂರು ಮಾಡುವ ಸಂದರ್ಭದಲ್ಲಿ ಹೈಕೋರ್ಟ್, ಸ್ಪಷ್ಟ ಕಾರಣಗಳನ್ನು ಹೇಳಿ ಆದೇಶ ನೀಡಿತ್ತು' ಎಂದು ತಿಳಿಸಿತು.

ದಾಭೋಲ್ಕರ್ ಹತ್ಯೆಯಲ್ಲಿ ಭಾಗಿಯಾಗಿದ್ದ ಆರೋಪಿಗಳಾದ ಸಚಿನ್ ಅಂದುರೆ ಮತ್ತು ಶರದ್ ಕಲಾಸ್ಕರ್ ಅವರು ಸ್ಥಳದಿಂದ ಪರಾರಿಯಾಗಲು ನೆರವಾದ ಆರೋಪ ವಿಕ್ರಮ್ ಮೇಲಿದೆ.

ಎಲ್ಗಾರ್ ಪ್ರಕರಣ ಜಾಮೀನು ತಡೆ ವಿಸ್ತರಣೆ

ನವದೆಹಲಿ (ಪಿಟಿಐ): ಮಾನವಹಕ್ಕು ಹೋರಾಟಗಾರ ಗೌತಮ್ ನವಲಖಾ ಅವರಿಗೆ ನೀಡಿದ್ದ ಜಾಮೀನು ಆದೇಶವನ್ನು ಕಾರ್ಯಗತಗೊಳಿಸಲು ಬಾಂಬೆ ಹೈಕೋರ್ಟ್ ನೀಡಿದ್ದ ತಡೆಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಿಸ್ತರಿಸಿದೆ.

ಅರ್ಜಿಯನ್ನು ಇತರ ಆರೋಪಿಗಳ ಪ್ರಕರಣದ ಜತೆಗೆ ಸೇರಿಸಬೇಕೆಂಬ ಎನ್‌ಐಎ ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ಮುಂದಿಡುವಂತೆ ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಮತ್ತು ಎಸ್.ವಿ.ಎನ್ ಭಟ್ಟಿ ಅವರ ಪೀಠವು ನ್ಯಾಯಾಲಯದ ರಿಜಿಸ್ಟ್ರಿಗೆ ಸೂಚಿಸಿತು. ಎಲ್ಗಾರ್ ಪರಿಷತ್– ಮಾವೋವಾದಿ ಸಂಪರ್ಕ ಪ್ರಕರಣದಲ್ಲಿ ನವಲಖಾ ಅವರಿಗೆ ಬಾಂಬೆ ಹೈಕೋರ್ಟ್ ನವೆಂಬರ್ 19ರಂದು ಜಾಮೀನು ನೀಡಿತ್ತು. ಆದರೆ ಜಾಮೀನು ಆದೇಶವನ್ನು ಮೂರು ವಾರಗಳವರೆಗೆ ತಡೆಹಿಡಿದಿತ್ತು.

ಕಡಿಮೆ ವೆಚ್ಚದ ಬ್ಯಾಟರಿ ಅಭಿವೃದ್ಧಿ

ಬೆಂಗಳೂರು (ಪಿಟಿಐ): ಸಾಂಪ್ರದಾಯಿಕ ಬ್ಯಾಟರಿ ಸೆಲ್‌ಗಳಿಗಿಂತ ಹೆಚ್ಚು ಪರಿಣಾಮಕಾರಿ ಆಗಿರುವ ಹಾಗೂ ಕಡಿಮೆ ವೆಚ್ಚದ ಬ್ಯಾಟರಿ ಸೆಲ್‌ಅನ್ನು ಪರೀಕ್ಷಾರ್ಥವಾಗಿ ಬಳಕೆ ಮಾಡಲಾಗಿದೆ ಎಂದು ಇಸ್ರೊ ಶುಕ್ರವಾರ ಹೇಳಿದೆ.

ಇದು ಕಡಿಮೆ ತೂಕ ಹಾಗೂ ಕಡಿಮೆ ವೆಚ್ಚದ್ದು, ಇದು ಈಗ ಬಳಕೆಯಲ್ಲಿ ಇರುವ ಸಾಂಪ್ರದಾಯಿಕ ಬ್ಯಾಟರಿಗಳಿಗೆ ಪರ್ಯಾಯವಾಗುತ್ತದೆ. ಇದನ್ನು ಮುಂದಿನ ದಿನಗಳಲ್ಲಿ ವಿವಿಧ ಯೋಜನೆಗಳಲ್ಲಿ ಬಳಕೆಗೆ ತರುವ ಉದ್ದೇಶ ಇದೆ ಎಂದು ಇಸ್ರೊ ಹೇಳಿದೆ.

ದಾವೂದ್ ಸಂಬಂಧಿಕರ ಆಸ್ತಿ ₹2 ಕೋಟಿಗೆ ಬಿಕರಿ

ಮುಂಬೈ (ಪಿಟಿಐ):ಭೂಗತ ಪಾತಕಿ ದಾವೂದ್ ಇಬ್ರಾಹಿಂ ಕುಟುಂಬದ ಸದಸ್ಯರಿಗೆ ಸೇರಿದ ಎರಡು ನಿವೇಶನಗಳು ಶುಕ್ರವಾರ ನಡೆದ ಹರಾಜಿನಲ್ಲಿ ₹2 ಕೋಟಿಗೂ ಹೆಚ್ಚಿನ ಮೊತ್ತಕ್ಕೆ ಮಾರಾಟವಾಗಿವೆ. ಕಳ್ಳಸಾಗಣೆದಾರರು ಮತ್ತು ವಿದೇಶಿ ವಿನಿಮಯ ಅಕ್ರಮ ಕಾಯ್ದೆಯಡಿ ಸಕ್ಷಮ ಪ್ರಾಧಿಕಾರವು ಈ ಪ್ರಕ್ರಿಯೆ ನಡೆಸಿದೆ.

ಬಾರಾಮತಿ ಆಗ್ರೊ ಕಚೇರಿ ಮೇಲೆ ಇ.ಡಿ ದಾಳಿ

ಪ್ರಜಾವಾಣಿ ವಾರ್ತೆ

ಮುಂಬೈ: ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರ ಸೋದರನ ಮೊಮ್ಮಗ ರೋಹಿತ್ ಪವಾರ್ ಅವರ ಒಡೆತನದ ಬಾರಾಮತಿ ಆಗ್ರೊ ಲಿಮಿಟೆಡ್ ಕಚೇರಿ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ದಾಳಿ ನಡೆಸಿದೆ.

ಮಹಾರಾಷ್ಟ್ರ ರಾಜ್ಯ ಸಹಕಾರ ಬ್ಯಾಂಕ್‌ನಲ್ಲಿ ನಡೆದಿದೆ ಎನ್ನಲಾದ ಹಗರಣದಲ್ಲಿ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಇ.ಡಿ ತನಿಖೆ ನಡೆಸುತ್ತಿದೆ. ಬಾರಾಮತಿ, ಪುಣೆ, ಔರಂಗಬಾದ್, ಮುಂಬೈ ಸೇರಿದಂತೆ ಕನಿಷ್ಠ ಆರು ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯ ಅಧಿಕಾರಿಗಳು ಶೋಧ ನಡೆಸಿದರು.

ಎನ್‌ಸಿಪಿ ಶಾಸಕ ರೋಹಿತ್ ಪವಾರ್ ಅವರು ಪುಣೆ ಜಿಲ್ಲೆಯ ಬಾರಾಮತಿಯಲ್ಲಿರುವ ಬಾರಾಮತಿ ಆಗ್ರೊ ಕಂಪನಿಯ ಸಿಇಒ ಆಗಿದ್ದಾರೆ.

> **ರೋಹಿತ್ ಪವಾರ್ ಮತ್ತು ಬಾರಾಮತಿ ಆಗ್ರೊ ವಿರುದ್ಧ ತನಿಖೆಯನ್ನು ತ್ವರಿತಗೊಳಿಸಬೇಕೆಂದು ತನಿಖಾ ಸಂಸ್ಥೆಗಳನ್ನು ಮತ್ತೊಮ್ಮೆ ಕೋರುತ್ತೇನೆ.**
> **ಕಿರಿಟ್ ಸೋಮಯ್ಯ** ಬಿಜೆಪಿ ನಾಯಕ

> **ರೋಹಿತ್ ಪವಾರ್ ಅವರ 'ಯುವ ಸಂಘರ್ಷ ಯಾತ್ರೆ'ಯು ಬಿಜೆಪಿಯಲ್ಲಿ ಅಸುರಕ್ಷಿತ ಭಾವ ಮೂಡಿಸಿದೆ. ಆದರೆ ಅದು ರೋಹಿತ್ ಅವರನ್ನು ತಡೆಯಲು ಸಾಧ್ಯವಿಲ್ಲ.**
> **ಕ್ಲೈಡ್ ಕ್ರಾಸ್ಟೊ** ಎನ್‌ಸಿಪಿ ವಕ್ತಾರ

ವಿದೇಶಿ ಶಸ್ತ್ರಾಸ್ತ್ರ ವಶ

ಚಂಡೀಗಡ (ಪಿಟಿಐ): ಮಾಜಿ ಪಕ್ಷೇತರ ಶಾಸಕ ದಿಲ್‌ಬಾಗ್ ಸಿಂಗ್ ಮತ್ತು ಅವರ ಸಹಚರರಿಗೆ ಸೇರಿದ ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯ ಶೋಧ ನಡೆಸಿದ್ದು ವಿದೇಶಿ ನಿರ್ಮಿತ ರೈಫಲ್‌ಗಳು, ಸಿಡಿಮದ್ದುಗಳು, ₹ 5 ಕೋಟಿ ನಗದು ಮತ್ತು 100ಕ್ಕೂ ಹೆಚ್ಚು ಮದ್ಯದ ಬಾಟಲಿಗಳನ್ನು ವಶಪಡಿಸಿಕೊಂಡಿದೆ.

ಹರಿಯಾಣದ ಯಮುನಾ ನಗರ ಜಿಲ್ಲೆಯಲ್ಲಿ ಮತ್ತು ಇತರ ಪ್ರದೇಶಗಳಲ್ಲಿ ಅಕ್ರಮ ಗಣಿಗಾರಿಕೆ ನಡೆದಿದೆ ಎಂಬ ಆರೋಪಗಳಿವೆ. ಇದಕ್ಕೆ ಸಂಬಂಧಿಸಿದಂತೆ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶ ನಾಲಯ ತನಿಖೆ ಕೈಗೊಂಡಿದೆ. ಸಿಂಗ್ ಮತ್ತು ಕಾಂಗ್ರೆಸ್ ಶಾಸಕ ಸುರೇಂದರ್ ಪನ್ವಾರ್ ಅವರಿಗೆ ಸೇರಿದ ಸ್ಥಳಗಳ ಮೇಲೂ ಗುರುವಾರ ದಾಳಿ ನಡೆದಿತ್ತು.

ಅಯೋಧ್ಯೆಯಲ್ಲಿ ನಿರ್ಮಿಸಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

ವಾಲ್ಮೀಕಿ ಹೆಸರು: ಸಂಪುಟ ಒಪ್ಪಿಗೆ

ನವದೆಹಲಿ (ಪಿಟಿಐ): ಅಯೋಧ್ಯೆ ವಿಮಾನನಿಲ್ದಾಣವನ್ನು 'ಮಹರ್ಷಿ ವಾಲ್ಮೀಕಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಅಯೋಧ್ಯಾಧಾಮ್' ಎಂದು ಹೆಸರಿಸುವ ಪ್ರಸ್ತಾವಕ್ಕೆ ಕೇಂದ್ರ ಸಂಪುಟ ಸಭೆ ಶುಕ್ರವಾರ ಅಂಗೀಕಾರ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯು ಈ ವಿಮಾನ ನಿಲ್ದಾಣವನ್ನು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ಕೂಡ ಘೋಷಿಸಿದೆ. ಮೋದಿ ಅವರು ಡಿ. 30ರಂದು ಇದನ್ನು ಉದ್ಘಾಟಿಸಿದ್ದರು.

ಅಂತರರಾಷ್ಟ್ರೀಯ ವಿಮಾನನಿಲ್ದಾಣ ಎಂದು ಘೋಷಿಸಿರುವುದರಿಂದ ಈ ಪ್ರದೇಶದ ಆರ್ಥಿಕ ಅಭಿವೃದ್ಧಿ ಸಾಧ್ಯವಾಗಲಿದೆ. ಅಲ್ಲದೆ ಪ್ರವಾಸಿಗರು ಮತ್ತು ವಿದೇಶಿ ಯಾತ್ರಿಗಳು ಬರುವುದರಿಂದ ಅಯೋಧ್ಯೆಯು ಜಾಗತಿಕ ಮಟ್ಟದ ಯಾತ್ರಾ ಸ್ಥಳವಾಗಿಯೂ ರೂಪುಗೊಳ್ಳಲಿದೆ ಎಂದು ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂದಿಯಾ ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವೆ': ಅಯೋಧ್ಯೆಯಲ್ಲಿ ರಾಮನ ಮೂರ್ತಿ ಪ್ರತಿಷ್ಠಾಪನೆ ಸಮಾರಂಭದ ಆಹ್ವಾನ ಪತ್ರಿಕೆಯು ತಮಗೆ ತಲುಪಿದ್ದು ಕಾರ್ಯಕ್ರಮದಲ್ಲಿ ಭಾಗವಹಿಸುವುದಾಗಿ ರಾಮಜನ್ಮಭೂಮಿ–ಬಾಬರಿ ಮಸೀದಿ ನಿವೇಶನ ವಿವಾದದ ಅರ್ಜಿದಾರರಲ್ಲಿ ಒಬ್ಬರಾದ ಇಕ್ಬಾಲ್ ಅನ್ಸಾರಿ ಶುಕ್ರವಾರ ಹೇಳಿದ್ದಾರೆ.

ತಿರುಪತಿಯಿಂದ 1 ಲಕ್ಷ ಲಡ್ಡು: ಅಯೋಧ್ಯೆಯಲ್ಲಿ ಜನವರಿ 22 ರಂದು ನಡೆಯಲಿರುವ ರಾಮಮಂದಿರ ಉದ್ಘಾಟನಾ ಸಮಾರಂಭಕ್ಕೆ ತಿರುಪತಿ ತಿರುಮಲ ದೇವಸ್ಥಾನದಿಂದ 1 ಲಕ್ಷ ಲಡ್ಡುಗಳನ್ನು ಪೂರೈಸಲಾಗುತ್ತದೆ ಎಂದು ತಿರುಮಲ ತಿರುಪತಿ ದೇವಸ್ಥಾನಗಳ ಅಧಿಕಾರಿಯೊಬ್ಬರು ತಿಳಿಸಿದರು.



ಅಯೋಧ್ಯೆಯ ರಾಮ ಮಂದಿರದಲ್ಲಿ ಸ್ಥಾಪಿಸುವ ಧ್ವಜಸ್ತಂಭವನ್ನು ಅಹಮದಾಬಾದ್‌ನಲ್ಲಿ ಮೆರವಣಿಗೆ ಮೂಲಕ ಸಾಗಿಸಲಾಯಿತು. ಈ ವೇಳೆ ಅಪಾರ ಭಕ್ತರು ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

'ದಲಿತರ ಉಪಸ್ಥಿತಿಯಲ್ಲಿ ಪ್ರತಿಷ್ಠಾಪಿಸಿ'

ಜೈಪುರ (ಪಿಟಿಐ): 'ಶಂಕರಾಚಾರ್ಯ ಅವರ ನೇತೃತ್ವದಲ್ಲಿ ದಲಿತರು, ಬುಡಕಟ್ಟು ಜನರು, ಒಬಿಸಿ, ಎಲ್ಲ ಧರ್ಮಗಳ ಪ್ರತಿನಿಧಿಗಳಿಂದ ರಾಮಲಲ್ಲಾ ಮೂರ್ತಿ ಪ್ರತಿಷ್ಠಾಪಿಸಬೇಕು' ಎಂದು ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಸಲಹೆ ಮಾಡಿದ್ದಾರೆ.

'ಪ್ರತಿಷ್ಠಾಪನೆಯಲ್ಲಿ ತಾವೇ ಮುಂಚೂಣಿಯಲ್ಲಿ ಇರುವ ಬದಲು, ಇಂಥ ಕಾರ್ಯದ ಮೂಲಕ ಅಸ್ಪೃಶ್ಯತೆ ವಿರುದ್ಧ ಸಮಾಜಕ್ಕೆ ಸ್ಪಷ್ಟ ಸಂದೇಶ ನೀಡಲು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇದೊಂದು ಸದವಕಾಶವಾಗಿದೆ' ಎಂದಿದ್ದಾರೆ.

ಇವಿಎಂ, ವಿವಿಪ್ಯಾಟ್ ಬಗ್ಗೆ ಆತಂಕ ಬೇಡ: ಚುನಾವಣಾ ಆಯೋಗ ಸ್ಪಷ್ಟನೆ

ಜೈರಾಮ್ ರಮೇಶ್ ಕಳವಳ ಆಧಾರರಹಿತ



ನವದೆಹಲಿ (ಪಿಟಿಐ): ಎಲೆಕ್ಟ್ರಾನಿಕ್ ಮತಯಂತ್ರಗಳ (ಇವಿಎಂ) ಜೊತೆ ಬಳಕೆಮಾಡುವ ವಿವಿಪ್ಯಾಟ್ ಬಗ್ಗೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ವ್ಯಕ್ತಪಡಿಸಿದ್ದ ಕಳವಳಗಳಿಗೆ ಆಧಾರ ಇಲ್ಲ ಎಂದು ಹೇಳಿರುವ ಚುನಾವಣಾ ಆಯೋಗವು, ರಮೇಶ್ ಅವರು 'ಇನ್ನಷ್ಟು ಸ್ಪಷ್ಟೀಕರಣದ ಅಗತ್ಯವಿರುವ ಯಾವುದೇ ತರ್ಕಬದ್ಧ ಅನುಮಾನವನ್ನು ವ್ಯಕ್ತಪಡಿಸಿಲ್ಲ' ಎಂದು ತಿಳಿಸಿದೆ.

ಅಲ್ಲದೆ, ವಿವಿಪ್ಯಾಟ್ ಬಳಕೆಗೆ ಸಂಬಂಧಿಸಿದ ನಿಯಮಗಳನ್ನು ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಆಡಳಿತ ಇದ್ದಾಗಲೇ (2013ರಲ್ಲಿ) ಜಾರಿಗೆ ತರಲಾಗಿತ್ತು ಎಂದು ಹೇಳಿದೆ.

ಚುನಾವಣೆಗಳಲ್ಲಿ ಇವಿಎಂ ಬಳಕೆ ವಿಚಾರದಲ್ಲಿ ಆಯೋಗವು ಪೂರ್ಣ ವಿಶ್ವಾಸ ವ್ಯಕ್ತಪಡಿಸಿದೆ. ದೇಶದ ಚುನಾವಣೆಗಳಲ್ಲಿ ಇವಿಎಂ ಬಳಕೆ ವಿಚಾರವಾಗಿ ಇರುವ ತರ್ಕಸಹಿತವಾದ ಎಲ್ಲ ಪ್ರಶ್ನೆಗಳಿಗೂ ಇತ್ತೀಚೆಗೆ ಪರಿಷ್ಕರಿಸಿ ಪ್ರಕಟಿಸಲಾಗಿರುವ ಎಫ್‌ಎಕ್ಯೂ (ಇವಿಎಂ ಬಳಕೆ ಕುರಿತ ಪ್ರಶ್ನೆಗಳು, ಅವುಗಳಿಗೆ ವಿವರಣೆ) ಉತ್ತರ ನೀಡಿದೆ ಎಂದು ಆಯೋಗ ಸ್ಪಷ್ಟಪಡಿಸಿದೆ.

ವಿವಿಪ್ಯಾಟ್ ಹಾಗೂ ಮತ ಚಲಾವಣೆಗೆ ಸಂಬಂಧಿಸಿದ ಮುದ್ರಿತ ಚೀಟಿ ಕುರಿತ ನಿಯಮಗಳನ್ನು ಕಾಂಗ್ರೆಸ್ ಪಕ್ಷವು 2013ರ ಆಗಸ್ಟ್ 14ರಂದು ರೂಪಿಸಿತ್ತು ಎಂದು ಚುನಾವಣಾ ಆಯೋಗದ ಪ್ರಧಾನ ಕಾರ್ಯದರ್ಶಿ ಪ್ರಮೋದ್ ಕುಮಾರ್ ಶರ್ಮ ಅವರು ರಮೇಶ್ ಅವರಿಗೆ ರವಾನಿಸಿರುವ ಪತ್ರದಲ್ಲಿ ಹೇಳಿದ್ದಾರೆ.

ವಿವಿಪ್ಯಾಟ್ ಬಗ್ಗೆ ತಮ್ಮ ವಿಚಾರಗಳನ್ನು ತಿಳಿಸಲು 'ಇಂಡಿಯಾ' ಮೈತ್ರಿಕೂಟದ ಪ್ರತಿನಿಧಿಗಳಿಗೆ ಅವಕಾಶ ನೀಡಬೇಕು ಎಂದು ರಮೇಶ್ ಅವರು ಡಿಸೆಂಬರ್ 30ರಂದು ಬರೆದ ಪತ್ರದಲ್ಲಿ ಆಯೋಗವನ್ನು ಕೋರಿದ್ದರು. ಡಿಸೆಂಬರ್ 19ರ ಸಭೆಯಲ್ಲಿ, ಇವಿಎಂ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದ 'ಇಂಡಿಯಾ' ಮೈತ್ರಿಕೂಟವು ವಿವಿಪ್ಯಾಟ್ ಚೀಟಿಗಳನ್ನು ಮತದಾರರ ಕೈಗೆ ನೀಡಬೇಕು, ಅವರು ಅದನ್ನು ಬೇರೊಂದು ಪೆಟ್ಟಿಗೆಯಲ್ಲಿ ಹಾಕುವ ವ್ಯವಸ್ಥೆ ಕಲ್ಪಿಸಬೇಕು ಎಂದು ಹೇಳಿತ್ತು.

ಇವಿಎಂನಲ್ಲಿ ದಾಖಲಾಗುವ ಮತಗಳ ವಿವರ ಹಾಗೂ ವಿವಿಪ್ಯಾಟ್ ಯಂತ್ರದಿಂದ ಸಿಗುವ ಚೀಟಿಯನ್ನು ಪೂರ್ತಿಯಾಗಿ ತಾಳೆ ಮಾಡುವ ವ್ಯವಸ್ಥೆ ಜಾರಿಗೆ ಬರಬೇಕು ಎಂದು ಕೂಡ ಮೈತ್ರಿಕೂಟವು ಆಗ್ರಹಿಸಿತ್ತು. ರಮೇಶ್ ಅವರು ಬರೆದಿರುವ ಪತ್ರವು, ಇದುವರೆಗೆ ಉತ್ತರ ನೀಡದೆ ಇರುವ ಯಾವುದೇ ಪ್ರಶ್ನೆಯನ್ನು ಹೊಸದಾಗಿ ಎತ್ತಿಲ್ಲ ಎಂದು ಶರ್ಮ ಅವರು ಹೇಳಿದ್ದಾರೆ.

ಇವಿಎಂ ಬಳಕೆಯ ಪ್ರತಿ ಹಂತದಲ್ಲಿಯೂ ರಾಜಕೀಯ ಪಕ್ಷಗಳು ಹಾಗೂ ಅಭ್ಯರ್ಥಿಗಳು ಭಾಗಿಯಾಗಿರುತ್ತಾರೆ ಎಂದು ಕೂಡ ಆಯೋಗವು ಪತ್ರದಲ್ಲಿ ಹೇಳಿದೆ.

ಭದ್ರತಾ ವೈಫಲ್ಯ: ಸುಳ್ಳುಪತ್ತೆ ಪರೀಕ್ಷೆಗೆ ಬಂಧಿತರ ಸಮ್ಮತಿ

ನವದೆಹಲಿ (ಪಿಟಿಐ): ಸಂಸತ್ತಿನ ಭದ್ರತಾ ಲೋಪ ಪ್ರಕರಣದಲ್ಲಿ ಬಂಧಿಸಲಾಗಿರುವ ಐವರು ಆರೋಪಿಗಳು ಸುಳ್ಳು ಪತ್ತೆ ಪರೀಕ್ಷೆಗೆ ಒಳಪಡಲು ನ್ಯಾಯಾಧೀಶರ ಎದುರು ಶುಕ್ರವಾರ ತಮ್ಮ ಸಮ್ಮತಿಯನ್ನು ನೀಡಿದ್ದಾರೆ.

ಆರೋಪಿಗಳಾದ ಡಿ.ಮನೋರಂಜನ್, ಸಾಗರ್ ಶರ್ಮಾ, ಅಮೋಲ್ ಧನ್‌ರಾಜ್ ಶಿಂದೆ, ನೀಲಂ ಆಜಾದ್, ಲಲಿತ್ ಝಾ ಮತ್ತು ಮಹೇಶ್ ಕುಮಾವತ್ ಅವರನ್ನು ಇಲ್ಲಿನ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಾದ ಹರ್‌ದೀಪ್ ಕೌರ್ ಎದುರು ಹಾಜರುಪಡಿಸಲಾಗಿತ್ತು.

ನ್ಯಾಯಾಧೀಶರು ಈ ಎಲ್ಲರನ್ನೂ ಮತ್ತೆ ಎಂಟು ದಿನ ಅವಧಿಗೆ ಪೊಲೀಸರ ವಶಕ್ಕೆ ಒಪ್ಪಿಸಿ ಆದೇಶಿಸಿದರು. ಒಟ್ಟು ಆರು ಜನರನ್ನು ಪ್ರಕರಣ ಸಂಬಂಧ ಬಂಧಿಸಲಾಗಿದ್ದು, ಇವರಲ್ಲಿ ಆಜಾದ್ ಹೊರತುಪಡಿಸಿ ಉಳಿದವರು ಸುಳ್ಳುಪತ್ತೆ ಪರೀಕ್ಷೆಗೆ ಸಮ್ಮತಿ ನೀಡಿದ್ದಾರೆ.

ಇದಕ್ಕೂ ಮೊದಲು ಆರೋಪಿಗಳನ್ನು ಸುಳ್ಳುಪತ್ತೆ ಪರೀಕ್ಷೆಗೆ ಒಳಪಡಿಸಲು ಅನುಮತಿ ಕೋರಿ ದೆಹಲಿ ಪೊಲೀಸರು ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಭದ್ರತೆಯನ್ನು ಭೇದಿಸಿ ಇಬ್ಬರು ಆರೋಪಿಗಳು ಡಿ.13ರಂದು ಲೋಕಸಭೆ ಸದನ ಪ್ರವೇಶಿಸಿದ್ದರು.ಇನ್ನಿಬ್ಬರು ಸಂಸತ್ತಿನ ಹೊರಗಡೆ ಪ್ರತಿಭಟಿಸಿದ್ದರು.

ಪತ್ರಿಕೆಯ ಇ–ಆವೃತ್ತಿ 'ಪ್ರೆಸ್ ಸೇವಾ ಪೋರ್ಟಲ್'ಗೆ ಅಪ್‌ಲೋಡ್ ಕಡ್ಡಾಯ

ನವದೆಹಲಿ: ದಿನಪತ್ರಿಕೆ ಪ್ರಕಟವಾದ 48 ಗಂಟೆಗಳೊಳಗೆ ಪ್ರಕಾಶಕರು ಅದರ ಇ– ಆವೃತ್ತಿಯನ್ನು 'ಪ್ರೆಸ್ ಸೇವಾ ಪೋರ್ಟಲ್'ಗೆ ಅಪ್‌ಲೋಡ್ ಮಾಡಬೇಕು ಎಂದು ಪತ್ರಿಕೆ ಮತ್ತು ನಿಯತಕಾಲಿಕಗಳ ನೋಂದಣಿ ನಿಯಮ 2024ರ ಕರಡು ಪ್ರತಿಯಲ್ಲಿ ಹೇಳಲಾಗಿದೆ.

ಪ್ರತಿ ತಿಂಗಳ 5ನೇ ತಾರೀಕಿನೊಳಗೆ ಪತ್ರಿಕೆಯ ಹಿಂದಿನ ತಿಂಗಳ ಮುದ್ರಿತ ಪ್ರತಿಗಳನ್ನು ಪ್ರೆಸ್ ಇನ್ಫಾರ್ಮೇಶನ್ ಬ್ಯುರೊದ (ಪಿಐಬಿ) ರಾಜ್ಯ ಕಚೇರಿಗಳಿಗೆ ಸಲ್ಲಿಸಬೇಕು ಎಂದೂ ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವಾಲಯವು ಶುಕ್ರವಾರ ಬಿಡುಗಡೆ ಮಾಡಿರುವ ಕರಡು ನಿಯಮಗಳಲ್ಲಿ ಹೇಳಲಾಗಿದೆ. ರಾಜ್ಯ ಸರ್ಕಾರದ ಅಧೀನದಲ್ಲಿರುವ ಕಚೇರಿಗೂ ಪತ್ರಿಕೆಯ ಮುದ್ರಿತ ಪ್ರತಿಗಳನ್ನು ಸಲ್ಲಿಸಬೇಕು ಎಂದಿದೆ.

ನಿಗದಿತ ಅವಧಿಯಲ್ಲಿ ಪತ್ರಿಕೆಯು ಮುದ್ರಣಗೊಳ್ಳದಿದ್ದರೆ ಅದರ ನೋಂದಣಿ ರದ್ದುಗೊಳ್ಳಲಿದೆ ಎಂದೂ ಹೇಳಲಾಗಿದೆ.

ಫೆ. 4ರ ವರೆಗೆ ಈ ಕುರಿತು ಸಾರ್ವಜನಿಕರ ಅಭಿಪ್ರಾಯ ಸಲ್ಲಿಕೆಗೆ ಅವಕಾಶ ನೀಡಲಾಗಿದೆ.



ಮಡಿಕೇರಿಯ ಭಾರತೀಯ ಕ್ರೀಡಾ ಪ್ರಾಧಿಕಾರದ ಹಾಕಿ ಮೈದಾನದಲ್ಲಿ ಶುಕ್ರವಾರ ನಡೆದ 67ನೇ ರಾಷ್ಟ್ರಮಟ್ಟದ ಬಾಲಕಿಯರ (ಶಾಲೆಗಳ) ಹಾಕಿ ಟೂರ್ನಿಯಲ್ಲಿ ಕರ್ನಾಟಕ ಹಾಗೂ ಕೆವಿಎಸ್ ತಂಡಗಳು ಸೆಣಸಾಡಿದವು

ಹಾಕಿ: ಎಂಟರ ಘಟ್ಟಕ್ಕೆ ಕರ್ನಾಟಕ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕರ್ನಾಟಕ ಸೇರಿದಂತೆ 8 ರಾಜ್ಯಗಳ ತಂಡಗಳು, ಕೊಡಗಿನಲ್ಲಿ ನಡೆಯುತ್ತಿರುವ 67ನೇ ರಾಷ್ಟ್ರಮಟ್ಟದ, ಶಾಲಾ ಬಾಲಕಿಯರ ಹಾಕಿ ಟೂರ್ನಿಯಲ್ಲಿ ಶುಕ್ರವಾರ ಕ್ವಾರ್ಟರ್ ಫೈನಲ್ ಪ್ರವೇಶಿಸಿದವು.

ಕರ್ನಾಟಕವು 6–0ಯಿಂದ ಛತ್ತೀಸಗಢ ತಂಡವನ್ನು ಮಣಿಸಿತು. ಇದಕ್ಕೂ ಮುನ್ನ ನಡೆದ ಲೀಗ್ ಪಂದ್ಯದಲ್ಲಿ ಕರ್ನಾಟಕ ತಂಡವು ಕೆವಿಎಸ್ (ಕೇಂದ್ರೀಯ ವಿದ್ಯಾಲಯ ಸಂಘಟನೆ) ತಂಡವನ್ನು 11–0 ಗೋಲಿನಿಂದ ಸುಲಭವಾಗಿ ಮಣಿಸಿ ಪಾರಮ್ಯ ಮೆರೆದಿತ್ತು.

ಉಳಿದಂತೆ, ಪಂಜಾಬ್, ಮಣಿಪುರ, ಮಧ್ಯಪ್ರದೇಶ, ಚಂಡೀಗಡ, ಕೇರಳ, ಜಾರ್ಖಂಡ್, ಒಡಿಶಾ ರಾಜ್ಯಗಳ ತಂಡಗಳು ಕ್ವಾರ್ಟರ್ ಫೈನಲ್ ಪ್ರವೇಶಿಸಿವೆ. ಪಂದ್ಯಾವಳಿಯಲ್ಲಿ ಒಟ್ಟು 27 ತಂಡಗಳು ಭಾಗವಹಿಸಿವೆ.

ಮಂಡ್ಯ: ಪುರುಷರ ಐಟಿಎಫ್ ಟೂರ್ನಿ 7ರಿಂದ

ಮಂಡ್ಯ: ಇಲ್ಲಿನ ಪಿಇಟಿ ಕಾಲೇಜಿನ ಟೆನಿಸ್ ಅಂಗಳದಲ್ಲಿ 'ಪಿಇಟಿ ಮಂಡ್ಯ ಓಪನ್' ಪುರುಷರ ಐಟಿಎಫ್ ಟೆನಿಸ್ ಟೂರ್ನಿ ಇದೇ 7 ರಿಂದ 14ರವರೆಗೆ ನಡೆಯಲಿದೆ. ವಿಜೇತರು ಸುಮಾರು ₹21 ಲಕ್ಷ ಮೊತ್ತದ ಬಹುಮಾನ ಪಡೆಯಲಿದ್ದಾರೆ.

ಮಂಡ್ಯದಲ್ಲಿ ಎಂಟು ವರ್ಷಗಳ ನಂತರ ಅಂತರರಾಷ್ಟ್ರೀಯ ಮಟ್ಟದ ಟೂರ್ನಿ ನಡೆಯುತ್ತಿದೆ. ಸಿಂಗಲ್ಸ್‌ನಲ್ಲಿ 32 ಹಾಗೂ ಡಬಲ್ಸ್‌ನಲ್ಲಿ 16 ಜೋಡಿಗಳು ಪ್ರಶಸ್ತಿಗಾಗಿ ಸೆಣಸಲಿವೆ. 7 ಹಾಗೂ 8ರಂದು ಅರ್ಹತಾ ಸುತ್ತಿನ ಪಂದ್ಯಗಳು ನಡೆಯಲಿವೆ. 9ರಿಂದ ಪ್ರಧಾನ ಸುತ್ತಿನ ಪಂದ್ಯಗಳು ನಡೆಯಲಿವೆ ಎಂದು ಟೂರ್ನಿಯ ಸಂಘಟನಾ ಸಮಿತಿ ಅಧ್ಯಕ್ಷ ಹಾಗೂ ಜಿಲ್ಲಾ ಲಾನ್ ಟೆನಿಸ್ ಸಂಸ್ಥೆ ಅಧ್ಯಕ್ಷ ಕೆ.ಆರ್.ದಯಾನಂದ್ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಒಟ್ಟು 18 ದೇಶಗಳ ಆಟಗಾರರು ಭಾಗವಹಿಸಲಿದ್ದಾರೆ. ಉಕ್ರೇನ್‌ನ ಎರಿಕ್ ವಾನ್‌ಶೆಲ್‌ಬಾಯ್ಮ್, ದಕ್ಷಿಣ ಆಫ್ರಿಕಾದ ಆಟಗಾರ ಕ್ರಿಶ್ ವ್ಯಾನ್‌ವಾಕ್, ಜರ್ಮನಿಯ ಗಿಲ್ಸ್ ಹಸ್ಸಿ ಹಾಗೂ ಭಾರತದ ಶಶಿಕುಮಾರ್ ಮುಕುಂದ್ ಸೇರಿ ಒಟ್ಟು 17 ಆಟಗಾರರು ನೇರ ಅರ್ಹತೆ ಪಡೆದಿದ್ದಾರೆ.

'ದಕ್ಷಿಣ ಆಫ್ರಿಕಾದ ಕ್ರಿಶ್ ವ್ಯಾನ್‌ವಾಕ್, ಜರ್ಮನಿಯ ಗಿಲ್ಸ್ ಹಸ್ಸಿ, ಇಂಗ್ಲೆಂಡ್‌ನ ಗೈಲ್ಸ್ ಹಸ್ಸಿ, ಆಸ್ಟ್ರೇಲಿಯಾದ ಥಾಮಸ್ ಫ್ಯಾಂಕಟ್, ಭಾರತದ ಶಶಿಕುಮಾರ್ ಮುಕುಂದ್ ಸೇರಿ 17 ಆಟಗಾರರು ನೇರ ಅರ್ಹತೆ ಪಡೆದಿದ್ದಾರೆ' ಎಂದರು.

ಟೂರ್ನಿಯ ನಿರ್ದೇಶಕ ಜಿ.ಆರ್. ಅಮರನಾಥ, ಜಿಲ್ಲಾ ಲಾನ್ ಟೆನಿಸ್ ಸಂಘಟನೆ ಸದಸ್ಯರಾದ ಅನಿಲ್ ಕುಮಾರ್, ಮನೋಹರ್ ಇದ್ದರು.

ನಡಾಲ್ ಪರಾಭವ

ಬ್ರಿಸ್ಬೇನ್, (ಎಪಿ): ಬ್ರಿಸ್ಬೇನ್ ಇಂಟರ್‌ನ್ಯಾಷನಲ್ ಟೂರ್ನಿಯ ಮೂಲಕ ಟೆನಿಸ್‌ಗೆ ಪುನರಾಗಮನ ಮಾಡಿರುವ ಸ್ಪೇನ್‌ನ ಅನುಭವಿ ಆಟಗಾರ ರಫೆಲ್ ನಡಾಲ್ ಅವರು ಶುಕ್ರವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಜೋರ್ಡಾನ್ ಥಾಂಪ್ಸನ್ ಎದುರು 5-7, 7-6 (6), 6-3ರಲ್ಲಿ ಸೋಲನುಭವಿಸಿದರು.

ವಿಶ್ವ ಕ್ರಮಾಂಕದಲ್ಲಿ 55ನೇ ಸ್ಥಾನದಲ್ಲಿರುವ ಥಾಂಪ್ಸನ್ ಎದುರು 37 ವರ್ಷದ ನಡಾಲ್ ಹೋರಾಟ ಪ್ರದರ್ಶಿಸಿದರು. 2ನೇ ಸೆಟ್‌ನಲ್ಲಿ 3 ಬಾರಿ ಮ್ಯಾಚ್ ಪಾಯಿಂಟ್ ಅವಕಾಶ ಕೈತಪ್ಪಿತು.

ಹೇಜಲ್‌ವುಡ್ ದಾಳಿಗೆ ಪರದಾಡಿದ ಪಾಕಿಸ್ತಾನ

ಸಿಡ್ನಿ (ಎಎಫ್‌ಪಿ): ಒಂದೇ ಓವರ್‌ನಲ್ಲಿ ಮೂರು ವಿಕೆಟ್ ಪಡೆದ ಜೋಶ್ ಹ್ಯಾಜಲ್‌ವುಡ್ (5–2–9–4), ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ನಡೆಯುತ್ತಿರುವ ಮೂರನೇ ಟೆಸ್ಟ್ ಪಂದ್ಯದಲ್ಲಿ ಶುಕ್ರವಾರ ಮೂರನೇ ದಿನದಾಟ ಮುಗಿದಾಗ ಆಸ್ಟ್ರೇಲಿಯಾಕ್ಕೆ ಸ್ಪಷ್ಟ ಮೇಲುಗೈ ಪಡೆಯಲು ನೆರವಾದರು.

ಹದಗೆಡುತ್ತಿರುವ ಪಿಚ್‌ನಲ್ಲಿ ನಾಲ್ಕು ವಿಕೆಟ್‌ಗೆ 67 ರನ್ ಗಳಿಸಿದ್ದ ಪ್ರವಾಸಿ ತಂಡ, ಹ್ಯಾಜಲ್‌ವುಡ್ ದಾಳಿಗೆ ಸಿಲುಕಿ ದಿನದ ಕೊನೆಗೆ 7 ವಿಕೆಟ್‌ಗೆ 68 ರನ್ ಮಾಡಿದ್ದು ಒಟ್ಟಾರೆ 82 ರನ್ ಮುನ್ನಡೆಯಲ್ಲಿದೆ.

ಸ್ಕೋರುಗಳು: 1ನೇ ಇನಿಂಗ್ಸ್: ಪಾಕಿಸ್ತಾನ: 313, ಆಸ್ಟ್ರೇಲಿಯಾ: 109.4 ಓವರುಗಳಲ್ಲಿ 299 (ಲಾಬುಷೇನ್ 60, ಸ್ಮಿತ್ 38, ಮಾರ್ಷ್ 54, ಅಲೆಕ್ಸ್ ಕ್ಯಾರಿ 38; ಅಮೀರ್ ಜಮಾಲ್ 69ಕ್ಕೆ6); ಎರಡನೇ ಇನಿಂಗ್ಸ್: ಪಾಕಿಸ್ತಾನ: 26 ಓವರುಗಳಲ್ಲಿ 7 ವಿಕೆಟ್‌ಗೆ 68 (ಸಯೀಮ್ ಅಯೂಬ್ 33, ಬಾಬರ್ ಆಜಂ 23; ಹೇಜಲ್‌ವುಡ್ 9ಕ್ಕೆ4).

ಪಿಸ್ಟೋರಿಯಸ್‌ಗೆ ಪೆರೋಲ್

ಜೋಹಾನೆಸ್‌ಬರ್ಗ್ (ಎಎಫ್‌ಪಿ): ಗೆಳತಿ, ರೂಪದರ್ಶಿ ರೀವಾ ಸ್ಟೀನ್‌ಕ್ಯಾಂಪ್ ಅವರ ಕೊಲೆ ಆರೋಪದಲ್ಲಿ ಜೈಲಿನಲ್ಲಿದ್ದ ದಕ್ಷಿಣ ಆಫ್ರಿಕಾದ 'ಬ್ಲೇಡ್ ರನ್ನರ್' ಖ್ಯಾತಿಯ ಅಥ್ಲೀಟ್ ಆಸ್ಕರ್ ಪಿಸ್ಟೋರಿಯಸ್ ಪೆರೋಲ್ ಮೇಲೆ ಜೈಲಿನಿಂದ ಬಿಡುಗಡೆಯಾಗಿದ್ದಾರೆ. ಅವರು ಈಗ ತಮ್ಮ ನಿವಾಸದಲ್ಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶಿಕ್ಷೆಯ ಒಟ್ಟು ಅವಧಿಯಲ್ಲಿ ಅರ್ಧಕ್ಕಿಂತ ಹೆಚ್ಚು ಅನುಭವಿಸಿದ 37 ವರ್ಷದ ಪಿಸ್ಟೋರಿಯಸ್ ಅವರನ್ನು ರಾಜಧಾನಿ ಪ್ರಿಟೋರಿಯಾದ ಹೊರವಲಯದ ಜೈಲಿನಿಂದ ಕರೆದೊಯ್ಯಲಾಯಿತು.

2013ರ ಪ್ರೇಮಿಗಳ ದಿನದಂದು ಪಿಸ್ಟೋರಿಯಸ್ 29 ವರ್ಷದ ರೂಪದರ್ಶಿ ಸ್ಟೀನ್‌ಕ್ಯಾಂಪ್ ಅವರನ್ನು ಪ್ರಿಟೋರಿಯಾದ ತಮ್ಮ ಮನೆಯ ಬಾತ್‌ರೂಮ್ ಬಾಗಿಲಿನ ಮೂಲಕ ನಾಲ್ಕು ಬಾರಿ ಗುಂಡು ಹಾರಿಸಿ ಹತ್ಯೆ ಮಾಡಿದ್ದರು.

ಸುದೀರ್ಘ ವಿಚಾರಣೆ ಮತ್ತು ಹಲವಾರು ಮೇಲ್ಮನವಿಗಳ ನಂತರ 2017ರಲ್ಲಿ ಪಿಸ್ಟೋರಿಯಸ್ ದೋಷಿ ಎಂದು ಸಾಬೀತಾಗಿ 13 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಯಿತು. ತಾನು ತಪ್ಪಿತಸ್ಥನಲ್ಲ ಹಾಗೂ ಕೋಪದಿಂದ ಆಕೆಯನ್ನು ಹತ್ಯೆ ಮಾಡಿಲ್ಲ. ಯಾರೊ ಮನೆಯೊಳಗೆ ನುಸುಳಿದ್ದಾರೆಂದು ತಪ್ಪಾಗಿ ಭಾವಿಸಿ ಗುಂಡು ಹಾರಿಸಿದೆ ಎಂದು ಕೋರ್ಟ್‌ಗೆ ಹೇಳಿದ್ದರು.

ಪಿಚ್ ರೇಟಿಂಗ್: ದ್ವಿಮುಖ ನೀತಿ ತೋರದಿರಲು ಆಗ್ರಹ

ರೆಫರಿಗಳ ನಿಲುವಿಗೆ ರೋಹಿತ್ ಅಸಮಾಧಾನ



ರೋಹಿತ್ ಶರ್ಮಾ

ಕೇಪ್‌ಟೌನ್ (ಪಿಟಿಐ): 'ಇಂತಹ ಪಿಚ್‌ಗಳ ಮೇಲೆ ಆಡಲು ನಾವು ಸದಾ ಸಿದ್ಧವಾಗಿದ್ದೇವೆ. ಆದರೆ ಭಾರತದಲ್ಲಿ ಪಂದ್ಯಗಳು ನಡೆದಾಗ ಅಲ್ಲಿಯ ಪಿಚ್‌ಗಳ ಬಗ್ಗೆ ಮಾತನಾಡುವವರು ಬಾಯಿ ಮುಚ್ಚಿಕೊಂಡಿರಬೇಕು. ಅಲ್ಲಿ ಮತ್ತು ಇಲ್ಲಿ ಒಂದೇ ಅಭಿಪ್ರಾಯ ಹೊಂದಿರಬೇಕು' ಎಂದು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಹೇಳಿದರು.

ಪಂದ್ಯದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಐಸಿಸಿ ಮತ್ತು ಪಂದ್ಯ ರೆಫರಿಗಳು ಇಂತಹ ಸಂಗತಿಗಳನ್ನು ನೋಡಬೇಕು. ಪಿಚ್‌ಗಳಿಗೆ ರೇಟಿಂಗ್ ಕೊಡುವಾಗ ನೈಜ ಸಂಗತಿಯನ್ನು ನೋಡಬೇಕು. ಆತಿಥ್ಯ ವಹಿಸುವ ದೇಶವನ್ನು ನೋಡಿ ರೇಟಿಂಗ್ ಕೊಡಬಾರದು.

ಇಂತಹ ಪಿಚ್‌ನಲ್ಲಿ ಆಡಿರುವುದಕ್ಕೆ ನಮಗೆ ಹೆಮ್ಮೆ ಇದೆ. ಆದರೆ ಎಲ್ಲೆಡೆಯೂ ಇಂತ ತಟಸ್ಥ ನಿಲುವು ಇರುವುದು ಮುಖ್ಯ' ಎಂದರು.

'ಭಾರತದಲ್ಲಿ ಟೆಸ್ಟ್ ಪಂದ್ಯಗಳು ನಡೆದಾಗ ಪಿಚ್‌ಗಳಲ್ಲಿ ಮೊದಲ ದಿನವೇ ಚೆಂಡು ತಿರುವು ಪಡೆಯಲು ಆರಂಭಿಸುತ್ತದೆ. ಆಗ ದೂಳೆಬ್ಬಿಸುವ ಪಿಚ್, ಮೊದಲ ದಿನವೇ ಟರ್ನರ್ ಎಂಬ ಟೀಕೆಗಳ ಸುರಿಮಳೆಯೇ ಆಗುತ್ತದೆ' ಎಂದು ರೋಹಿತ್ ಹೇಳಿದರು.

'ಈ ಪಂದ್ಯ ನಡೆದ ಪಿಚ್ ಅನ್ನು ನಾವೆಲ್ಲರೂ ನೋಡಿದ್ದೇವೆ. ಇದು ಅಪಾಯಕಾರಿ ಮತ್ತು ಕಠಿಣ ಸವಾಲಿನದ್ದು' ಎಂದು ಸಿಡಿಮಿಡಿಗೊಂಡರು.

'ಈ ಪಿಚ್‌ಗೆ ಯಾವ ರೀತಿಯ ರೇಟಿಂಗ್ ಬರಲಿದೆ ಎಂಬುದನ್ನು ನೋಡಲು ಕಾಯುತ್ತಿದ್ದೇನೆ. ಈಗ ರೇಟಿಂಗ್ ಚಾರ್ಟ್ ನೋಡಲು ಉತ್ಸುಕನಾಗಿದ್ದೇನೆ. ಮುಂಬೈ, ಬೆಂಗಳೂರು, ಕೇಪ್ ಟೌನ್ ಮತ್ತು ಸೆಂಚುರಿಯನ್ ಪಿಚ್‌ಗಳು ಬೇರೆ ಬೇರೆಯೇ. ಪಿಚ್‌ಗಳು ವೇಗವಾಗಿ ಕ್ಷೀಣಗೊಳ್ಳುವುದು, ಹವಾಮಾನ ವೈಪರಿತ್ಯಗಳು ಬೇರೆ. ಆದರೆ ಇನಿಂಗ್ಸ್ ಆರಂಭದಲ್ಲಿ ಚೆಂಡು ಸ್ಪಿನ್ ಆಗತೊಡಗಿದರೆ ಸರಿಯಲ್ಲ ಎಂಬುದು ಅವರ ಧೋರಣೆ. ಚೆಂಡು ಸ್ಪಿನ್ ಆಗಬಾರದು, ಬರೀ ಸ್ವಿಂಗ್ ಆಗಬೇಕು ಎಂದು ಬಯಸುವುದಾದರೆ ತಪ್ಪು' ಎಂದು ರೋಹಿತ್ ಹೇಳಿದರು.

ಈ ಟೆಸ್ಟ್ ಪಂದ್ಯಕ್ಕೆ ಅನುಭವಿ ಕ್ರಿಸ್ ಬ್ರಾಡ್ ಅವರು ರೆಫರಿಯಾಗಿದ್ದರು.

ನ್ಯೂಲ್ಯಾಂಡ್ ಪಿಚ್: ದಕ್ಷಿಣ ಆಫ್ರಿಕಾ ಕೋಚ್ ಶುಕ್ರಿ ಕಿಡಿ



ಶುಕ್ರಿ ಕಾನ್ರಾಡ್

ಕೇಪ್‌ಟೌನ್ (ಪಿಟಿಐ): ನ್ಯೂಲ್ಯಾಂಡ್ಸ್ ಕ್ರೀಡಾಂಗಣದಲ್ಲಿ ನಡೆದ ಭಾರತ ಮತ್ತು ದಕ್ಷಿಣ ಆಫ್ರಿಕಾ ಟೆಸ್ಟ್ ಪಂದ್ಯವು ಒಂದೂವರೆ ದಿನದಲ್ಲಿಯೇ ಮುಗಿಯಿತು. ಇದರಿಂದಾಗಿ ಇಲ್ಲಿಯ ಪಿಚ್ ಬಗ್ಗೆ ಹಲವರಿಂದ ಟೀಕೆಗಳು ಕೇಳಿಬಂದಿವೆ.

ಆತಿಥೇಯ ದಕ್ಷಿಣ ಆಫ್ರಿಕಾ ತಂಡದ ಮುಖ್ಯ ಕೋಚ್ ಶುಕ್ರಿ ಕಾನ್ರಾಡ್ ಅವರೂ ಕಿಡಿ ಕಾರಿದ್ದಾರೆ. 'ಅಗತ್ಯಕ್ಕಿಂತಲೂ ಹೆಚ್ಚು ಉತ್ತಮವಾಗಿ ಸಿದ್ಧಗೊಳಿಸಲಾದ ಪಿಚ್' ಎಂದು ವ್ಯಂಗ್ಯವಾಡಿದ್ದಾರೆ.

'ಈ ಪಿಚ್‌ನಲ್ಲಿ ಕೌಶಲಕ್ಕಿಂತ ಅದೃಷ್ಟವೇ ಹೆಚ್ಚು ಬೇಕಾಗಿದ್ದು ವಿಷಾದಕರ. ಟೆಸ್ಟ್ ಕ್ರಿಕೆಟ್‌ನ ಮೌಲ್ಯಗಳು ಮತ್ತು ನೈತಿಕತೆಯನ್ನು ಗಾಳಿಗೆ ತೂರಲಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಇಲ್ಲಿಯ ಪಿಚ್ ಕ್ಯೂರೇಟರ್ ಬ್ರಾಮ್ ಮಾಂಗ್ ಅವರು ಒಳ್ಳೆಯ ವ್ಯಕ್ತಿ. ಅವರ ಬಗ್ಗೆ ನನಗೆ ಚೆನ್ನಾಗಿ ತಿಳಿದಿದೆ. ಆದರೆ ಕೆಲವೊಮ್ಮೆ ಒಳ್ಳೆಯವರು ಕೆಟ್ಟ ಅಥವಾ ತಪ್ಪು ಸಂಗತಿಗಳನ್ನು ಮಾಡಿಬಿಡುತ್ತಾರೆ. ಈ ಒಂದು ಸಂಗತಿಯಿಂದ ಅವರನ್ನು ಕೆಟ್ಟ ಕ್ಯೂರೇಟರ್ ಎನ್ನಲಾಗದು. ಅವರು ಈ ಪಂದ್ಯದಿಂದ ಪಾಠ ಕಲಿಯಬೇಕು' ಎಂದು ಅಭಿಪ್ರಾಯಪಟ್ಟರು.

ಎರಡನೇ ಇನಿಂಗ್ಸ್‌ನಲ್ಲಿ ಶತಕ ಬಾರಿಸಿದ ಏಡನ್ ಮರ್ಕರಂ ಕುರಿತು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಬ್ಯಾಗಿ ಗ್ರೀನ್ ಕ್ಯಾಪ್ ಸಿಕ್ಕಿ ನಿರಾಳರಾದ ವಾರ್ನರ್



ಸಿಡ್ನಿ (ಎಎಫ್‌ಪಿ): ಕೊನೆಯ (112ನೇ) ಟೆಸ್ಟ್ ಆಡುತ್ತಿರುವ ಡೇವಿಡ್ ವಾರ್ನರ್ ಅವರು ಕಳೆದುಹೋಗಿದ್ದ ತಮ್ಮ 'ಬ್ಯಾಗಿ ಗ್ರೀನ್' ಕ್ಯಾಪ್‌ಗಳನ್ನು ಶುಕ್ರವಾರ ಮರಳಿ ಪಡೆದಿದ್ದು, ನಿಟ್ಟುಸಿರುಬಿಟ್ಟಿದ್ದಾರೆ.

ಮೆಲ್ಬರ್ನ್‌ನಿಂದ ಸಿಡ್ನಿಗೆ ತಂಡದೊಡನೆ ವಿಮಾನದಲ್ಲಿ ಪ್ರಯಾಣಿಸಿದ ನಂತರ ಅವರ ಕ್ಯಾಪ್‌ಗಳಿದ್ದ ಬ್ಯಾಗ್ ಕಾಣೆಯಾಗಿತ್ತು. ಈ ಬಗ್ಗೆ 37 ವರ್ಷದ ಆಟಗಾರ, ಸಾರ್ವಜನಿಕವಾಗಿ ಮನವಿ ಮಾಡಿ 'ಕ್ಯಾಪ್‌ಗಳನ್ನು ಮರಳಿಸಿ. ಬ್ಯಾಗ್‌ಗಳನ್ನು ಬೇಕಾದರೆ ಇಟ್ಟುಕೊಳ್ಳಿ' ಎಂದು ಮನವಿ ಮಾಡಿದ್ದರು.

ತಮ್ಮ ಎರಡು ಬ್ಯಾಗಿ ಗ್ರೀನ್ ಟೋಪಿಗಳು ದೊರಕಿವೆ ಎಂದು ವಾರ್ನರ್ ಇನ್‌ಸ್ಟಾಗ್ರಾಮ್‌ನಲ್ಲಿ ಬರೆದಿದ್ದಾರೆ. 'ಎಲ್ಲರಿಗೂ ಹಾಯ್, ನನ್ನ ಬ್ಯಾಗಿ ಗ್ರೀನ್ ಕ್ಯಾಪ್‌ಗಳು ಪತ್ತೆಯಾಗಿವೆ. ಭಾರ ಇಳಿದಿದೆ. ನಾನು ನಿರಾಳನಾಗಿದ್ದೇನೆ' ಎಂದಿದ್ದಾರೆ.

ಕ್ರಿಕೆಟ್ ಆಸ್ಟ್ರೇಲಿಯಾ ಕೂಡ ಕ್ಯಾಪ್‌ಗಳು ಪತ್ತೆಯಾಗಿರುವುದನ್ನು ಹೇಳಿಕೆಯಲ್ಲಿ ತಿಳಿಸಿದೆ.

ಕ್ಯಾಪ್‌ಗಳಿದ್ದ ಬ್ಯಾಗ್ ಹೇಗೆ ಕಾಣೆಯಾಗಿತ್ತೊ ಅದೇ ಸ್ಥಿತಿಯಲ್ಲಿ ಸಿಡ್ನಿಯ ಹೋಟೆಲ್‌ನಲ್ಲಿ ಎಲ್ಲ ವಸ್ತುಗಳ ಸಹಿತ ಪತ್ತೆಯಾಗಿದೆ. ಇದಕ್ಕೆ ಮೊದಲು ಮಂಗಳವಾರದಿಂದ ತೀವ್ರ ಶೋಧದ ಹೊರತಾಗಿಯೂ ಅವುಗಳು ಕಣ್ಣಿಗೆ ಬಿದ್ದಿರಲಿಲ್ಲ.

ವಾರ್ನರ್ 2011ರಲ್ಲಿ ಟೆಸ್ಟ್ ಪದಾರ್ಪಣೆ ನಂತರ 26 ಶತಕಗಳ ಸಹಿತ 8,729 ರನ್ ಗಳಿಸಿದ್ದಾರೆ. ಸರಾಸರಿ 44.53.

ರಣಜಿ ಟ್ರೋಫಿ; ದೇವದತ್ತ ಅರ್ಧಶತಕ ● ಮೊದಲ ಇನಿಂಗ್ಸ್ ಮುನ್ನಡೆಯತ್ತ ಕರ್ನಾಟಕ

ಕೌಶಿಕ್ ದಾಳಿಗೆ ಕುಸಿದ ಪಂಜಾಬ್

● ಸತೀಶ ಬಿ.

ಹುಬ್ಬಳ್ಳಿ: ಜೀವನ ಶ್ರೇಷ್ಠ ಸಾಧನೆ ತೋರಿದ ವಿ.ಕೌಶಿಕ್ (41ಕ್ಕೆ 7) ಅವರ ವೇಗದ ದಾಳಿಗೆ ತತ್ತರಿಸಿದ ಪಂಜಾಬ್ ತಂಡ, ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೊದಲ ದಿನ 152 ರನ್‌ಗಳ ಅಲ್ಪಮೊತ್ತಕ್ಕೆ ಕುಸಿಯಿತು.

ರಾಜನಗರದ ಕೆಎಸ್‌ಸಿಎ ಮೈದಾನದಲ್ಲಿ ಶುಕ್ರವಾರ ಆರಂಭವಾದ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಪಂಜಾಬ್ ತಂಡ ಪ್ರಥಮ ಇನಿಂಗ್ಸ್ 46.5 ಓವರ್‌ಗಳಲ್ಲಿ ಅಂತ್ಯಗೊಂಡಿತು. ಕರ್ನಾಟಕ ದಿನದಾಟದ ಅಂತ್ಯಕ್ಕೆ 33 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 142 ರನ್ ಗಳಿಸಿತು.

ಆತಿಥೇಯ ತಂಡದ ಮೊತ್ತ 16 ರನ್‌ಗಳಾಗಿದ್ದಾಗ ತಂಡದ ನಾಯಕ ಮಯಂಕ್ ಅಗರ್‌ವಾಲ್ ಖಾತೆ ತೆರೆಯದೆ ನಿರ್ಗಮಿಸಿದರು. ಅವರು ಭಾರತ ತಂಡದ ಬೌಲರ್, ಎಡಗೈ ವೇಗಿ ಅರ್ಷದೀಪ್‌ಸಿಂಗ್‌ಗೆ ವಿಕೆಟ್ ಒಪ್ಪಿಸಿದರು. ಇದರಿಂದ ತಂಡ ಆರಂಭಿಕ ಆಘಾತ ಅನುಭವಿಸಿತು. ಈ ಹಂತದಲ್ಲಿ ಜತೆಗೂಡಿದ ಆರ್.ಸಮರ್ಥ್ (38) ಮತ್ತು ದೇವದತ್ತ ಪಡಿಕ್ಕಲ್ (ಬ್ಯಾಟಿಂಗ್ 80; 80ಎ, 14X4) ತಂಡವನ್ನು ಸಂಕಷ್ಟದಿಂದ ಪಾರು ಮಾಡಿದರು. ಇವರಿಬ್ಬರೂ ಎರಡನೇ ವಿಕೆಟ್ ಜತೆಯಾಟದಲ್ಲಿ 76 ರನ್ (86 ಎಸೆತ) ಕಲೆ ಹಾಕಿದರು. ವೇಗವಾಗಿ ರನ್ ಕಲೆ ಹಾಕಿದ ದೇವದತ್ತ ಪಡಿಕ್ಕಲ್ 39 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು.

ಆರ್.ಸಮರ್ಥ್ ಎಡಗೈ ಸ್ಪಿನ್ನರ್ ಪ್ರೇರಿತ್ ದತ್ತಾ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ನಿಕಿನ್ ಜೋಸ್ (8) ಅವರನ್ನು ಆಫ್ ಸ್ಪಿನ್ನರ್ ನಮನ್ ಧೀರ್ ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು.



ಹುಬ್ಬಳ್ಳಿಯ ರಾಜನಗರದ ಕೆ.ಎಸ್‌.ಸಿ.ಎ ಕ್ರೀಡಾಂಗಣದಲ್ಲಿ ಶುಕ್ರವಾರ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂಜಾಬ್ ಎದುರಿನ ಪಂದ್ಯದಲ್ಲಿ ಕರ್ನಾಟಕದ ವಿ.ಕೌಶಿಕ್ 7 ವಿಕೆಟ್ ಗಳಿಸಿದರು.

ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ದಿನದಾಟದ ಅಂತ್ಯಕ್ಕೆ ಪಡಿಕ್ಕಲ್ ಜತೆಗೆ ಮನೀಷ್ ಪಾಂಡೆ (ಬ್ಯಾಟಿಂಗ್ 13) ಕ್ರೀಸ್‌ನಲ್ಲಿದ್ದರು.

ಇದಕ್ಕೂ ಮುನ್ನ ಬ್ಯಾಟಿಂಗ್ ಮಾಡಿದ ಪಂಜಾಬ್ ತಂಡಕ್ಕೆ ಕರ್ನಾಟಕದ ವೇಗಿಗಳು ನಿಯಮಿತವಾಗಿ ಪೆಟ್ಟು ನೀಡಿದರು. ಹೀಗಾಗಿ ಚೇತರಿಕೆಗೆ ಅವಕಾಶ ನೀಡಲಿಲ್ಲ. ಆರಂಭ ಆಟಗಾರ ಪ್ರಭ್‌ಸಿಮ್ರಾನ್ ಸಿಂಗ್ (5) ಕೌಶಿಕ್ ಎಸೆತದಲ್ಲಿ ಮನಿಷ್ ಪಾಂಡೆಗೆ ಕ್ಯಾಚಿತ್ತರೆ, ಅಭಿಷೇಕ್ ಶರ್ಮಾ (26) ಬೌಲ್ಡ್ ಆದರು. ನಾಯಕ ಮನದೀಪ್ ಸಿಂಗ್ (1) ಸಹ ಹೆಚ್ಚು ಹೊತ್ತು ನಿಲ್ಲಲಿಲ್ಲ.

ಪಂಜಾಬ್ ತಂಡ 37 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದಾಗ ಎಡಗೈ ಬ್ಯಾಟರ್ ನೇಹಲ್ ವಧೇರಾ (44) ಮತ್ತು ಗೀತಾಂಶ್ ಖೇರಾ (27) ಐದನೇ ವಿಕೆಟ್ ಜತೆಯಾಟದಲ್ಲಿ 52 (82 ಎ) ರನ್ ಸೇರಿಸಿ ಕೆಲಕಾಲ ಕುಸಿತ ತಡೆಗಟ್ಟಿದರು.

ಊಟದ ವಿರಾಮದ ವೇಳೆಗೆ 32 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 99 ರನ್ ಗಳಿಸಿದ್ದ ಪಂಜಾಬ್ ತಂಡ ಮತ್ತೆ 53 ಸೇರಿಸುವಷ್ಟರಲ್ಲಿ ಇನ್ನುಳಿದ ವಿಕೆಟ್‌ಗಳನ್ನು ಕಳೆದುಕೊಂಡಿತು. ಮಧ್ಯಮ ವೇಗಿ ವೈಶಾಕ್ ವಿಜಯಕುಮಾರ್ 35 ರನ್ ನೀಡಿ 2 ವಿಕೆಟ್ ಕಬಳಿಸಿದರು. ಈ ಪಂದ್ಯದ ಮೂಲಕ ಪದಾರ್ಪಣೆ ಮಾಡಿದ ಸ್ಥಳೀಯ ಆಟಗಾರ, ಎಡಗೈ ಸ್ಪಿನ್ನರ್ ಎ.ಸಿ. ರೋಹಿತ್ ಕುಮಾರ್ 18ರನ್ ನೀಡಿದ 1 ವಿಕೆಟ್ ಪಡೆದರು.

ಕರ್ನಾಟಕ ತಂಡದ ಆಟಗಾರರು ಚುರುಕಿನ ಕ್ಷೇತ್ರರಕ್ಷಣೆ ಮೂಲಕ ಗಮನ ಸೆಳೆದರು. ವಿಕೆಟ್ ಕೀಪರ್ ಎಸ್.ಶರತ್ ಐದು ಕ್ಯಾಚ್ ಪಡೆದು ಮಿಂಚಿದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಪಂಜಾಬ್ 152 (46.5 ಓವರ್)

ಪ್ರಭಸಿಮ್ರನ್ ಸಿ ಪಾಂಡೆ ಬಿ ಕೌಶಿಕ್ 5 (14ಎ, 4X1)
ಅಭಿಷೇಕ್ ಬಿ ಕೌಶಿಕ್ 26 (40ಎ, 4X4, 6X1)
ನಮನ್ ಸಿ ಶರತ್ ಬಿ ಕೌಶಿಕ್ 4 (7ಎ, 4X1)
ಮನದೀಪ್ ಸಿ ಪಾಂಡೆ ಬಿ ಕೌಶಿಕ್ 1 (15ಎ)
ವಧೇರಾ ಸಿ ಶರತ್ ಬಿ ಕೌಶಿಕ್ 44 (79ಎ, 4x7)
ಗೀತಾಂಶ್ ಸಿ ಶರತ್ ಬಿ ಕೌಶಿಕ್ 27 (44ಎ, 4x5)
ಪ್ರೇರಿತ್ ಸಿ ಶರತ್ ಬಿ ವೈಶಾಕ್ 8 (15 ಎ, 4x2)
ಮಾರ್ಕಂಡೆ ಔಟಾಗದೆ 26 (44ಎ, 4X5)
ಸಿದ್ಧಾರ್ಥ್ ಸಿ ಶರತ್ ಬಿ ಕೌಶಿಕ್ 0 (1ಎ)
ಅರ್ಷದೀಪ್ ಬಿ ವೈಶಾಕ್ 7 (5ಎ, 6X1)
ಬಲ್ತೇಜ್ ಸಿ ಬೆದಾರೆ (ಸಬ್) ಬಿ ರೋಹಿತ್ 0 (17ಎ)
ಇತರೆ: 4 (ಲೆಗ್‌ಬೈ 3, ವೈಡ್ 1)
ವಿಕೆಟ್ ಪತನ: 1–15 (ಪ್ರಭಸಿಮ್ರಾನ್ ಸಿಂಗ್; 3.6), 2–23 (ನಮನ್ ಧೀರ್; 7.1), 3–36 (ಅಭಿಷೇಕ್ ಶರ್ಮಾ; 11.1), 4–37 (ಮನದೀಪ್ ಸಿಂಗ್; 15.1), 5–89 (ಗೀತಾಂಶ್ ಖೇರಾ; 29.5), 5–106 (ಪ್ರೇರಿತ್ ದತ್ತಾ; 34.2), 7–122 (ನೇಹಲ್ ವಧೇರಾ; 37.4) 8–122 (ಸಿದ್ಧಾರ್ಥ್ ಕೌಲ್; 37.5), 9–131 (ಅರ್ಷದೀಪ್ ಸಿಂಗ್; 38.6), 10–152 (ಬಲ್ತೇಜ್ ಸಿಂಗ್; 46.5).
ಬೌಲಿಂಗ್: ವಿದ್ವತ್ ಕಾವೇರಪ್ಪ 11–0–54–0, ವಿ.ಕೌಶಿಕ್ 15–6–41–7, ವಿ.ವೈಶಾಖ್ 13–3–35–2, ಎ.ಸಿ. ರೋಹಿತ್‌ಕುಮಾರ್ 6.5–1–18–1, ಶುಭಾಂಗ್ ಹೆಗಡೆ 1–0–1–0

ಕರ್ನಾಟಕ: 3ಕ್ಕೆ 142 (33 ಓವರ್‌ಗಳಲ್ಲಿ)

ಸಮರ್ಥ್ ಬಿ ಪ್ರೇರಿತ್ ದತ್ತಾ 38 (62ಎ, 4X5)
ಮಯಂಕ್ ಸಿ ನಮನ್ ಬಿ ಅರ್ಷದೀಪ್ 0 (8ಎ)
ದೇವದತ್ತ ಔಟಾಗದೆ 80 (80ಎ, 4X14)
ನಿಕಿನ್ ಎಲ್‌ಬಿಡಬ್ಲ್ಯು ಬಿ ನಮನ್ 8 (26ಎ) ಮನೀಷ್ ಔಟಾಗದೆ 13 (22ಎ, 4X3)
ಇತರೆ: 3 (ಲೆಗ್‌ಬೈ 3)
ವಿಕೆಟ್ ಪತನ: 1–16 (ಮಯಂಕ್ ಅಗರವಾಲ್; 3.6), 2–92 (ಆರ್. ಸಮರ್ಥ್; 18.2), 3–110 (ನಿಕಿನ್ ಜೋಸ್; 26.3)
ಬೌಲಿಂಗ್: ಬಲ್ತೇಜ್ ಸಿಂಗ್ 10–1–30–0, ಅರ್ಷದೀಪ್ ಸಿಂಗ್ 8–1–37–1 , ಸಿದ್ಧಾರ್ಥ್ ಕೌಲ್ 6–0–40–0, ಪ್ರೇರಿತ್ ದತ್ತಾ 4–0–18–1, ನಮನ್ ಧೀರ್ 4–1–13–1, ಮಯಂಕ್ ಮಾರ್ಕಂಡೆ 1–0–1–0.

ಪಿಚ್ ನಿಧಾನಗತಿಯಲ್ಲಿ ವರ್ತಿಸುತಿತ್ತು. ಹೀಗಾಗಿ ಹೆಚ್ಚು ಬೌನ್ಸರ್ ಪ್ರಯೋಗಿಸಲಿಲ್ಲ. ಲೈನ್ ಆ್ಯಂಡ್ ಲೆಂಗ್ತ್ ಕಾಪಾಡಲು ಒತ್ತು ನೀಡಿದೆ. 7 ವಿಕೆಟ್ ಪಡೆದಿದ್ದಕ್ಕೆ ಖುಷಿಯಾಗಿದೆ

ವಿ.ಕೌಶಿಕ್, ವೇಗದ ಬೌಲರ್, ಕರ್ನಾಟಕ

ನ್ಯೂಯಾರ್ಕ್‌ನಲ್ಲಿ ಭಾರತ–ಪಾಕ್ ಸೆಣಸು

ಮಿಯಾಮಿ (ಎಎಫ್‌ಪಿ): ಸಾಂಪ್ರದಾಯಿಕ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳು ವೆಸ್ಟ್ ಇಂಡೀಸ್ ಮತ್ತು ಅಮೆರಿಕ ದೇಶಗಳ ಜಂಟಿ ಆತಿಥ್ಯದಲ್ಲಿ ನಡೆಯಲಿರುವ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಜೂನ್ 9ರಂದು ಮುಖಾಮುಖಿಯಾಗಲಿವೆ.

ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಶುಕ್ರವಾರ ವಿಶ್ವಕಪ್ ವೇಳಾ ಪಟ್ಟಿ ಬಿಡುಗಡೆ ಮಾಡಿದೆ. ಜೂನ್ 1 ರಿಂದ 29ರವರೆಗೆ ಟೂರ್ನಿ ನಡೆಯಲಿದ್ದು, 20 ತಂಡಗಳು ಸ್ಪರ್ಧಿಸಲಿವೆ. 4 ಗುಂಪುಗಳಲ್ಲಿ ತಂಡಗಳನ್ನು ವಿಂಗಡಿಸಲಾಗಿದೆ. ಮೊದಲ ಪಂದ್ಯದಲ್ಲಿ ಆತಿಥೇಯ ಅಮೆರಿಕ ತಂಡವು ಕೆನಡಾ ಎದುರು ಆಡಲಿದೆ.



ನ್ಯೂಯಾರ್ಕ್‌ನಲ್ಲಿ 9ರಂದು ನಡೆಯುವ ಪಂದ್ಯದಲ್ಲಿ ಭಾರತ- ಪಾಕ್ ಮುಖಾಮುಖಿಯಾಗಲಿವೆ. ಜೂನ್ 1 ರಿಂದ 18 ರವರೆಗೆ ಗುಂಪು ಹಂತದ ಪಂದ್ಯ, 19ರಿಂದ 24ರವರೆಗೆ ಸೂಪರ್ 8 ಹಂತದ ಪಂದ್ಯ ನಡೆಯಲಿವೆ.

ಐಸಿಸಿ ಟಿ20 ವಿಶ್ವಕಪ್ ವೇಳಾಪಟ್ಟಿ –2024

ದಿನಾಂಕ	ಪಂದ್ಯ	ಸ್ಥಳ
ಜೂನ್1	ಅಮೆರಿಕ-ಕೆನಡಾ	ಡಲಾಸ್
2	ವೆಸ್ಟ್ ಇಂಡೀಸ್–ಪಪುವಾ ನ್ಯೂಗಿನಿ	ಗಯಾನಾ
2	ನಮೀಬಿಯಾ–ಒಮಾನ್	ಬಾರ್ಬಡೋಸ್
3	ಶ್ರೀಲಂಕಾ–ದಕ್ಷಿಣ ಆಫ್ರಿಕಾ	ನ್ಯೂಯಾರ್ಕ್
3	ಅಫ್ಗಾನಿಸ್ತಾನ–ಉಗಾಂಡ	ಗಯಾನಾ
4	ಇಂಗ್ಲೆಂಡ್–ಸ್ಕಾಟ್ಲೆಂಡ್	ಬಾರ್ಬಡೋಸ್
4	ನೆದರ್ಲೆಂಡ್ಸ್–ನೇಪಾಳ	ಡಲಾಸ್
5	ಭಾರತ–ಐರ್ಲೆಂಡ್	ನ್ಯೂಯಾರ್ಕ್
5	ಪಪುವಾ ನ್ಯೂಗಿನಿ–ಯುಗಾಂಡ	ಗಯಾನಾ
5	ಆಸ್ಟ್ರೇಲಿಯಾ–ಒಮಾನ್	ಬಾರ್ಬಡೋಸ್
6	ಅಮೆರಿಕ–ಪಾಕಿಸ್ತಾನ	ಡಲಾಸ್
6	ನಮೀಬಿಯಾ–ಸ್ಕಾಟ್ಲೆಂಡ್	ಬಾರ್ಬಡೋಸ್
7	ಕೆನಡಾ–ಐರ್ಲೆಂಡ್	ನ್ಯೂಯಾರ್ಕ್
7	ನ್ಯೂಜಿಲೆಂಡ್–ಅಫ್ಗಾನಿಸ್ತಾನ	ಗಯಾನಾ
7	ಶ್ರೀಲಂಕಾ–ಬಾಂಗ್ಲಾದೇಶ	ಡಲಾಸ್
8	ನೆದರ್ಲೆಂಡ್ಸ್–ದಕ್ಷಿಣ ಆಫ್ರಿಕಾ	ನ್ಯೂಯಾರ್ಕ್
8	ಆಸ್ಟ್ರೇಲಿಯಾ–ಇಂಗ್ಲೆಂಡ್	ಬಾರ್ಬಡೋಸ್
8	ವೆಸ್ಟ್ ಇಂಡೀಸ್-ಯುಗಾಂಡಾ	ಗಯಾನಾ
9	ಭಾರತ–ಪಾಕಿಸ್ತಾನ	ನ್ಯೂಯಾರ್ಕ್
9	ಒಮಾನ್–ಸ್ಕಾಟ್ಲೆಂಡ್	ಆ್ಯಂಟಿಗಾ
10	ದಕ್ಷಿಣ ಆಫ್ರಿಕಾ–ಬಾಂಗ್ಲಾ	ನ್ಯೂಯಾರ್ಕ್
11	ಪಾಕಿಸ್ತಾನ–ಕೆನಡಾ	ನ್ಯೂಯಾರ್ಕ್
11	ಶ್ರೀಲಂಕಾ–ನೇಪಾಳ	ಫ್ಲಾರಿಡಾ
11	ಆಸ್ಟ್ರೇಲಿಯಾ–ನಮೀಬಿಯಾ	ಆ್ಯಂಟಿಗಾ
12	ಅಮೆರಿಕ–ಭಾರತ	ನ್ಯೂಯಾರ್ಕ್
12	ವೆಸ್ಟ್ ಇಂಡೀಸ್–ನ್ಯೂಜಿಲೆಂಡ್	ಟ್ರಿನಿಡಾಡ್
13	ಇಂಗ್ಲೆಂಡ್–ಒಮಾನ್	ಆ್ಯಂಟಿಗಾ
13	ಬಾಂಗ್ಲಾ–ನೆದರ್ಲೆಂಡ್ಸ್	ಸೇಂಟ್ ವಿನ್ಸೆಂಟ್
13	ಅಫ್ಗಾನಿಸ್ತಾನ–ಪಪುವಾ ನ್ಯೂಗಿನಿ	ಟ್ರಿನಿಡಾಡ್
14	ಅಮೆರಿಕ–ಐರ್ಲೆಂಡ್	ಫ್ಲಾರಿಡಾ
14	ದಕ್ಷಿಣ ಆಫ್ರಿಕಾ–ನೇಪಾಳ	ಸೇಂಟ್ ವಿನ್ಸೆಂಟ್
14	ನ್ಯೂಜಿಲೆಂಡ್–ಯುಗಾಂಡ	ಟ್ರಿನಿಡಾಡ್
15	ಭಾರತ–ಕೆನಡಾ	ಫ್ಲಾರಿಡಾ
15	ನಮೀಬಿಯಾ–ಇಂಗ್ಲೆಂಡ್	ಆ್ಯಂಟಿಗಾ
15	ಆಸ್ಟ್ರೇಲಿಯಾ–ಸ್ಕಾಟ್ಲೆಂಡ್	ಸೇಂಟ್ ಲೂಸಿಯಾ
16	ಪಾಕಿಸ್ತಾನ–ಐರ್ಲೆಂಡ್	ಫ್ಲಾರಿಡಾ
16	ಬಾಂಗ್ಲಾ–ನೇಪಾಳ	ಸೇಂಟ್ ವಿನ್ಸೆಂಟ್
16	ಶ್ರೀಲಂಕಾ–ನೆದರ್ಲೆಂಡ್ಸ್	ಸೇಂಟ್ ಲೂಸಿಯಾ
17	ನ್ಯೂಜಿಲೆಂಡ್–ಪಪುವಾ ನ್ಯೂಗಿನಿ	ಟ್ರಿನಿಡಾಡ್
17	ವೆಸ್ಟ್ ಇಂಡೀಸ್–ಅಫ್ಗಾನಿಸ್ತಾನ	ಸೇಂಟ್ ಲೂಸಿಯಾ
19	ಎ2–ಡಿ1	ಆ್ಯಂಟಿಗಾ
19	ಬಿ1–ಸಿ2	ಸೇಂಟ್ ಲೂಸಿಯಾ
20	ಸಿ1–ಎ1	ಬಾರ್ಬಡೋಸ್
20	ಬಿ2–ಡಿ2	ಆ್ಯಂಟಿಗಾ
21	ಬಿ1–ಡಿ1	ಸೇಂಟ್ ಲೂಸಿಯಾ
21	ಎ2–ಸಿ2	ಬಾರ್ಬಡಿಸ್
22	ಎ1–ಡಿ2	ಆ್ಯಂಟಿಗಾ
22	ಸಿ1–ಬಿ2	ಸೇಂಟ್ ವಿನ್ಸೆಂಟ್
23	ಎ2–ಬಿ1	ಬಾರ್ಬಡೋಸ್
23	ಸಿ2–ಡಿ1	ಆ್ಯಂಟಿಗಾ
24	ಬಿ2–ಎ1	ಸೇಂಟ್ ಲೂಸಿಯಾ
24	ಸಿ1–ಡಿ2	ಸೇಂಟ್ ವಿನ್ಸೆಂಟ್
26	ಸೆಮಿಫೈನಲ್1	ಗಯಾನಾ
27	ಸೆಮಿಫೈನಲ್2	ಟ್ರಿನಿಡಾಡ್
29	ಫೈನಲ್	ಬಾರ್ಬಡೋಸ್



ಗುಂಪುಗಳು

ಗುಂಪು	ತಂಡಗಳು
ಎ	ಭಾರತ, ಪಾಕಿಸ್ತಾನ, ಐರ್ಲೆಂಡ್, ಕೆನಡಾ, ಅಮೆರಿಕ
ಬಿ	ಇಂಗ್ಲೆಂಡ್, ಆಸ್ಟ್ರೇಲಿಯಾ, ನಮಿಬಿಯಾ, ಸ್ಕಾಟ್ಲೆಂಡ್, ಒಮನ್
ಸಿ	ನ್ಯೂಜಿಲೆಂಡ್, ವೆಸ್ಟ್ ಇಂಡೀಸ್, ಅಫ್ಗಾನಿಸ್ತಾನ, ಉಗಾಂಡ, ಪಪುವಾ ನ್ಯೂಗಿನಿ
ಡಿ	ದಕ್ಷಿಣ ಆಫ್ರಿಕಾ, ಶ್ರೀಲಂಕಾ, ಬಾಂಗ್ಲಾದೇಶ, ನೆದರ್ಲೆಂಡ್ಸ್, ನೇಪಾಳ

ಭಾರತ ಹಿಂದಿಕ್ಕಿದ ಆಸ್ಟ್ರೇಲಿಯಾ

ದುಬೈ (ಪಿಟಿಐ): ಆಸ್ಟ್ರೇಲಿಯಾ ತಂಡವು ಶುಕ್ರವಾರ ಪ್ರಕಟವಾದ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಟೆಸ್ಟ್ ರ್‍ಯಾಂಕಿಂಗ್‌ನಲ್ಲಿ ಭಾರತ ತಂಡವನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೇರಿದೆ.

ಗುರುವಾರ ಕೇಪ್‌ಟೌನ್‌ನಲ್ಲಿ ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್‌ನಲ್ಲಿ ಭಾರತ ತಂಡವು ಏಳು ವಿಕೆಟ್‌ಗಳಿಂದ ಜಯಿಸಿತ್ತು. ಆದರೆ ಈ ಸರಣಿಯ ಮೊದಲ ಟೆಸ್ಟ್‌ನಲ್ಲಿ ಸೋತಿತ್ತು.

ಪ್ಯಾಟ್ ಕಮಿನ್ಸ್ ನಾಯಕತ್ವದ ಆಸ್ಟ್ರೇಲಿಯಾ ತಂಡವು ಪಾಕಿಸ್ತಾನ ಎದುರಿನ ಸರಣಿಯಲ್ಲಿ 2–0 ಮುನ್ನಡೆ ಗಳಿಸಿದೆ. ಸಿಡ್ನಿಯಲ್ಲಿ ಮೂರನೇ ಟೆಸ್ಟ್ ನಡೆಯುತ್ತಿದೆ.

‘ಹೋದ ವರ್ಷದಲ್ಲಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಜಯಿಸಿದ್ದ ಸಂದರ್ಭದಲ್ಲಿ ಆಸ್ಟ್ರೇಲಿಯಾ ಕೆಲದಿನಗಳವರೆಗೆ ಐಸಿಸಿ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿತ್ತು. ಇದೀಗ ಮತ್ತೆ ಅಗ್ರಸ್ಥಾನಕ್ಕೇರಿದೆ’ ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನ್ಯೂಲ್ಯಾಂಡ್ಸ್‌ನಲ್ಲಿ ಟೆಸ್ಟ್ ಗೆದ್ದ ನಂತರ ಭಾರತವು ಡಬ್ಲ್ಯುಟಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. ದಕ್ಷಿಣ ಆಫ್ರಿಕಾ ಎರಡನೇ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿ ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ ತಂಡಗಳಿವೆ.

‘ಸದ್ಯ ನಡೆಯುತ್ತಿರುವ ಸಿಡ್ನಿ ಟೆಸ್ಟ್, ಮುಂಬರಲಿರುವ ಭಾರತ ಮತ್ತು ಇಂಗ್ಲೆಂಡ್ ಐದು ಪಂದ್ಯಗಳ ಟೆಸ್ಟ್ ಸರಣಿಯ ಫಲಿತಾಂಶಗಳು ಐಸಿಸಿ ರ್‍ಯಾಂಕಿಂಗ್ ಹಾಗೂ ಡಬ್ಲ್ಯುಟಿಸಿ ಪಾಯಿಂಟ್ ಪಟ್ಟಿಯಲ್ಲಿ ಏರಿಳಿತ ಸೃಷ್ಟಿಸುವ ನಿರೀಕ್ಷೆ ಇದೆ’ ಎಂದು ಐಸಿಸಿ ಪ್ರಕಟಣೆಯಲ್ಲಿ ಉಲ್ಲೇಖಿಸಿದೆ.

ತಿತಾಸ್ ಸಾಧು ಬೌಲಿಂಗ್‌ಗೆ ಒಲಿದ ಜಯ

ಕ್ರಿಕೆಟ್: ಭಾರತ ವನಿತೆಯರ ಶುಭಾರಂಭ, ಶ್ರೇಯಾಂಕಾಗೆ ಎರಡು ವಿಕೆಟ್

ನವಿ ಮುಂಬೈ (ಪಿಟಿಐ): ಮಧ್ಯಮವೇಗಿ ತಿತಾಸ್ ಸಾಧು ದಾಳಿಯ ಬಲದಿಂದ ಭಾರತ ತಂಡವು ಶುಕ್ರವಾರ ಇಲ್ಲಿ ನಡೆದ ಮೊದಲ ಟಿ20 ಪಂದ್ಯದಲ್ಲಿ ಆಸ್ಟ್ರೇಲಿಯಾ ಎದುರು ಜಯಿಸಿತು.

ಡಿ.ವೈ ಪಾಟೀಲ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 9 ವಿಕೆಟ್ ಗಳಿಂದ ಜಯಿಸಿದ ಭಾರತ ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಟಾಸ್ ಗೆದ್ದ ಆತಿಥೇಯ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. 19 ವರ್ಷದ ಪ್ರತಿಭೆ ತಿತಾಸ್ (17ಕ್ಕೆ4) ಆಸ್ಟ್ರೇಲಿಯಾದ ಪ್ರಮುಖ ಬ್ಯಾಟರ್‌ಗಳ ವಿಕೆಟ್ ಕಬಳಿಸಿದರು. ಇದರಿಂದಾಗಿ ತಂಡವು 19.2 ಓವರ್‌ಗಳಲ್ಲಿ 141 ರನ್‌ಗಳ ಸಾಧಾರಣ ಮೊತ್ತ ಗಳಿಸಿತು.

ಅದಕ್ಕುತ್ತರವಾಗಿ ಆತಿಥೇಯ ತಂಡವು 17.4 ಓವರ್‌ಗಳಲ್ಲಿ 1 ವಿಕೆಟ್‌ಗೆ 145 ರನ್ ಗಳಿಸಿ ಜಯಿಸಿತು. ಆರಂಭಿಕ ಜೋಡಿ ಸ್ಮೃತಿ ಮಂದಾನ (54; 52ಎ, 4X7, 6X1) ಮತ್ತು ಶಫಾಲಿ ವರ್ಮಾ (ಔಟಾಗದೆ 64; 44ಎ, 4X6, 6X3) ಮೊದಲ ವಿಕೆಟ್ ಜೊತೆಯಾಟದಲ್ಲಿ 137 ರನ್ ಸೇರಿಸಿದರು. ಇದರಿಂದಾಗಿ ತಂಡದ ಜಯದ ಹಾದಿ ಸುಲಭವಾಯಿತು.



ವಿಕೆಟ್ ಗಳಿಸಿದ ಭಾರತದ ತಿತಾಸ್ ಸಾಧು ಅವರನ್ನು ಅಭಿನಂದಿಸಿದ ಸಹ ಆಟಗಾರ್ತಿಯರು –ಪಿಟಿಐ ಚಿತ್ರ

ಐದನೇ ಅಂತರರಾಷ್ಟ್ರೀಯ ಟಿ20 ಪಂದ್ಯ ಆಡಿದ ತಿತಾಸ್ ಅವರು ತಮ್ಮ ಜೀವನಶ್ರೇಷ್ಠ ಬೌಲಿಂಗ್ ಸಾಧನೆಯನ್ನು ಇಲ್ಲಿ ದಾಖಲಿಸಿದರು. ಅವರು ಆಸ್ಟ್ರೇಲಿಯಾದ ಅನುಭವಿ ಬ್ಯಾಟರ್‌ಗಳಾದ ಬೆತ್ ಮೂನಿ, ತಹಲಿಯಾ ಮೆಕ್‌ಗ್ರಾ, ಆ್ಯಷ್ಲೆ ಗಾರ್ಡನರ್ ಮತ್ತು ಅನಾಬೆಲ್ ಸದರ್ಲೆಂಡ್ ಅವರ ವಿಕೆಟ್‌ಗಳನ್ನು ಗಳಿಸಿದರು.

ಕರ್ನಾಟಕದ ಶ್ರೇಯಾಂಕಾ ಪಾಟೀಲ (19ಕ್ಕೆ2) ಮತ್ತು ಸ್ಪಿನ್ನರ್ ದೀಪ್ತಿ ಶರ್ಮಾ (24ಕ್ಕೆ2) ಅವರು ತಿತಾಸ್‌ಗೆ ಉತ್ತಮ ಜೊತೆ ನೀಡಿದರು.

ಆಸ್ಟ್ರೇಲಿಯಾದ ಫೊಯೆಬಿ ಲಿಚ್‌ಫೀಲ್ಡ್ (49; 32ಎ, 4X4, 6X3) ಅವರು ತಮಗೆ ಲಭಿಸಿದ ಮೂರು ‘ಜೀವದಾನ’ಗಳನ್ನು ಸಮರ್ಥವಾಗಿ ಬಳಸಿಕೊಂಡರು. ಆದರೆ ಒಂದು ರನ್ ಅಂತರದಿಂದ ಅರ್ಧಶತಕ ತಪ್ಪಿಸಿಕೊಂಡರು. ಆಸ್ಟ್ರೇಲಿಯಾದ ಫೀಲ್ಡರ್‌ಗಳೂ ಕೂಡ ಭಾರತದ ಬ್ಯಾಟರ್ ಶಫಾಲಿ ವರ್ಮಾ ಅವರ ಎರಡು ಕ್ಯಾಚ್‌ಗಳನ್ನು ಕೈಚೆಲ್ಲಿದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 19.2 ಓವರ್‌ಗಳಲ್ಲಿ 141 (ಬೆತ್ ಮೂನಿ 17, ಎಲಿಸ್ ಪೆರಿ 37, ಫೊಯೆಬಿ ಲಿಚ್‌ಫೀಲ್ಡ್ 49, ತಿತಾಸ್ ಸಾಧು 17ಕ್ಕೆ4, ಶ್ರೇಯಾಂಕಾ ಪಾಟೀಲ 19ಕ್ಕೆ2, ದೀಪ್ತಿ ಶರ್ಮಾ 24ಕ್ಕೆ2) ಭಾರತ: 17.4 ಓವರ್‌ಗಳಲ್ಲಿ 1 ವಿಕೆಟ್‌ಗಳಿಗೆ 145 (ಸ್ಮೃತಿ ಮಂದಾನ 54, ಶಫಾಲಿ ವರ್ಮಾ ಔಟಾಗದೆ 64, ಜೆಮಿಮಾ ರಾಡ್ರಿಗಸ್ ಔಟಾಗದೆ 6, ಜಾರ್ಜಿಯಾ ವೇರ್‌ಹ್ಯಾಮ್ 20ಕ್ಕೆ1) ಫಲಿತಾಂಶ: ಭಾರತ ತಂಡಕ್ಕೆ 9 ವಿಕೆಟ್‌ಗಳ ಜಯ. ಸರಣಿಯಲ್ಲಿ 1–0 ಮುನ್ನಡೆ.

ಪ್ರೊ ಕಬಡ್ಡಿ: ತವರಿನಲ್ಲಿ ಮುಂಬಾ ಶುಭಾರಂಭ

ಮುಂಬೈ: ಆತಿಥೇಯ ಯು ಮುಂಬಾ ತಂಡ, ಪ್ರೊ ಕಬಡ್ಡಿ ಲೀಗ್‌ನ 10ನೇ ಆವೃತ್ತಿಯ ಪಂದ್ಯದಲ್ಲಿ ಶುಕ್ರವಾರ 40–35ರಲ್ಲಿ ಐದು ಪಾಯಿಂಟ್‌ಗಳಿಂದ ಬೆಂಗಳೂರು ಬುಲ್ಸ್ ತಂಡವನ್ನು ಸೋಲಿಸಿ ತವರಿನ ಚರಣದಲ್ಲಿ ಶುಭಾರಂಭ ಮಾಡಿತು.

ಆಲ್‌ರೌಂಡ್ ಆಟಗಾರ ಅಮೀರ್ ಮೊಹಮ್ಮದ್ ಜಫರ್‌ದಾನೇಶ್ (7 ಪಾಯಿಂಟ್) ಮತ್ತು ರೈಡರ್ ಗುಮನ್ ಸಿಂಗ್ (7) ಮುಂಬೈ ಪರ ಹೆಚ್ಚು ಅಂಕ ತಂದುಕೊಟ್ಟರು. ಬುಲ್ಸ್ ಪರ ರೈಡರ್ ಸುಶೀಲ್ ಮತ್ತು ಸಚಿನ್ ನರ್ವಾಲ್ ತಲಾ ಆರು ಪಾಯಿಂಟ್ ಗಳಿಸಿದರು. ಆದರೆ ಇತರ ರೈಡರ್‌ಗಳು ವಿಫಲರಾದರು. ಮುಂಬೈ ಐದನೇ ಸ್ಥಾನದಲ್ಲಿದ್ದರೆ, 11 ಪಂದ್ಯಗಳಲ್ಲಿ ಏಳನ್ನು ಸೋತ ಬುಲ್ಸ್ ಎಂಟನೇ ಸ್ಥಾನದಲ್ಲಿದೆ.

ಡೆಲ್ಲಿಗೆ ರೋಚಕ ಜಯ: ಇನ್ನೊಂದು ಪಂದ್ಯದಲ್ಲಿ ದಬಾಂಗ್ ಡೆಲ್ಲಿ ಕೆಸಿ 38–37 ರಲ್ಲಿ ಪಟ್ನಾ ಪೈರೇಟ್ಸ್ ಮೇಲೆ ಒಂದು ಪಾಯಿಂಟ್‌ನ ರೋಮಾಂಚಕ ಜಯ ಪಡೆಯಿತು. ಈ ಗೆಲುವಿನ ಮೂಲಕ ಡೆಲ್ಲಿ ತಂಡ 35 ಪಾಯಿಂಟ್‌ಗಳೊಡನೆ ಎರಡನೇ ಸ್ಥಾನಕ್ಕೆ ಜಿಗಿಯಿತು.

ಭಾರತ ಕುಸ್ತಿ ಸಂಸ್ಥೆ ಚುನಾವಣೆ: ಪತ್ರ ಬರೆದ ನೆನಾಡ್

‘ಐಒಎ ಸ್ಥಿರೀಕರಿಸಿದರೆ ಮಾನ್ಯತೆ’

ನವದೆಹಲಿ (ಪಿಟಿಐ); ಒಲಿಂಪಿಕ್ ವರ್ಷದಲ್ಲಿ ಕುಸ್ತಿಪಟುಗಳು ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸಲು ಭಾರತ ಕುಸ್ತಿ ಸಂಸ್ಥೆ (ಡಬ್ಲ್ಯುಎಫ್‌ಐ) ಮತ್ತು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಸೇರಿದಂತೆ ಸಂಬಂಧಿತ ಕುಸ್ತಿ ಸಂಸ್ಥೆಗಳು ಸಹಕರಿಸಬೇಕು ಎಂದು ವಿಶ್ವ ಕುಸ್ತಿ ಸಂಸ್ಥೆ (ಯುಡಬ್ಲ್ಯುಡಬ್ಲ್ಯು) ಮುಖ್ಯಸ್ಥ ನೆನಾಡ್ ಲಾಲೋವಿಕ್ ಮನವಿ ಮಾಡಿದ್ದಾರೆ.

ಐಒಎ ‘ಔಪಚಾರಿಕ ದೃಢೀಕರಣ’ ನೀಡಿದರೆ ವಿಶ್ವ ಕುಸ್ತಿ ಸಂಸ್ಥೆಯು ಡಬ್ಲ್ಯುಎಫ್‌ಐ ಹೊಸ ಆಡಳಿತ ಮಂಡಳಿಗೆ ಮಾನ್ಯತೆ ನೀಡಲು ಸಿದ್ಧ ಎಂದು ಡಬ್ಲ್ಯುಎಫ್‌ಐ ಅಡ್‌ಹಾಕ್ ಸಮಿತಿಗೆ ಬರೆದ ಪತ್ರದಲ್ಲಿ ಲಾಲೋವಿಕ್ ಹೇಳಿದ್ದಾರೆ.

ಈ ವರ್ಷ ಹಲವಾರು ಒಲಿಂಪಿಕ್ ಅರ್ಹತಾ ಪಂದ್ಯಗಳು ನಡೆಯುತ್ತಿವೆ. ಮಹಿಳಾ ಕುಸ್ತಿಪಟು ಅಂತಿಮ್ ಪಂಗಲ್ ಅವರು ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ಭಾರತದ ಏಕೈಕ ಸ್ಪರ್ಧಿಯಾಗಿದ್ದಾರೆ.

‘2023, ಆಗಸ್ಟ್ 23ರ ನಮ್ಮ ಅಮಾನತು ಪತ್ರದಲ್ಲಿ ವಿವರಿಸಿದಂತೆ ಅದೇ ಷರತ್ತುಗಳ ಅಡಿ ಕ್ರೀಡಾಪಟುಗಳು ಪೂರ್ವಗ್ರಹ ಪೀಡಿತರಾಗದಂತೆ ಮತ್ತು ಅಂತರರಾಷ್ಟ್ರೀಯ ಯುಡಬ್ಲ್ಯುಬ್ಲ್ಯು ಸ್ಪರ್ಧೆಗಳಲ್ಲಿ ಭಾಗವಹಿಸಲು ಡಬ್ಲ್ಯುಎಫ್‌ಐ ಮತ್ತು ಐಒಎ ಸಹಕರಿಸುವಂತೆ ವಿನಂತಿಸಲಾಗಿದೆ. ಭಾರತದ ಎಲ್ಲಾ ಕುಸ್ತಿಪಟುಗಳ ಸಲುವಾಗಿ ನಿಮ್ಮ ಗಮನ ಮತ್ತು ಸಹಯೋಗಕ್ಕಾಗಿ ಧನ್ಯವಾದಗಳು’ ಎಂದು ಲಾಲೋವಿಕ್ ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ.

ಸಂಜಯ್ ಸಿಂಗ್ ನೇತೃತ್ವದಲ್ಲಿ ಹೊಸದಾಗಿ ಆಯ್ಕೆಯಾದ ಡಬ್ಲ್ಯುಎಫ್‌ಐ ಬಗ್ಗೆ ಮಾಹಿತಿ ಇದೆ ಮತ್ತು ಚುನಾವಣೆಯ ಫಲಿತಾಂಶವನ್ನು ಐಒಎ ದೃಢೀಕರಿಸಬೇಕಿದೆ. ದೆಹಲಿ ಹೈಕೋರ್ಟ್ ಮಾಜಿ ನ್ಯಾಯಮೂರ್ತಿ ಮೇಲ್ವಿಚಾರಣೆಯಲ್ಲಿ 2023 ರ ಡಿಸೆಂಬರ್ 21 ರಂದು ನಡೆದ ಭಾರತೀಯ ಕುಸ್ತಿ ಸಂಸ್ಥೆ ಚುನಾವಣೆಯ ಫಲಿತಾಂಶಗಳ ಬಗ್ಗೆಯೂ ತಿಳಿದಿದೆ ಎಂದು ಅವರು ಹೇಳಿದ್ದಾರೆ.

ವಿಶ್ವ ಕುಸ್ತಿ ಸಂಸ್ಥೆಗೆ ಆಯಾ ರಾಷ್ಟ್ರೀಯ ಒಲಿಂಪಿಕ್ ಸಮಿತಿಯಿಂದ (ಭಾರತ ಒಲಿಂಪಿಕ್ ಸಂಸ್ಥೆ) ಔಪಚಾರಿಕ ಲಿಖಿತ ದೃಢೀಕರಣದ ಅಗತ್ಯವಿದೆ. ಅದರ ಮೂಲಕ ಚುನಾವಣೆಯ ಫಲಿತಾಂಶ ಮತ್ತು ಹೊಸ ಪದಾಧಿಕಾರಿಗಳ ಹೆಸರುಗಳನ್ನು ದೃಢಪಡಿಸುತ್ತದೆ. ಎಲ್ಲಾ ಕ್ರೀಡಾಪಟುಗಳು ತಮ್ಮ ಕ್ರೀಡೆಯನ್ನು ಸುರಕ್ಷಿತ ವಾತಾವರಣದಲ್ಲಿ ಅಭ್ಯಾಸ ಮಾಡಬಹುದು ಎಂದು ಖಚಿತಪಡಿಸಿಕೊಳ್ಳಲು ಯುಡಬ್ಲ್ಯುಡಬ್ಲ್ಯುಗೆ ವಿವರವಾದ ಮತ್ತು ದೃಢವಾದ ಯೋಜನೆಯನ್ನು ಅನುಮೋದನೆಗಾಗಿ ಸಲ್ಲಿಸಬೇಕಾಗಿದೆ ಎಂದು ತಿಳಿಸಿದ್ದಾರೆ.

ಶಿಸ್ತು ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸಲು ಶೇಕಡ 50 ರಷ್ಟು ಮಹಿಳೆಯರನ್ನು ಒಳಗೊಂಡ ಕ್ರೀಡಾ ಪಟುಗಳ ಆಯೋಗ ಸ್ಥಾಪಿಸುವಂತೆ ಲಾಲೋವಿಕ್ ಅವರು ಭಾರತ ಕುಸ್ತಿ ಸಂಸ್ಥೆಗೆ ಮನವಿ ಮಾಡಿದ್ದಾರೆ.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗೆ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

WEEKEND CORNER ಕ್ಲಾಸಿಫೈಡ್ಸ್

BUSINESS

Business Offers

Franchise

AMAZON, FRANCHISE partners, Investors wanted for Unicare FMCG H&H products; call; 06232731681, 08838612407

PUBLIC NOTICE

PUBLIC NOTICE

My client is going to purchase the agricultural property bearing Sy.No.145/2, measuring 0-38 guntas, karab 0-03 guntas, totally measuring 1Acre -01 gunta of Lakkenahalli Village, Solur Hobli, Magadi Taluk, which is hereinafter referred to as the schedule property herein under from its owner Sri.Nanjaiah son of Late.Honnaiah residing at Alkare Hosahalli Village,Yeliyuru Post, Huttaridurga Hobli,Kunigal Taluk. Any person having any share right, title benefits, interest, claim, objection and/or demand in respect of the schedule property are hereby requested to make the same known in writing to the undersigned within 10 days (Ten Days) from the date of this publication of this notice of such claim/s, if any with all supporting documents, failing which the claim, demand, right, title interest, dispute, or objection, if any, of such person shall be treated as waived/ abandoned and not binding on my client.

SCHEDULE PROPERTY

All that piece and parcel of the agricultural property bearing Sy.No. 145/2, measuring 0-38 guntas, karab 0-03 guntas, totally measuring 1Acre-01 gunta of Lakkenahalli Village, Solur Hobli, Magadi Taluk bounded on:- **East by:** Land belongs to Gangamma & Kadaiah **West BY:** Land belongs to Dasaiah family **North BY:** Land belongs to Gangamma & others **South By:** Land belongs to Gangamma & Cheluvaiah.

Advocate claimant
M.S. ASWATHA REDDY
ADVOCATE No. 5/1, 1st Floor, 1st Cross, CSI Compound, Mission Road, BANGALORE - 560 027.
Cell No. 9740404019
E-mail: masuhareddy@gmail.corn

PUBLIC NOTICE

Public notice Is hereby given that my client Mr Srikanth intends to purchase the Immovable property No 15 PID No 8-17-15 BBMP Ward 76(8) measuring a total area of 1170 Sq Feet along with residential building constructed thereon, situated at 5th Cross Lakshminarayanapuram, Bengaluru-560 021 from Sri BVV Manjunath S/o M Venkatappa the present owner of the said property.

Any persons including legal heirs having any claim rights title interest or objections over the said property shall intimate to the undersigned in writing along with supportive documentary proof within 15 days from the date of this notice failing which the sale transactions shall be finalized.

P. Sreedhara, Advocate,
No.79, 'Mathruka', 3rd Cross, Sathyanarayana HBCS, II Stage, Mahalakshmipuram, Bengaluru - 560 086.
Mob: 99452 77220
Date: 06-01-2024
Place: Bengaluru

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕತಿಳಿಯಪಡಿಸುವುದೇನೆಂದರೆ ನಮ್ಮಕಕ್ಷಿದಾರರಾದ ಬೆಂಗಳೂರು-560029, ತಾವರೆಕೆರೆ, ಫೋರಂ ಮಾಲ್ ನಂತರ, ಹೊಸೂರು ರಸ್ತೆ, ನಂ. 20 ರಲ್ಲಿರುವ ಅಥೆನ್ಸ್-1 ರಲ್ಲಿರುವ ಫ್ಲಾಟ್ ನಂ. 001 ರಲ್ಲಿ ವಾಸವಾಗಿರುವ ದಿವಂಗತ ಡಾ॥ ರಮಾನಂದ ಹೆಗ್ಡೆ ರವರ ಧರ್ಮಪತ್ನಿಯಾದ ಸುಮಾರು 76 ವರ್ಷ ವಯಸ್ಸುಳ್ಳ, ಶ್ರೀಮತಿ ಸುಮಿ ಹೆಗ್ಡೆ ಉರುಫ್ ಸುಮತಿ ಹೆಗ್ಡೆ ರವರು ಈ ಕೆಳಗೆ ತಿಳಿಸಿರುವ ಷೆಡ್ಯೂಲ್ ಸ್ವತ್ತಿಗೆ ಮಾಲೀಕರಾಗಿದ್ದು. ಸದರಿ ಮಾಲೀಕತ್ವವನ್ನು ನಮ್ಮ ಕಕ್ಷಿದಾರರಾದ ಶ್ರೀಮತಿ.ಸುಮಿ ಹೆಗ್ಡೆ ಉರುಫ್ ಸುಮತಿ ಹೆಗ್ಡೆ ರವರು ಮತ್ತು ಅವರ ಪತಿಯಾದ ಶ್ರೀ ರಮಾನಂದ ಹೆಗ್ಡೆ ರವರುಗಳು ಜಂಟಿಯಾಗಿ ದಿನಾಂಕ:20-02-1997 ರನಾಲ್ಕು ಪ್ರತ್ಯೇಕ ಶುದ್ಧ ಕ್ರಯಪತ್ರಗಳಾದ;
1) ಬೆಂಗಳೂರು ದಕ್ಷಿಣ ತಾಲ್ಲೂಕು ಉಪನೊಂದಣಿ ಕಛೇರಿಯಲ್ಲಿ ಒಂದನೇ ಪುಸ್ತಕದ ಸಂಪುಟ 4351, 11 ರಿಂದ 20ನೇ ಪುಟಗಳಲ್ಲಿ ದಸ್ತಾವೇಜು ಸಂ.4928/96-97ನೇ ನಂಬರಾಗಿನೋಂದಣಿಯಾಗಿರುವ ಕ್ರಯಪತ್ರದ ನಿವೇಶನ ನಂ.5 ಕ್ಕೆ ಸಂಬಂಧಿಸಿದಂತೆ,
2)ಬೆಂಗಳೂರು ದಕ್ಷಿಣ ತಾಲ್ಲೂಕು ಉಪನೊಂದಣಿ ಕಛೇರಿಯಲ್ಲಿ ಒಂದನೇ ಪುಸ್ತಕದ ಸಂಪುಟ 4351, 31 ರಿಂದ 40ನೇ ಪುಟಗಳಲ್ಲಿ ದಸ್ತಾವೇಜು ಸಂ. 4930/96-97ನೇ ನಂಬರಾಗಿ ನೋಂದಣಿಯಾಗಿರುವ ಕ್ರಯಪತ್ರದ ನಿವೇಶನ ನಂ. 6 ಕ್ಕೆ ಸಂಬಂಧಿಸಿದಂತೆ,
3)ಬೆಂಗಳೂರು ದಕ್ಷಿಣ ತಾಲ್ಲೂಕು ಉಪನೊಂದಣಿ ಕಛೇರಿಯಲ್ಲಿ ಒಂದನೇ ಪುಸ್ತಕದ ಸಂಪುಟ 4351, 1 ರಿಂದ 10ನೇ ಪುಟಗಳಲ್ಲಿ ದಸ್ತಾವೇಜು ಸಂ. 4927/96-97 ನೇ ನಂಬರಾಗಿ ನೋಂದಣಿಯಾಗಿರುವ ಕ್ರಯಪತ್ರದ ನಿವೇಶನ ನಂ.11 ಕ್ಕೆ ಸಂಬಂಧಿಸಿದಂತೆಮತ್ತು 4) ಬೆಂಗಳೂರು ದಕ್ಷಿಣ ತಾಲ್ಲೂಕು ಉಪನೊಂದಣಿ ಕಛೇರಿಯಲ್ಲಿ ಒಂದನೇ ಪುಸ್ತಕದ ಸಂಪುಟ 4351, 21 ರಿಂದ 30ನೇ ಪುಟಗಳಲ್ಲಿ ದಸ್ತಾವೇಜು ಸಂ. 4929/96-97 ನೇ ನಂಬರಾಗಿ ನೋಂದಣಿಯಾಗಿರುವ ಕ್ರಯಪತ್ರದ ನಿವೇಶನ ನಂ. 12 ಕ್ಕೆ ಸಂಬಂಧಿಸಿದಂತೆ ಮತ್ತು ಈ ರೀತಿಯಾಗಿ ನೊಂದಣಿಯಾಗಿರುವ ಶುದ್ಧಕ್ರಯಪತ್ರಗಳ ಮೂಲಕ ಬಂದಿರುವ ಸ್ವತ್ತುಗಳಿಗೆ ಮಾಲೀಕತ್ವವನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ. ನಮ್ಮ ಕಕ್ಷಿದಾರರ ಪತಿಯಾದ ದಿವಂಗತ ಡಾ॥ ರಮಾನಂದ ಹೆಗ್ಡೆ ರವರು ತಮ್ಮ ಜೀವಿತಾ ಕಾಲಾವಧಿಯಲ್ಲಿ ಅವರ ಆಸ್ತಿಗಳಿಗೆ ಸಂಬಂಧಿಸಿದಂತೆ ಅವರ ಕೊನೆಯ ವಿಲ್-ಯಾ ಮರಣ ಶಾಸನ ಪತ್ರವನ್ನು ದಿನಾಂಕ: 07-08-2003 ರಂದು ಮಾಡಿದ್ದು, ನಂತರ ದಿನಾಂಕ: 02-05-2021 ರಂದು ಸದರಿ ಡಾ॥ ರಮಾನಂದ ಹೆಗ್ಡೆ ರವರು ಮರಣವಾದ ನಂತರ ಸ್ವತ್ತುಗಳಿಗೆ ಸಂಬಂಧಿಸಿದಂತೆ ಸದರಿ ವಿಲ್-ಯಾ ಮರಣ ಶಾಸನ ಪತ್ರದಂತೆ ನಮ್ಮ ಕಕ್ಷಿದಾರರೇ ಏಕಮೇವ ಮತ್ತು ಸಂಪೂರ್ಣ ಮಾಲೀಕತ್ವವನ್ನು ಹೊಂದಿ ಅನುಭವಿಸಿಕೊಂಡು ಬಂದಿರುತ್ತಾರೆ.
ಅದಾಗಿ, ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದ ಮೂಲ ದಾಖಲೆಗಳಾದ ದಾನಪತ್ರ, ಅಧಿಕಾರ ಪತ್ರ ಹಾಗೂ ಕ್ರಯಪತ್ರಗಳಾದ [1] ದಿನಾಂಕ 20-08-1969ರ ಪತ್ರವು ಒಂದನೇ ಪುಸ್ತಕದ ಪುಟ 213 ರಿಂದ 215ನೇ ಪುಟಗಳಲ್ಲಿ ದಸ್ತಾವೇಜು ಸಂಖ್ಯೆ 2458/1969-70 ನೇ ನಂಬರಾಗಿ ನೊಂದಣಿಯಾಗಿ ಶ್ರೀಮತಿ ನಂಜಮ್ಮ ಕೋಂ. ಶ್ರೀ ಮುನಿರೆಡ್ಡಿರವರ ಹೆಸರಿಗೆ ಬೆಂಗಳೂರು ದಕ್ಷಿಣ ತಾಲ್ಲೂಕು, ಹಾಲಿ ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕಸವನಹಳ್ಳಿ ಗ್ರಾಮದ ಸರ್ವೆ ನಂ. 46(46ಪಿ) ರ ಪೈಕಿ 1 ಎಕರೆ ಜಮೀನಿಗೆ ಸಂಬಂಧಿಸಿದಂತೆ ಬಂದಿರುವ ದಾನಪತ್ರ ಹಾಗೂ ಸದರಿ ಶ್ರೀ ಮುನಿರೆಡ್ಡಿಯವರ ಧರ್ಮಪತ್ನಿಯಾದ ಶ್ರೀಮತಿ ನಂಜಮ್ಮನವರು [2] ದಿನಾಂಕ 22-09-1994 ರಂದು ಬೆಂಗಳೂರು ದಕ್ಷಿಣ ತಾಲ್ಲೂಕು ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ 4ನೇ ಪುಸ್ತಕದ ಸಂಪುಟ 17, ಪುಟ 39 ರಿಂದ 41 ರಲ್ಲಿ ದಸ್ತಾವೇಜು ಸಂಖ್ಯೆ 721/94-95ನೇ ನಂಬರಾಗಿ ನೊಂದಣಿಯ ಮೂಲಕ ಜಿ. ಜನಾರ್ಧನರೆಡ್ಡಿರವರಿಗೆ ನೀಡಿರುವ ಅಧಿಕಾರ ಪತ್ರ ಮತ್ತು ಮೂಲ ಕ್ರಯಪತ್ರಗಳಾದ [3]ದಿನಾಂಕ 09-01-1997 ರ ಕ್ರಯಪತ್ರವು 16-01-1997 ರಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ 1 ನೇ ಪುಸ್ತಕದ ಸಂಪುಟ 4202, 183-186ನೇ ಪುಟಗಳಲ್ಲಿ ದಸ್ತಾವೇಜು ನಂ. 4233/96-97ನೇ ನಂಬರಾಗಿ ನೊಂದಣಿಯಾಗಿರುವ ಶುದ್ಧ ಕ್ರಯಪತ್ರದ ಮೂಲಕ ಭೂ ಪರಿವರ್ತನೆಯಾಗಿರುವ ಕಸವನಹಳ್ಳಿ ಗ್ರಾಮದ ಸರ್ವೆ ನಂ.46ರ ಪೈಕಿ 10 ಗುಂಟೆ ಸಮನಾಗಿ 10890 ಚದರ ಅಡಿಗಳಕ್ರಯಪತ್ರ. [4]ದಿನಾಂಕ 09-01-1997 ರ ಕ್ರಯಪತ್ರವು 16-01-1997ರಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ 1 ನೇ ಪುಸ್ತಕದ ಸಂಪುಟ 4235, 187-190ನೇ ಪುಟಗಳಲ್ಲಿ ದಸ್ತಾವೇಜು ನಂ.4235/96-97ನೇ ನಂಬರಾಗಿ ನೊಂದಣಿಯಾಗಿರುವ ಶುದ್ಧ ಕ್ರಯಪತ್ರದ ಮೂಲಕ ಭೂ ಪರಿವರ್ತನೆಯಾಗಿರುವ ಕಸವನಹಳ್ಳಿ ಗ್ರಾಮದ ಸರ್ವೆ ನಂ. 46ರ ಪೈಕಿ 10 ಗುಂಟೆ ಸಮನಾಗಿ 10890 ಚದರ ಅಡಿಗಳಕ್ರಯಪತ್ರ. [5]ದಿನಾಂಕ 09-01-1997 ರ ಕ್ರಯಪತ್ರವು 16-01-1997 ರಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ 1 ನೇ ಪುಸ್ತಕದ ಸಂಪುಟ 4238, 191-194ನೇ ಪುಟಗಳಲ್ಲಿ ದಸ್ತಾವೇಜು ನಂ. 4238/96-97ನೇ ನಂಬರಾಗಿ ನೊಂದಣಿಯಾಗಿರುವ ಶುದ್ಧ ಕ್ರಯಪತ್ರದ ಮೂಲಕ ಭೂ ಪರಿವರ್ತನೆಯಾಗಿರುವ ಕಸವನಹಳ್ಳಿ ಗ್ರಾಮದ ಸರ್ವೆ ನಂ. 46ರ ಪೈಕಿ 10 ಗುಂಟೆ ಸಮನಾಗಿ 10890 ಚದರ ಅಡಿಗಳಕ್ರಯಪತ್ರ ಹಾಗೂ[6]ದಿನಾಂಕ 09-01-1997 ರ ಕ್ರಯಪತ್ರವು 16-01-1997 ರಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ 1 ನೇ ಪುಸ್ತಕದ ಸಂಪುಟ 4240, 195-198ನೇ ಪುಟಗಳಲ್ಲಿ ದಸ್ತಾವೇಜು ನಂ.4240/96-97ನೇ ನಂಬರಾಗಿ ನೊಂದಣಿಯಾಗಿರುವ ಶುದ್ಧ ಕ್ರಯಪತ್ರದ ಮೂಲಕ ಭೂ ಪರಿವರ್ತನೆಯಾಗಿರುವ ಕಸವನಹಳ್ಳಿ ಗ್ರಾಮದ ಸರ್ವೆ ನಂ. 46ರ ಪೈಕಿ 10 ಗುಂಟೆ ಸಮನಾಗಿ 10890 ಚದರ ಅಡಿಗಳ ಒಟ್ಟು ವಿಸ್ತೀರ್ಣ 38400 ಚದರ ಅಡಿಗಳ ಸ್ವತ್ತು ಕ್ರಯಪತ್ರಗಳಂತೆ ಬಂದಿರುವ ಸ್ವತ್ತಾಗಿರುತ್ತದೆ. ಈ ಮೇಲ್ಕಂಡ ಅಸಲಿ/ ಮೂಲ ದಾನಪತ್ರ, ಅಧಿಕಾರ ಪತ್ರ ಹಾಗೂ ಮೇಲೆ ತಿಳಿಸಿದ 4 ಶುದ್ಧ ಕ್ರಯಪತ್ರಗಳು ಕಳೆದುಹೋಗಿದ್ದು, ಎಷ್ಟೇ ಹುಡುಕಿದರು ಸಿಗದಿದ್ದ ಕಾರಣ ನಮ್ಮ ಕಕ್ಷಿದಾರರು ದಿನಾಂಕ 26-12-2023 ರಂದು ಸಿಟಿ ಪೋಲೀಸ್ ಬೆಂಗಳೂರು ರವರಲ್ಲಿ ಕಳೆದು ಹೋದ ವಸ್ತು ದಾಖಲೆಯ ವರದಿ ಕ್ರಮ ಸಂಖ್ಯೆ: 0863470/2023, 0863482/2023, 0863456 /2023, 0863510/2023 ಮತ್ತು 0863525/2023 ರಂತೆ ದೂರುಗಳನ್ನು ದಾಖಲಿಸಿರುತ್ತಾರೆ. ಆದ್ದರಿಂದ ಈ ಮೂಲಕ ಸಾರ್ವಜನಿಕರಿಗೆ ಸೂಚಿಸುತ್ತಾ ಕೇಳಿಕೊಳ್ಳುವುದೇನೆಂದರೆ ಯಾರಿಗಾದರೂ ಸದರಿ ಅಸಲಿ/ ಮೂಲ ದಾನ ಪತ್ರ ದಿನಾಂಕ:20-08-1969, ಮೂಲ ಅಧಿಕಾರ ಪತ್ರ ದಿನಾಂಕ: 22-09-1994 ಹಾಗೂ ದಿನಾಂಕ: 09-01-1997 ರ ಮೂಲ ಕ್ರಯಪತ್ರಗಳು ಸಿಕ್ಕಲ್ಲಿ ಅಥವಾ ವಶದಲ್ಲಿದ್ದರೆ ಸದರಿ ದಾಖಲೆಯನ್ನು ಈ ಕೆಳಗೆ ಸಹಿಮಾಡಿರುವ ವಿಳಾಸಕ್ಕೆ ಈ ಪ್ರಕಟಣೆಗೊಂಡ ಏಳು (7) ದಿನಗಳೊಳಗಾಗಿ ತಲುಪಿಸತಕ್ಕದ್ದೆಂದು ಈ ಮೂಲಕ ನಮ್ಮ ಕಕ್ಷಿದಾರರ ಪರವಾಗಿ ಕೋರಿರುತ್ತೇನೆ. ಹಾಗೂ ಯಾರಾದರೂ ಸದರಿ ಮೂಲ (ಅಸಲಿ) ಪತ್ರಗಳನ್ನು ದುರುಪಯೋಗ ಮಾಡಿಕೊಂಡಲ್ಲಿ ಅಥವಾ ಯಾವುದೇ ವ್ಯವಹಾರಗಳನ್ನು ವ್ಯವಹರಿಸಿದಲ್ಲಿ ಅಂತಹ ನಡವಳಿಕೆಗಳು ಅಥವಾ ಕ್ರಮಗಳು ಅಥವಾ ದಾಖಲೆಗಳು ಅಥವಾ ಪತ್ರಗಳು ಹಾಗೂ ವ್ಯವಹಾರಗಳು ಕಾನೂನು ರೀತಿಯಲ್ಲಿ ನಮ್ಮ ಕಕ್ಷಿದಾರರಿಗೆ ಯಾವುದೇ ತರಹದ ಹಕ್ಕುಬಾಧ್ಯತೆ / ಬಾಧಕ / ಅಥವಾ ರಕ್ಷಾ ಪತ್ರ / ಅಥವಾ ಬಂಧ / ಅಥವಾ ಯಾವುದೇ ತರಹ ಮಾನ್ಯವಾಗತಕ್ಕದಲ್ಲವೆಂದು ಈ ಮೂಲಕ ನಮ್ಮ ಕಕ್ಷಿದಾರರ ಪರವಾಗಿ ತಿಳಿಯಪಡಿಸುತ್ತೇನೆ.

ಷೆಡ್ಯೂಲು ಸ್ವತ್ತಿನ ವಿವರ

ಬೆಂಗಳೂರುನಗರ ಜಿಲ್ಲೆ, ದಕ್ಷಿಣ ತಾಲ್ಲೂಕು, ಹಾಲಿ ಬೆಂಗಳೂರು ಪೂರ್ವತಾಲ್ಲೂಕು, ವರ್ತೂರು ಹೋಬಳಿ, ಕಸವನಹಳ್ಳಿ ಗ್ರಾಮದ ಸರ್ವೆ ನಂ.46 (46ಪಿ)ರ ಪೈಕಿ ದಿನಾಂಕ 23-05-1995 ರಂದು ವಾಸದ ಉದ್ದೇಶಕ್ಕಾಗಿ ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ರವರು ನೀಡಿರುವ ಅಧಿಕೃತ ಜ್ಞಾಪನಾ ಸಂಖ್ಯೆ ಬಿಡಿಎಸ್.ಎಎಲ್ಎನ್.ಎಸ್ಆರ್ (ಎಸ್ಎ)156/94-95 ರ ಆದೇಶದಂತೆ ಭೂ ಪರಿವರ್ತನೆಯಾಗಿರುವ ಜಮೀನಿನ ಪೈಕಿ ಹಾಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.150-ಬೆಳ್ಳಂದೂರು, ಕಸವನಹಳ್ಳಿ ಗ್ರಾಮದಲ್ಲಿ ನಿರ್ಮಿಸಿರುವ ಶುಭ ಎನ್‌ಕ್ಲೇವ್ ಬಡಾವಣೆ, ಹಾಲಿ ಬಿಬಿಎಂಪಿ ಖಾತಾ ನಂ. 3037/2871/5, 6, 11, 12, ಖಾಲಿ ನಿವೇಶನಗಳ ಸಂಖ್ಯೆ 5,6,11 & 12 ಗಳ ನಿವೇಶನಗಳ ಸ್ವತ್ತಿಗೆ ಸಂಬಂಧಿಸಿದಂತೆ ಚಕ್ಕುಬಂಧಿ.

ಪೂರ್ವಕ್ಕೆ : ನಿವೇಶನಗಳ ಸಂಖ್ಯೆ 7 & 10. **ಪಶ್ಚಿಮಕ್ಕೆ** : ನಿವೇಶನಗಳ ಸಂಖ್ಯೆ 4 & 13.
ಉತ್ತರಕ್ಕೆ : ರಸ್ತೆ, **ದಕ್ಷಿಣಕ್ಕೆ** : ರಸ್ತೆ.

ಈ ಮಧ್ಯೆ ಇರುವ ಪೂರ್ವ-ಪಶ್ಚಿಮ 160-0 ಅಡಿ ಮತು ಉತ್ತರ-ದಕ್ಷಿಣ 240-0 ಅಡಿಗಳ ಒಟ್ಟು ವಿಸ್ತೀರ್ಣ 38400 ಚದರ ಅಡಿವುಳ್ಳ ಖಾಲಿ ನಿವೇಶನಗಳ ಸ್ವತ್ತು.

ದಿನಾಂಕ : 06-01-2024
ಸ್ಥಳ: ಬೆಂಗಳೂರು.

ಸಹಿ/- **ಜಿ.ನಟರಾಜ,**
ವಕೀಲರು ನಂ. 90, 2ನೇ ಮಹಡಿ,
5ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560003. ಮೊ. 9845172137

REAL ESTATE SELLING

Sites

Anjanapura

SALE BDA SITE Anjanapura 3rd A Block near Mangalya Appartment, 30x40 South, 10,250/-Sqft. Negotiable. 9740148870.

Arkavathi Layout

SITE FOR SALE ARKAVATHI LAYOUT, 19TH BLOCK 30x40 GOOD LOCATION, Full Developed Immediately Construction CALL: 9108479949

ARKAVATHI LAYOUT 20x30 2nd Block BDA Sampegehalli East Facing Genuine Buyers Call- USR: 7019770736/ 8951614989.

Banashankari

"BANASHANKARI 6TH-STAGE BDA Sites sale 50x80 East facing 60feet Road 40x60 North facing 30x40 40feet Road.Contact: 9845146725/ 9741466369"

Basaweshwaranagar

BASVESHAWARA NAGAR 30×40 40×60 Sadashivanagar 89×132 Residential Rajajinagar 44×60 Commercial Dobaspet, Yeshwanthpur Industrial Site 8660075308

BASAVESHWARANAGAR 3RD-STAGE 3rd Block Good Location 40x60 BDA Site for sale. Contract: 9945079777

J P Nagar

"JP.NAGAR 6TH-PHASE 90x110_North facing,BBMP 'A'.Katha Site-sale, excellent location price 8,000/-p.sft negotiable "Sanjana Real Estate". 8431302028"

Mysore

SITE FOR Sale 20x30, W/F near Bhogadi Main Road, next to SBM Layout, Mysore. Good locality, Contact: 8095502430/ 9449130300.

Kanakapura Road

NARAYANA NAGAR 1st Block 35x60 S/F 60ft Road 30x40 S/F Near Doddakalsandra Metro Station: 9964627255

SITE SALE 30×40 WEST FACING Balaji Layout, 35×45 Bikashipura. Good Location. Contact: 9448684258

Kempegowda Layout

KEMPEGOWDA LAYOUT, BDA SITE FOR SALE 20X30 30X40, 40X60, 50X80 CONTACT KUMAR: 9945119449

COMMERCIAL SITEFOR Sale, Kempegowda Layout 8th Block,Size:163X100, West Face, BDA,NOC,NNA, Conversion Land, Leagal Documnents, Price:4500/-Sq.Ft.Ph:9448793428, 9632227878

Vishweshwariah Layout

SMVLAYOUT BDA 5th Block 30x40 EF Near KLE LAW College Good Location Immediate Construction: 9980860138

AVAILABLE BDA Site Vishweshwariah Layout 2nd Block 40X60 East Facing 60feet Road Good Location: 9743381719

VISVESWARAIAH LAYOUT 3rd Block BDA 40x60 on 40ft Road. 6th Block BDA 30x40 (East): 9964971895

AVAILABLE SMV 4BL. 30x40 NEAR 100ft Road, EWF 2 Site Near KEB BackSide: 9380732662

Mysore

HUNSUR ROAD Kuberananda Sagara Layout, 50X80 Site#691, 1.K.M. From Main Road. 2000/- Per Sqft. 9945724472.

Annapoorneshwari Nagar

SALE NO 491 North Facing 30×62 BDA Khatha 60' Road Annapurneshwari Nagar. 8217362589/ 7204061749

Kodigehalli

SALE OF open plot 40x60 (2400 Sq.ft), West facing, Site No. 317 at JRD TataNagar, Kodigehalli Village, Bangalore. Please contact: 9900933878/ 7702465533

Gnanabharathi

DIRECT OWNER 20X30 BDA SITE SALE Gnanabharathi 1st-Block Valagerahalli, Full Developed Area ₹51 Lakhs. 9742681666

Hanumanthnagar

"30X40 EAST-FACING Site-Sale BBMP 'A'.KATHA Nagendra_Block near_PES College, Hanumanthanagar 15,000/-P.Sft Negotiable. "AVM REAL ESTATE". 9513666788"

Agricultural Land Converted

Bannerghatta Road

OFF BANNERGHATTA Road ANJANAPURA 4.5 Acres Converted Land for SALE. Rs.5000 PSFT negotiable. Call: 87922-66950/ 93437-28200

Agricultural Land

Ramanagar

5 ACRES 27 GUNTAS DEVELOPED COCONUT FARM LAND SALE. NEAR CHENNAPATNA, BETWEEN BANGALORE- MYSORE. 9916551395

Commercial Land

Mysore

FOR SALE ABOUT 86000 Sqft Prime Property on Nanjangud road close to Ganapathy Sachidananda Ashram, Mysore. Contact 9740907835

Out-Station

YERCAUD LAND for Sale: 19000 Sq Ft Land, 5 Minutes From Lake, Valley View, 80 Ft Road Facing for Sale. Suitable for Hotels, Resorts, Independent Bungalows. Whatsapp +91 9150861568

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

ಸೈಟುಗಳು ಮಾರಾಟಕ್ಕಿವೆ
ತುಮಕೂರು ರೋಡ್ ಮಾದನಾಯಕನಹಳ್ಳಿ ಹತ್ತಿರ 2600/- ಪ್ರತಿ ಅಡಿಗೆ
APMC YARD ಪಿಲ್ಲಹಳ್ಳಿ ಹತ್ತಿರ | BMRDA & DC ಸೈಟ್‌ಗಳು ಮಾರಾಟಕ್ಕಿವೆ
ಬ್ಯಾಂಕ್ ಲೋನ್ ದೊರೆಯುತ್ತದೆ
ಸಂಪರ್ಕಿಸಿ: 8880660099

Commerical

J P Nagar

J.P. NAGAR 6TH PHASE 30×40 CORNER COMMERCIAL SITE FOR SALE. Good Location. CONTACT : 9448684258

House

Bangalore North

3BHK + Study Independent house with garage, modern interiors. Tatanagar. Asking 6.35 Cr. Genuine buyers contact: nannamanae@gmail.com

Joint Development

Mysore Road

MADDUR MAIN Road MC Road 3200 sqft 80*40 vacant Land Opp Park, Central location available for Joint Venture. Suitable for Hospitals, Commercial Banks, Showrooms, Supermarkets. Contact: 91-9844648304/ 9980944275. naveen.thandavamurthy@gmail.com

Commercial Building

Malleshwaram

FULLY FURNISHED 16,000Sft.A/C Showroom For Rent/Sale On Prime Busy Commercial Area,8th Cross, Malleshwaram. Contact: 9663001940/ 9845358544

RENTAL PROPERTIES

Accommodation Available

Commercial

RENTAL TWO shops corner building Ground Floor 1) 10x10, 2) 20x14, Preferred for Bank ATMs. at Ashrama Road, Yelachenahalli, Near Yelachenahalli Metro station, off Kanakapura Main Road. Contact: 9449840159, 9742225649

Flats

2/3 BHK new flats with interiors at VARTHUR
Ready to move in with rent of Rs.40/- per Sft negotiable.
Those interested for immediate occupation, may Contact :
99621 82221
97413 33222
email: vrsn@live.com

AVAILABLE 3 BHK Furnished Spacious Apartment Flat Mysore Road For Lease Rupees 25 Lakhs: 9738223432

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha, JPNagar 8 & 9 phase immediate settlement. genuine Sellers Contact: 9902038118, 9449060605

Banashankari

WANTED BANASHANKARI 6th Stage Anjanapura JP Nagar, Kanakapura Road Any Measurement Immediate Settlement: 9964627255

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted. Contact: SAPTHAGIRI. 9900268073, 9448068073.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

WE FIX LEAKING ROOF,TANK, SUMP, BATHROOM, SKYLIGHT, HOUSE PAINTING TILING, CARPENTRY, EPOXY,CIVIL WORKS. Macbond: 9448572697

AUTOMOTIVE

Four Wheelers Selling

Tata

TATA HEXA HTA 2017 Model 46000 km. Excellent condition. Single Owner, white, 16 Lakhs. Contact: 9845885199.

Mahindra

AVAILABLE FOR Immediate sale of Mahendra E Varito Car Mahendra Auto, In Bulk Springly Used, Very good Condition Contact No. 9448533368

EDUCATIONAL

Training

NURSERY TEACHERS TRAINING Course at JNANABHARATHI,with in Class Training 6_Months/1_year (offline/online),100% Job_Assurance. Call:6363032729

PERSONAL

Announcements

JOIN FUN Club. Now or Never! Male/ Female Members and Staff Required on Attractive Terms: 9845182814

Change of Name

I, RADHA SURESH have changed my name to RADHA VENKATAPPA vide affidavit dated: 4/1/2024 before Notary Manohar Jeerige Bangalore.

CHANGE OF NAME

I, **SHARAN DHAREAPPA BANDI** Residing at #148/6-1, 5th Cross, 8th Main, RMV Extension, Sadashivnagar, Bangalore-560080 have changed my name to **SSHARAN BANDI** vide affidavit dated 5.1.2024 before notary N. Kanchivaradaraju, Bangalore. Henceforth I shall be called **SSHARAN BANDI** only.

CHANGE OF NAME

I, **ANCY,** Legally Wedded W/o No.1373738P, Rank-Ex Hav Name- SEBASTIAN A.V., Residing at # 9, 6th Street, 3rd Block, Prakruthi Township, Babusapalya, Kalyan Nagar Post, Bengaluru- 43 have changed my name ANCY to **ANCY AUGUSTINE** vide affidavit dt:22-12-2023, sworn before Notary Uday Kumar K, Bengaluru.

I, ANANTHA PARASURAM S/o Anantha Bhat residing at 717, 8th Block, Koramangala, BANGALORE have changed my name from Parasurama Bhat. A vide Affidavit dated 4th Jan, 2024 before the notary A.R. Muneer Ahmed.

I, SATYA Ravi Kiran A.V R/o 78, Seenappa Layout 4th E Cross, Chikka Banaswadi, Kalyananagar, Kalyananagar, Bengaluru-43 have changed my minor daughter's name from Ambadipudi jahnovi akshaya swathi to Akshaya ambadipudi all purposes.

I, SALMA SULTANA FAYAZPASHA, Residing at #3, F cross, Madarsaab Layout, BTM Layout 1st stage, Bangalore-29 have changed my name as SALMA SULTANA, vide affidavit dated 4/1/2024 before Notary B.M.Chandrashekar, Bangalore

CHANGE OF NAME

I, **PRAJWAL PRASAD** Residing at # 4/1, Vaibhav, 8th Main, 7th Cross, B-Block, Vinayakanagar, Bangalore-17 have changed my name to **PRAJWAL PRASAD GURUPRASAD** vide affidavit dated 5.1.2024 before notary L. Gopalakrishna, Bangalore. Henceforth I shall be called **PRAJWAL PRASAD GURUPRASAD** only.

I, HYDER ALI YEHSANULLA, Residing at #3, F cross, Madarsaab Layout, BTM Layout 1st stage, Bangalore-29 have changed my name as HYDER ALI, vide affidavit dated 4/1/2024 before Notary B.M.Chandrashekar, Bangalore

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್



THE RIGHT THING. PRE-LAUNCH AT GUNJUR, SARJAPURA-WHITEFIELD MAIN ROAD. (ADJACENT TO GREENWOOD HIGH SCHOOL)

MARKET PRICE	ABHEE LAUNCH PRICE	ABHEE PRE-LAUNCH OFFER	ULTRA LUXURY 2 & 3BHK APTS.
₹ ~~12,000~~/SQFT* (BASIC)	₹ ~~8,299~~/SQFT* (BASIC)	₹ 7,799/SQFT* (BASIC)	@ ₹ 1.26 CR ONWARDS*

ABHEE
VENTURES PRIVATE LIMITED
VISION OF FUTURE

NEXPLACE INFRASTRUCTURE

2 Basement
27 floors
30+ Amenities
397 Luxury Apts.

Upcoming Infrastructure
Namma Metro,
PRR,STRR

Abhee Celestial city
LOCATION MAP

Abhee Ventures
WEBSITE

CREDAI
BANGALORE

marketing@abheeventures.com | www.abheeventures.com

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

|| ವಿಶ್ವ ವಿದ್ಯಾಪೀಠ ||

A TRULY INDIAN SCHOOL WITH A GLOBAL OUTLOOK


VIKRAMASHILA CAMPUS, YELAHANKA


TAKSHASHILA CAMPUS, YELAHANKA


MAGADHA CAMPUS, VARTHUR

CBSE XI
Yelahanka

ADMISSION OPEN FOR AY 2024-25

CLASS 1 TO 12

Offering expert coaching for

CET/JEE/NEET

ENROLL NOW





RECENT RECOGNITIONS

- Awarded "High Happiness Quotient Schools"–No 2 in India, No 1 in Karnataka and No 1 in Bangalore by Education World Special Jury panel
- Awarded "Most Innovative School with Academic Excellence in Bangalore (2022)" by Asia Today
- Awarded "Most Innovative School with Quality Education in Karnataka (2022)" by Top Notch Foundation
- Awarded "Top Star Rated School of India" with benchmark in Innovation in Pedagogical Practices (2022) by CED Foundation (Eduleaders Annual Conference)

OUR PROGRAM

Guru Shishya Parampara	Bhagavad Gita & Yoga	Mother on Duty	World-class facilities	In-house kitchen & dining facility
Dasha Prabodha	Focus on Indian Culture & Tradition	In-house Transport facility	Leadership training	Organic Farming
Parent Engagement Programme [PEP]	High Individual Attention	First School in India to include Neural Science	Equal focus on Sports activities	Collaboration with Reva University

ADMISSION OPEN FOR PRE-PRIMARY, CLASS 1 TO 12 [ICSE / IGCSE]

FOR MORE DETAILS CONTACT US ON

WEBSITE

Yelahanka - 7022009731 / 54
Varthur - 7022009757